# ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಮೂಲಕ ಹೊಸ ಅವಕಾಶಗಳು ಮತ್ತು ಸಾಧ್ಯತೆಗಳ ಅನ್ವೇಷಣೆ:

## ಕರ್ನಾಟಕದಲ್ಲಿ ಮಹಿಳೆಯರೊಂದಿಗೆ ಕೆಲಸ ಮಾಡುತ್ತಿರುವ ಸಂಸ್ಥೆಗಳಿಗೊಂದು ಕೈಪಿಡಿ

ಐ.ಟಿ. ಫಾರ್ ಚೇಂಜ್

# ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಮೂಲಕ ಹೊಸ ಅವಕಾಶಗಳು ಮತ್ತು ಸಾಧ್ಯತೆಗಳ ಅನ್ವೇಷಣೆ : ಕರ್ನಾಟಕದಲ್ಲಿ ಮಹಿಳೆಯರೊಂದಿಗೆ ಕೆಲಸ ಮಾಡುತ್ತಿರುವ ಸಂಸ್ಥೆಗಳಿಗೊಂದು ಕೈಪಿಡಿ


ಲೇಖಕರು :


ಮೃದುಲಾ ಸ್ವಾಮಿ, ಐ.ಟಿ. ಫಾರ್ ಚೇಂಜ್

ಕನ್ನಡ ಅನುವಾದ :

ಸುಷ್ಮಾ ಮಜುಮ್‌ದಾರ್ ಮತ್ತು ಎನ್. ಲಕ್ಷ್ಮಿ ಶರ್ಮಾ

ವಿನ್ಯಾಸ :

ಕೃಪಾ ತಿಮ್ಮಯ್ಯ, ಐ.ಟಿ. ಫಾರ್ ಚೇಂಜ್


ಪ್ರಕಟಣೆ

**ಐ.ಟಿ. ಫಾರ್ ಚೇಂಜ್**

ಬೆಂಬಲ

• ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯ • ಯು.ಕೆ. ಡಿಪಾರ್ಟ್‌ಮೆಂಟ್ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ • ಹಿವೋಸ್

(cc) IT for Change 2007

ಈ ಪುಸ್ತಕದ ಸಾಮಾಗ್ರಿಗಳು ಮತ್ತು ವಿಚಾರಗಳನ್ನು ವಾಣಿಜ್ಯೇತರ ಉದ್ದೇಶಗಳಿಗಾಗಿ ಮರುಮುದ್ರಿಸಲು, ವಿತರಿಸಲು ಅಥವಾ ಪ್ರದರ್ಶಿಸಲು ಅಪೇಕ್ಷೆಪಟ್ಟ ಪಕ್ಷದಲ್ಲಿ, ಐ.ಟಿ. ಫಾರ್ ಚೇಂಜ್ ಮತ್ತು ಲೇಖಕರನ್ನು ಸ್ಮರಿಸಬೇಕು. ಈ ಪ್ರಕಟಣೆಯ ಸಾಮಾಗ್ರಿಗಳು, ವಿಚಾರಗಳ ಮರುಬಳಕೆ ಅಥವಾ ವಿತರಣೆಗೆ ಇತರರು ಅಪೇಕ್ಷೆಪಟ್ಟ ಪಕ್ಷದಲ್ಲಿ, ಅವರಿಗೆ ಪ್ರಕಟಣೆಯ ಅನುಜ್ಞಾ ನಿಬಂಧನೆಗಳನ್ನು ಸ್ಪಷ್ಟಪಡಿಸತಕ್ಕದ್ದು.

# ಪರಿವಿಡಿ


**I ಪೀಠಿಕೆ** **1**

ಮಹಿಳಾ ಸಶಕ್ತತೆ ಇಂದು ಯಾವ ಹಂತದಲ್ಲಿದೆ?

ಬದಲಾಗುತ್ತಿರುವ ಸಾಮಾಜಿಕ-ಆರ್ಥಿಕ ಪರಿಸರ

ಐ.ಸಿ.ಟಿ. ಯುಗದಲ್ಲಿ ಮಹಿಳಾ ಸಶಕ್ತತೆ

ಮಹಿಳೆಯರ ಜೀವನೋಪಾಯದಲ್ಲಿ ಸಂಬಂಧಿಸಿದಂತೆ ಐ.ಸಿ.ಟಿ.ಗಳು

ಕೈಪಿಡಿಯ ವಿನ್ಯಾಸ

*ರಾಧಿಕಾ: ಗ್ರಾಮ ಮಾಹಿತಿ ಕೇಂದ್ರದ ಆಪರೇಟರ್, ಧಾನ್ ಫೌಂಡೇಶನ್, ತಿರುವತ್ತವೂರ್, ತಮಿಳು ನಾಡು : ಒಂದು ಪ್ರಕರಣಾಧ್ಯಯನ* 8

**II ಮಹಿಳೆಯರ ಮಾಹಿತಿ ಮತ್ತು ಸಂವಹನದ ಅಗತ್ಯಗಳಿಗೆ ಸಂಬಂಧಿಸಿದಂತೆ ಐ.ಸಿ.ಟಿ.ಗಳು** **10**


ಶಿಕ್ಷಣ

ಆರೋಗ್ಯ

ಕಾನೂನು ಹಕ್ಕುಗಳು

ರಾಜಕೀಯ ಭಾಗವಹಿಸುವಿಕೆ

ಜೀವನೋಪಾಯಗಳು


*ಈಶ್ವರಿ : ಗ್ರಾಮದ ಫೋಟೋಗ್ರಾಫರ್ (ಛಾಯಾಗ್ರಾಹಕಿ), ಕುಪ್ಪಂ ಹೆಚ್.ಪಿ. ಐ-ಸಮುದಾಯ ಯೋಜನೆ, ಆಂಧ್ರ ಪ್ರದೇಶ: ಒಂದು ಪ್ರಕರಣಾಧ್ಯಯನ* 18

**III ಐ.ಸಿ.ಟಿ. ಆಧಾರಿತ ಉದ್ಯಮಗಳು ಯಾವುವು ಹಾಗೂ ಮಹಿಳಾ ಸಂಘಟನೆಗಳು ಐ.ಸಿ.ಟಿ. ಉದ್ಯಮಗಳನ್ನು ಅಳವಡಿಸಿಕೊಳ್ಳಲು ಏಕೆ ಮುನ್ನುಗ್ಗಬೇಕು?** **20**

ಉದ್ಯಮಶೀಲತೆ ಮತ್ತು ಐ.ಸಿ.ಟಿ.ಗಳು

ದಕ್ಷಿಣ ಭಾರತದಲ್ಲಿರುವ ವಿವಿಧ ರೀತಿಯ ಐ.ಸಿ.ಟಿ. ಆಧಾರಿತ ಉದ್ಯಮಗಳು

ದುರ್ಬಲ ವರ್ಗದ ಮಹಿಳಾ ಗುಂಪುಗಳಿಗೆ (ಸಂಘಟನೆಗಳಿಗೆ) ಐ.ಸಿ.ಟಿ. ಆಧಾರಿತ ಉದ್ಯಮಗಳು ಏಕೆ ಅಗತ್ಯವಾಗಿವೆ?

*ರಾಜಶ್ರೀ, ಟೆಲಿಫೋನ್ ಆಪರೇಟರ್, ಅಕ್ಷಯ ಯೋಜನೆ, ಮಲ್ಲಾಪುರಂ, ಕೇರಳ: ಒಂದು ಪ್ರಕರಣಾಧ್ಯಯನ* 37

**IV ನಿರೀಕ್ಷಿಸಬಹುದಾದ ಅಪಾಯಗಳು, ಸವಾಲುಗಳು ಮತ್ತು ಅಡೆತಡೆಗಳು** **39**

ಐ.ಸಿ.ಟಿ. ಉದ್ಯಮವನ್ನು ಸ್ಥಾಪಿಸಿ ಬೆಂಬಲಿಸುವಾಗ ಗಮನಿಸಬೇಕಾದ ಅಂಶಗಳು


ಸೇವೆಗಳ ನಿರ್ವಹಣೆ ಮತ್ತು ಉದ್ಯಮಶೀಲತೆ ನಡುವಿನ ತಾಕಲಾಟ : ಸಂಸ್ಥೆಗಳು ತಮ್ಮ ಸೇವಾ ನಿರ್ವಹಣೆ ಮತ್ತು ಉದ್ಯಮಶೀಲತೆಯ ಗುರಿಗಳ ನಡುವಿನ ತಾಕಲಾಟವನ್ನು ಹೇಗೆ ತೂಗಿಸಿಕೊಂಡು ಹೋಗುತ್ತಾರೆ?

**V ಮಹಿಳಾ ಐ.ಸಿ.ಟಿ. ಉದ್ಯಮದಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಯಾವ ಒಳನೋಟಗಳನ್ನು ಹಂಚಿಕೊಳ್ಳುತ್ತಾರೆ? 53**


ಪ್ರಾರಂಭಿಕ ಹೂಡಿಕೆ ಮತ್ತು ಬೆಂಬಲ
ಕಾರ್ಯವಿಧಾನ ಮತ್ತು ಉದ್ದೇಶಗಳು
ಲಿಂಗಾಧಾರಿತ ವಿಚಾರಗಳನ್ನು ಉದ್ದೇಶಿಸುವುದು
ಯಶಸ್ವೀ ನಿದರ್ಶನಗಳು ಮತ್ತು ಕಲಿಕೆಗಳು

**VI ಇದು ತುಂಬಾ ಆಸಕ್ತಿಪೂರ್ಣವಾಗಿದೆ! ನಾನು ಇಲ್ಲಿಂದ ಮುಂದೆ ಹೋಗುವುದು ಹೇಗೆ? 61**

ಟೆಲಿಕೇಂದ್ರವನ್ನು ಸ್ಥಾಪಿಸುವುದು
ರೇಡಿಯೋ ಕಾರ್ಯಕ್ರಮದ ರಚನೆ
ವಿಡಿಯೋ ಚಿತ್ರಗಳಿಗಾಗಿ ವಿಚಾರಗಳ ಸೃಷ್ಟಿ
ಪ್ರಸ್ತುತ ಇರುವ ಐ.ಸಿ.ಟಿ. ಉದ್ಯಮಗಳ ಬಗ್ಗೆ ನನಗೆ ಎಲ್ಲಿ ಮಾಹಿತಿ ದೊರೆಯುತ್ತದೆ?
ಉಪಸಂಹಾರ



ಬ್ಯಾಕ್ಸ್ 1: ಈ ಕೈಪಿಡಿಯಿಂದ ನಾನು ಏನು ನಿರೀಕ್ಷಿಸಬಹುದು? 1
ಬ್ಯಾಕ್ಸ್ 2: ಟೆಲಿಕೇಂದ್ರಗಳ ಮೂಲಕ ಸಾರ್ವಜನಿಕ ವ್ಯವಸ್ಥೆಯಲ್ಲಿ ಹೇಗೆ ಹೊಣೆಗಾರಿಕೆಯನ್ನು ತರುವುದು? 13
ಬ್ಯಾಕ್ಸ್ 3: ಮುಕ್ತ ಮಾರುಕಟ್ಟೆಯ ಪರಿಸರದಲ್ಲಿ ಸಾಮಾಜಿಕ ಉದ್ಯಮಶೀಲತೆ 21
ಬ್ಯಾಕ್ಸ್ 4: ಮಹಿಳೆಯರ ಆಸ್ತಿ ಒಡೆತನದ ವಿವಿಧ ಅಂಗಗಳನ್ನು ಐ.ಸಿ.ಟಿ.ಗಳು ಹೇಗೆ ಬಲವರ್ಧನೆಗೊಳಿಸುತ್ತವೆ? 34
ಬ್ಯಾಕ್ಸ್ 5: ಐ.ಸಿ.ಟಿ. ಉದ್ಯಮವನ್ನು ರಚಿಸುವಾಗ ಎದುರಿಸಬೇಕಾದ ಮಹಿಳಾ-ಕೇಂದ್ರಿತ ಪ್ರಶ್ನೆಗಳು 40
ಬ್ಯಾಕ್ಸ್ 6: ಐ.ಸಿ.ಟಿ. ಉದ್ಯಮ ನಡೆಸುವ ಸಂಸ್ಥೆಗಳು ಎದುರಿಸುವ ಸಮಸ್ಯೆಗಳು ಮತ್ತು ಸಾಧ್ಯತೆ ಇರುವ ಪರಿಹಾರೋಪಾಯಗಳು 46
ಬ್ಯಾಕ್ಸ್ 7: ಮಹಿಳಾ ಐ.ಸಿ.ಟಿ. ಉದ್ದಿಮೆಗಳನ್ನು ಪ್ರಾರಂಭಿಸಲು ಹಾಗೂ ನಡೆಸಲು ಅಗತ್ಯವಾದ ನೆರವು 59



# I. ಪೀಠಿಕೆ

## ಬ್ಯಾಕ್ಸ್ 1: ಈ ಕೈಪಿಡಿಯಿಂದ ನಾನು ಏನು ನಿರೀಕ್ಷಿಸಬಹುದು?

ಸಾಮಾಜಿಕ ಪರಿವರ್ತನೆ ಮತ್ತು ಮಹಿಳಾ ಸಶಕ್ತತೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳನ್ನು (ಐ.ಸಿ.ಟಿ) ಅಳವಡಿಸಿಕೊಳ್ಳಲು ಆಸಕ್ತರಾಗಿರುವ ಅಭಿವೃದ್ಧಿ ಕ್ಷೇತ್ರದ ಸಂಘಟನೆಗಳು ಮತ್ತು ಸಮುದಾಯ ಗುಂಪುಗಳಿಗೆ ಸರಳ ಮತ್ತು ಪರಿಣಾಮಕಾರಿ ಮಾಹಿತಿ ಮಾರ್ಗದರ್ಶಿಕೆಯಾಗಿ ಈ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಈ ಕೈಪಿಡಿಯ ಉದ್ದೇಶವೆಂದರೆ :

ಎ) ಸಮುದಾಯ-ಆಧಾರಿತ ಸಂಘಟನೆಗಳು ಮಹಿಳಾ ಸಶಕ್ತತೆ ಮತ್ತು ಸ್ಥಳೀಯ ಅಭಿವೃದ್ಧಿಯ ತಮ್ಮ ಗುರಿಯನ್ನು ತಲುಪುವಲ್ಲಿ ಐ.ಸಿ.ಟಿ.ಗಳನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದೆಂದು ನಿದರ್ಶಿಸುವುದು.

ಬಿ) ಕ್ಷೇತ್ರದಲ್ಲಿನ ಕೆಲವು ತಜ್ಞರು ಮತ್ತು ದಕ್ಷಿಣ ಭಾರತದಲ್ಲಿನ ಮಹಿಳಾ ಉದ್ಯಮಿಗಳ ವೈಯಕ್ತಿಕ ಅನುಭವಗಳನ್ನು ನಿರೂಪಿಸುವುದರ ಮೂಲಕ, ಐ.ಸಿ.ಟಿ.ಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯಿಂದ ಅವರ ಸಶಕ್ತತೆ ಮತ್ತು ಸೌಖ್ಯದ ಮೇಲಿನ ಸಕಾರಾತ್ಮಕ ಪರಿಣಾಮಗಳನ್ನು ಹೊರತರುವುದು.

ಸಿ) ಸೈದ್ಧಾಂತಿಕವಾಗಿ, ಐ.ಸಿ.ಟಿ.-ಆಧಾರಿತ ಉದ್ಯಮಗಳು ಲಿಂಗತ್ವ ರೂಢಿ ಮತ್ತು ಪಾತ್ರಗಳನ್ನು ವಿರೋಧಿಸಿ, ಮಹಿಳೆಯರ ವಿರುದ್ಧ ತಾರತಮ್ಯ ತೋರಿಸುವ ಸಾಮಾಜಿಕ ದೃಷ್ಟಿಕೋನಗಳಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುವಲ್ಲಿ ಹೇಗೆ ಸಹಾಯಕವಾಗುವುವು ಎಂದು ಪರಿಶೀಲಿಸುವುದು.

ಭಾರತದ ನಿರ್ದಿಷ್ಟ ಸಾಮಾಜಿಕ ಆರ್ಥಿಕ ಪರಿಸರ ಮತ್ತು ಇದಕ್ಕೆ ಸಂಬಂಧಿಸಿದಂತೆ ಮಹಿಳೆಯರ ಸ್ಥಾನಮಾನವನ್ನು ಗಮನದಲ್ಲಿಟ್ಟುಕೊಂಡು ಈ ಕೈಪಿಡಿಯನ್ನು ವಿನ್ಯಾಸಗೊಳಿಸಲಾಗಿದೆ. ಮಹಿಳೆಯರ ಸಾಮಾಜಿಕ-ರಾಜನೈತಿಕ ಮತ್ತು ಆರ್ಥಿಕ ಹಕ್ಕುಗಳನ್ನು ಬಲವರ್ಧನೆಗೊಳಿಸುವಲ್ಲಿ ಸಕ್ರಿಯವಾಗಿರುವ ತಳಮಟ್ಟದ ಸಂಘಟನೆಗಳಿಗೆ ಮತ್ತು ಸಮುದಾಯ ಗುಂಪುಗಳಿಗೆ ಇದು ಹೆಚ್ಚು ಉಪಯುಕ್ತವಾಗಿದೆ. ತಮ್ಮ ಪ್ರಸಕ್ತ ಕಾರ್ಯಯೋಜನೆಯೊಳಗೆ ಐ.ಸಿ.ಟಿ.ಗಳನ್ನು ಸಮನ್ವಯಗೊಳಿಸುವ ಅಗತ್ಯ, ಪ್ರಾಮುಖ್ಯತೆ ಮತ್ತು ಲಾಭಗಳನ್ನು ಹಾಗೂ ಈ ಪ್ರಕ್ರಿಯೆಯಲ್ಲಿ ಎದುರಿಸಬೇಕಾಗಬಹುದಾದ ಸವಾಲುಗಳು ಮತ್ತು ಅಡೆತಡೆಗಳನ್ನು ಕೂಡ ಈ ಕೈಪಿಡಿ ವಿವರಿಸುತ್ತದೆ. ಪ್ರಕರಣಾಧ್ಯಯನ ಮತ್ತು ಉಲ್ಲೇಖಗಳೊಡನೆ ಮಾಹಿತಿ ಮತ್ತು ಸಲಹೆಗಳನ್ನು ಸೇರಿಸಿ, ಮಹಿಳಾ ಸಶಕ್ತತೆಗಾಗಿ ಹಾಗೂ ಸಾಂಪ್ರದಾಯಿಕ ಲಿಂಗತ್ವ ರೂಢಿಗಳನ್ನು ಪುನರ್‌ರೂಪಿಸುವಲ್ಲಿ ಐ.ಸಿ.ಟಿ. ಆಧಾರಿತ ಉದ್ಯಮಗಳನ್ನು ಪ್ರಾರಂಭಿಸುವ ಕುರಿತು ಯಾಕೆ ಮತ್ತು ಹೇಗೆಗಳ ಒಂದು ಮೇಲ್ನೋಟವನ್ನು ಈ ಕೈಪಿಡಿ ಒದಗಿಸುತ್ತದೆ.

## ಮಹಿಳಾ ಸಶಕ್ತತೆ ಇಂದು ಯಾವ ಹಂತದಲ್ಲಿದೆ?

ದೇಶದುದ್ದಕ್ಕೂ, ಮಹಿಳಾ ''ಸಶಕ್ತತೆ''ಗಾಗಿ ತಳಮಟ್ಟದಲ್ಲಿ ಗಣನೀಯ ಪ್ರಗತಿಯಾಗಿದೆ - ಇಲ್ಲಿ ಸಶಕ್ತತೆ ಎಂದರೆ, ಚಾರಿತ್ರಿಕವಾಗಿ ಅಧಿಕಾರ ನಿರಾಕರಣೆಯಾದವರಿಗೆ ಅಧಿಕಾರ ಪಡೆದುಕೊಳ್ಳುವ ಶಕ್ಯತೆ, ಅದರಲ್ಲಿಯೂ ಜೀವನದ ಮುಖ್ಯ ಆಯ್ಕೆಗಳನ್ನು ಮಾಡುವಲ್ಲಿ ಅಧಿಕಾರ ಎಂದು ಅರ್ಥಮಾಡಿಕೊಳ್ಳಲಾಗಿದೆ.[1] ಅನೇಕ ಸಂಘಟನೆಗಳು, ಸ್ವಸಹಾಯ ಸಂಘಗಳ ರಚನೆ, ಸಣ್ಣಸಾಲಗಳು, ಆದಾಯೋತ್ಪನ್ನ ಚಟುವಟಿಕೆಗಳು, ವೃತ್ತಿಪರ ತರಬೇತಿಗಳನ್ನು ನೀಡುವುದರ ಮೂಲಕ, ಮಹಿಳೆಯರ ಆರ್ಥಿಕ ಸ್ಥಾನಮಾನವನ್ನು ಭದ್ರಗೊಳಿಸಿವೆ ಹಾಗೂ ಈ ಮೂಲಕ ಮಹಿಳೆಯರು ತಮ್ಮ ಸಂಧಾನ ಕೌಶಲ್ಯ ಮತ್ತು ಸ್ವಾಯತ್ತತೆಯನ್ನು ಗುರುತಿಸಿಕೊಂಡು ಸಶಕ್ತರಾಗಲು ಈ ಕಾರ್ಯತಂತ್ರಗಳು ಸಹಾಯಕವಾಗಿವೆ. ಈ ಕಾರ್ಯತಂತ್ರಗಳ ಜೊತೆಗೆ, ಕೆಲವು ಸಂಘಟನೆಗಳು ಮಹಿಳೆಯರು ತಮ್ಮ ಹಕ್ಕುಗಳನ್ನು ಗುರುತಿಸಿಕೊಂಡು, ಅವುಗಳನ್ನು ಪಡೆದುಕೊಳ್ಳುವ ವಿಷಯದಲ್ಲಿ ಕೂಡ ಕಾರ್ಯನಿರ್ವಹಿಸಿವೆ - ಇದರಲ್ಲಿ ಸಮಾನ ರಾಜಕೀಯ ಭಾಗವಹಿಸುವಿಕೆ, ತಮ್ಮ ಆರೋಗ್ಯ/ಶರೀರದ ಬಗ್ಗೆ ತೆಗೆದುಕೊಳ್ಳುವ ನಿರ್ಧಾರಗಳು, ಶೈಕ್ಷಣಿಕ ಅವಕಾಶಗಳನ್ನು ಪಡೆದುಕೊಳ್ಳುವುದು, ಸೂಕ್ತ ವೇತನ ಪಡೆದುಕೊಳ್ಳುವುದು, ಮನೆಯಲ್ಲಿ ಮತ್ತು ಹೊರಗೆ ಶೋಷಣಾಯುಕ್ತ ಕೆಲಸ ಮಾಡುವುದರಿಂದ ಮುಕ್ತಿ ಮತ್ತು ಮನೆಯ ಒಳಗೆ ಮತ್ತು ಹೊರಗೆ ಹಿಂಸೆಯಿಂದ ರಕ್ಷಣೆ ಪಡೆಯುವುದು ಕೂಡ ಸೇರಿವೆ.

ಇವುಗಳಲ್ಲಿ ಹೆಚ್ಚಿನಂಶ ಪ್ರಯತ್ನಗಳು ಯಶಸ್ವಿಯೂ ಆಗಿ, ಮಹಿಳೆಯರ ಜೀವನದಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದಿವೆ. ಬಡ, ಗ್ರಾಮೀಣ, ದಲಿತ ಮತ್ತು ಇತರ ದುರ್ಬಲವರ್ಗದ ಮತ್ತು ಅಲ್ಪಸಂಖ್ಯಾತ ಹಿನ್ನೆಲೆಯ ಮಹಿಳೆಯರ ವಿಷಯದಲ್ಲಿ ಇದು ಹೆಚ್ಚು ಸ್ಪಷ್ಟವಾಗಿದೆ. ಆದರೂ ನಮ್ಮ ದೇಶದಲ್ಲಿ ಪ್ರಸ್ತುತ ಪರಿಸ್ಥಿತಿ ಇನ್ನೂ ಆಶಾದಾಯಕವಾಗಿಲ್ಲ. ರಾಜ್ಯದ ಮಹಿಳೆಯರ ಆರ್ಥಿಕ ಸ್ಥಿತಿಯನ್ನು ನಾವು ಗಮನಿಸಿದಲ್ಲಿ, ಮಹಿಳೆಯರ ಪಾಲುದಾರಿಕೆ ಸರಿಸುಮಾರು ಶೇಕಡಾ 30 ರಲ್ಲಿಯೇ ಮುಂದುವರೆದಿದೆ (ಇಲ್ಲಿ ವೇತನಸಹಿತ ಕೆಲಸವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ), ಮಹಿಳೆಯರ ಕೆಲಸವನ್ನು ಅನೌಪಚಾರಿಕ ಎಂದು ವಿಭಜಿಸುವ ಮಟ್ಟ ಹೆಚ್ಚಾಗಿದೆ, ಹಾಗೂ ಇಂದಿಗೂ ಮಹಿಳೆಯರು ಔಪಚಾರಿಕ ಮೂಲಗಳಿಂದ ಸಾಲ ಪಡೆದುಕೊಳ್ಳಲು ಸಾಂಸ್ಕೃತಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳನ್ನು ಎದುರಿಸಬೇಕಾಗಿದೆ, ಇದಕ್ಕೆ ಮುಖ್ಯ ಕಾರಣವೆಂದರೆ, ಹೆಚ್ಚಿನಂಶ ಮಹಿಳೆಯರಿಗೆ ಭೂಮಿ ಮತ್ತು ಆಸ್ತಿಯ ಒಡೆತನ ಇಲ್ಲದೇ ಇರುವುದು.

ಸಾಮಾಜಿಕ-ರಾಜಕೀಯ ಸ್ಥಾನಮಾನವನ್ನು ಪರಿಶೀಲಿಸಿದಾಗ, ಮಹಿಳೆಯರ ಸಾಕ್ಷರತೆ ಶೇಕಡಾ 60ಕ್ಕಿಂತ ಕಡಿಮೆ ಮಟ್ಟದಲ್ಲಿದೆ - ಕೋಲಾರ, ರಾಯಚೂರು, ಗುಲ್ಬರ್ಗಾ, ಧಾರವಾಡ, ಬಿಜಾಪುರ, ಬೀದರ್, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಮಹಿಳೆ ಮತ್ತು ಪುರುಷರ ನಡುವಿನ ಸಾಕ್ಷರತೆಯ ಅಂತರ ಶೇಕಡಾ 25 ಕ್ಕಿಂತ ಹೆಚ್ಚಿದೆ; ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಗಂಡು-ಹೆಣ್ಣಿನ ನಡುವಿನ ಲಿಂಗ ಅನುಪಾತವೂ ಕಡಿಮೆಯಾಗಿದೆ; ಕರ್ನಾಟಕದಲ್ಲಿ ಪಂಚಾಯಿತಿಗೆ ಚುನಾಯಿತರಾದ/ಆಯ್ಕೆಯಾದ ಮಹಿಳೆಯರ ಸಂಖ್ಯೆ ಗಣನೀಯವಾಗಿ ಹೆಚ್ಚಿದ್ದರೂ ಕೂಡ, ಈ ವೇದಿಕೆಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆಯಿದೆ. ರಾಜ್ಯ ವಿಧಾನಸಭೆ, ಕಾರ್ಮಿಕ ಸಂಘಟನೆಗಳು ಮತ್ತು ಸಹಕಾರಿ ಸಂಘಗಳಲ್ಲಿ ಭಾಗವಹಿಸುವ ಮಹಿಳೆಯರ ಸಂಖ್ಯೆ ಇನ್ನೂ ಕಡಿಮೆ ಇದೆ.[2]

---

1 ಕಬೀರ್ ನೈಲಾ, *''ರಿಫ್ಲೆಕ್ಷನ್ ಆನ್ ದಿ ಮೆಶರ್‌ಮೆಂಟ್ ಆಫ್ ವಿಮೆನ್'ಸ್ ಎಂಪವರ್‌ಮೆಂಟ್.'' ಮಹಿಳಾ ಸಶಕ್ತತೆಯನ್ನು ಚರ್ಚಿಸುವಾಗ ಸಿದ್ಧಾಂತಗಳು ಮತ್ತು ಕಾರ್ಯಗಳು. ಸ್ಟಾಕ್‌ಹೋಮ್ : ಸಿಡಾ ಸ್ಟಡೀಸ್ ಸಂಖ್ಯೆ 3, 2001.*

2 ಕರ್ನಾಟಕ ಮಾನವ ಅಭಿವೃದ್ಧಿ ಸೂಚ್ಯಂಕ, 1999.

ವಿಸ್ತಾರಿತ ಮಟ್ಟದಲ್ಲಿ ಹೇಳಬೇಕೆಂದರೆ ಮಹಿಳೆಯರಿಗೆ ಸಾರ್ವಜನಿಕ ಜೀವನದಲ್ಲಿ, ತಮ್ಮ ಮನೆಯಲ್ಲಿ ಮತ್ತು ಸಮುದಾಯದಲ್ಲಿ ಸಮಾನ ಅವಕಾಶ ಮತ್ತು ಸ್ಥಾನವನ್ನು ನಿರಾಕರಿಸಲಾಗುತ್ತಿದೆ. ದುರ್ಬಲವರ್ಗದ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಅಡ್ಡಿಯಾಗುತ್ತಿರುವ ಈ ಲಿಂಗ ತಾರತಮ್ಯವನ್ನು ನಿವಾರಿಸಲು ಅನೇಕ ಮಹಿಳಾ ಸಂಘಟನೆಗಳು ಹೋರಾಡುತ್ತಿವೆ. ವ್ಯವಸ್ಥೆಯ ಈ ಅಸಮತೋಲನವನ್ನು ಸರಿಪಡಿಸಲು ಒಂದೆಡೆ ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಬೇಕೆಂದೂ, ಇನ್ನೊಂದೆಡೆ ಈ ಹೊಸ ಜವಾಬ್ದಾರಿಗಳಿಂದ ಮಹಿಳೆಯರ ಮೇಲಿರುವ ಹೊರೆ ಹೆಚ್ಚಾಗಬಾರದೆಂದೂ, ಮಹಿಳೆಯರ ಸಂತಾನೋತ್ಪತ್ತಿ ಮತ್ತು ಆರೈಕೆ ಪಾತ್ರಗಳು ಅಥವಾ ಅವರ ವೇತನರಹಿತ ದುಡಿಮೆಯನ್ನು ಸರ್ಕಾರಗಳು ಗುರುತಿಸಿ, ಮಾನ್ಯತೆ ನೀಡಬೇಕೆಂದು ಈ ಸಂಘಟನೆಗಳು ಪ್ರತಿಪಾದನೆ ಮಾಡುತ್ತಿವೆ.

## ಬದಲಾಗುತ್ತಿರುವ ಸಾಮಾಜಿಕ-ಆರ್ಥಿಕ ಪರಿಸರ

ದಿನನಿತ್ಯದ ಜೀವನದಲ್ಲಿ ಹೊಸ ಹೊಸ ತಂತ್ರಜ್ಞಾನಗಳು ನಾವು ಬದುಕುವ, ವ್ಯವಹರಿಸುವ ರೀತಿಯಲ್ಲಿ ಗಮನಾರ್ಹ ಬದಲಾವಣೆಗಳನ್ನು ತರುತ್ತಿವೆ. ಸಾಮಾಜಿಕ-ಆರ್ಥಿಕ ವಲಯದ ಬಹುತೇಕ ಚಟುವಟಿಕೆಗಳು ನೂತನ ತಂತ್ರಜ್ಞಾನಗಳನ್ನು ಬಳಸಿಕೊಳ್ಳುತ್ತಿರುವ ಈ ಆಧುನಿಕ ಯುಗದಲ್ಲಿ, ಈ ಸಾಧನಗಳಿಂದ ವಂಚಿತರಾಗಿರುವ ಬಡವರ್ಗ, ಗ್ರಾಮೀಣ ಜನತೆ, ದಲಿತರು, ಅಲ್ಪಸಂಖ್ಯಾತರು, ವಿಕಲಾಂಗರು, ಮಹಿಳೆಯರು, ಮಕ್ಕಳು ಮತ್ತು ಇತರ ದುರ್ಬಲವರ್ಗದವರು ಈ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ವಿಧಾನವನ್ನು ಆವಿಷ್ಕರಿಸುವುದು ಇಲ್ಲಿ ಅತ್ಯಗತ್ಯವಾಗಿದೆ. ಈ ಹೊಸ ಸಾಧನಗಳು ನಮ್ಮ ಜೀವನಶೈಲಿಯಲ್ಲಿ ಪರಿವರ್ತನೆ ತರುತ್ತಿರುವಂತೆಯೇ, ದುರ್ಬಲ/ಮೂಲೆಗುಂಪಾದ ವರ್ಗದವರಿಗೂ ಈ ತಂತ್ರಜ್ಞಾನಗಳು ಹೊಸ ಅವಕಾಶಗಳನ್ನು ಕಲ್ಪಿಸಬಲ್ಲ ಸಾಧ್ಯತೆಗಳನ್ನು ನಾವು ಆವಿಷ್ಕರಿಸಬೇಕಿದೆ.

ಇಲ್ಲಿ ಯಾವ ಹೊಸ ತಂತ್ರಜ್ಞಾನಗಳ ಕುರಿತು ನಾವು ಮಾತನಾಡುತ್ತಿದ್ದೇವೆ? ನಿರ್ದಿಷ್ಟವಾಗಿ ಹೇಳಬೇಕೆಂದರೆ, ಇವು ಎಲ್ಲಾ ರೀತಿಯ ಮಾಹಿತಿಯನ್ನು ಉತ್ಪಾದಿಸಲು, ಪ್ರಸಾರ ಮಾಡಲು, ಸಂಗ್ರಹಿಸಲು ಮತ್ತು ಹಂಚಿಕೊಳ್ಳಲು ಬಳಸುವ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳು ಅಥವಾ ಐ.ಸಿ.ಟಿ.ಗಳು (ಇನ್‌ಫರ್‌ಮೇಶನ್ ಅಂಡ್ ಕಮ್ಯುನಿಕೇಶನ್ ಟೆಕ್ನಾಲಜೀಸ್). ರೇಡಿಯೋ, ಟೆಲಿವಿಶನ್, ಕಂಪ್ಯೂಟರ್ (ಗಣಕಯಂತ್ರ), ದೂರವಾಣಿಗಳು, ಮೊಬೈಲ್ ಫೋನ್‌ಗಳು, ಉಪಗ್ರಹ ಪ್ರಸಾರ, ವಿ.ಸಿ.ಡಿ, ಡಿ.ವಿ.ಡಿ.ಗಳೇ ಮೊದಲಾದ ಸಾಧನಗಳು ಇದರಲ್ಲಿ ಸೇರಿವೆ.

ಪ್ರಮುಖವಾಗಿ ಇಂಟರ್‌ನೆಟ್ (ಅಂತರ್ಜಾಲ)-ಆಧಾರಿತ ತಂತ್ರಜ್ಞಾನಗಳು ಮತ್ತು ಇಂಟರ್‌ನೆಟ್‌ನಿಂದ ಹೆಚ್ಚು ಹೆಚ್ಚಾಗಿ ಬಳಕೆಯಾಗುತ್ತಿರುವ ಇತರ ಅನೇಕ ತಂತ್ರಜ್ಞಾನಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಇವುಗಳ ಪರಸ್ಪರ ಪ್ರತಿಕ್ರಿಯಾತ್ಮಕತೆ (interactivity). ಅಂದರೆ, ಇವು ದ್ವಿಮುಖ ಸಂವಹನವನ್ನು ಉತ್ತೇಜಿಸುತ್ತವೆ; ಈ ತಂತ್ರಜ್ಞಾನಗಳ ಬಳಕೆಯಲ್ಲಿ ಭೌಗೋಳಿಕ ಮಿತಿಗಳಿಲ್ಲ. ಟೆಲಿಫೋನ್, ಇಂಟರ್‌ನೆಟ್ ಮತ್ತು ಇತರ ತಂತ್ರಜ್ಞಾನಗಳು ಭೌಗೋಳಿಕ ಅಂತರಗಳನ್ನು ಕಡಿಮೆಗೊಳಿಸಿ ಸರ್ಕಾರಗಳ, ಉದ್ಯಮಗಳ ಹಾಗೂ ಜನರ ನಡುವಿನ ಅಂತರವನ್ನು ಕಡಿಮೆ ಮಾಡಿದೆ; ಈ ಸಾಧನಗಳ ಬೆಲೆ ಕೆಲವು ತಿಂಗಳುಗಳ ಹಿಂದೆ ಇದ್ದುದ್ದಕ್ಕಿಂತ ಈಗ ಕಡಿಮೆಯಾಗಿದೆ. ಉದಾಹರಣೆಗೆ, ಮಾರುಕಟ್ಟೆಯಲ್ಲಿ ಸಿ.ಡಿ.ಗಳು ರೂ. 8 ರಷ್ಟು ಕಡಿಮೆ ಬೆಲೆಗೆ ದೊರಕುತ್ತವೆ ಮತ್ತು 5 ವರ್ಷಗಳ ಹಿಂದೆ ರೂ. 60,000 ಬೆಲೆಯಿದ್ದ ಕಂಪ್ಯೂಟರ್ ಈಗ ಸುಮಾರು ರೂ. 10,000ಕ್ಕೆ ಲಭ್ಯವಿದೆ. ಹಿಂದೆ ಟೆಲಿಫೋನ್ ಸಂಪರ್ಕಕ್ಕಾಗಿ ಹಲವಾರು ತಿಂಗಳುಗಳು ಕಾಯಬೇಕಾಗುತ್ತಿತ್ತು ಹಾಗೂ ಇದಕ್ಕಾಗಿ ಸಾವಿರಾರು ರೂಪಾಯಿ ಬೇಕಾಗುತ್ತಿತ್ತು, ಈಗ ಟೆಲಿಫೋನ್‌ಗಳು ರೂ. 300 ರಷ್ಟು ಕಡಿಮೆ ಹೂಡಿಕೆಯಲ್ಲಿ, ಒಂದು ಅಥವಾ ಎರಡು ವಾರದಲ್ಲಿ ಸಿಗುತ್ತದೆ. ಇದೇ ರೀತಿ, ಎರಡು ವರ್ಷಗಳ ಹಿಂದಿದ್ದ ಡಯಲ್-ಅಪ್ ಸೌಲಭ್ಯಕ್ಕಿಂತ

ಈಗಿನ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಕಡಿಮೆ ಬೆಲೆಯಲ್ಲಿ ಲಭ್ಯವಿದೆ. ಈ ಹೊಸ ತಂತ್ರಜ್ಞಾನಗಳ ಬೆಲೆಯಲ್ಲಿ ಇಳಿತ ಮತ್ತು ಅವುಗಳ ದ್ವಿಮುಖ ಬಳಕೆಯ ಕಾರಣದಿಂದ ಈ ತಂತ್ರಜ್ಞಾನಗಳು ಹೆಚ್ಚು ಸುಲಭವಾಗಿ ಎಲ್ಲರಿಗೂ ದೊರಕುವಂತಾಗಿವೆ. ಆದುದರಿಂದ 'ನವೀನ' ಸಾಧನಗಳಾದ ಕಂಪ್ಯೂಟರ್‌ಗಳು, ಮೊಬೈಲ್‌ಗಳು, ಡಿಜಿಟಲ್ ಕ್ಯಾಮೆರಾಗಳು, ಪಿ.ಡಿ.ಎ.ಗಳ ಬಳಕೆ ಹೆಚ್ಚು ವಿಸ್ತರಿಸುತ್ತಿದೆ. ಅಷ್ಟೇ ಅಲ್ಲದೆ, ಹಳೆಯ ಸಾಧನಗಳಾದ ರೇಡಿಯೋ, ಟಿ.ವಿ., ಟೆಲಿಫೋನ್ ಇತ್ಯಾದಿಗಳು ಕೂಡ ಈಗ ಹೆಚ್ಚು ಉಪಯುಕ್ತವಾಗಿವೆ ಹಾಗೂ ಸುಲಭವಾಗಿ ದೊರಕುತ್ತವೆ. ಎರಡೂ ರೀತಿಯ ಸಾಧನಗಳ ಬೆಲೆ ಕೂಡ ದಿನೇ ದಿನೇ ಕಡಿಮೆಯಾಗುತ್ತಿದೆ.

## ಐ.ಸಿ.ಟಿ. ಯುಗದಲ್ಲಿ ಮಹಿಳಾ ಸಶಕ್ತತೆ

ಮಹಿಳೆಯರ ಕುರಿತು ಇರುವ ತಾರತಮ್ಯತೆ/ಸಾಮಾಜಿಕ ಅಂತರವು, ಅನೇಕ ಸಂಕೀರ್ಣ ಕಾರಣಗಳಿಂದ ಉಂಟಾಗಿದೆ; ಕುಟುಂಬದಂತಹ ಸಂಬಂಧಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಅವರ ಸ್ಥಾನಮಾನ ಎರಡನೇ ದರ್ಜೆಯದಾಗಿದೆ. ಮಹಿಳೆಯರು ತಮ್ಮನ್ನು ತಾವು 'ಶೋಷಿತ ವರ್ಗ' ಎಂದು ಗುರುತಿಸಿಕೊಂಡು, ಸಂಘಟಿತರಾಗಿ ತಮ್ಮ ಪರಿಸ್ಥಿತಿಯ ಸುಧಾರಣೆಗೆ ಸಕ್ರಿಯರಾಗುವ ಅವಕಾಶಗಳೂ ಇಲ್ಲವಾಗಿವೆ. ಮೇಲೆ ಹೇಳಿದ ಗುಣಲಕ್ಷಣಗಳಿರುವ ಐ.ಸಿ.ಟಿ.ಗಳು, ಮಹಿಳೆಯರ ಜೀವನ ಮತ್ತು ಹೋರಾಟಗಳೊಂದಿಗೆ ನೇರ ಸಂಬಂಧ ಹೊಂದಿರುವ ಹಲವಾರು ಪ್ರಕ್ರಿಯೆಗಳಲ್ಲಿ ಉಪಯುಕ್ತವಾಗಬಲ್ಲವು. ಮಹಿಳೆಯರಾಗಿ ತಮ್ಮ ಸಂಬಂಧಗಳನ್ನು ರೂಪಿಸಿಕೊಂಡು, ಅವುಗಳನ್ನು ಸಶಕ್ತಗೊಳಿಸಲು ಹೊಸ ಅವಕಾಶಗಳನ್ನು ಒದಗಿಸುವಲ್ಲಿ, ಅವರ ಹೋರಾಟವನ್ನು ಬಲಗೊಳಿಸುವಲ್ಲಿ ಮತ್ತು ಸಂಘಟಿತ ಪ್ರಯತ್ನದಲ್ಲಿ ತೊಡಗುವಲ್ಲಿ ಅವರಿಗೆ ಐ.ಸಿ.ಟಿ.ಗಳು ಸಹಾಯಕವಾಗುತ್ತವೆ. ಮಹಿಳೆಯರಿಗೆ ಇದುವರೆಗೂ ಸುಲಭವಾಗಿ ಲಭ್ಯವಿಲ್ಲದ ಸಶಕ್ತಗೊಳಿಸುವ ಹೊಸ ಮಾಹಿತಿಯನ್ನು ಒದಗಿಸುವ ಮೂಲಕ ಐ.ಸಿ.ಟಿ.ಗಳು ಅವರಿಗೆ ನೂತನ ಅವಕಾಶಗಳನ್ನು ತೆರೆದಿಟ್ಟಿವೆ.

ಆದರೆ ಶಿಕ್ಷಣ, ಉದ್ಯೋಗ, ರಕ್ಷಣೆಯೇ ಮೊದಲಾದ ಕ್ಷೇತ್ರಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಅಸಮಾನತೆಯನ್ನು ಗಣನೆಗೆ ತೆಗೆದುಕೊಂಡಲ್ಲಿ, ಹೊಸ ತಂತ್ರಜ್ಞಾನಗಳು ಮಹಿಳಾ ಸಶಕ್ತತೆಗೆ ಸಕಾರಾತ್ಮಕ ಕೊಡುಗೆ ನೀಡಬಲ್ಲವೇ? ಮಹಿಳೆಯರ ಮೂಲಭೂತ ಅಗತ್ಯಗಳನ್ನೇ ಪೂರೈಸಲಾಗದ ಪರಿಸ್ಥಿತಿಯಲ್ಲಿ ಹೊಸ ತಂತ್ರಜ್ಞಾನಗಳಾದ ಕಂಪ್ಯೂಟರ್‌ಗಳು, ವಿ.ಸಿ.ಡಿ. ಮತ್ತು ಸಹಾಯವಾಣಿಗಳ ಕುರಿತು ಆಲೋಚನೆ ಮಾಡುವುದು ಸಮ್ಮತವೇ? ಇಲ್ಲಿ 'ಅಹುದು' ಅಥವಾ 'ಇಲ್ಲ' ಎಂಬ ಸನ್ನಿವೇಶ ಇದೆಯೇ?

ಸ್ಪಷ್ಟವಾಗಿ ಹೇಳಬೇಕೆಂದರೆ, ಇದಕ್ಕೆ ಉತ್ತರ 'ಇಲ್ಲ' ಎಂದೇ. ಲಿಂಗತ್ವದ ದೃಷ್ಟಿಕೋನದಿಂದ ನೋಡಿದಾಗ, ಹೊಸ ತಂತ್ರಜ್ಞಾನಗಳ ಮೇಲೆ ಮಹಿಳೆಯರಿಗೆ ಹೆಚ್ಚು ನಿಯಂತ್ರಣ ಬೇಕಷ್ಟೇ ಅಲ್ಲದೆ, ಮಹಿಳೆಯರ ಕೆಲಸದ ಒತ್ತಡ/ಭಾರವನ್ನು ಕಡಿಮೆ ಮಾಡಬಲ್ಲ, ಈಗಿರುವ ಲಿಂಗ ರೂಢಿಗಳನ್ನು ಪ್ರಶ್ನಿಸಬಲ್ಲ ಮತ್ತು ಮಹಿಳೆಯರನ್ನು ಸಶಕ್ತಗೊಳಿಸಬಲ್ಲ ತಂತ್ರಜ್ಞಾನಗಳನ್ನು ವಿನ್ಯಾಸಗೊಳಿಸಿ, ಅಭಿವೃದ್ಧಿಗೊಳಿಸಬೇಕಾಗಿದೆ. ಅಂದರೆ, ನಾವು ಸಾಮಾಜಿಕ-ಸಾಂಸ್ಕೃತಿಕ ಪಿಡುಗುಗಳಾದ ಬಡತನ, ಹೆಣ್ಣು ಶಿಶುಹತ್ಯೆ, ಮಹಿಳಾ ಅನಕ್ಷರತೆ, ಅಸಮಾನ ವೇತನ ಮತ್ತು ಕುಟುಂಬದೊಳಗಿನ ಲಿಂಗತ್ವ ಅಸಮಾನತೆಗಳ ವಿರುದ್ಧ ಪ್ರತ್ಯಕ್ಷವಾಗಿ ಹೋರಾಡುತ್ತಿರುವುದರ ಜೊತೆಜೊತೆಗೇ, ಹೊಸದಾಗಿ ವಿಕಾಸಗೊಳ್ಳುತ್ತಿರುವ ಐ.ಸಿ.ಟಿ.ಗಳು ಹುಟ್ಟುಹಾಕಿರುವ ನೂತನ ಸಾಮಾಜಿಕ-ಆರ್ಥಿಕ ವ್ಯವಸ್ಥೆಗಳು ಲಿಂಗ ಅಸಮಾನತೆಗಳನ್ನು ಮರುಸೃಷ್ಟಿಸಬಲ್ಲವೋ ಅಥವಾ ಪರಿವರ್ತಿಸಬಲ್ಲವೋ ಎಂದು ಕೂಡ ಗಮನ ಹರಿಸಬೇಕಿದೆ.

ಈ ನಿರ್ದಿಷ್ಟ ಉದ್ದೇಶವಿಟ್ಟುಕೊಂಡೇ, ಕೆಲವು ವರ್ಷಗಳ ಹಿಂದೆ ಭಾರತದಲ್ಲಿ ಕೆಲವು ಯೋಜನೆಗಳು/ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಟೆಲಿಕೇಂದ್ರಗಳು ಅಥವಾ ಕಿಯೋಸ್ಕ್‌ಗಳ (ಬೂತುಗಳು) ಮೂಲಕ ಸರ್ಕಾರದ ಸೇವೆಗಳನ್ನು ಸುಲಭವಾಗಿ

ಲಭ್ಯವಾಗುವಂತೆ ಮಾಡುವುದು, ಆರೋಗ್ಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ಭಾಷೆಯಲ್ಲಿ ಮಾಹಿತಿ ಒದಗಿಸುವುದು, ರೇಡಿಯೋ ಮತ್ತು ವಿಡಿಯೋ ಚಿತ್ರಗಳ ಮೂಲಕ ಕೃಷಿ ಮತ್ತು ಜೀವನೋಪಾಯಕ್ಕೆ ಸಂಬಂಧಿಸಿದ ಮಾಹಿತಿ ನೀಡುವುದು, ದುರ್ಬಲ ವರ್ಗದವರಿಗೆ ಉದ್ಯೋಗಾವಕಾಶಗಳನ್ನು ಮತ್ತು ಸಂವಹನ ಅವಕಾಶಗಳನ್ನು ಉತ್ತಮಗೊಳಿಸಲು ಕಂಪ್ಯೂಟರ್, ಪಿ.ಡಿ.ಎ. ಮತ್ತು ಡಿಜಿಟಲ್ ಕ್ಯಾಮೆರಾಗಳ ಬಳಕೆಯ ಕುರಿತು ತರಬೇತಿ ನೀಡುವುದು, ಸಾರ್ವಜನಿಕ ಪ್ರಸಾರ ಮತ್ತು ಉಪಗ್ರಹ ಸೇವೆಗಳ ಮೂಲಕ ನೈಸರ್ಗಿಕ ಪ್ರಕೋಪಗಳ ಪರಿಣಾಮವನ್ನು ತಡೆಗಟ್ಟುವುದು ಮತ್ತು ಅವುಗಳ ಹಾನಿಯನ್ನು ಕಡಿಮೆಗೊಳಿಸುವುದೇ ಮೊದಲಾದುವನ್ನು ಮಾಡುತ್ತಿವೆ. ಈ ಯೋಜನೆಗಳು ದುರ್ಬಲವರ್ಗದ ಮಹಿಳೆಯರನ್ನು ಮಾಹಿತಿ ಹಾಗೂ ಸಂವಹನ ಪ್ರಕ್ರಿಯೆಗಳು ಮತ್ತು ವ್ಯವಸ್ಥೆಗಳ ಕೇಂದ್ರ ಬಿಂದುವಾಗಿಸಿ, ಮಹಿಳೆಯರೇ ಅವುಗಳ ಒಡೆತನ ಹೊಂದಿ, ಅವನ್ನು ನಿರ್ವಹಿಸಿ ನಿಯಂತ್ರಿಸುವಂತೆ ಮಾಡುತ್ತಿವೆ.

ದುರ್ಬಲವರ್ಗದ ಮಹಿಳೆಯರಿಗೆ, ಅದರಲ್ಲೂ ಅನಕ್ಷರಸ್ಥ ಅಥವಾ ಸ್ವಲ್ಪ ಮಟ್ಟಿಗೆ ಸಾಕ್ಷರರಾಗಿರುವ ಮಹಿಳೆಯರಿಗೆ ಐ.ಸಿ.ಟಿ.ಗಳು ಒಂದು ವರದಾನವಾಗಿ ಪರಿಣಮಿಸಿವೆ. ತೀರ ಇತ್ತೀಚಿನವರೆಗೆ ಪತ್ರಿಕೆಗಳು ಮಾಹಿತಿ ಮತ್ತು ಸಂವಹನದ ಮುಖ್ಯ ಕೇಂದ್ರಬಿಂದುವಾಗಿದ್ದು, ಈ ವರ್ಗದ ಮಹಿಳೆಯರಿಗೆ ಇವುಗಳ ಬಳಕೆ, ನಿಯಂತ್ರಣ ಮತ್ತು ಮಾಹಿತಿ ಹಂಚಿಕೆಯ ಅನುಕೂಲತೆ ಇರಲಿಲ್ಲ. ಪತ್ರಿಕೆ ಮತ್ತು ಇತರ ಪ್ರಕಾಶನ ಮಾಧ್ಯಮ–ಆಧಾರಿತ ಮಾಹಿತಿ ಮತ್ತು ಸಂವಹನ ಪ್ರಕ್ರಿಯೆಗಳ ಪ್ರಯೋಜನ ಪಡೆದುಕೊಳ್ಳಲು ಮಹಿಳೆಯರಿಗೆ ಹಲವಾರು ಅಡೆತಡೆಗಳಿದ್ದವು–ಪುಸ್ತಕ ಮತ್ತು ಸಾಮಗ್ರಿಗಳ ಬೆಲೆ, ಅವುಗಳನ್ನು ಪಡೆದುಕೊಳ್ಳುವಲ್ಲಿ ಸಮಸ್ಯೆಗಳು, ಈ ಸಾಮಗ್ರಿಗಳು ಅವರ ಭಾಷೆಯಲ್ಲಿ ಲಭ್ಯವಿಲ್ಲದಿರುವುದು ಮತ್ತು ಅವರ ಸ್ಥಳೀಯ ಅಗತ್ಯತೆಗಳಿಗೆ ಸೂಕ್ತವಾಗಿಲ್ಲದಿರುವುದು ಇತ್ಯಾದಿ. ಆದಾಗ್ಯೂ, ಮಹಿಳೆಯರು ಪ್ರಥಮ ಬಾರಿಗೆ ಈ ಐ.ಸಿ.ಟಿ.ಗಳ ಮೂಲಕ ಗ್ರಾಮೀಣ ಮಾಹಿತಿ ಮತ್ತು ಸಂವಹನ ವಾಹಿನಿಗಳ ಮೂಲಕ ಪ್ರಮುಖ ಕ್ಷೇತ್ರಗಳಾದ ಆರೋಗ್ಯ, ಶಿಕ್ಷಣ, ಜೀವನೋಪಾಯಗಳು, ಹಕ್ಕುಗಳು, ಸಾರ್ವಜನಿಕ ಸೇವೆಗಳು ಮತ್ತು ಸಮುದಾಯದ ಪ್ರಯತ್ನಗಳಲ್ಲಿ ಅವಕಾಶ ಪಡೆದುಕೊಂಡು, ಅವುಗಳನ್ನು ನಿಯಂತ್ರಿಸುವ ಮೂಲಕ ಪ್ರಯೋಜನ ಪಡೆಯುತ್ತಿದ್ದಾರೆ.

ಆದುದರಿಂದಲೇ ಲಿಂಗತ್ವಕ್ಕೆ ಸಂಬಂಧಿಸಿದ ವಿಷಯಗಳನ್ನು ಮುಂಚೂಣಿಗೆ ತರುವುದು ಹೇಗೆ ಹಾಗೂ ಹೊಸ ತಂತ್ರಜ್ಞಾನಗಳಿಂದ ಗ್ರಾಮೀಣ ಮಹಿಳೆಯರಿಗೆ ಹೇಗೆ ಲಾಭವಾಗಬಹುದು ಎಂದು ಚಿಂತನೆ ನಡೆಸಲು ಇದು ಸುಸಮಯ. ಇದರಲ್ಲಿ ಮಹಿಳೆಯರು ಐ.ಸಿ.ಟಿ.ಗಳನ್ನು ಬಳಸಲು ಶಕ್ತರಾಗುವಂತೆ ತರಬೇತಿ ನೀಡುವುದು, ಮಹಿಳೆಯರ ಒಡೆತನಕ್ಕೆ ಪ್ರತಿಪಾದನೆ, ಟೆಲಿಕೇಂದ್ರಗಳು ಮತ್ತು ಮಾಹಿತಿ ಕಿಯೋಸ್ಕ್‌ಗಳ ಬಳಕೆ ಮತ್ತು ನಿಯಂತ್ರಣ ಪ್ರಮುಖವಾಗಿವೆ. ಹೊಸ ತಂತಜ್ಞಾನಗಳನ್ನು ಬಳಸಿ ತಯಾರಾದ ಮಾಹಿತಿ ಮಹಿಳೆಯರ ಸಹಭಾಗಿತ್ವದೊಂದಿಗೆ ಸ್ಥಳೀಯವಾಗಿ ಉಪಯುಕ್ತವಾಗುವಂತಿದ್ದು, ಲಿಂಗತ್ವದ ಅರಿವಿದ್ದು, ಅಭಿವೃದ್ಧಿ–ಕೇಂದ್ರಿತವಾಗಿರುವಂತೆ ಖಾತ್ರಿಪಡಿಸಿಕೊಳ್ಳುವುದು ಕೂಡ ಇಲ್ಲಿ ಅತ್ಯವಶ್ಯಕವಾಗಿದೆ. ಮಹಿಳೆಯರ ಗುಂಪುಗಳು ಪರಸ್ಪರ ಸಂಪರ್ಕಿಸಿ ವಿಚಾರ ವಿನಿಮಯ ಮಾಡುವುದರ ಜೊತೆಗೆ, ಬಾಹ್ಯ ಸಂಸ್ಥೆಗಳಾದ ಸರ್ಕಾರಿ ಇಲಾಖೆಗಳು, ಬ್ಯಾಂಕುಗಳು, ಉದ್ಯಮಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳೊಡನೆ ಸಂಪರ್ಕ ಬೆಳೆಸಲೂ ಅವರಿಗೆ ಈ ಮೂಲಕ ಅವಕಾಶ ಕಲ್ಪಿಸಬೇಕು.

## ಮಹಿಳೆಯರ ಜೀವನೋಪಾಯಕ್ಕೆ ಸಂಬಂಧಿಸಿದಂತೆ ಐ.ಸಿ.ಟಿ.ಗಳು

ಐ.ಸಿ.ಟಿ.ಗಳ ಬಳಕೆಯಿಂದ ಉಂಟಾಗಬಲ್ಲ ಸಶಕ್ತತೆಯ ವಿಪುಲ ಸಾಧ್ಯತೆಗಳ ಹಿನ್ನೆಲೆಯಲ್ಲಿ, ಮಹಿಳೆಯರ ಕ್ಷೇಮಾಭಿವೃದ್ಧಿಯ ಮೇಲೆ ಪರಿಣಾಮ ಬೀರುವ ಒಂದು ಪ್ರಮುಖ ವಿಷಯದತ್ತ ಈ ಕೈಪಿಡಿ ಗಮನ ಹರಿಸುತ್ತದೆ. ಗೌರವಯುತ ಜೀವನೋಪಾಯಕ್ಕೆ ಅವಕಾಶಗಳು

– ಇಲ್ಲಿ ಜೀವನೋಪಾಯ ಎಂದರೆ ಆದಾಯಗಳಿಸುವ ಅವಕಾಶಗಳು ಮಾತ್ರವಲ್ಲ, ''ಜೀವನೋಪಾಯಕ್ಕೆ ಆವಶ್ಯಕವಾದ ಸಾಮರ್ಥ್ಯಗಳು, ಸ್ವತ್ತು (ಆರ್ಥಿಕ ಮತ್ತು ಸಾಮಾಜಿಕ ಸಂಪನ್ಮೂಲಗಳೆರಡೂ) ಮತ್ತು ಚಟುವಟಿಕೆಗಳೂ ಸೇರಿವೆ.''[3] ಆದ್ದರಿಂದ, ಜೀವನೋಪಾಯ ಎಂದರೆ ''ಬಳಕೆಯ ಮಟ್ಟ: ಸ್ವತ್ತಿಗೆ ಅವಕಾಶ; ಸಾಮಾಜಿಕ ಸಂಪರ್ಕಜಾಲಗಳಲ್ಲಿ ಸೇರ್ಪಡೆ; ಮಾನವ ಸಂಪನ್ಮೂಲದ ಮಟ್ಟ; ಅಸಮಾನತೆ ಇಲ್ಲದಿರುವುದು ಹಾಗೂ ಪುನಶ್ಚೇತನ, ನಿಭಾಯಿಸುವಿಕೆ ಮತ್ತು ಹೊಂದಾಣಿಕೆಯ ಪ್ರಕ್ರಿಯೆಗಳು, ಮಹಿಳೆಯರಿಗೆ ಸುರಕ್ಷಿತ ಹಾಗೂ ಸುಸ್ಥಿರ ಜೀವನೋಪಾಯದ ಅವಕಾಶಗಳನ್ನು ನಿರ್ಧರಿಸುವಾಗ ಸಾಲ ನೀಡುವ ಸಂಸ್ಥೆಗಳ ಪಾತ್ರ ಮತ್ತು ಸಾಲ ಮರುಪಾವತಿ ಅವಧಿಯ ಪರಿಶೀಲನೆಯೇ ಮೊದಲಾದುವು ಇದರಲ್ಲಿ ಒಳಗೊಂಡಿವೆ.''[4] ಮಹಿಳೆಯರ ಮತ್ತು ಅವರ ಕುಟುಂಬಗಳ ಉಳಿವಿನ ಮೇಲೆ ಪರಿಣಾಮ ಬೀರುವುದರಿಂದ ಗ್ರಾಮೀಣ ಮಹಿಳೆಯರಿಗೆ ಜೀವನೋಪಾಯಗಳು ಅತ್ಯಂತ ಪ್ರಮುಖ ಕ್ಷೇತ್ರ. ಸುರಕ್ಷಿತ ಮತ್ತು ಗೌರವಯುತ ಜೀವನೋಪಾಯವಿದ್ದಲ್ಲಿ, ಅದು ಗ್ರಾಮೀಣ ಮಹಿಳೆಯರಿಗಿರುವ ಬೆಂಬಲ ವ್ಯವಸ್ಥೆಯನ್ನು ಭದ್ರಗೊಳಿಸುವುದರೊಂದಿಗೆ, ಕುಟುಂಬದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಭಾಗವಹಿಸುವಿಕೆಯನ್ನು ನೀಡುತ್ತದೆ.

ಈ ಸನ್ನಿವೇಶದಲ್ಲಿ ಐ.ಸಿ.ಟಿ.ಗಳ ಪಾತ್ರ ಏನು? ದುರದೃಷ್ಟವಶಾತ್, ಭಾರತಕ್ಕೆ ಸಂಬಂಧಿಸಿದಂತೆ ಐ.ಸಿ.ಟಿ.ಗಳು ಮತ್ತು ಜೀವನೋಪಾಯಗಳೆಂದರೆ, ದಿನೇ ದಿನೇ ಬೆಳೆಯುತ್ತಿರುವ ಸಾಫ್ಟ್‌ವೇರ್ ಕಂಪೆನಿಗಳಲ್ಲಿ ಮಹಿಳೆಯರು ಉತ್ತಮ ವೇತನ ಗಳಿಸುವ ಉದ್ಯೋಗಗಳನ್ನು ಪಡೆದುಕೊಂಡು ತಮ್ಮ ಸ್ಥಾನಮಾನದಲ್ಲಿ ಸುಧಾರಣೆ ಮಾಡಿಕೊಳ್ಳುವುದು ಎಂದು ಅರ್ಥೈಸಿಕೊಳ್ಳಲಾಗಿದೆ. ಈ ಉದ್ಯೋಗಗಳ ಸಕಾರಾತ್ಮಕ ಪರಿಣಾಮಗಳನ್ನು ನಾವು ಅಲ್ಲಗಳೆಯುವಂತಿಲ್ಲ, ಆದರೆ, ಈ ಕ್ಷೇತ್ರಗಳಲ್ಲಿ ಉದ್ಯೋಗ ಮಾಡುತ್ತಿರುವ ಮಹಿಳೆಯರು ದೇಶದ ಮಹಿಳೆಯರ ಒಟ್ಟು ಸಂಖ್ಯೆಯಲ್ಲಿ ಒಂದು ಸಣ್ಣ ಪಾಲು ಮಾತ್ರ. ಈ ಕ್ಷೇತ್ರದಲ್ಲಿ ಚಿಕ್ಕ ವಯಸ್ಸಿನ, ನಗರಗಳಲ್ಲಿರುವ, ಉತ್ತಮ ಶಿಕ್ಷಣ ಪಡೆದಿರುವ, ಪ್ರಬಲ ಜಾತಿಗಳಿಗೆ ಸೇರಿರುವ, ಮಧ್ಯಮ-ವರ್ಗದ, ಇಂಗ್ಲಿಷ್ ಮಾತನಾಡಬಲ್ಲ ಮಹಿಳೆಯರು ಮಾತ್ರ ಉದ್ಯೋಗ ಪಡೆಯಬಲ್ಲರು.

ನಮ್ಮ ದೇಶದಲ್ಲಿ ಬಹುಪಾಲು ಮಹಿಳೆಯರಿಗೆ ಜೀವನೋಪಾಯಗಳಲ್ಲಿ ಐ.ಸಿ.ಟಿ.ಗಳು ಎಂದರೆ ಕೇವಲ ಇವು ಕಲ್ಪಿಸುವ ಉದ್ಯೋಗ ಮತ್ತು ಆದಾಯದ ಅವಕಾಶಗಳು ಮಾತ್ರವಲ್ಲ, ಇವುಗಳ ಜೊತೆಜೊತೆಯೇ ಬರುವ ಸಾಮಾಜಿಕ ಕರ್ತವ್ಯಗಳು ಮತ್ತು ಸ್ಥಾನಮಾನದತ್ತಲೂ ಗಮನಹರಿಸಬೇಕಿದೆ. ಆದುದರಿಂದಲೇ, ಸಮುದಾಯದ ಬೇರೆ ಗುಂಪುಗಳಿಗಿಂತ, ದುರ್ಬಲ ವರ್ಗದ/ಬಡ ಮಹಿಳೆಯರು ಏಕೆ ಐ.ಸಿ.ಟಿ. ಆಧಾರಿತ ಉದ್ಯಮಗಳ ಒಡೆತನ ಹೊಂದಿ, ಅವನ್ನು ನಿರ್ವಹಿಸಬೇಕು ಹಾಗೂ ಇತರ ಸಾಂಪ್ರದಾಯಿಕ ಉದ್ಯಮಗಳಾದ ಹೊಲಿಗೆ, ಆಹಾರ ಸಂಸ್ಕರಣೆ ಇತ್ಯಾದಿಗಳಿಗಿಂತ ಇವುಗಳಿಗೆ ಹೆಚ್ಚು ಆದ್ಯತೆ ಏಕೆ ನೀಡಬೇಕು ಎಂಬುದನ್ನು ಪ್ರಮುಖವಾಗಿ ಪರಿಶೀಲಿಸಬೇಕು. (ಅಧ್ಯಾಯ 3 ರಲ್ಲಿ ಈ ವಿಷಯಗಳ ಕುರಿತು ಹೆಚ್ಚು ಆಳವಾದ ವಿಶ್ಲೇಷಣೆಯನ್ನು ಮಾಡಲಾಗಿದೆ).

---

3 ಚೇಂಬರ್ಸ್ ಆರ್. ಮತ್ತು ಜಿ. ಕಾನ್‌ವೇ (1992) *ಸಸ್ಟೇನಬಲ್ ರೂರಲ್ ಲೈವ್ಲಿಹುಡ್ಸ್: ಪ್ರಾಕ್ಟಿಕಲ್ ಕಾನ್ಸೆಪ್ಟ್ಸ್ ಫಾರ್ ದಿ 21st ಸೆಂಚುರಿ: ಐ.ಡಿ.ಎಸ್. ಡಿಸ್ಕಶನ್ ಪ್ರಬಂಧ 296, ಬ್ರೈಟನ್: ಐ.ಡಿ.ಎಸ್.* ನಿಂದ ತೆಗೆದುಕೊಳ್ಳಲಾಗಿದೆ.

4 ಐ.ಡಿ.ಎಸ್., ''ಯೂಸ್ ಆಫ್ ಸಸ್ಟೇನಬಲ್ ಲೈವ್ಲಿಹುಡ್ಸ್ ಅಪ್ರೋಚೆಸ್'' ಅಕ್ಟೋಬರ್ 10, 2006 ರಂದು http://www.livelihood.org/lessons/project_summaries/agri5_SLRP.html ಯಿಂದ ತೆಗೆದುಕೊಳ್ಳಲಾಗಿದೆ.

ಐ.ಸಿ.ಟಿ.ಗಳು ಕಲ್ಪಿಸುವ ಹೊಸ ಉದ್ಯಮಗಳ ಅವಕಾಶಗಳನ್ನು ಅವು ದುರ್ಬಲ ವರ್ಗದ ಮಹಿಳೆಯರಿಗೆ ತರಬಲ್ಲ ಸಕಾರಾತ್ಮಕ ಪರಿವರ್ತನೆಗಳ ದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕಾಗಿದೆ – ಸ್ವತ್ತು, ಸಾಮಾಜಿಕ ಸಂಪರ್ಕಜಾಲ ಮತ್ತು ಅನೌಪಚಾರಿಕ ಸಂಪನ್ಮೂಲಗಳಿಗೆ ಹೆಚ್ಚಿನ ಅವಕಾಶ, ಮಹಿಳೆಯರ ಕೆಲಸಕ್ಕೆ ಇವು ನೀಡುವ ಹೊಸ ಸ್ವರೂಪ, ಇವುಗಳು ತರಬಲ್ಲ ಸಾಮಾಜಿಕ ಸ್ಥಾನಮಾನ ಮತ್ತು ಸಂಪರ್ಕಕೊಂಡಿಗಳು ಹಾಗೂ ಈ ಹೊಸ ಆರ್ಥಿಕ ಅವಕಾಶಗಳಿಂದ ಉಂಟಾಗುವ ಸಬಲೀಕರಣವನ್ನೂ ಪರಿಗಣಿಸಬೇಕು. ಐ.ಸಿ.ಟಿ.ಗಳ ರೂಪುರೇಷೆ ಹಾಗೂ ದೇಶದಲ್ಲಿ ಲಿಂಗತ್ವದ ಪಾತ್ರಗಳನ್ನು ಅವು ಹೇಗೆ ಬದಲಾಯಿಸುತ್ತಿವೆ ಮತ್ತು ಹೇಗೆ ಬದಲಾಯಿಸಬಹುದು ಎಂಬುದನ್ನು ಈ ಕೈಪಿಡಿ ಪರಿಶೀಲಿಸುತ್ತದೆ.

## ಕೈಪಿಡಿಯ ವಿನ್ಯಾಸ

ನವೀನ ಐ.ಸಿ.ಟಿ.ಗಳು ನಮ್ಮ ಸಾಮಾಜಿಕ–ಆರ್ಥಿಕ ಪರಿಸ್ಥಿತಿಯನ್ನು ಶರವೇಗದಲ್ಲಿ ಪರಿವರ್ತಿಸುತ್ತಿರುವಂತೆ, ಈ ತಂತ್ರಜ್ಞಾನಗಳು ಮಹಿಳೆಯರಿಗೆ ಉತ್ತಮ ಜೀವನೋಪಾಯಗಳನ್ನು ಕಲ್ಪಿಸುವ ಮತ್ತು ಲಿಂಗ ಸಮಾನತೆಯನ್ನು ಸಾಧಿಸುವ ಒಟ್ಟಾರೆ ಉದ್ದೇಶಕ್ಕೆ ಯಾವ ರೀತಿಯ ಅವಕಾಶ ಮತ್ತು ಸವಾಲುಗಳನ್ನು ಒಡ್ಡುತ್ತವೆ ಎಂದು ನಾವು ನೋಡಬೇಕಿದೆ. ಕೈಪಿಡಿಯನ್ನು ಈ ಕೆಳಗೆ ನೀಡಿರುವ ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

1. ಗ್ರಾಮೀಣ ಪ್ರದೇಶಗಳಲ್ಲಿರುವ ಮಾಹಿತಿ ಮತ್ತು ಸಂವಹನದ ಆವಶ್ಯಕತೆಗಳೇನು? ಈ ಆವಶ್ಯಕತೆಗಳನ್ನು ಪೂರೈಸುವಲ್ಲಿ ಐ.ಸಿ.ಟಿ.ಗಳ ಪಾತ್ರವೇನು?
2. ಐ.ಸಿ.ಟಿ. – ಆಧಾರಿತ ಉದ್ಯಮಗಳು ಯಾವುವು? ಮಹಿಳಾ ಸಂಘಟನೆಗಳು ಐ.ಸಿ.ಟಿ. ಆಧಾರಿತ ಉದ್ಯಮಗಳನ್ನು ಅಳವಡಿಸಿಕೊಳ್ಳಲು ಏಕೆ ಮುಂದಾಗಬೇಕು?
3. ಮಹಿಳೆಯರಿಗೆ ಐ.ಸಿ.ಟಿ.–ಆಧಾರಿತ ಉದ್ಯಮಗಳನ್ನು ಸ್ಥಾಪಿಸಿ, ಬೆಂಬಲಿಸುವಲ್ಲಿ ಎದುರಾಗುವ ಸಮಸ್ಯೆಗಳು, ಸವಾಲುಗಳು ಮತ್ತು ಅಡೆತಡೆಗಳು ಯಾವುವು? ಸಶಕ್ತತೆ ಮತ್ತು ಉದ್ಯಮದ ಗುರಿಗಳೆರಡನ್ನೂ ಯಶಸ್ವಿಯಾಗಿ ತಲುಪಲು ಒಂದು ಮಾದರಿಯನ್ನು ಹೇಗೆ ರೂಪಿಸಬಹುದು?
4. ಮಹಿಳಾ ಸಶಕ್ತತೆಯಲ್ಲಿ ಐ.ಸಿ.ಟಿ. ಕುರಿತು ಈ ಕ್ಷೇತ್ರದ ತಜ್ಞರು ಏನು ಹೇಳುತ್ತಾರೆ?
5. ಮಹಿಳಾ ಸಶಕ್ತತೆ ಸಂಘಟನೆಗಳು ಮತ್ತು ಆಂದೋಲನಗಳು ಐ.ಸಿ.ಟಿ.ಯ ಲಾಭಗಳನ್ನು ಹೇಗೆ ಮುಂದೆ ತೆಗೆದುಕೊಂಡು ಹೋಗುತ್ತಾರೆ ಮತ್ತು ಅವರಿಗೆ ಯಾವ ರೀತಿಯ ಬೆಂಬಲ ದೊರೆಯುತ್ತದೆ?

## ರಾಧಿಕಾ, ಗ್ರಾಮ ಮಾಹಿತಿ ಕೇಂದ್ರದ ಆಪರೇಟರ್, ಧಾನ್ ಫೌಂಡೇಶನ್, ತಿರುವತ್ತವೂರು, ತಮಿಳು ನಾಡು : ಒಂದು ಪ್ರಕರಣಾಧ್ಯಯನ

''ನಾನು ಹತ್ತನೇ ತರಗತಿ ಮುಗಿಸಿದ್ದೆ. ಆ ವರ್ಷ ಸರಿಯಾಗಿ ಬೆಳೆ ಆಗಿರಲಿಲ್ಲ, ಆದುದರಿಂದ ನಾನು ಮನೆಯಲ್ಲೇ ಇದ್ದು ನನ್ನ ತಾಯಿಗೆ ಸಹಾಯ ಮಾಡುತ್ತಿದ್ದೆ. ನಮ್ಮ ತಾಯಿ ಒಬ್ಬ ಕೃಷಿ ಕಾರ್ಮಿಕಳು ಮತ್ತು ನನ್ನನ್ನು ಮುಂದೆ ಓದಿಸಲು ಅವರಿಗೆ ಸಾಧ್ಯವಿರಲಿಲ್ಲ. ನನಗೆ ತಂದೆ ಇಲ್ಲ.

ನಮ್ಮ ಮನೆಗೆ ಹತ್ತಿರದಲ್ಲಿಯೇ ಧಾನ್ ಫೌಂಡೇಶನ್‌ನ ಕಛೇರಿ ಇತ್ತು. ಆದರೆ ಅವರು ಏನು ಮಾಡುತ್ತಾರೆ ಎಂದು ನನಗೆ ತಿಳಿದಿರಲಿಲ್ಲ. ಅಲ್ಲಿನ ಕಾರ್ಯಕರ್ತೆಯೊಬ್ಬರು ಉಚಿತ ಕಂಪ್ಯುಟರ್ ತರಬೇತಿ ನೀಡುವ ಕುರಿತು ಪ್ರಚಾರ ಮಾಡಲು ನಮ್ಮ ಬಳಿ ಬರುತ್ತಿದ್ದರು. ಮನೆಯಲ್ಲಿ ನನ್ನನ್ನು ತರಬೇತಿಗೆ ಕಳಿಸಲು ಯಾರಿಗೂ ಇಷ್ಟವಿರದಿದ್ದರೂ, ಆಪರೇಟರ್ ಒತ್ತಾಯಕ್ಕೆ ಮಣಿದು ನನ್ನನ್ನು ಕೇಂದ್ರಕ್ಕೆ ಕಳಿಸಿದರು. ಚಿತ್ರಗಳಲ್ಲಿ ಬಿಟ್ಟರೆ ನಾನು ಈ ಮೊದಲು ಕಂಪ್ಯೂಟರ್ ನೋಡಿಯೇ ಇರಲಿಲ್ಲ. ತರಬೇತಿಗೆ ಸೇರಿದಾಗಲೇ ಪ್ರಥಮ ಬಾರಿಗೆ ನಾನು ಕಂಪ್ಯೂಟರ್ ಮುಟ್ಟಿ ನೋಡಿದ್ದು!

ನಾನು ಕೇಂದ್ರದಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಸಹಾಯ ಮಾಡಿದೆ. ಗ್ರಾಮಸ್ಥರಿಂದ ವಿದ್ಯುಚ್ಛಕ್ತಿ ಬಿಲ್ ಪಡೆದು ಅವುಗಳನ್ನು ಪಾವತಿ ಮಾಡಿದೆ. ಪಕ್ಕದ ಗ್ರಾಮದಿಂದಲೂ ಕೆಲವು ಕೆಲಸಗಳು ಸಿಕ್ಕಿದವು ಮತ್ತು ನಾನು ಕೆಲವು ಕಂಪ್ಯೂಟರ್ ಜೋಡಣೆ ಕೂಡ ಮಾಡಿದೆ. ಈ ಕೆಲಸಗಳಿಂದ ನನಗೆ ಆದಾಯ ದೊರೆಯಿತು.

ಧಾನ್ ಸಂಸ್ಥೆ ನಮ್ಮ ಪಕ್ಕದ ಊರಿನಲ್ಲಿ ಒಂದು ಹೊಸ ಕೇಂದ್ರ ಪ್ರಾರಂಭಿಸುವಂತೆ ನನಗೆ ಹೇಳಿತು. ಕೇಂದ್ರದ ಆಪರೇಟರ್‌ಗಳು ನಮ್ಮ ಕ್ಷೇತ್ರದಲ್ಲಿ ಪ್ರಚಾರ ಮಾಡುತ್ತಿದ್ದಾಗ ನಮಗೆ ಸುಮ್ಮನೆ ತೊಂದರೆ ಕೊಡಬೇಡಿ ಎಂದು ಅವರಿಗೆ ಹೇಳುತ್ತಿದ್ದೆ, ಅವರಿಗೆ ಮಾಡಲು ಕೆಲಸವಿಲ್ಲ ಎಂದು ತಿಳಿದಿದ್ದೆ. ಈಗ ನಾನು ಪ್ರಚಾರ ಮಾಡಲು ಹೋದಾಗ ಅವರು ಎದುರಿಸುತ್ತಿದ್ದ ಸಮಸ್ಯೆಗಳ ಅರಿವಾಗುತ್ತದೆ. ಜನರು ಕರೆದ ಕೂಡಲೇ ಬರುವುದಿಲ್ಲ, ನಾವು ಅವರ ಮನವೊಲಿಸಬೇಕು. ಅವರಿಗೆ ಪಂಚಾಯಿತಿಯಿಂದ ಏನಾದರೂ ಕೇಳಬೇಕಾಗಿದ್ದರೆ, ವಿವರಗಳನ್ನೆಲ್ಲಾ ನಾವು ಅವರ ಪರವಾಗಿ ಬರೆದು (ಟೈಪ್ ಮಾಡಿ), ಕಛೇರಿಗೆ ಕೊಡುತ್ತೇವೆ ಎಂದೆಲ್ಲಾ ಹೇಳಬೇಕಾಗುತ್ತದೆ.

ಪ್ರಾರಂಭದಲ್ಲಿ ಜನರೊಡನೆ ಮಾತನಾಡುವುದು ನನಗೆ ಕಷ್ಟವೆನಿಸಿತು. ಆದರೆ ಬರಬರುತ್ತಾ ಈ ಕಾರ್ಯ ಸುಲಭವೆನಿಸಿತು. ಈಗ ಸಮುದಾಯದವರು ತಾವಾಗಿಯೇ ನನ್ನ ಬಳಿ ಬರುತ್ತಾರೆ. ಈಗ ಎಲ್ಲರಿಗೂ ನನ್ನ ಪರಿಚಯ ಇದೆ. ನನ್ನನ್ನು ಎಲ್ಲರೂ ಕಂಪ್ಯುಟರ್ ಅಕ್ಕ ಎಂದು ಕರೆಯುತ್ತಾರೆ. ಅಲ್ಲದೆ, ಮೊದಲು ನಮ್ಮ ಕೇಂದ್ರ ಊರಿನ ಮುಖ್ಯ ರಸ್ತೆಯಲ್ಲಿದ್ದು, ಇಲ್ಲಿಗೆ ಪುರುಷರು ಮಾತ್ರ ಬರುತ್ತಿದ್ದರು. ನಾವೀಗ ಗ್ರಾಮದ ಒಳ ಭಾಗಕ್ಕೆ ಹೋಗಿರುವುದರಿಂದ, ಹೆಚ್ಚು ಮಹಿಳೆಯರು ಕೇಂದ್ರಕ್ಕೆ ಬರುತ್ತಿದ್ದಾರೆ.

ಜನರಿಗೆ ನಾವು ನೀಡುವ ಸೇವೆಗಳ ಉಪಯುಕ್ತತೆಯ ಅರಿವಾಗಿದೆ. ಉದಾಹರಣೆಗೆ ಜನರಿಗೆ ಜನನ ಪ್ರಮಾಣಪತ್ರ ಬೇಕಾದಲ್ಲಿ, ಅವರು ಸಮಯ ವ್ಯಯ ಮಾಡಿ, ಲಂಚ ಕೊಟ್ಟು ಅದನ್ನು ಪಡೆಯಬೇಕಾಗಿತ್ತು. ಈಗ ನಮಗೆ ನಿಗದಿತ ಹಣ ಮಾತ್ರ ಕೊಟ್ಟು ಪ್ರಮಾಣಪತ್ರ ಪಡೆಯುತ್ತಾರೆ. ಒಮ್ಮೆ ಒಂದು ಸಲ, ಅರವಿಂದ್ ಎಂಬ ಹುಡುಗನಿಗೆ ಕಣ್ಣಿನ ಸೋಂಕು ಆಗಿತ್ತು. ಆಸ್ಪತ್ರೆಯಲ್ಲಿ ಈ ಕಾಯಿಲೆ ವಾಸಿ ಮಾಡಲು ರೂ. 5000/- ಕೇಳುತ್ತಿದ್ದಾರೆ ಎಂದು ಅವರ ಕುಟುಂಬದ ಸದಸ್ಯರು ನನಗೆ ಹೇಳಿದರು. ನಮ್ಮ

ಕೇಂದ್ರದಲ್ಲಿ ದೊರೆಯುವ ಟೆಲಿಮೆಡಿಸಿನ್ ಸೌಲಭ್ಯದಿಂದ ಈ ಹುಡುಗನ ಸಮಸ್ಯೆಯನ್ನು ರೂ. 1500/- ಖರ್ಚಿನಲ್ಲಿಯೇ ಸರಿಪಡಿಸಲಾಯಿತು. ಈಗ ಅರವಿಂದ ಚೆನ್ನಾಗಿ ನೋಡಬಲ್ಲ. ನಾವು ಜನರ ಸಮಯ ಉಳಿಸುತ್ತೇವೆ. ಅವರಿಗೆ ಕಂಪ್ಯೂಟರ್ ಬಳಕೆ ಕಲಿಸುತ್ತೇವೆ. ಇತರರಿಗೆ ಹೋಲಿಸಿದರೆ ನಾವು ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಸೇವೆ ಒದಗಿಸುತ್ತೇವೆ.

ನಾವು ಈ ಪ್ರದೇಶದಲ್ಲಿ 40 ಕೇಂದ್ರಗಳಿಂದ ಸಂಗ್ರಹಿಸಿದ ಸಮಾಚಾರವನ್ನೂ ಇಲ್ಲಿ ಪ್ರಸಾರ ಮಾಡುತ್ತೇವೆ. ಪ್ರತಿ ಕೇಂದ್ರವೂ ಸಮಾಚಾರ ಸಂಗ್ರಹಿಸಿ, ಅದನ್ನು ಮುಖ್ಯ ಕೇಂದ್ರಕ್ಕೆ ಕಳುಹಿಸುತ್ತದೆ. ಮುಖ್ಯ ಕೇಂದ್ರದಲ್ಲಿ ಇದನ್ನು ಆದ್ಯತೆಯ ಮೇರೆಗೆ ವಿಂಗಡಿಸಲಾಗುತ್ತದೆ. ಪ್ರತಿ ಮುಂಜಾನೆ ಈ ಸುದ್ದಿಯನ್ನು ಓದಲಾಗುತ್ತದೆ. ನಮ್ಮ ಕೇಂದ್ರದ ಹೊರಭಾಗದಲ್ಲಿ ಒಂದು ಧ್ವನಿವರ್ಧಕ ಇದೆ. ಇದರಿಂದ ಎಲ್ಲರಿಗೂ ಸುದ್ದಿ ತಲುಪುತ್ತದೆ. ಮೊದಲಿಗೆ, ನಾನು ಸುದ್ದಿ ಸಂಗ್ರಹ ಮಾಡಲು ಹೋಗುತ್ತಿದ್ದೆ, ಈಗ ಜನರೇ ಮುಂದೆ ಬಂದು ಸಮಾಚಾರ ನೀಡಿ ಹೋಗುತ್ತಾರೆ.

ಈ ಕೆಲಸ ಸೇರುವ ಮುನ್ನ ನಾನು ಬಹಳ ನಾಚಿಕೆ ಸ್ವಭಾವದವಳಾಗಿದ್ದೆ. ಧಾನ್ ಫೌಂಡೇಶನ್ ಮತ್ತು ಆಪರೇಟರ್ ಅವರ ಪ್ರೋತ್ಸಾಹದ ಕಾರಣದಿಂದ, ಇಂದು ನಾನು ವೇದಿಕೆಯ ಮೇಲೆ ನಿಂತು ಮಾತನಾಡುವಷ್ಟು ಧೈರ್ಯ ಗಳಿಸಿದ್ದೇನೆ. ವೇದಿಕೆಯ ಮೇಲೆ ಹೋದಾಗ ನಾನು ಮೊದಲು ನನ್ನ ಪರಿಚಯ ಮಾಡಿಕೊಳ್ಳುತ್ತೇನೆ, ನಂತರ ಕೇಂದ್ರದಲ್ಲಿ ನೀಡುವ ಸೇವೆಗಳ ಕುರಿತು ಮಾತನಾಡುತ್ತೇನೆ. ಜನರನ್ನು ಭೇಟಿಯಾದಾಗ ನಾನೇ ಮೊದಲು ಮಾತನಾಡುತ್ತೇನೆ. ನಿಜ ಹೇಳಬೇಕೆಂದರೆ, ಈಗೀಗ ಗಂಡಸರೇ ಮಾತನಾಡಲು ಹೆಚ್ಚು ನಾಚಿಕೊಳ್ಳುತ್ತಾರೆ!

ನಾನು ಈ ಮಟ್ಟ ತಲುಪಲು ಧಾನ್ ಸಂಸ್ಥೆಯೇ ಕಾರಣ. ನನಗೆ ಬೇರೆ ಎಲ್ಲಿಯೂ ಉದ್ಯೋಗ ಮಾಡಲು ಇಷ್ಟವಿಲ್ಲ. ಕೇಂದ್ರಕ್ಕೆ ಹೆಚ್ಚಿನ ಆದಾಯ ಬರುವಂತೆ ಮಾಡಲು ನಾನು ಹೆಚ್ಚು ಕಷ್ಟಪಟ್ಟು ಕೆಲಸ ಮಾಡಬೇಕು - ನಾನು ಈಗ ತರಬೇತಿ ನೀಡುವುದು, ಡ್ಯಾಟಾ ಎಂಟ್ರಿ (ಕಂಪ್ಯೂಟರ್ ಟೈಪಿಂಗ್), ವಿಡಿಯೋ ಮೂಲಕ ಮಾತುಕತೆ, ಜ್ಯೋತಿಷ್ಯ ಇತ್ಯಾದಿ ಸೇವೆಗಳನ್ನು ಒದಗಿಸುವ ಮೂಲಕ ರೂ. 1000/- ಗಳಿಸುತ್ತೇನೆ. ನನ್ನ ತಿಂಗಳ ಖರ್ಚಿಗೆ ಸರಿಹೋಗುತ್ತದೆ.

ಮೊದಲು ನನ್ನ ತಾಯಿ ಹುಡುಗಿಯರು ಮನೆಬಿಟ್ಟು ಹೊರಗೆ ಹೋಗಬಾರದು ಎಂದು ನನ್ನ ಈ ಕೆಲಸಕ್ಕೆ ಬೆಂಬಲ ನೀಡಿರಲಿಲ್ಲ. ನನ್ನ ಗೆಳತಿಯರು ಮತ್ತು ಸಂಬಂಧಿಕರು ಆಕೆಯನ್ನು ಒಪ್ಪಿಸಿದ್ದರು. ಈಗ ನಾನು ತಿಂಗಳಿಗೆ ರೂ. 1000/- ಮನೆಗೆ ಕೊಡುವುದರಿಂದ ಕುಟುಂಬಕ್ಕೆ ಸಹಾಯವಾಗುತ್ತಿದೆ. ಈಗ ನಮ್ಮ ತಾಯಿ ನನಗೆ ಪೂರ್ಣ ಬೆಂಬಲ ನೀಡುತ್ತಿದ್ದಾರೆ. ನನಗೆ ಮನೆಯಲ್ಲಿ ಹೆಚ್ಚು ಕೆಲಸ ಕೊಡುವುದಿಲ್ಲ. ನಾನು ಎಲ್ಲಿ ಹೋಗುತ್ತಿದ್ದೇನೆ ಯಾವಾಗ ಬರುತ್ತೇನೆ ಎಂದೆಲ್ಲಾ ಬಹಳ ವಿಚಾರಿಸುವುದಿಲ್ಲ. ನಾನು ಮನೆಗೆ ಬಂದಾಗ ನನಗೆ ತಿಂಡಿ ಮಾಡಿಕೊಡುತ್ತಾಳೆ. ಆಕೆಗೆ ನನ್ನ ಬಗ್ಗೆ ಹೆಮ್ಮೆ.

ಧಾನ್ ಸಂಸ್ಥೆಯ ಪ್ರೋತ್ಸಾಹ ಇಲ್ಲದಿದ್ದರೆ ನಾನು ಇಂದು ಮನೆಯಲ್ಲೇ ಕುಳಿತಿರುತ್ತಿದ್ದೆ. ಒಂದು ಕಂಪ್ಯೂಟರ್ ಸರ್ಟಿಫಿಕೇಟ್‌ಗೆ 500 ರೂಪಾಯಿ ಕೊಡಬೇಕಾಗಿತ್ತು. ಈಗ ನಾನು ಅದೇ ಸೇವೆಯನ್ನು ಉಚಿತವಾಗಿ ನೀಡುತ್ತಿದ್ದೇನೆ. ನಾನು ವಿವಿಧ ಕೆಲಸಗಳನ್ನು ಕಲಿತಿದ್ದೇನೆ. ಗ್ರಾಮೀಣ ಮಹಿಳೆಯರಿಗೆ ನನ್ನ ಸಲಹೆ ಏನೆಂದರೆ, ನಾನು ಕೂಡ ನಿಮ್ಮಲ್ಲಿ ಒಬ್ಬಳು. ನಾನು ಜೀವನದಲ್ಲಿ ಮುಂದೆ ಬರಬಹುದಾದರೆ, ನೀವೂ ಬರಬಹುದು.''

# II. ಮಹಿಳೆಯರ ಮಾಹಿತಿ ಮತ್ತು ಸಂವಹನ ಅಗತ್ಯಗಳಿಗೆ ಸಂಬಂಧಿಸಿದಂತೆ ಐ.ಸಿ.ಟಿ.ಗಳು

**ಈ ಅಧ್ಯಾಯದಿಂದ ನಾನು ಏನು ಕಲಿಯಬಹುದು?**

* ಗ್ರಾಮೀಣ ಮಹಿಳೆಯರ ಮಾಹಿತಿ ಮತ್ತು ಸಂವಹನದ ಕೆಲವು ಅಗತ್ಯಗಳು ಯಾವುವು?
* ಕಂಪ್ಯೂಟರ್, ವಿಡಿಯೋ, ರೇಡಿಯೋ, ಫೋನ್ ಇತ್ಯಾದಿ ಐ.ಸಿ.ಟಿ.ಗಳು ಈ ಅಗತ್ಯಗಳನ್ನು ಪೂರೈಸುವಲ್ಲಿ ಹೇಗೆ ಸಹಾಯಕವಾಗಬಹುದು?

ನಾವು ನವೀನ ತಂತ್ರಜ್ಞಾನಗಳ ಕುರಿತು ವಿಚಾರ ಮಾಡುವಾಗ, ನಮ್ಮ ಕಣ್ಮುಂದೆ ಬರುವ ಚಿತ್ರವೆಂದರೆ, ಮಧ್ಯಮ ವರ್ಗದ ಜನರು ತಮ್ಮ ಮಾಹಿತಿ ಮತ್ತು ಸಂವಹನ ಉದ್ದೇಶಕ್ಕಾಗಿ ಬಳಸುವ ಹೈಟೆಕ್ ಸಾಧನಗಳಾದ ಕ್ಯಾಮೆರಾಸಹಿತ ಮೊಬೈಲ್ ಫೋನ್‌ಗಳು, ಬಹುಮುಖ ಸಾಮರ್ಥ್ಯವುಳ್ಳ ಲ್ಯಾಪ್‌ಟಾಪ್ ಮತ್ತು ಟ್ಯಾಬ್ಲೆಟ್ ಕಂಪ್ಯೂಟರ್‌ಗಳು, ವಿವಿಧ ರೀತಿ ಕೆಲಸ ಮಾಡಬಲ್ಲ ಡಿಜಿಟಲ್ ಕ್ಯಾಮೆರಾಗಳು, ಪ್ಲಾಸ್ಮಾ ಟಿ.ವಿ.ಗಳು, ಪ್ರಪಂಚದ ಯಾವುದೇ ಮೂಲೆಯಿಂದಲೂ ಮಾಹಿತಿ ಪಡೆಯಲು, ಜನರೊಂದಿಗೆ ಸಂಪರ್ಕ ಬೆಳೆಸಲು ಸಹಾಯಕವಾಗುವ ಇಂಟರ್‌ನೆಟ್ (ಅಂತರ್ಜಾಲ), ನಿಮಗೆ ಬೇಕಾದ ಸಹಾಯ/ಉತ್ಪನ್ನಗಳನ್ನು ಗ್ರಾಹಕ ಸೇವಾ ಕೇಂದ್ರಗಳಿಂದ ಪಡೆಯಲು ಉಚಿತ ಕರೆ (ಟೋಲ್ ಫ್ರೀ) ಸಂಖ್ಯೆಗಳು ಇತ್ಯಾದಿ. ಗೌರವಯುತ ಶಿಕ್ಷಣ, ಉತ್ತಮ ಗುಣಮಟ್ಟದ ಆರೋಗ್ಯ ಸೇವೆಗಳು, ಕಾನೂನು ಹಕ್ಕುಗಳು, ಉತ್ತಮ ಜೀವನೋಪಾಯದ ಅವಕಾಶಗಳು ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಭಾಗವಹಿಸುವ ಅವಕಾಶಗಳನ್ನು ಪಡೆಯಲು ಹೋರಾಡಬೇಕಾದ ಒಬ್ಬ ಗ್ರಾಮೀಣ ಯುವತಿ ಅಥವಾ ಮಹಿಳೆಗೆ ಈ ಸಾಧನಗಳು ಏಕೆ ಬೇಕು ಎಂದು ಅನಿಸುವುದು ಸಹಜವೇ!

ಐ.ಸಿ.ಟಿ.ಗಳು ಜನಸಂಖ್ಯೆಯ ಒಂದು ಸಣ್ಣ ಭಾಗಕ್ಕೆ ಮಾತ್ರ ಉಪಯುಕ್ತವಾಗುವ ಐಶಾರಾಮದ ಸಾಧನಗಳು ಎಂಬ ನಂಬಿಕೆಯನ್ನು ತೊಡೆದುಹಾಕಿ, ಈ ಸಾಧನಗಳು ಗ್ರಾಮೀಣ ಪ್ರದೇಶಗಳ ಸಮಸ್ಯೆಗಳು, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಮಹಿಳೆಯರ ಸಮಸ್ಯೆಗಳನ್ನು ನಿವಾರಿಸುವಲ್ಲಿ ಹೇಗೆ ಸಹಾಯಕವಾಗಬಲ್ಲವು ಎಂಬ ಬಗ್ಗೆ ಚಿಂತನೆ ಪ್ರಾರಂಭಿಸುವಂತೆ ಮಾಡುವುದು ಈ ಅಧ್ಯಾಯದ ಉದ್ದೇಶ.

## ಶಿಕ್ಷಣ

ಐ.ಸಿ.ಟಿ.ಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಅನೇಕ ವಿಧಗಳಲ್ಲಿ ಬಳಕೆಯಾಗುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ದೊರಕುವ ಶಿಕ್ಷಣ ನಗರ ಪ್ರದೇಶಗಳಲ್ಲಿ ದೊರಕುವ ಶಿಕ್ಷಣಕ್ಕಿಂತ ಗುಣಾತ್ಮಕವಾಗಿ ಮತ್ತು ಸಂಖ್ಯಾತ್ಮಕವಾಗಿ ಕೆಳಮಟ್ಟದಲ್ಲಿದೆ. ಆದ್ದರಿಂದಲೇ, ಗ್ರಾಮೀಣ ಮಕ್ಕಳನ್ನು ತಲುಪುವ ಪರ್ಯಾಯ ವಿಧಾನಗಳು ಈಗ ಅತ್ಯಾವಶ್ಯಕವಾಗಿವೆ. ಐ.ಸಿ.ಟಿ.ಗಳು ಈ ಕೆಳಗೆ ವಿವರಿಸಿರುವ ರೀತಿಯಲ್ಲಿ ಗಣನೀಯವಾದ ಪಾತ್ರ ವಹಿಸಬಲ್ಲವು:

* ಉಪಗ್ರಹ ರೇಡಿಯೋ, ಕಂಪ್ಯೂಟರ್ ಅಳವಡಿಕೆ, ಕಲಿಕೆಯ ಸಿ.ಡಿ.ಗಳು, ಇ-ಕಲಿಕೆಯ ಕಾರ್ಯಕ್ರಮಗಳನ್ನು ಮಕ್ಕಳು ಶಾಲೆಯಲ್ಲಿ ಕಲಿಯುವ ವಿಷಯಗಳಿಗೆ ಪೂರಕವಾಗಿಸುವುದು ಮತ್ತು ಈ ಸಾಧನಗಳು ಪ್ರತಿಕ್ರಿಯಾತ್ಮಕ (interactive) ಕಲಿಕೆ ಮತ್ತು ಸೃಜನಾತ್ಮಕತೆಯನ್ನು ಪ್ರೋತ್ಸಾಹಿಸುವುದರಿಂದ, ಮಕ್ಕಳು ಉತ್ತಮವಾಗಿ ಕಲಿಯಲು ಅವಕಾಶವಾಗುತ್ತದೆ. ಈ ಕಾರ್ಯಕ್ರಮಗಳನ್ನು ಶಾಲೆ ಬಿಟ್ಟ ಮಕ್ಕಳು ಮತ್ತು ಭೌಗೋಳಿಕ ಮತ್ತು ಸಾಂಸ್ಕೃತಿಕ ಅಡೆತಡೆಗಳ ಕಾರಣಗಳಿಂದ ಶಾಲೆಗೆ ಹೋಗಿಯೇ ಇಲ್ಲದ ಮಕ್ಕಳಿಗೆ ಶಿಕ್ಷಣ ನೀಡಲು ಕೂಡ ಉಪಯೋಗಿಸಿಕೊಳ್ಳಬಹುದು.
* ಕಂಪ್ಯೂಟರ್ ಸಾಕ್ಷರತೆಯ (computer literacy) ಮೂಲಕ ಮಕ್ಕಳು, ಯುವಕ/ಯುವತಿಯರು ಮತ್ತು ಮಹಿಳೆಯರಿಗೆ ಕಂಪ್ಯೂಟರ್ ಬಳಕೆಯನ್ನು ಕಲಿಸಿ, ಅವರಿಗೆ ಮಾಹಿತಿ ಮತ್ತು ಉದ್ಯೋಗ ಪಡೆಯಲು ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವುದು.
* ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಯಲ್ಲಿ ಮಕ್ಕಳ ಮತ್ತು ಶಿಕ್ಷಕರ ಹಾಜರಾತಿ, ಶಾಲೆ ಬಿಡುವವರ ಸಂಖ್ಯೆ, ಮಧ್ಯಾಹ್ನದ ಊಟ ಯೋಜನೆಗೆ ಸಂಬಂಧಿಸಿದ ವಿವರಗಳು ಇತ್ಯಾದಿ ಶೈಕ್ಷಣಿಕ ನಿರ್ವಹಣೆಗೆ ಕಂಪ್ಯುಟರ್ ಬಳಕೆ.

## ಆರೋಗ್ಯ

ಅಭಿವೃದ್ಧಿ ಕ್ಷೇತ್ರದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಮಾಹಿತಿಯ ಅಗತ್ಯ ತೀವ್ರವಾಗಿದೆ. ಐದು ವರ್ಷಕ್ಕಿಂತ ಕೆಳಗಿನ ಮಕ್ಕಳಿಗೆ ನೀಡಬೇಕಾದ ಲಸಿಕೆಗಳಿಂದ ಹಿಡಿದು, ಮಹಿಳೆಯರಿಗೆ ದೊರೆಯುವ ಗರ್ಭನಿರೋಧಕಗಳ ಆಯ್ಕೆಗಳು ಮತ್ತು ಅವುಗಳ ಅನುಕೂಲತೆ ಮತ್ತು ಪರೋಕ್ಷ ಪರಿಣಾಮಗಳು, ಗರ್ಭಿಣಿಯರು ಮಗುವಿನ ಜನನಕ್ಕೆ ಮೊದಲು ಮತ್ತು ನಂತರ ಪಡೆಯಬೇಕಾದ ಆರೈಕೆ, ಮಹಿಳೆಯರಲ್ಲಿ ಲೈಂಗಿಕ ಸೋಂಕುಗಳು ಮತ್ತು ಜನನಮಾರ್ಗದ ಸೋಂಕುಗಳನ್ನು ತಡೆಗಟ್ಟುವುದು ಮತ್ತು ಚಿಕಿತ್ಸೆ ನೀಡುವುದು, ಸಾಮಾನ್ಯ ಅಂಟುರೋಗಗಳಾದ ಮಲೇರಿಯಾ, ಕಾಲರಾ ಮತ್ತು ಅತಿಸಾರ ಭೇದಿಗೆ ಚಿಕಿತ್ಸೆ ಇತ್ಯಾದಿ. ಆರೋಗ್ಯ ಕ್ಷೇತ್ರದಲ್ಲಿ ನಿಖರವಾದ ಮಾಹಿತಿಯ ಲಭ್ಯತೆ ಹಾಗೂ ಈ ಮಾಹಿತಿಯ ಪ್ರಸರಣ ಎರಡೂ ಮಹತ್ವದ ಪಾತ್ರ ವಹಿಸುತ್ತವೆ.

ಐ.ಸಿ.ಟಿ.ಗಳು ಈ ರೀತಿಯಲ್ಲಿ ಉಪಯುಕ್ತವಾಗುತ್ತವೆ

* ಕಡಿಮೆ ವೆಚ್ಚದಲ್ಲಿ ವಿಡಿಯೋ ಸಿ.ಡಿ.ಗಳು ಹಾಗೂ ಕಂಪ್ಯೂಟರ್‌ಗಳ ಮೂಲಕ ಸ್ತನಪಾನದ ಪ್ರಯೋಜನಗಳು, ಆಸ್ಪತ್ರೆಯಲ್ಲಿ ಹೆರಿಗೆಯ ಅನುಕೂಲತೆಗಳು, ಎರಡು ವರ್ಷವಾಗುವ ಮೊದಲೇ ಶಿಶುವಿಗೆ ನೀಡಬೇಕಾದ ಲಸಿಕೆಗಳ ಕುರಿತು ಮಾಹಿತಿಯನ್ನು ದೊರಕಿಸುವುದು.
* ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ರಚನೆ ಮತ್ತು ಕಾರ್ಯಾಚರಣೆ, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು, ಎ.ಎನ್.ಎಂ. ಗಳು, ನೋಂದಾಯಿಸಿದ ವೈದ್ಯರು, ದಾಯಿಗಳು ಇವರ ಹೊಣೆಗಾರಿಕೆ ಕುರಿತು ಮಾಹಿತಿಯನ್ನು


ಟೆಲಿಕೇಂದ್ರಗಳು ಅಥವಾ ಕಿಯೋಸ್ಕ್‌ಗಳ ಮೂಲಕ ನೀಡಿ, ಸಮುದಾಯಕ್ಕೆ ತಮಗಿರುವ ಆರೋಗ್ಯದ ಸೌಲಭ್ಯಗಳ ಕುರಿತು ಅರಿವು ಮೂಡಿಸುವುದು.

* ಇನ್ನೊಂದು ಪ್ರಮುಖ ಕಾರ್ಯಚಟುವಟಿಕೆ ಎಂದರೆ ಟೆಲಿ-ಮೆಡಿಸಿನ್. ಗ್ರಾಮೀಣ ಪ್ರದೇಶಗಳಲ್ಲಿ ಜನರು ಆರೋಗ್ಯ ತಪಾಸಣೆಗೆ ಹೋಗುವುದು ಕಡಿಮೆ. ಅದರಲ್ಲಿಯೂ ಬಡ ಮಹಿಳೆಯರಲ್ಲಿ ಈ ಅಭ್ಯಾಸ ಇನ್ನೂ ಕಡಿಮೆ. ಟೆಲಿ-ಮೆಡಿಸಿನ್ ಸೌಲಭ್ಯಗಳ ಮೂಲಕ ಮಹಿಳೆಯರು ನಿಗದಿತ ಸಮಯಕ್ಕೆ ಟೆಲಿಕೇಂದ್ರಗಳಿಗೆ ಭೇಟಿ ನೀಡಿ, ಕಂಪ್ಯೂಟರ್ ಮೂಲಕ ವೈದ್ಯರಲ್ಲಿ ತಮ್ಮ ಶರೀರ ಮತ್ತು ಆರೋಗ್ಯದ ಕುರಿತು ಮಾಹಿತಿ/ಸಲಹೆ ಪಡೆದುಕೊಳ್ಳುವಂತೆ ಉತ್ತೇಜಿಸಬಹುದು. ಈ ಸೌಲಭ್ಯದಿಂದ ಹಣ ಮತ್ತು ಸಮಯ ಎರಡೂ ಉಳಿತಾಯವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಮಹಿಳೆಯರಿಗೆ ತಮ್ಮ ಆರೋಗ್ಯ ಸುಧಾರಣೆ ಮಾಡಿಕೊಳ್ಳಲು ಇದು ಅವಕಾಶ ಒದಗಿಸುತ್ತದೆ. ತಮ್ಮ ಆರೋಗ್ಯದ ಕುರಿತು ಮಾತನಾಡಲು ಹಿಂಜರಿಕೆ ಇರುವ ಗ್ರಾಮೀಣ ಮಹಿಳೆಯರು ಟೆಲಿ ಮೆಡಿಸಿನ್ ಮೂಲಕ ಪಡೆದ ಸಲಹೆಯ ನಂತರ ಇನ್ನೂ ಹೆಚ್ಚಿನ ಸಾಂಸ್ಥಿಕ ಬೆಂಬಲ ಪಡೆದುಕೊಳ್ಳಲು ಸಾಧ್ಯವಾಗಬಹುದು, (ಉದಾಹರಣೆಗೆ, ದೊಡ್ಡ ಆಸ್ಪತ್ರೆಗೆ ಹೋಗಿ, ತಜ್ಞ ವೈದ್ಯರನ್ನು ಭೇಟಿ ಮಾಡುವುದು). ಮೊದಲನೇ ಮಟ್ಟದ ಸಲಹೆಯನ್ನು ಟೆಲಿ-ಮೆಡಿಸಿನ್ ಮೂಲಕ ಮಾಡುವುದರಿಂದ ಕಡಿಮೆ ಸಮಯ ಮತ್ತು ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಆರೋಗ್ಯ ಸೌಲಭ್ಯಗಳು ದೊರಕುತ್ತವೆ.

* ವಿಸ್ತಾರಿತ ಮಟ್ಟದಲ್ಲಿ, ಕಂಪ್ಯೂಟರ್‌ಗಳ ಮೂಲಕ ನಿರ್ದಿಷ್ಟ ಜಿಲ್ಲೆ, ಪ್ರದೇಶ ಅಥವಾ ರಾಜ್ಯದ ಆರೋಗ್ಯ ನಡವಳಿಕೆಗಳು ಮತ್ತು ವೈವಿಧ್ಯಗಳನ್ನು ಸಂಗ್ರಹಿಸಿ, ದಾಖಲಿಸಿ, ಉಸ್ತುವಾರಿ ಮಾಡಬಲ್ಲ ಕೇಂದ್ರೀಕೃತ ಆರೋಗ್ಯ ನಿರ್ವಹಣೆ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಬಹುದು. ಈ ರೀತಿಯ ಮಾಹಿತಿ ನಿರ್ವಹಣೆ ವ್ಯವಸ್ಥೆಗಳು ಡೆಂಗ್ಯು ಅಥವಾ ಕಾಲರಾದಂತಹ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು/ತಡೆಗಟ್ಟಲು ಉಪಯುಕ್ತವಾಗುವುದಲ್ಲದೆ, ಸಮುದಾಯದ ಆರೋಗ್ಯದ ಮೇಲೆ ಪ್ರಭಾವ ಬೀರುವ ದೀರ್ಘಾವಧಿ ಚಿಕಿತ್ಸೆಯ ಅಗತ್ಯವಿರುವ ಕ್ಷಯ, ಹೆಚ್.ಐ.ವಿ./ಏಡ್ಸ್‌ನಂತಹ ರೋಗಗಳನ್ನು ಕೂಡ ಪತ್ತೆ ಹಚ್ಚಿ, ಅವುಗಳನ್ನು ನಿಯಂತ್ರಿಸಬಹುದು. ಕೇಂದ್ರೀಕೃತ ಮಾಹಿತಿ ವ್ಯವಸ್ಥೆಯ ಮೂಲಕ ಸ್ವಯಂಸೇವಾ ಸಂಸ್ಥೆಗಳು ಮತ್ತು ಸ್ಥಳೀಯ ಆಡಳಿತಗಳು ಸ್ಥಳೀಯ ಸಮುದಾಯದ ಆರೋಗ್ಯದ ಬಗ್ಗೆ ಎಚ್ಚರಿಕೆವಹಿಸಬಹುದು. ಇದಲ್ಲದೆ, ಗರ್ಭಿಣಿಯರು ಮತ್ತು ಮಕ್ಕಳ ಆರೈಕೆ, ಗರ್ಭಿಣಿಯರ ಹೆರಿಗೆ-ಪೂರ್ವ ಮತ್ತು ನಂತರದ ಆರೈಕೆ, ಗಂಡಾಂತರ ಗರ್ಭಗಳು, ಆಸ್ಪತ್ರೆಯಲ್ಲಿ ಹೆರಿಗೆ, ಅರ್ಹ ದಂಪತಿಗಳಿಗೆ ಕುಟುಂಬ ಯೋಜನೆ, ಲಸಿಕೆ ಇತ್ಯಾದಿ ವಿಷಯಗಳನ್ನು ನಿಯತಕಾಲಿಕವಾಗಿ ಉಸ್ತುವಾರಿ ಮಾಡಲು ಕೂಡ ಈ ವ್ಯವಸ್ಥೆಗಳು ಉಪಯುಕ್ತವಾಗಿವೆ.

* ಸ್ಥಳೀಯ ಮಟ್ಟದಲ್ಲಿ, ಟೆಲಿಕೇಂದ್ರಗಳು ನಿರ್ವಹಿಸುವ ಸಮುದಾಯ ಆರೋಗ್ಯ ಮಾಹಿತಿ ಹಾಗೂ ಸಮುದಾಯದ ಆರೋಗ್ಯದ ಅಗತ್ಯಗಳು – ಈ ಎರಡೂ ಉದ್ದೇಶಗಳನ್ನು ಪೂರೈಸುತ್ತವೆ: ಸ್ಥಳೀಯ ಆರೋಗ್ಯ ಕಾರ್ಯಕರ್ತರು ಜನರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಲು ಇವು ಉಪಯುಕ್ತವಾಗಿವೆ. ಜೊತೆಗೆ ಟೆಲಿಕೇಂದ್ರದಲ್ಲಿ ಆಪರೇಟರ್ ಸೇವೆ ಒದಗಿಸುವ ಸಿಬ್ಬಂದಿ ಅಲ್ಲಿ ನೀಡಿದ ಸೇವೆಗಳ ದಾಖಲೆ ಮಾಡುತ್ತಾರೆ. ಮಾಹಿತಿ ಹಕ್ಕು ಮೂಲಕ ಸೇವಾ ಸಿಬ್ಬಂದಿಯಿಂದ ನೀಡಿದ ಸೇವೆಯ ವಿವರಗಳನ್ನು ಪಡೆದುಕೊಳ್ಳಬಹುದು. ಟೆಲಿಕೇಂದ್ರದ ಆಪರೇಟರ್‌ಗಳು ಎರಡೂ ಮೂಲಗಳಿಂದ ಪಡೆದ ಮಾಹಿತಿಯ ಸಾರ್ವಜನಿಕ ಪರಿಶೋಧನೆ ಮಾಡಿ, ಸಮುದಾಯದ ಹಕ್ಕಾಗಿರುವ ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಲು ನೆರವು ನೀಡಬಹುದು. ಇದನ್ನು ಬಾಕ್ಸ್ 2 ರಲ್ಲಿ ಸಚಿತ್ರವಾಗಿ ವಿವರಿಸಲಾಗಿದೆ.

### ಬಾಕ್ಸ್ 2: ಟೆಲಿಕೇಂದ್ರಗಳ ಮೂಲಕ ಸಾರ್ವಜನಿಕ ವ್ಯವಸ್ಥೆಯಲ್ಲಿ ಹೊಣೆಗಾರಿಕೆಯನ್ನು ತರುವುದು




## ಕಾನೂನು ಹಕ್ಕುಗಳು

ಮಹಿಳೆಯರಿಗೆ ಕಾನೂನು ಹಕ್ಕುಗಳ ಕುರಿತು ಅರಿವು ಮತ್ತು ಮಾಹಿತಿಯ ಕೊರತೆಯಿಂದಲೇ ಅವರು ಅಧೀನತೆ, ಶೋಷಣೆ ಮತ್ತು ಕಿರುಕುಳಕ್ಕೆ ತುತ್ತಾಗಲು ಮುಖ್ಯ ಕಾರಣವಾಗಿದೆ. ವರದಕ್ಷಿಣೆ ಕಿರುಕುಳ, ಪತ್ನಿಗೆ ಹೊಡೆಯುವುದು ಮತ್ತು ಇತರ ಕೌಟುಂಬಿಕ ಹಿಂಸೆ, ಅತ್ಯಾಚಾರ, ಆಸ್ತಿಯ ಒಡೆತನ ನಿರಾಕರಣೆ, ವಿಚ್ಛೇದನ ಇತ್ಯಾದಿ ಸಮಸ್ಯೆಗಳನ್ನು ಮಹಿಳೆಯರು ಎದುರಿಸುತ್ತಲೇ ಇರುತ್ತಾರೆ. ಮಹಿಳೆಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಈ ಶೋಷಣೆ ಹಾಸುಹೊಕ್ಕಾಗಿದ್ದರೂ, ತಮ್ಮ ಹಕ್ಕುಗಳ ಉಲ್ಲಂಘನೆಯಾದಾಗ ಅವುಗಳ ವಿರುದ್ಧ ಮಹಿಳೆಯರು ಧ್ವನಿ ಎತ್ತದಿರಲು/ಕಾರ್ಯಪ್ರವೃತ್ತರಾಗದಿರಲು ಮುಖ್ಯ ಕಾರಣ ಅವರಿಗೆ ತಮ್ಮ ಕಾನೂನು ಹಕ್ಕುಗಳ ಕುರಿತು ಮತ್ತು ಪರಿಹಾರ ಪಡೆದುಕೊಳ್ಳಲು ಯಾರಿಂದ ಸಹಾಯ ಸಲಹೆ ಪಡೆಯಬೇಕೆಂಬ ಅರಿವು ಇಲ್ಲದಿರುವುದು.

ಐ.ಸಿ.ಟಿ.ಗಳ ಸಹಾಯದಿಂದ, ಸರಳ ಮತ್ತು ಸುಲಭವಾಗಿ ಅರ್ಥವಾಗಬಲ್ಲ ನಮೂನೆಗಳ ಮೂಲಕ ಹಕ್ಕುಗಳು ಮತ್ತು ಅವುಗಳ ಉಲ್ಲಂಘನೆಯಾದಾಗ ಯಾವ ಮೂಲಗಳಿಂದ ಪರಿಹಾರ/ಸಲಹೆ ಪಡೆಯಬಹುದೆಂಬ ಮಾಹಿತಿ ಒದಗಿಸಿ, ಕಾನೂನು ಹಕ್ಕುಗಳ ಮಾಹಿತಿಯ ಕೊರತೆಯನ್ನು ನಿವಾರಿಸಬಹುದು.

* ಟೆಲಿಕೇಂದ್ರಗಳು ಮತ್ತು ಸಹಾಯವಾಣಿಗಳು ಮಹಿಳೆ ಎಲ್ಲಿಗೆ ಹೋಗಬೇಕು, ಯಾರನ್ನು ಸಂಪರ್ಕಿಸಬೇಕು, ತನ್ನ ಹಕ್ಕುಗಳನ್ನು ಪಡೆದುಕೊಳ್ಳಲು ಆಕೆ ಯಾವ ಪ್ರಕ್ರಿಯೆಯನ್ನು ಅನುಸರಿಸಬೇಕೆಂದು ದಿನದ 24 ಗಂಟೆಯೂ ಮಾಹಿತಿ ಒದಗಿಸಬಹುದು.
* ಬಡ, ಗ್ರಾಮೀಣ ಮಹಿಳೆಯರಿಗೆ ಇಂಟರ್‌ನೆಟ್ ಮತ್ತು ಇತರ ಡಿಜಿಟಲ್ ಮಾಧ್ಯಮಗಳ ಮೂಲಕ ಸಿದ್ಧ ಮಾಹಿತಿ ದೊರಕದಿದ್ದಲ್ಲಿ, ಮಾಹಿತಿ ಹಕ್ಕಿನ ಕಾನೂನು ಅರ್ಥಹೀನವಾಗುತ್ತದೆ. ಇಂಟರ್‌ನೆಟ್ ಸೌಲಭ್ಯವಿರುವ ಟೆಲಿಕೇಂದ್ರಗಳ ಮೂಲಕ ಈ ಪ್ರಕ್ರಿಯೆಯನ್ನು ಉತ್ತೇಜಿಸಬಹುದು.
* ಮಾಹಿತಿಯ ಹಕ್ಕಿನ ಜೊತೆಗೆ ಇಂಟರ್‌ನೆಟ್ ಮೂಲಕ ಪೊಲೀಸರೊಂದಿಗೆ ದೂರುಗಳನ್ನು ದಾಖಲಿಸುವುದರಿಂದ, ಮಹಿಳೆಯರಿಗೆ ತಮ್ಮ ವಿರುದ್ಧ ಆದ ಅಪರಾಧಗಳಿಗೆ ನ್ಯಾಯ ಪಡೆದುಕೊಳ್ಳುವಲ್ಲಿ ಇರುವ ಅಡೆತಡೆಗಳನ್ನು ಕಡಿಮೆಗೊಳಿಸಬಹುದು. ಈ ಪ್ರಕ್ರಿಯೆಯ ಮೂಲಕ, ವರದಿಯನ್ನು ಅಕ್ರಮವಾಗಿ ತಿದ್ದುವುದು ಮತ್ತು ವರದಿಯನ್ನು ಕಡತಕ್ಕೆ ಸೇರಿಸುವಾಗ ಸಂಭವಿಸಬಹುದಾದ ಲಂಚಕೋರತನವನ್ನು ಗಣನೀಯವಾಗಿ ತಗ್ಗಿಸಬಹುದು. ಏಕೆಂದರೆ, ವರದಿ ನೀಡಿದ ಕೂಡಲೇ ಅದು ಒಂದು ಕೇಂದ್ರೀಕೃತ ವ್ಯವಸ್ಥೆಯೊಳಗೆ ದಾಖಲಾಗುತ್ತದೆ ಹಾಗೂ ದೂರು ನೀಡಿದ ವ್ಯಕ್ತಿಗೆ ಒಂದು ಪ್ರತಿ ದೊರಕುತ್ತದೆ.
* ಅಪಾಯದ ಸನ್ನಿವೇಶಗಳಲ್ಲಿ ಸಹಾಯ ಪಡೆದುಕೊಳ್ಳಲು ಮೊಬೈಲ್ ಫೋನ್‌ಗಳು ಸಹಾಯಕವಾಗಿವೆ. ಕೌಟುಂಬಿಕ ಹಿಂಸೆಯ ವಿರುದ್ಧ ಹೋರಾಡುವ ಅನೇಕ ಸಂಘಟನೆಗಳು ಹಿಂಸಾಚಾರ ಮತ್ತು ಶೋಷಣೆಗೆ ಒಳಗಾಗುವ ಸಾಧ್ಯತೆ ಇರುವ ಮಹಿಳೆಯರಿಗೆ ಮೊಬೈಲ್ ಫೋನ್‌ಗಳನ್ನು ಒದಗಿಸಿದ್ದಾರೆ.
* ಇವುಗಳ ಜೊತೆಗೆ ವಿಡಿಯೋ ಕಿರುಚಿತ್ರಗಳು ಅಥವಾ ರೇಡಿಯೋ ಪ್ರಸರಣಗಳ ಮೂಲಕ ತಜ್ಞರು ಮಹಿಳೆಯರಿಗೆ ಅನ್ಯಾಯವಾದಾಗ ನ್ಯಾಯವನ್ನು ಪಡೆದುಕೊಳ್ಳುವ ವಿಧಾನಗಳ ಬಗ್ಗೆ ಮಾತನಾಡಬಹುದು, ಒಂದು ಮಹಿಳೆಯರ ಗುಂಪು ಆಸ್ತಿ ಪಡೆಯುವ ಮತ್ತು ಪಾರಂಪರಿಕ ಆಸ್ತಿಯ ಹಕ್ಕುಗಳ ಬಗ್ಗೆ ಮಾತನಾಡಬಹುದು. ಇವುಗಳನ್ನು ಕೇಳುವುದರಿಂದ ಗ್ರಾಮೀಣ ಮಹಿಳೆಯರಲ್ಲಿ ಕಾನೂನಿನ ಅರಿವು ಹೆಚ್ಚುತ್ತದೆ. ಈ ರೀತಿಯ ಕಾರ್ಯಕ್ರಮಗಳನ್ನು ಟೆಲಿಕೇಂದ್ರಗಳಲ್ಲಿ ಪ್ರದರ್ಶಿಸಿದಾಗ ನೇರವಾಗಿ ನೋಡಲಾಗದ/ಭಾಗವಹಿಸಲಾಗದ ಮಹಿಳೆಯರು ಕೂಡ ಈ ಸಂಪನ್ಮೂಲಗಳನ್ನು ತಮಗೆ ಅಗತ್ಯ ಬಿದ್ದಾಗ ಪಡೆದುಕೊಳ್ಳಬಹುದು.

## ರಾಜಕೀಯ ಭಾಗವಹಿಸುವಿಕೆ

ಮಹಿಳಾ ಸಶಕ್ತತೆಯಲ್ಲಿ ರಾಜಕೀಯ ಭಾಗವಹಿಸುವಿಕೆ ಒಂದು ಪ್ರಮುಖ ಅಂಶ ಎಂದು ಗುರುತಿಸಲಾಗಿದೆ. ಒಂದು ಕಡೆ, ಸ್ವಸಹಾಯ ಸಂಘಗಳ ಮಹಿಳೆಯರು ಸಮುದಾಯದ ವಿಷಯಗಳಲ್ಲಿ ತಮ್ಮ ಹಕ್ಕುಗಳನ್ನು ಪಡೆಯಲು ಸ್ಥಳೀಯ ಮಟ್ಟದ ಅಧಿಕಾರಿಗಳೊಂದಿಗೆ ಹೋರಾಡುತ್ತಿದ್ದರೆ, ಇನ್ನೊಂದೆಡೆ ಪಂಚಾಯತ್ ಮಟ್ಟದಲ್ಲಿ 33% ಮೀಸಲಾತಿ ಪಡೆದುಕೊಂಡು ನಾಯಕತ್ವವನ್ನು ವಹಿಸಿಕೊಳ್ಳುತ್ತಿದ್ದಾರೆ. ಈ ಪ್ರಯತ್ನಗಳನ್ನು ಸಶಕ್ತ ಹಾಗೂ ಸುಸ್ಥಿರಗೊಳಿಸಲು ಆವಶ್ಯಕ ಬೆಂಬಲ ಒದಗಿಸುವುದು ಈಗ ಮುಖ್ಯವಾಗಿದೆ.

ಐ.ಸಿ.ಟಿ.ಗಳು ಈ ಪ್ರಕ್ರಿಯೆಯನ್ನು ಹೇಗೆ ಉತ್ತೇಜಿಸಬಹುದು?

* ಟೆಲಿಕೇಂದ್ರಗಳ ಮೂಲಕ ಗ್ರಾಮ ಪಂಚಾಯತ್ ಪಾತ್ರಗಳು, ಹೊಣೆಗಾರಿಕೆಗಳು, ಸಂಬಂಧಿಸಿದ ಸಂಪರ್ಕ ಮಾಹಿತಿ, ಸೌಲಭ್ಯಗಳು, ವೇಳಾಪಟ್ಟಿ, ವಿವಿಧ ಯೋಜನೆಗಳು, ಅಂದಾಜುವೆಚ್ಚ ಇತ್ಯಾದಿ ವಿವರಗಳನ್ನು ದೊರಕುವಂತೆ ಮಾಡಿ, ಸ್ವಸಹಾಯ ಸಂಘಗಳ

ಮಹಿಳೆಯರು ಹಾಗೂ ಸ್ಥಳೀಯ ಸಮುದಾಯದವರು ತಮಗೆ ಸೂಕ್ತವಾದ, ತಾವು ಅರ್ಹರಾಗಿರುವ ಯೋಜನೆಗಳ ಕುರಿತು ಮಾಹಿತಿ ಪಡೆದುಕೊಳ್ಳಬಹುದು.

* ವಿವಿಧ ಸರ್ಕಾರಿ ಇಲಾಖೆಗಳೊಡನೆ ನಿಯಮಿತವಾಗಿ ಇಂಟರ್‌ನೆಟ್ ಮೂಲಕ ಸಮಾಲೋಚನೆ/ಮಾತುಕತೆ (ವೆಬ್ ಕಾನ್‌ಫೆರೆನ್ಸಿಂಗ್) ಮಾಡಿ, ಸ್ಥಳೀಯ ನಾಗರಿಕರು ಸರ್ಕಾರಿ ಅಧಿಕಾರಿಗಳೊಡನೆ ತಮ್ಮ ಸಮಸ್ಯೆಗಳನ್ನು ವಿವರಿಸಬಹುದು. ಸರ್ಕಾರದ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಕುರಿತು ಹೆಚ್ಚಾಗಿ ತಿಳಿದುಕೊಳ್ಳಬಹುದು.
* ಈ ಮೊದಲೇ ಹೇಳಿದಂತೆ, ಮಾಹಿತಿ ಹಕ್ಕು ಕಾಯಿದೆಯನ್ನು ಟೆಲಿಕೇಂದ್ರಗಳ ಮೂಲಕ ಬಡವರಿಗೆ ದೊರಕುವಂತೆ ಮಾಡಿ, ಯಾರ ಸಲುವಾಗಿ ಯೋಜನೆಗಳನ್ನು ಮಾಡಲಾಗುತ್ತದೆಯೋ ಅವರಿಗೆ ಈ ಲಾಭಗಳು ತಲುಪುವಂತೆ ಮಾಡುವ ಸಾರ್ವಜನಿಕ ಬಾಧ್ಯತೆಯನ್ನು ಉತ್ತೇಜಿಸಬಹುದು.
* ಚುನಾಯಿತ ಮಹಿಳಾ ಪ್ರತಿನಿಧಿಗಳು, ತಮ್ಮ ರಾಜಕೀಯ ಪಾತ್ರಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಅವರ ಸಾಮರ್ಥ್ಯ ಬಲವರ್ಧನೆ ಮಾಡಲು ಐ.ಸಿ.ಟಿ.ಗಳನ್ನು ಬಳಸಿಕೊಳ್ಳಬಹುದು. ಪುರುಷರಿಗೆ ಹೋಲಿಸಿದಲ್ಲಿ, ಚುನಾಯಿತ ಮಹಿಳೆಯರು ಸಮುದಾಯದಲ್ಲಿ ಹೆಚ್ಚು ಓಡಾಡುವುದರಿಂದ ಮಾಹಿತಿ ಹಂಚಿಕೊಳ್ಳಲು, ವಿಚಾರ ವಿನಿಮಯ ಮಾಡಲು, ಸಂಪರ್ಕಜಾಲಗಳನ್ನು ನಿರ್ಮಿಸಿಕೊಳ್ಳಲು ಐ.ಸಿ.ಟಿ.ಗಳ ಮೂಲಕ ಸಾಧ್ಯವಾಗುತ್ತದೆ.
* ಸ್ವಸಹಾಯ ಸಂಘಗಳ ಮಹಿಳೆಯರು ಸ್ಥಳೀಯ ಆಡಳಿತದೊಂದಿಗೆ ನಡೆಸಿದ ಕೆಲವು ಯಶಸ್ವಿ ಹೋರಾಟಗಳು, ಆಂದೋಲನ ಮತ್ತು ಸಂಧಾನಗಳನ್ನು ವಿಡಿಯೋ ಚಿತ್ರೀಕರಣ ಮಾಡಿ, ಇತರ ಸ್ವಸಹಾಯ ಸಂಘಗಳ ಮಹಿಳೆಯರಿಗೆ ಇವುಗಳ ಪ್ರದರ್ಶನ ಮಾಡಿ, ಈ ಪ್ರಕ್ರಿಯೆಗಳು ಹೇಗೆ ಕೆಲಸ ಮಾಡುತ್ತವೆ ಎಂದು ಅರ್ಥ ಮಾಡಿಸಲು ಸಹಾಯಕವಾಗುತ್ತವೆ ಹಾಗೂ ತಾವೂ ಸ್ಥಳೀಯವಾಗಿ ಈ ರೀತಿಯ ಹೋರಾಟ ಮಾಡಲು ಅವರಿಗೆ ಪ್ರೋತ್ಸಾಹ ದೊರಕುತ್ತದೆ. ಇದೇ ರೀತಿ, ಮಹಿಳಾ ನಾಯಕಿಯರೊಡನೆ ಸಂದರ್ಶನಗಳ ವಿಡಿಯೋ ಮತ್ತು ರೇಡಿಯೋ ಕಾರ್ಯಕ್ರಮಗಳನ್ನು ಬಿತ್ತರಿಸಿ, ಈಗಾಗಲೇ ಜನಮುಖಂಡರಾಗಿರುವ ಮಹಿಳೆಯರ ಆತ್ಮವಿಶ್ವಾಸ ವೃದ್ಧಿಸಬಹುದು ಮತ್ತು ಇತರರು ಕೂಡ ನಾಯಕತ್ವ ವಹಿಸುವಂತೆ ಉತ್ತೇಜಿಸಬಹುದು.
* ವೆಬ್ ಕ್ಯಾಮೆರಾ ಮತ್ತು ಧ್ವನಿ ಕೇಳಿಸುವ ಮಾತುಕತೆ (ವಾಯ್ಸ್ ಚಾಟ್) ಮೂಲಕ ಚುನಾಯಿತ ಮಹಿಳಾ ಪ್ರತಿನಿಧಿಗಳ ನಡುವೆ ಸಂಪರ್ಕಜಾಲ ಕಲ್ಪಿಸಿ, ಅವರು ಪರಸ್ಪರ ಮಾಹಿತಿ ಹಂಚಿಕೊಂಡು, ಚರ್ಚಿಸಿ, ಸಮಸ್ಯೆ ಪರಿಹಾರ ಮಾಡಿಕೊಳ್ಳಲು ಅವಕಾಶ ಮಾಡಬಹುದು.

## ಜೀವನೋಪಾಯಗಳು

* ಪೀಠಿಕೆಯಲ್ಲಿ ವಿವರಿಸಿದಂತೆ, ಜೀವನೋಪಾಯ ಎಂದರೆ ಆದಾಯಗಳಿಸುವ ಅವಕಾಶಗಳು ಮಾತ್ರವಲ್ಲ, ಐ.ಸಿ.ಟಿ.ಗಳು ಮಹಿಳೆಯರ ಪ್ರಸ್ತುತ ಜೀವನಶೈಲಿಯನ್ನು ಸುಧಾರಿಸುವುದರ ಜೊತೆಗೆ, ಅವರಿಗೆ ಹೊಸ ಅವಕಾಶಗಳನ್ನು, ಸಾಧ್ಯತೆಗಳನ್ನು ಕೂಡ ಕಲ್ಪಿಸುತ್ತದೆ.
* ಪ್ರತ್ಯಕ್ಷವಾಗಿ, ಐ.ಸಿ.ಟಿ.-ಆಧಾರಿತ ಉದ್ಯಮಗಳಾದ ಡ್ಯಾಟಾ ಎಂಟ್ರಿ (ಕಂಪ್ಯುಟರ್‌ನಲ್ಲಿ ಟೈಪಿಂಗ್) ಮತ್ತು ಡಿ.ಟಿ.ಪಿ. ಕೇಂದ್ರಗಳು, ಕಂಪ್ಯೂಟರ್ ಹಾರ್ಡ್‌ವೇರ್ (ಉಪಕರಣಗಳು) ಮತ್ತು ಸಾಫ್ಟ್‌ವೇರ್ ಜೋಡಣೆ, ಬಿಲ್ ಸಂಗ್ರಹ ಮತ್ತು ಪಾವತಿ ಕೇಂದ್ರಗಳು ಇತ್ಯಾದಿಗಳಲ್ಲಿ ಸ್ವಲ್ಪ ಮಟ್ಟಿಗೆ ಸಾಕ್ಷರತೆ ಮತ್ತು ಕಂಪ್ಯೂಟರ್ ಜ್ಞಾನ ಇರುವ ಮಹಿಳೆಯರಿಗೆ ಉದ್ಯೋಗದ ಅವಕಾಶವಿದೆ.

- ಪರೋಕ್ಷವಾಗಿ, ಇಂಟರ್‌ನೆಟ್ ಮತ್ತು ಮೊಬೈಲ್ ಫೋನ್‌ಗಳ ಮೂಲಕ, ಐ.ಸಿ.ಟಿ.ಗಳು ಸ್ಥಳೀಯ ಮಹಿಳೆಯರು ಮಾಡಿದ ಉತ್ಪನ್ನಗಳಿಗೆ, ಕರಕುಶಲ ವಸ್ತುಗಳಿಗೆ ಮಾರುಕಟ್ಟೆ ಸಂಪರ್ಕಗಳನ್ನು ಉತ್ತೇಜಿಸಬಹುದು. ಈ ಮೂಲಕ ಅವರು ತಮಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಖರೀದಿಸಬಹುದು ಹಾಗೂ ತಮ್ಮ ಉತ್ಪನ್ನಗಳನ್ನು ಮಾರಲು ಹೊಸ ಮಾರ್ಗಗಳನ್ನು ಕಂಡುಕೊಳ್ಳಬಹುದು (ಇದನ್ನು ಅಧ್ಯಾಯ 3ರಲ್ಲಿ ವಿವರಿಸಲಾಗಿದೆ).
- ಕರಕುಶಲ ವಸ್ತುಗಳು, ಸಾವಯವ ಕೀಟನಾಶಕಗಳು, ಸೋಪುಗಳು, ಅಗರಬತ್ತಿ, ಆಹಾರ ಪದಾರ್ಥಗಳು, ಸಿದ್ಧ ಉಡುಪುಗಳು ಇತ್ಯಾದಿಗಳನ್ನು ಮಾಡುವ ವಿಧಾನದ ಕುರಿತು ಕಿರುಚಿತ್ರಗಳನ್ನು ಮತ್ತು ಕಂಪ್ಯೂಟರ್ ಚಿತ್ರಗಳನ್ನು ಸ್ಥಳೀಯ ಟೆಲಿಕೇಂದ್ರಗಳು ಒದಗಿಸಬಹುದು. ಬ್ಯಾಂಕ್ ಮತ್ತು ಮಾರುಕಟ್ಟೆ ಸಂಪರ್ಕಗಳನ್ನು ವೃದ್ಧಿಸಲು ಕೂಡ ಕೆಲವು ವಿಡಿಯೋ ಮತ್ತು ಕಂಪ್ಯೂಟರ್ ಚಿತ್ರಗಳನ್ನು ತೋರಿಸಬಹುದು.
- ಸ್ಥಳೀಯ ಯುವಜನತೆಗೆ ಹಾಗೂ ಮಹಿಳೆಯರಿಗೆ ಉದ್ಯೋಗಾವಕಾಶಗಳ ಕುರಿತೂ ಟೆಲಿಕೇಂದ್ರ ಮಾಹಿತಿ ನೀಡಬಹುದು. ಸರ್ಕಾರದ ಯೋಜನೆಗಳಾದ ಎನ್.ಆರ್.ಇ.ಜಿ.ಎ. ಯೋಜನೆಗಳ ಕುರಿತು ಮಾಹಿತಿ ಒದಗಿಸಿ, ಸ್ಥಳೀಯ ಸಮುದಾಯಗಳಿಗೆ ಈ ಯೋಜನೆಗಳ ಅನುಕೂಲತೆ ದೊರಕುವಂತೆ ಖಚಿತಪಡಿಸಿಕೊಳ್ಳಬಹುದು.
- ವಿಡಿಯೋಗಳು, ವಿವಿಧ ರೀತಿಯ ಕಂಪ್ಯೂಟರ್ ಸಂಪನ್ಮೂಲಗಳ ಮೂಲಕ ಮಹಿಳೆಯರಿಗೆ ಸಾವಯವ ಕೃಷಿಯಂತಹ ಸುಸ್ಥಿರ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಿ, ಕುಟುಂಬದ ಆಹಾರದ ಸುರಕ್ಷತೆಯನ್ನು ಕಾಪಾಡಿಕೊಳ್ಳಬಹುದು. ಇದರ ಜೊತೆಗೆ ಬೇಸಾಯಗಾರರು, ಮೀನುಗಾರರು ಮಧ್ಯವರ್ತಿಗಳನ್ನು ಅವಲಂಬಿಸದೇ ಮೊಬೈಲ್ ಫೋನ್‌ಗಳ ಮೂಲಕ ತಮ್ಮ ಹತ್ತಿರದ ಗ್ರಾಮ ಮತ್ತು ಪಟ್ಟಣದ ವ್ಯಾಪಾರಿಗಳನ್ನು ಸಂಪರ್ಕಿಸಿ, ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆದುಕೊಳ್ಳಬಹುದು. ಸಮುದಾಯ ಕಿಯೋಸ್ಕ್‌ಗಳ ಮೂಲಕ ಮಾರುಕಟ್ಟೆ ಧಾರಣೆ ಅರಿತುಕೊಂಡು, ವ್ಯಾಪಾರಿಗಳು ಮತ್ತು ಮಧ್ಯವರ್ತಿಗಳ ಶೋಷಣೆಯನ್ನು ತಡೆಗಟ್ಟಬಹುದು ಹಾಗೂ ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಬಹುದು.
- ಮಹಿಳೆಯರು ಮನೆಯ ಹೊರಗೆ ಜೀವನೋಪಾಯದ ಆಯ್ಕೆಗಳನ್ನು ಮಾಡುವಲ್ಲಿ ಅಡ್ಡಿಯಾಗುತ್ತಿರುವ ಕೌಟುಂಬಿಕ ಮತ್ತು ಮನೆಗೆಲಸದ ಹೊರೆಯನ್ನು ಐ.ಸಿ.ಟಿ.ಗಳು ಪರೋಕ್ಷವಾಗಿ ಕಡಿಮೆಗೊಳಿಸಬಹುದು. ಟೆಲಿಕೇಂದ್ರಗಳು ಮತ್ತು ಮಾಹಿತಿ ಕಿಯೋಸ್ಕ್‌ಗಳು ಮಹಿಳೆಯರಿಗೆ ಹಲವಾರು ಸರ್ಕಾರಿ ಯೋಜನೆ ಹಾಗೂ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳಾದ ನಿವೃತ್ತಿ ವೇತನ, ವಿಮೆ, ಆರೋಗ್ಯ ಸೌಲಭ್ಯಗಳು ಇತ್ಯಾದಿಗಳ ಕುರಿತು ಮಾಹಿತಿ ನೀಡಿ, ತಮಗೆ ಹಾಗೂ ಕುಟುಂಬದ ಇತರ ಸದಸ್ಯರಿಗೆ ಅರ್ಜಿ ಹಾಕಿಕೊಳ್ಳುವಂತೆ ಮಾಡಬಹುದು. ಮಹಿಳೆಯರು ಮಾಹಿತಿ ಹಕ್ಕು ಕಾಯಿದೆಯ ಬಳಕೆ ಮಾಡಿಕೊಳ್ಳಲು ಈ ಕೇಂದ್ರಗಳು ಪ್ರಥಮ ಹೆಜ್ಜೆಯಾಗಿವೆ. ಈ ಸೇವೆಗಳ ಮೂಲಕ ಅವರು ತಮ್ಮ ಮಕ್ಕಳಿಗೆ ಅಂಗನವಾಡಿಗಳು, ಸಾರ್ವಜನಿಕ ನೀರು ಸರಬರಾಜು, ವಿದ್ಯುಚ್ಛಕ್ತಿ ಸಂಪರ್ಕ ಇತ್ಯಾದಿಗಳನ್ನು ಒದಗಿಸುವಂತೆ ಆಡಳಿತವನ್ನು ಒತ್ತಾಯಿಸಬಹುದು.

ಈ ಮೇಲಿರುವ ಕೆಲವು ಉದಾಹರಣೆಗಳಲ್ಲಿ ವಿವರಿಸಿದಂತೆ, ಗ್ರಾಮೀಣ ಮಹಿಳೆಯರ ಜೀವನಮಟ್ಟ ಸುಧಾರಣೆಗೆ ಆವಶ್ಯವಾಗಿರುವ ಶಿಕ್ಷಣ, ಆರೋಗ್ಯ, ಕಾನೂನು ಹಕ್ಕುಗಳು, ರಾಜಕೀಯ ಭಾಗವಹಿಸುವಿಕೆ ಮತ್ತು ಜೀವನೋಪಾಯಗಳು ಮಾಹಿತಿ ಆಧಾರಿತ ಕ್ಷೇತ್ರಗಳಾಗಿದ್ದು

ಸಂವಹನವನ್ನು ಅವಲಂಬಿಸಿವೆ. ಪ್ರತಿಯೊಂದು ಕ್ಷೇತ್ರದಲ್ಲೂ ಮಾಹಿತಿಯ ಕೊರತೆಯನ್ನು ನೀಗಿಸಿ, ಸಂವಹನದ ಅಡೆತಡೆಗಳನ್ನು ನಿವಾರಿಸುವಲ್ಲಿ ಐ.ಸಿ.ಟಿ.ಗಳು ಉಪಯುಕ್ತವಾಗುತ್ತವೆ.

ಐ.ಸಿ.ಟಿ.ಗಳು ಗ್ರಾಮೀಣ ಮಹಿಳೆಯರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ ಎನ್ನುವುದು ನಿಜವಾದರೂ, ದಶಕಗಳಿಂದ ಬಡ ಸಮುದಾಯಗಳ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಿಗೆ ಇವು ಪರಿಹಾರ ಎಂದು ಹೇಳಲಾಗುವುದಿಲ್ಲ. ನಿಜ ಹೇಳಬೇಕೆಂದರೆ ಕಂಪ್ಯೂಟರ್ ಇಡುವುದರಿಂದ, ವಿಡಿಯೋ ಚಿತ್ರಗಳು, ಸ್ಥಳೀಯ ರೇಡಿಯೋ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದರಿಂದ ಅಥವಾ ಇಂಟರ್‌ನೆಟ್/ಸಿ.ಡಿ.ಗಳ ಮೂಲಕ ಸರ್ಕಾರದ ಮಾಹಿತಿಯನ್ನು ನೀಡುವುದರಿಂದ ಬಡತನ ನಿವಾರಣೆ, ಮಹಿಳೆಯರ ಆರೋಗ್ಯದಲ್ಲಿ ಸುಧಾರಣೆ ಅಥವಾ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯಲ್ಲಿ ಸುಧಾರಣೆಯಾಗುವುದಿಲ್ಲ. ಮಹಿಳೆಯರ ಜೀವನದ ಮೇಲೆ ಪ್ರಭಾವ ಬೀರುವ ದೊಡ್ಡ ಪ್ರಮಾಣದ ಸಂಘಟನೆಗಳು ಮತ್ತು ವ್ಯವಸ್ಥೆಗಳು ಕೂಡ ಬದಲಾಗಿ, ಸ್ಥಳೀಯ ಮಟ್ಟದಲ್ಲಿ ಮಹಿಳೆಯರನ್ನು ಸಶಕ್ತಗೊಳಿಸುವಲ್ಲಿ ತೊಡಗಿರುವ ಐ.ಸಿ.ಟಿ. ಪ್ರಯತ್ನಗಳಿಗೆ ಸಹಾಯಕವಾಗಬೇಕು.

ಮುಂದಿನ ವಿಭಾಗದಲ್ಲಿ, ಸಾಮಾಜಿಕ-ರಾಜಕೀಯ ವ್ಯವಸ್ಥೆಗಳ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಐ.ಸಿ.ಟಿ.ಗಳು ಮತ್ತು ಜೀವನೋಪಾಯಗಳ ಸಂಬಂಧ, ಐ.ಸಿ.ಟಿ.-ಆಧಾರಿತ ಉದ್ಯಮಗಳ ಆಯ್ಕೆ ಮತ್ತು ವೈವಿಧ್ಯತೆ, ಹಾಗೂ ಲಿಂಗತ್ವದ ದೃಷ್ಟಿಕೋನದಿಂದ ಇವುಗಳ ಉಪಯೋಗಗಳು ಮತ್ತು ಸಂಘಟನೆಗಳು ಮಹಿಳಾ ಸಶಕ್ತತೆಗೆ ಈ ಹೊಸ ಅವಕಾಶವನ್ನು ಏಕೆ ಬಳಸಿಕೊಳ್ಳಬೇಕು ಎಂದು ವಿವರಿಸಲಾಗಿದೆ.

### ಈ ಅಧ್ಯಾಯದ ಕೇಂದ್ರ ವಿಷಯ ಏನು?

- ಮಹಿಳೆಯರ ಮಾಹಿತಿಯ ಆವಶ್ಯಕತೆಗಳು ಮತ್ತು ಸಂವಹನ ಅವಕಾಶಗಳಿಗೆ ಹಲವಾರು ಕ್ಷೇತ್ರಗಳಲ್ಲಿ ಕೊರತೆಯಿದೆ.
- ಹಳೆಯ ಐ.ಸಿ.ಟಿ.ಗಳಾದ ಟೆಲಿಫೋನ್, ರೇಡಿಯೋ ಮತ್ತು ಟಿ.ವಿ.ಗಳು ಅಥವಾ ಹೊಸ ಐ.ಸಿ.ಟಿ.ಗಳಾದ ವಿ.ಸಿ.ಡಿ., ಕಂಪ್ಯೂಟರ್ ಅಥವಾ ಇಂಟರ್‌ನೆಟ್‌ಗಳು ಈ ಅಂತರವನ್ನು ಕಡಿಮೆ ಮಾಡುವಲ್ಲಿ ಸಹಾಯಕವಾಗಿವೆ – ಮಹಿಳೆಯರಿಗೆ ಅತ್ಯಗತ್ಯವಾದ ಸೂಕ್ತ ಸ್ಥಳೀಯ ಮಾಹಿತಿ ನೀಡುವಲ್ಲಿ ಹಾಗೂ ಸಂವಹನದ ಅವಕಾಶಗಳನ್ನು ಒದಗಿಸಿ, ಮಹಿಳೆಯರು ಇತರ ಮಹಿಳೆಯರೊಂದಿಗೆ, ಸರ್ಕಾರಿ ಇಲಾಖೆಗಳು, ಆರೋಗ್ಯ ಮತ್ತು ಕಾನೂನು ಸಲಹೆಗಾರಗೊಡನೆ ಸಂಪರ್ಕಜಾಲ ಅಭಿವೃದ್ಧಿಗೊಳಿಸಿಕೊಳ್ಳುವಲ್ಲಿ ಇವು ಸಹಾಯಕವಾಗಿವೆ.
- ಬಡ ಮತ್ತು ದುರ್ಬಲವರ್ಗದ ಮಹಿಳೆಯರಿಗೆ ಐ.ಸಿ.ಟಿ.ಗಳು ಒದಗಿಸುವ ಅನೇಕ ಸಾಧ್ಯತೆಗಳನ್ನು ಗುರುತಿಸಿದಾಗ್ಯೂ, ಮಹಿಳೆಯರನ್ನು ದುರ್ಬಲರನ್ನಾಗಿ ಮಾಡುವ ವ್ಯವಸ್ಥೆ ಮತ್ತು ಸಾಂಸ್ಥಿಕ ಅಂಶಗಳನ್ನೂ ನಾವು ಇಲ್ಲಿ ಪರಿಗಣಿಸಬೇಕು. ಸ್ಥಳೀಯ ಮಟ್ಟದ ಬದಲಾವಣೆಗಳು ನಿರಂತರ ಮತ್ತು ಸುಸ್ಥಿರವಾಗಿರಲು ಈ ಮಟ್ಟಗಳಲ್ಲಿಯೂ ಬದಲಾವಣೆಗಳು ಆವಶ್ಯಕವಾಗಿವೆ.

## ಈಶ್ವರಿ : ಗ್ರಾಮದ ಫೋಟೋಗ್ರಾಫರ್ (ಛಾಯಾಗ್ರಾಹಕಿ), ಕುಪ್ಪಂ ಹೆಚ್.ಪಿ. ಐ-ಸಮುದಾಯ ಯೋಜನೆ, ಆಂಧ್ರ ಪ್ರದೇಶ: ಒಂದು ಪ್ರಕರಣಾಧ್ಯಯನ

''ನಮ್ಮ ಗ್ರಾಮದಲ್ಲಿ ಐ-ಸಮುದಾಯ ಯೋಜನೆ ಪ್ರಾರಂಭವಾಗುವ ಮೊದಲು ನಾನು ಸ್ಥಳೀಯ ಸ್ವಸಹಾಯ ಸಂಘದ ಸದಸ್ಯೆಯಾಗಿದ್ದೆ. ನಮ್ಮ ಗುಂಪಿನಲ್ಲಿ ಈ ಯೋಜನೆಯನ್ನು ಪರಿಚಯಿಸಿದಾಗ, ನಾನು ಇದರಲ್ಲಿ ಆಸಕ್ತಿ ತೋರಿಸಿದ್ದರಿಂದ ನನ್ನನ್ನು ತರಬೇತಿಗೆ ಆಯ್ಕೆ ಮಾಡಲಾಯಿತು. ಆಗ ನನಗೆ ಇದ್ದ ಒಂದೇ ಆದಾಯದ ಮೂಲವೆಂದರೆ, ನಾನು ಸೀರೆ ವಿಮೆ ವ್ಯಾಪಾರದಲ್ಲಿ ಗಳಿಸುತ್ತಿದ್ದ ಕಮಿಷನ್. ತರಬೇತಿ ಪಡೆದವರಲ್ಲಿ ಸುಮಾರು 15 ಮಹಿಳೆಯರನ್ನು ಮಾತ್ರ ಛಾಯಾಗ್ರಹಣದ ಯೋಜನೆಗೆ ಆಯ್ಕೆ ಮಾಡಿಕೊಳ್ಳಲಾಯಿತು.

ನಾವು ಪ್ರಾರಂಭದಲ್ಲಿ ರೂ. 3000/- ಠೇವಣಿ ಇಟ್ಟು, ಒಂದು ಕ್ಯಾಮೆರಾ ಪಡೆಯಬೇಕಾಗಿತ್ತು ಹಾಗೂ ನಮ್ಮ ಆದಾಯದ ಒಂದು ಪಾಲನ್ನು ಹೆಚ್.ಪಿ. ಆಫೀಸಿಗೆ ಕೊಡಬೇಕಾಗಿತ್ತು. ಹೆಚ್.ಪಿ. ಯವರು ನಮಗೆ ಪ್ರಾರಂಭದ ಸಾಮಾಗ್ರಿಗಳು ಮತ್ತು ತರಬೇತಿಯ ನೀಡುವುದರ ಜೊತೆಗೆ, ಅಲ್ಲಿನ ಕಛೇರಿ ಸಿಬ್ಬಂದಿ ನಮಗೆ ತಾಂತ್ರಿಕ ವಿಷಯಗಳಲ್ಲಿ ನೆರವು ಒದಗಿಸುತ್ತಿದ್ದರು. ಈಗ ಹೆಚ್.ಪಿ. ಕಂಪೆನಿ ಈ ಯೋಜನೆಯಿಂದ ಹೊರಬಂದಿರುವುದರಿಂದ ನಮಗೆ ಯಾವುದೇ ತಾಂತ್ರಿಕ ಬೆಂಬಲ ದೊರಕುವುದಿಲ್ಲ. ನಾವು ಮಹಿಳೆಯರೇ ಎಲ್ಲಾ ವ್ಯವಸ್ಥೆ ಮಾಡಿಕೊಳ್ಳುತ್ತೇವೆ; ಉದಾಹರಣೆಗೆ ನನ್ನ ಸೋದರ ಕ್ಯಾಮೆರಾ ರಿಪೇರಿ ಮತ್ತು ನಿರ್ವಹಣೆ ಮಾಡುತ್ತಾನೆ.

ನಾನು ಪ್ರತಿದಿನ ಮನೆಯ ಹೊರಗೆ ಹೋಗಿ ಕೆಲಸ ಮಾಡುತ್ತೇನೆ ಮತ್ತು ಗ್ರಾಮದ ಸಮುದಾಯ ಮಾಹಿತಿ ಕೇಂದ್ರಕ್ಕೆ (ಸಿ.ಐ.ಸಿ) ಹೋಗುತ್ತೇನೆ. ಹೆಚ್.ಪಿ. ಯೋಜನೆ ನಮ್ಮ ಗ್ರಾಮಕ್ಕೆ ಬರುವ ಮೊದಲೇ ಈ ಕೇಂದ್ರವನ್ನು ಪ್ರಾರಂಭಿಸಲಾಗಿತ್ತು, ಈಗ ಕೇಂದ್ರಕ್ಕೆ ಬೇಕಾದ ಎಲ್ಲಾ ಫೋಟೋಗಳನ್ನೂ ನಾನೇ ತೆಗೆಯುತ್ತೇನೆ. ಪಾಸ್‌ಪೋರ್ಟ್, ಸರ್ಕಾರಿ ಪ್ರಮಾಣಪತ್ರಗಳು ಇತ್ಯಾದಿಗಳಿಗೆ ಬೇಕಾದ ಫೋಟೋಗಳನ್ನು ಕೂಡ ನಾನು ತೆಗೆಯುತ್ತೇನೆ. ಸಮುದಾಯ ಮಾಹಿತಿ ಕೇಂದ್ರ ಈ ಫೋಟೋಗಳಿಗೆ ಹಣ ಪಡೆಯುತ್ತದೆ ಹಾಗೂ ನನಗೆ ಸಂಬಳ ದೊರೆಯುತ್ತದೆ. ಕಳೆದ ಎರಡು ವರ್ಷಗಳಿಂದ ನಾನು ಈ ಉದ್ಯೋಗ ಮಾಡುತ್ತಿದ್ದೇನೆ.

ನನಗೆ ಸಮುದಾಯ ಕೇಂದ್ರದಲ್ಲಿ ಉದ್ಯೋಗ ಸಿಕ್ಕಿದ್ದು ಸ್ವಾರಸ್ಯಕರ ವಿಷಯ... ನಾನು ನನ್ನ ಕಪ್ಪು ಬಿಳುಪು ಫೋಟೋಗಳನ್ನು ಕಲರ್ ಫೋಟೋಗೆ ಬದಲಾಯಿಸಲು ಕೇಂದ್ರವನ್ನು ಸಂಪರ್ಕಿಸಿದ್ದೆ. ಅಲ್ಲಿ ಆ ಸೌಲಭ್ಯ ಇಲ್ಲ ಎಂದು ತಿಳಿದುಬಂತು. ನಾನು ಕೇಂದ್ರದ ಸಿಬ್ಬಂದಿಗೆ ಕಪ್ಪು ಬಿಳುಪು ಚಿತ್ರಗಳನ್ನು ಕಲರ್‌ಗೆ ಹೇಗೆ ಬದಲಾಯಿಸಬಹುದೆಂಬ ಬಗ್ಗೆ ತರಬೇತಿ ನೀಡುವಂತೆ ಕೇಳಿಕೊಂಡೆ. ತರಬೇತಿಯ ಸಮಯದಲ್ಲಿಯೇ ಈ ಕೆಲಸ ಮತ್ತು ಕೇಂದ್ರದ ಇತರ ಕೆಲಸಗಳನ್ನು ಮಾಡಲು ನಾನು ಸಿದ್ಧಳಿದ್ದೇನೆ ಎಂದು ತಿಳಿಸಿದೆ. ಆಗ ಅವರು ನನಗೆ ಉದ್ಯೋಗ ನೀಡಿದರು. ಕೇಂದ್ರದಲ್ಲಿ ಅಂದಿನಿಂದ ಇಂದಿನವರೆಗೆ ಕೆಲಸ ಮಾಡುತ್ತಿದ್ದೇನೆ.

ನಾನು ಕ್ಯಾಮೆರಾ ತರಬೇತಿ ಪಡೆಯಲು ಹೋಗುತ್ತೇನೆ ಎಂದು ತಿಳಿಸಿದಾಗ ನಮ್ಮ ತಾಯಿ-ತಂದೆಗೆ ಅಷ್ಟೇನೂ ಇಷ್ಟ ಇರಲಿಲ್ಲ. ವಿಧವೆಯಾದ ನಾನು ನನ್ನ ಒಂದು ಗಂಡು ಮಗುವಿನೊಂದಿಗೆ ಮನೆಯಲ್ಲಿಯೇ ಕಾಲ ಕಳೆಯುತ್ತಿದ್ದೆ. ನಾನು ಮನೆಯಿಂದ ಹೊರಗೆ ಹೋಗುವುದು ತಂದೆ-ತಾಯಿಗಳಿಗೆ ಒಪ್ಪಿಗೆ ಇರಲಿಲ್ಲ. ಆದರೆ, ನಾನು ಹಟ ಹಿಡಿದು ಈ ತರಬೇತಿ ಪಡೆದುಕೊಂಡೆ. ನಾನು ನನ್ನ ಕೌಶಲ್ಯಗಳನ್ನು ಬೆಳೆಸಿಕೊಂಡ ನಂತರ, ನನಗೆ ಹೆಚ್ಚಿನ ಆತ್ಮವಿಶ್ವಾಸ ಮೂಡಿತು. ಈಗ ನಮ್ಮ ತಂದೆ-ತಾಯಿ ನಾನು ಇಷ್ಟೊಂದು

ಬುದ್ಧಿವಂತೆಯಾದದ್ದು ದೇವರ ವರ ಎನ್ನುತ್ತಾರೆ. ಅವರಿಗೆ ಈಗ ಸಂತೋಷವಾಗಿದೆ. ನನ್ನ ಕೆಲಸಕ್ಕೆ ಅವರೀಗ ಪೂರ್ಣ ಬೆಂಬಲ ನೀಡುತ್ತಾರೆ.

ಈ ಉದ್ಯೋಗಕ್ಕೆ ಮುನ್ನ ನಾನು ಮನೆ ಬಿಟ್ಟು ಹೊರಗೆ ಹೋಗುತ್ತಿರಲಿಲ್ಲ. ಈಗ ಇಡೀ ಗ್ರಾಮವೇ ನನ್ನನ್ನು ಹೊಗಳುತ್ತದೆ ಮತ್ತು ಗೌರವಿಸುತ್ತದೆ. ಇತರ ಗ್ರಾಮಸ್ಥರು ತಮ್ಮ ಹೆಣ್ಣುಮಕ್ಕಳಿಗೆ, ನೀವು ಯಾಕೆ ಈ ತರಬೇತಿ ಪಡೆಯಲಿಲ್ಲ ಎಂದು ಬೈಯ್ಯುತ್ತಾರೆ. ಈಗ ಎಲ್ಲರಿಗೂ ನನ್ನ ಪರಿಚಯ ಇದೆ, ನನ್ನ ಮಗನನ್ನು ಎಲ್ಲರೂ ''ಈಶ್ವರಿಯ ಮಗ'' ಎಂದೇ ಗುರುತಿಸುತ್ತಾರೆ.

ಬೇರೆ ಕೆಲಸಗಳಿಗಿಂತ ಐ.ಸಿ.ಟಿ. ಉದ್ಯಮಗಳು ಉತ್ತಮ ಎಂದು ನನಗೆ ಅನ್ನಿಸುತ್ತದೆ, ಏಕೆಂದರೆ ಇದರಲ್ಲಿ ಕೆಲಸ ಮಾಡಿದಂತೆ ಅನ್ನಿಸುವುದೇ ಇಲ್ಲ. ಇತರ ಉದ್ಯಮಗಳಾದ ಅಂಗಡಿ ನಡೆಸುವುದು ಅಥವಾ ಟೈಲರಿಂಗ್ ಇತ್ಯಾದಿಗಳಿಗೆ ಮಹಿಳೆಯರು ಬಹಳ ಸಮಯ ವ್ಯಯ ಮಾಡಬೇಕಾಗುತ್ತದೆ. ಆದರೆ ನನ್ನ ಕ್ಯಾಮೆರಾ ಬಳಸಿ, ನಾನು ಫೋಟೊ ತೆಗೆದು 10 ನಿಮಿಷದಲ್ಲಿ ಪ್ರಿಂಟ್ ಮಾಡಿಕೊಡಬಹುದು, ಇದು ಬಹಳ ಸರಳ ಎನಿಸುತ್ತದೆ. ನಾನು ಓದಿಲ್ಲ, ಆದರೆ ಕಂಪ್ಯೂಟರ್ ಕಮಾಂಡ್‌ಗಳನ್ನು ನೆನಪಿಟ್ಟುಕೊಂಡು ಅದರಲ್ಲಿ ಟೈಪ್ ಮಾಡುತ್ತೇನೆ. ಈಗ ನನಗೆ ಅಡೋಬ್ ಫೋಟೋಶಾಪ್ (ಸಾಫ್ಟ್‌ವೇರ್) ಬಳಸಲು ಕೂಡ ಬರುತ್ತದೆ!

ಭವಿಷ್ಯದಲ್ಲಿ, ನಾನು ನನ್ನ ಕಂಪ್ಯುಟರ್ ಕೌಶಲ್ಯವನ್ನು ಉತ್ತಮಗೊಳಿಸಿಕೊಳ್ಳಬೇಕೆಂದಿದ್ದೇನೆ. ಇಲ್ಲಿಯವರಿಗೆ ಸಾಕ್ಷರತೆ ಇಲ್ಲದೆ ಹೇಗೋ ಕೆಲಸ ಮುಂದುವರೆಸಿದ್ದೇನೆ. ಆದರೆ, ಮುಂದೆ ನಾನು ಓದು ಬರಹ ಕಲಿತು ಇನ್ನೂ ಉತ್ತಮವಾಗಿ ಕೆಲಸ ಮಾಡಬೇಕೆಂದಿದ್ದೇನೆ.

ಇತರ ಸಂಸ್ಥೆಗಳ ಬೆಂಬಲದ ಕುರಿತು ಹೇಳಬೇಕೆಂದರೆ, ಯೋಜನೆಯ ಸಂಚಾಲಕರಾದ ಶ್ರೀ ಬಾಬಿ ಅವರ ಸಹಾಯವಿಲ್ಲದೆ ನಾನು ಕೆಲಸ ಮಾಡಲು ಸಾಧ್ಯವೇ ಇರಲಿಲ್ಲ. ಈಗಲೂ ನಾವು ಮಹಿಳೆಯರು ಬಾಬಿ ಅವರು ನಮ್ಮ ಗ್ರಾಮಕ್ಕೆ ಬರುವುದನ್ನೇ ಕಾಯುತ್ತಿರುತ್ತೇವೆ. ಅವರು ಬಂದಾಗ ನಮ್ಮ ಪ್ರಶ್ನೆಗಳನ್ನು ಕೇಳಿ ಅವರಿಂದ ಉತ್ತರ ಪಡೆದರೆ, ನಮ್ಮ ಕೆಲಸ ಸುಲಭವಾಗುತ್ತದೆ. ಬೇರೆಯವರ ಜೊತೆ ಅಷ್ಟು ಚೆನ್ನಾಗಿ ಹೊಂದಿಕೊಳ್ಳುವುದು ಕಷ್ಟ. ಆದ್ದರಿಂದ ಅವರಿಲ್ಲದೆ ನಮ್ಮ ಕೆಲಸ ಕಠಿಣವಾಗುತ್ತಿತ್ತು. ಯೋಜನೆ ಇನ್ನೂ ಉತ್ತಮವಾಗಲು, ಕ್ಯಾಮೆರಾ ತರಬೇತಿ ಜೊತೆಗೆ ವಿಡಿಯೋ ತರಬೇತಿ ನೀಡಿದರೆ ಒಳ್ಳೆಯದೆಂದು ನನ್ನ ಅನಿಸಿಕೆ. ಗ್ರಾಮದಲ್ಲಿ ಏನಾದರೂ ಸಮಾರಂಭ ಆದಾಗ, ಜನರಿಗೆ ಫೋಟೋಗಳು ಮತ್ತು ವಿಡಿಯೋ ಎರಡೂ ಬೇಕು. ನನಗೆ ಎರಡೂ ಮಾಡಲು ಸಾಧ್ಯವಿಲ್ಲದ್ದರಿಂದ, ಗ್ರಾಮಸ್ಥರು ಬೇರೆಯವರನ್ನು ಕರೆಸುತ್ತಾರೆ. ಇದರಿಂದ ನನಗೆ ನಷ್ಟವಾಗುತ್ತದೆ. ಆದ್ದರಿಂದ, ತರಬೇತಿಯಲ್ಲಿ ವಿಡಿಯೋ ಚಿತ್ರ ತೆಗೆಯುವುದನ್ನೂ ಕಲಿಸಿದರೆ, ಮಹಿಳೆಯರಿಗೆ ಹೆಚ್ಚು ಲಾಭದಾಯಕವಾಗುತ್ತದೆ.

ಯೋಜನೆಯ ಒಟ್ಟಾರೆ ಲಾಭಗಳ ಕುರಿತು ಹೇಳಬೇಕಾದರೆ, ಎಲ್ಲಕ್ಕಿಂತ ಮುಖ್ಯವಾದದ್ದೆಂದರೆ ಮಹಿಳೆಯರಿಗೆ ಇತರ ಉದ್ಯಮ ಅಥವಾ ವ್ಯಾಪಾರ ಮಾಡುವುದಕ್ಕಿಂತ ಈ ರೀತಿಯ ಉದ್ಯೋಗ ಹೆಚ್ಚು ಸರಳ. ನನಗೆ ಆಗಿರುವ ಅನುಕೂಲತೆಗಳೆಂದರೆ, ಗ್ರಾಮದಲ್ಲಿ ಮೊದಲು ಯಾರಿಗೂ ಪರಿಚಯವಿಲ್ಲದ ನಾನು ಇಂದು ಎಲ್ಲರಿಗೂ ಪರಿಚಿತಳಾಗಿದ್ದೇನೆ. ನಾನು ಕೆಲ ದಿನ ಊರುಬಿಟ್ಟು ಹೋಗಿದ್ದರೂ ಎಲ್ಲರೂ ಕೇಳುತ್ತಾರೆ. ಗ್ರಾಮಸ್ಥರಿಗೆ ಸಮುದಾಯ ಕೇಂದ್ರವನ್ನು ಗಂಡಸರು ನಡೆಸುವುದು ಇಷ್ಟವಿಲ್ಲ. ನಾನೇ ಅಲ್ಲಿ ಯಾವಾಗಲೂ ಇರಬೇಕು ಎನ್ನುತ್ತಾರೆ. ನಾನು ಇಷ್ಟು ಪ್ರಗತಿ ಸಾಧಿಸಿರುವುದನ್ನು ನೋಡಿದ ಗ್ರಾಮಸ್ಥರು ತಮ್ಮ ಹೆಣ್ಣುಮಕ್ಕಳಿಗೂ ಇದೇ ರೀತಿ ಕೆಲಸ ಮಾಡಲು ಪ್ರೋತ್ಸಾಹಿಸುತ್ತಿದ್ದಾರೆ. ನಮ್ಮ ಗ್ರಾಮದಲ್ಲಿ ಐದು ಹೆಣ್ಣುಮಕ್ಕಳ ತಾಯಿಯಾದ ಒಬ್ಬ ಮಹಿಳೆ, ತನ್ನ ಮಕ್ಕಳಿಗೆ ಕ್ಯಾಮೆರಾ ತರಬೇತಿ ಪಡೆದು, ಛಾಯಾಗ್ರಾಹಕರಾಗುವಂತೆ ಪ್ರೋತ್ಸಾಹಿಸುತ್ತಿದ್ದಾರೆ. ನನ್ನ ಉದ್ಯಮಶೀಲತೆಯಿಂದ ನನಗೆ ಈ ರೀತಿಯ ಗೌರವ ದೊರೆಯಲಾರಂಭಿಸಿದೆ!''



# III. ಐ.ಸಿ.ಟಿ.-ಆಧಾರಿತ ಉದ್ಯಮಗಳು ಯಾವುವು ಹಾಗೂ ಮಹಿಳಾ ಸಂಘಟನೆಗಳು ಐ.ಸಿ.ಟಿ. ಉದ್ಯಮಗಳನ್ನು ಅಳವಡಿಸಿಕೊಳ್ಳಲು ಏಕೆ ಮುನ್ನುಗ್ಗಬೇಕು?

**ಈ ಅಧ್ಯಾಯದಿಂದ ನನಗೇನು ಸಿಗುತ್ತದೆ?**

- ಉದ್ಯಮಶೀಲತೆ ಎಂದರೇನು?
- ಐ.ಸಿ.ಟಿ. – ಆಧಾರಿತ ಉದ್ಯಮ ಎಂದರೇನು? ದಕ್ಷಿಣ ಭಾರತದಲ್ಲಿರುವ ವಿವಿಧ ಯೋಜನಾ ವಿಧಗಳು ಯಾವುವು?
- ದುರ್ಬಲವರ್ಗದ ಮಹಿಳೆಯರು ಐ.ಸಿ.ಟಿ. ಆಧಾರಿತ ಉದ್ಯಮಗಳ ಒಡೆತನ ಹೊಂದಿ, ಅವುಗಳನ್ನು ನಡೆಸುವುದು ಏಕೆ ಮುಖ್ಯ?
- ಸಾಂಪ್ರದಾಯಿಕ ಉದ್ಯಮಗಳಿಗೆ ಹೋಲಿಸಿದರೆ, ಮಹಿಳೆಯರ ಸಶಕ್ತತೆಯ ದೃಷ್ಟಿಕೋನದಿಂದ ಐ.ಸಿ.ಟಿ.ಆಧಾರಿತ ಉದ್ಯಮಗಳಲ್ಲಿ ಅಂಥಹ ವೈಶಿಷ್ಟ್ಯವಾದುದು ಏನಿದೆ?

## ಉದ್ಯಮಶೀಲತೆ ಮತ್ತು ಐ.ಸಿ.ಟಿ.ಗಳು

ಉದ್ಯಮಶೀಲತೆ ಎಂದರೆ, ಒಬ್ಬ ಉದ್ಯಮಿ ಅಥವಾ ವ್ಯಕ್ತಿ ಅಪಾಯಗಳನ್ನು ಎದುರಿಸಿ, ಹೊಸ ಪರಿಕಲ್ಪನೆಗಳು, ವಿಧಾನಗಳು ಮತ್ತು ಪ್ರಕ್ರಿಯೆಗಳನ್ನು ಆವಿಷ್ಕರಿಸಿ, ಒಂದು ಉದ್ಯಮ ಕಾರ್ಯತಂತ್ರವನ್ನು ರೂಪಿಸಿ, ಇವೆಲ್ಲದಕ್ಕೆ ಪ್ರತಿಫಲವಾಗಿ ಲಾಭವನ್ನು ಪಡೆಯುವುದು. ಪ್ರಸ್ತುತದಲ್ಲಿ, ಉದ್ಯಮಿ ಎಂದರೆ ಯಾವುದೇ ಸಣ್ಣ ವ್ಯಾಪಾರವನ್ನು ಪರಿಣಾಮಕಾರಿಯಾಗಿ ನಡೆಸುತ್ತಾ, ಲಾಭ ಪಡೆದುಕೊಳ್ಳುತ್ತಿರುವ ಮಾಲೀಕ ಎಂಬ ಸಂಕುಚಿತ ಗ್ರಹಿಕೆಗೆ ಬಂದು ನಿಂತಿದೆ. ಆವಿಷ್ಕಾರ ಮತ್ತು ಹೊಸ ಅವಕಾಶಗಳೊಂದಿಗೆ ಪ್ರಯೋಗ ಈ ಅಂಶಗಳು ಒಬ್ಬ ಉದ್ಯಮಿಯನ್ನು ವ್ಯಾಪಾರಿಗಿಂತ ವಿಶಿಷ್ಟವೆಂದು ತೋರಿಸಿದರೂ, ಇವುಗಳನ್ನು ಪಕ್ಕಕ್ಕೆ ತಳ್ಳಲಾಗಿದೆ.

ಉದ್ಯಮಿಗಳು ಸಾಮಾನ್ಯವಾಗಿ ವ್ಯಾಪಾರೀ ವಲಯಗಳೊಂದಿಗೆ ಸಂಬಂಧ ಹೊಂದಿರುತ್ತಾರೆ; ಆದರೂ, ಆವಿಷ್ಕಾರ, ಅಪಾಯಗಳನ್ನು ಎದುರಿಸುವುದು (ರಿಸ್ಕ್ ಟೇಕಿಂಗ್), ಸಮಸ್ಯೆ ಪರಿಹಾರ ಮತ್ತು ಪ್ರತಿಫಲಗಳು ಬರೀ ವ್ಯಾಪಾರಿ ವಲಯಕ್ಕೆ ಮಾತ್ರ ಸೀಮಿತವಾಗಿಲ್ಲ.

ಉದ್ಯಮಿಗಳಲ್ಲಿ ಹೆಚ್ಚಿನವರು ಸಾಮಾಜಿಕ ಉದ್ಯಮಿಗಳಾಗಿದ್ದು, ಅವರು ವ್ಯಾಪಾರದ ಸಿದ್ಧಾಂತಗಳನ್ನು ಬಳಸಿಕೊಂಡೇ ಸಾಮಾಜಿಕ ಪರಿವರ್ತನೆಯ ಗುರಿ ಸಾಧಿಸುತ್ತಾರೆ. ಉದ್ಯಮಿಗಳ ಈ ವರ್ಗ ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಜೊತೆ ಸಕ್ರಿಯ ಪಾತ್ರವಹಿಸಿ, ಅಭಿವೃದ್ಧಿ ಕ್ಷೇತ್ರಕ್ಕೆ ತನ್ನ ಕೊಡುಗೆ ನೀಡಿದೆ, ಹೊಸ ವಿಧಾನಗಳು ಮತ್ತು ಪರಿಕಲ್ಪನೆಗಳನ್ನು ಬಳಸಿಕೊಂಡು ಸಮುದಾಯದಲ್ಲಿ ಉತ್ತಮ ಪರಿವರ್ತನೆ ತರುವಲ್ಲಿ ಕಾರಣಕರ್ತವಾಗಿದೆ. ಇದರಲ್ಲಿ ಇನ್ನೊಂದು ವರ್ಗವೆಂದರೆ, ಸಾರ್ವಜನಿಕ ಉದ್ಯಮಶೀಲತೆ. ಇದರಲ್ಲಿ ಉದ್ಯಮಿಗಳು ಸರ್ಕಾರದ ಪ್ರತಿನಿಧಿಗಳಾಗಿರುತ್ತಾರೆ. ಇವರ ಉದ್ದೇಶ ಕೇವಲ ಲಾಭ ಮಾತ್ರವಾಗಿರುವುದಿಲ್ಲ, ಹೊಸ ವಿಧಾನಗಳು ಹಾಗೂ ಪರಿಕಲ್ಪನೆಗಳ ಮೂಲಕ ಸಾರ್ವಜನಿಕರನ್ನು ತಲುಪಿ ಸಾರ್ವಜನಿಕ ಸೇವೆಗಳು ನಾಗರಿಕರಿಗೆ ತಲುಪುವಂತೆ ಮಾಡುವುದು ಇವರ ಗುರಿಯಾಗಿರುತ್ತದೆ.

## ಬ್ಯಾಕ್ಸ್ 3: ಮುಕ್ತ ಮಾರುಕಟ್ಟೆಯ ಪರಿಸರದಲ್ಲಿ ಸಾಮಾಜಿಕ ಉದ್ಯಮಶೀಲತೆ

''ಉದ್ಯಮಶೀಲತೆ''ಯನ್ನು ವಿಸ್ತಾರಿತ ಅರ್ಥದಲ್ಲಿ ವ್ಯಾಖ್ಯಾನಿಸುವುದರ ಮೂಲಕ ನಾವು ಬಂಡವಾಳಶಾಹಿ ವರ್ಗದ ಸ್ವಭಾವವನ್ನು ಪರಿವರ್ತಿಸಬಹುದು ಹಾಗೂ ಮುಕ್ತ ಮಾರುಕಟ್ಟೆಯ ವ್ಯಾಪ್ತಿಯಲ್ಲಿ ಕ್ಲಿಷ್ಟವಾದ ಅನೇಕ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಬಹುದು. ಒಬ್ಬ ಉದ್ಯಮಿಗೆ ತನ್ನ ಲಾಭವನ್ನು ಗರಿಷ್ಠಗೊಳಿಸಿಕೊಳ್ಳುವ ಒಂದೇ ಗುರಿ ಇರದೆ, ಎರಡು ರೀತಿಯ ಉದ್ದೇಶ ಇದೆ ಎಂದುಕೊಳ್ಳೋಣ. ಈ ಎರಡೂ ಉದ್ದೇಶಗಳೂ ಬೇರೆ ಬೇರೆಯಾಗಿದ್ದರೂ, ಎರಡೂ ಅಷ್ಟೇ ಮುಖ್ಯವಾಗಿವೆ. ಎ) ಗರಿಷ್ಠ ಲಾಭದ ಉದ್ದೇಶ ಬಿ) ಜನರಿಗೆ ಮತ್ತು ಸಮುದಾಯಕ್ಕೆ ಒಳಿತು ಮಾಡುವ ಉದ್ದೇಶ.

ಇದರಲ್ಲಿ ಪ್ರತಿ ಉದ್ದೇಶವೂ ಪ್ರತ್ಯೇಕವಾದ ಒಂದು ವ್ಯವಹಾರ/ಉದ್ದಿಮೆಗೆ ಮಾರ್ಗ ತೋರಿಸುತ್ತದೆ. ಮೊದಲನೆಯದನ್ನು ನಾವು ಹೆಚ್ಚಳ ಲಾಭವಿರುವ ಉದ್ಯಮ ಎನ್ನೋಣ, ಹಾಗೂ ಎರಡನೆಯದನ್ನು ಸಾಮಾಜಿಕ ಉದ್ಯಮ ಎನ್ನೋಣ.

ಪ್ರಪಂಚದಲ್ಲಿ ಬದಲಾವಣೆ ತರುವ ಉದ್ದೇಶದಿಂದ ಹೊಸ ಉದ್ಯಮವಾದ ಸಾಮಾಜಿಕ ಉದ್ಯಮವನ್ನು ಮಾರುಕಟ್ಟೆಯಲ್ಲಿ ಪ್ರಾರಂಭಿಸಲಾಗುವುದು. ಸಾಮಾಜಿಕ ಉದ್ಯಮದಲ್ಲಿ ಬಂಡವಾಳ ಹಾಕಿದವರು ತಮ್ಮ ಹೂಡಿಕೆಯನ್ನು ತಿರುಗಿ ಪಡೆದುಕೊಳ್ಳಬಹುದು, ಆದರೆ ಉದ್ಯಮದಿಂದ ಅವರಿಗೆ ಯಾವುದೇ ಡಿವಿಡೆಂಡ್ (ಲಾಭಾಂಶ) ದೊರಕುವುದಿಲ್ಲ. ಸಂಸ್ಥೆ ಹೆಚ್ಚು ಜನರನ್ನು ತಲುಪಲು, ತನ್ನ ಉತ್ಪನ್ನದ ಅಥವಾ ಸೇವೆಯ ಗುಣಮಟ್ಟವನ್ನು ಉತ್ತಮಗೊಳಿಸಲು, ಬಂದ ಲಾಭವನ್ನು ಪುನಃ ಕಂಪೆನಿಯಲ್ಲೇ ಹೂಡಲಾಗುತ್ತದೆ. ಸಾಮಾಜಿಕ ಉದ್ಯಮವೆಂದರೆ ಲಾಭವಿಲ್ಲದ, ಡಿವಿಡೆಂಡ್-ರಹಿತ ಕಂಪನಿ.

ಗ್ರಾಮೀಣ ಬ್ಯಾಂಕ್‌ನ ಸ್ಥಾಪಕ ನೊಬೆಲ್ ಪ್ರಶಸ್ತಿ ವಿಜೇತ ಮಹಮದ್ ಯೂನುಸ್ ಅವರು ಡಿಸೆಂಬರ್ 10, 2006 ರಲ್ಲಿ ನಾರ್ವೆಯ[5] ಓಸ್ಲೋದಲ್ಲಿ ನೊಬೆಲ್ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮಾಡಿದ ಭಾಷಣದ ಆಯ್ದ ಭಾಗ.

ಐ.ಸಿ.ಟಿ.-ಆಧಾರಿತ ಉದ್ಯಮಗಳು ಲಭ್ಯವಿರುವ ಅನೇಕ ವಿಧದ ಉದ್ಯಮಗಳ ಆಯ್ಕೆಗಳಲ್ಲಿ ಒಂದಾಗಿದ್ದು, ತಮ್ಮ ಚಟುವಟಿಕೆಗಳಲ್ಲಿ ಐ.ಸಿ.ಟಿ.ಗಳನ್ನು ಬಳಸಿ, ಅಂತರ್ಗತಗೊಳಿಸಿಕೊಂಡಿರುವ ಉದ್ಯಮಗಳನ್ನು ಐ.ಸಿ.ಟಿ. ಆಧಾರಿತ ಉದ್ಯಮಗಳೆಂದು ಕರೆಯಲಾಗುತ್ತದೆ. ಈ

5 ಈ ಭಾಷಣದ ಪೂರ್ಣಪಾಠಕ್ಕಾಗಿ ನೋಡಿ : http://nobelprize.org/nobel_prizes/peace/laureates/2006/yunus-lecture-en.html

ಉದ್ಯಮಗಳು ಹಲವು ಉದ್ದೇಶಗಳನ್ನು ಹೊಂದಿರುತ್ತವೆ. ಇವುಗಳಿಗೆ ವ್ಯವಹಾರದ ಗುರಿಗಳಿರಬಹುದು – ಅಂದರೆ ಐ.ಸಿ.ಟಿ.ಗಳನ್ನು ಬಳಸಿ ಲಾಭ ಪಡೆಯುವ ಉದ್ದೇಶ ಇರಬಹುದು, ಅಥವಾ ಇವುಗಳಿಗೆ ಸಾಮಾಜಿಕ ಉದ್ದೇಶ ಇರಬಹುದು – ಐ.ಸಿ.ಟಿ.ಗಳ ಮೂಲಕ ಸಮುದಾಯದಲ್ಲಿ ಸಕಾರಾತ್ಮಕ ಪರಿವರ್ತನೆಯನ್ನು ತಂದು, ಅದನ್ನು ಸುಸ್ಥಿರಗೊಳಿಸುವ ಉದ್ದೇಶವಿರಬಹುದು ಅಥವಾ ಇವೆರಡೂ ಆಸಕ್ತಿಗಳನ್ನು ಉದ್ದೇಶಿಸುತ್ತಿರಬಹುದು (ಇದನ್ನು ಅಧ್ಯಾಯ 4ರಲ್ಲಿ ವಿವರವಾಗಿ ಚರ್ಚಿಸಲಾಗಿದೆ). ಇಲ್ಲಿ ಪರಿಗಣಿಸಬೇಕಾದ ಮುಖ್ಯ ಅಂಶವೆಂದರೆ, ಐ.ಸಿ.ಟಿ–ಆಧಾರಿತ ಉದ್ಯಮಗಳು ಉಪಯೋಗಿಸಲು ಸರಳವಾಗಿರುವ, ಆವಿಷ್ಕಾರಕ್ಕೆ ಅವಕಾಶಗಳಿರುವ ಹೊಸ ತಂತ್ರಜ್ಞಾನಗಳನ್ನು ವಿಭಿನ್ನ ರೀತಿಯ ಚಟುವಟಿಕೆಗಳಲ್ಲಿ ಬಳಸಿಕೊಳ್ಳುತ್ತವೆ. ತಾಂತ್ರಿಕ ಬದಲಾವಣೆಗಳು ಶರವೇಗದಲ್ಲಿ ಸಮಾಜವನ್ನು ಮಾರ್ಪಡಿಸುತ್ತಿರುವ ಈ ಕ್ಷೇತ್ರದಲ್ಲಿ, ಪ್ರಸ್ತುತದ ಚಟುವಟಿಕೆಗಳಲ್ಲಿ ಐ.ಸಿ.ಟಿ.ಗಳನ್ನು ಸಮನ್ವಯಗೊಳಿಸಿಕೊಂಡು, ಗರಿಷ್ಠ ಲಾಭ ಪಡೆದುಕೊಳ್ಳಲು ಸಾಹಸದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಈ ಮುಂದೆ ನೀಡಿರುವ ಉಪ–ವಿಭಾಗಗಳಲ್ಲಿ ಎ) ದಕ್ಷಿಣ ಭಾರತದ ವಿವಿಧ ಐ.ಸಿ.ಟಿ–ಆಧಾರಿತ ಉದ್ಯಮದ ಆಯ್ಕೆಗಳು ಮತ್ತು ಇದರಲ್ಲಿ ಪ್ರತಿಯೊಂದು ಉದ್ಯಮವೂ ಮಹಿಳೆಯರಿಗೆ ನೀಡುವ ಅನುಕೂಲತೆಗಳು/ಅವಕಾಶಗಳು ಬಿ) ಸಂಘಟನೆಗಳು ಲಿಂಗತ್ವದ ದೃಷ್ಟಿಕೋನದಿಂದ ತಮ್ಮ ಸಶಕ್ತತೆಯ ಗುರಿಗಳನ್ನು ತಲುಪಲು ಐ.ಸಿ.ಟಿ.–ಆಧಾರಿತ ಉದ್ಯಮಗಳನ್ನು ಏಕೆ ಅಳವಡಿಸಿಕೊಳ್ಳಬೇಕು ಎಂಬಿವೇ ವಿಷಯಗಳನ್ನು ಚರ್ಚಿಸಲಾಗಿದೆ.

## ದಕ್ಷಿಣ ಭಾರತದ ವೈವಿಧ್ಯಮಯ ಐ.ಸಿ.ಟಿ.–ಆಧಾರಿತ ಉದ್ಯಮಗಳು

1. **ಉದ್ಯಮ ಚಟುವಟಿಕೆಗಳನ್ನು ಉತ್ತೇಜಿಸಲು ಐ.ಸಿ.ಟಿ.ಗಳು** – ಮಹಿಳೆಯರು/ಮಹಿಳಾ ಗುಂಪುಗಳು ಹೊಸ ತಂತ್ರಜ್ಞಾನಗಳಾದ ಇಂಟರ್‌ನೆಟ್ ಮತ್ತು ಮೊಬೈಲ್ ಫೋನ್‌ಗಳನ್ನು ಬಳಸಿಕೊಂಡು ತಮ್ಮ ಸದ್ಯದ/ಈಗಾಗಲೇ ಇರುವ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ ಮತ್ತು ಭದ್ರಪಡಿಸಿಕೊಳ್ಳುತ್ತಿದ್ದಾರೆ. ಇವುಗಳು ಇ–ವಾಣಿಜ್ಯ ಮತ್ತು ಮೊಬೈಲ್–ವಾಣಿಜ್ಯ ವರ್ಗಕ್ಕೆ ಸೇರುತ್ತವೆ ಹಾಗೂ ಮಾರುಕಟ್ಟೆಯಲ್ಲಿ ಮಹಿಳೆಯರಿಗೆ ಉತ್ತಮ ಅವಕಾಶಗಳನ್ನು ಕಲ್ಪಿಸುತ್ತವೆ. ಐ.ಸಿ.ಟಿ.ಯ ಈ ವಿಧದ ಬಳಕೆಯ ಕೆಲವು ಯಶಸ್ವೀ ಉದಾಹರಣೆಗಳಿವೆ :

    ಎ) ಟೋ–ಹೋಲ್ಡ್ ಆರ್ಟಿಸಾನ್ಸ್, ಅಥಣಿ, ಕರ್ನಾಟಕ

    ಬಿ) ಫೌಂಡೇಶನ್ ಆಫ್ ಆಕ್ಯುಪೇಶನಲ್ ಡೆವಲಪ್‌ಮೆಂಟ್, ಚೆನ್ನೈ, ತಮಿಳು ನಾಡು.

ಸದ್ಯದ ಉದ್ಯಮಗಳನ್ನು ಬಲವರ್ಧನೆಗೊಳಿಸುವಲ್ಲಿ ಐ.ಸಿ.ಟಿ.ಗಳನ್ನು ಬಳಸುವುದರಿಂದ ಆಗುವ ಮುಖ್ಯ ಅನುಕೂಲತೆ ಎಂದರೆ, ಇವುಗಳ ಮೂಲಕ ಬಡ ಮಹಿಳೆಯರು ಗ್ರಾಹಕರು, ಸರಬರಾಜುದಾರರು, ಬ್ಯಾಂಕುಗಳು, ಹಣ ನೀಡುವವರೇ ಮೊದಲಾದವರೊಡನೆ ಸಂಪರ್ಕಜಾಲವನ್ನು ಕಲ್ಪಿಸಿ, ಅದನ್ನು ಭದ್ರಗೊಳಿಸಿಕೊಂಡು, ತಮ್ಮ ಮಾರುಕಟ್ಟೆ ಸಂಪರ್ಕವನ್ನು ಹಾಗೂ ತಮ್ಮ ಉತ್ಪನ್ನಗಳಿಗೆ ಬೇಡಿಕೆಯನ್ನು ಹೆಚ್ಚಿಸಿಕೊಂಡು, ಉದ್ಯಮದ ಅವಕಾಶಗಳನ್ನು ಉತ್ತಮಗೊಳಿಸಿಕೊಳ್ಳಬಹುದು. ಐ.ಸಿ.ಟಿ.ಗಳನ್ನು ಬಳಸಿಕೊಂಡು ಮಹಿಳೆಯರು ತಮ್ಮ ಉತ್ಪನ್ನಗಳನ್ನು ಬೇಡಿಕೆಯ ಮೇರೆಗೆ ಸರಬರಾಜು ಮಾಡಬಹುದು ಮತ್ತು ಉತ್ಪನ್ನಗಳ ಕುರಿತು ಗ್ರಾಹಕರಿಂದ ಸಮಯದಲ್ಲಿ ಪ್ರತಿಕ್ರಿಯೆ ಪಡೆದುಕೊಂಡು, ಗ್ರಾಹಕರ ಬಲವಾದ ನೆಲೆಯನ್ನು ಬೆಳೆಸಿಕೊಳ್ಳಬಹುದು. ಐ.ಸಿ.ಟಿ.ಗಳ ಬಳಕೆಯಿಂದ ಕಚ್ಚಾ ವಸ್ತುಗಳನ್ನು ಪಡೆದುಕೊಳ್ಳುವ ಪ್ರಕ್ರಿಯೆಯೂ ಸುಧಾರಿಸಬಲ್ಲದು. ಇದರಿಂದ ಅನಗತ್ಯ ವಿಳಂಬ ಮತ್ತು ಅನುತ್ಪಾದಕತೆಯನ್ನು ಕಡಿಮೆಗೊಳಿಸಬಹುದು. ಇದರ ಜೊತೆಗೆ,

ಮಹಿಳೆಯರು ತಮ್ಮ ಉತ್ಪಾದನೆಯನ್ನು ತಮ್ಮ ಗ್ರಾಮದ ಮಾರುಕಟ್ಟೆಗಷ್ಟೇ ಸೀಮಿತಗೊಳಿಸದೆ, ಅಕ್ಕಪಕ್ಕದ ಗ್ರಾಮಗಳು ಪಟ್ಟಣಗಳು ಅಥವಾ ಬೇರೆ ರಾಜ್ಯ ಮತ್ತು ದೇಶಗಳನ್ನು ಕೂಡ ಸಂಪರ್ಕಿಸಿ, ತಮ್ಮ ಉತ್ಪನ್ನಗಳಿಗೆ ವಿಸ್ತಾರಿತ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳಬಹುದು.

2. **ಐ.ಸಿ.ಟಿ. ಸಾಧನಗಳನ್ನು ಉತ್ಪಾದಿಸುವ ಉದ್ಯಮಗಳು** – ಇದರಲ್ಲಿ ಈ ಸಾಧನಗಳ ತಯಾರಿಕೆಯಲ್ಲಿ ಅಗತ್ಯವಾದ ಉಪಕರಣಗಳು (ಹಾರ್ಡ್‌ವೇರ್), ಸಾಫ್ಟ್‌ವೇರ್ ಮತ್ತು ಫೋನ್-ಸಂಬಂಧಿ ಉತ್ಪನ್ನಗಳನ್ನು ತಯಾರಿಸುವ ಚಿಕ್ಕ ವರ್ಗದ ಮಹಿಳೆಯರು ಸೇರಿರುತ್ತಾರೆ.

ಈ ಕುರಿತು ಚಿಂತನೆ ಮಾಡಿದಾಗ, ನಮ್ಮ ಕಣ್ಣ ಮುಂದೆ ಬರುವುದು ಒಂದು ದೊಡ್ಡ ಪ್ರಮಾಣದ ಕಾರ್ಖಾನೆಯಲ್ಲಿ ಕಂಪ್ಯೂಟರ್ ಚಿಪ್‌ಗಳನ್ನು ಅಥವಾ ಬಿಡಿಭಾಗಗಳನ್ನು ತಯಾರಿಸುತ್ತಿರುವ ಶೋಷಣೆಗೊಳಗಾದ ಬಡ ಮಹಿಳೆಯರು. ಕೇರಳ ರಾಜ್ಯದ ಕುಡುಂಬಶ್ರೀ ಸಂಸ್ಥೆ, ಐ.ಸಿ.ಟಿ.ಗಳನ್ನು ಉತ್ಪಾದಿಸುವ ಉದ್ಯಮದ ಬೇರೊಂದೇ ರೂಪವನ್ನು ನಮ್ಮೆದುರಿಗೆ ತೆರೆದಿಡುತ್ತದೆ. ಈ ಉದ್ಯಮಗಳಲ್ಲಿ ಮಹಿಳೆಯರು ತಯಾರಕರು ಮಾತ್ರವಲ್ಲದೆ, ತಾವು ಪ್ರಾರಂಭಿಸಿದ ಉದ್ಯಮದ ಒಡೆಯರೂ ಆಗಿರುತ್ತಾರೆ. ಉದ್ಯಮದ ನಿರ್ವಹಣೆಯ ಎಲ್ಲಾ ಜವಾಬ್ದಾರಿಯೂ ಅವರದೇ ಆಗಿರುತ್ತದೆ ಹಾಗೂ ಉದ್ಯಮವನ್ನು ಸುಸ್ಥಿರವಾಗಿರಿಸಲು ಅಗತ್ಯವಾದ ಎಲ್ಲಾ ಮುಖ್ಯ ನಿರ್ಧಾರಗಳು ಮತ್ತು ಆವಿಷ್ಕಾರಗಳನ್ನೂ ಅವರೇ ಕೈಗೊಳ್ಳುತ್ತಾರೆ.

ಮಹಿಳೆಯರಿಗೆ ಈ ಉದ್ಯಮದಿಂದಾಗುವ ಅನುಕೂಲವೆಂದರೆ, ತೀವ್ರ ಸ್ಪರ್ಧೆ ಇಲ್ಲದಿರುವುದರಿಂದ (ಉದ್ಯಮ ಸಣ್ಣ ಪಟ್ಟಣದಲ್ಲಿದ್ದ ಪಕ್ಷದಲ್ಲಿ) ಅಥವಾ ಮಾರುಕಟ್ಟೆಯಲ್ಲಿ ದೊರಕುವ ಬ್ರಾಂಡೆಡ್ ಉತ್ಪನ್ನಗಳಿಗಿಂತ ಕಡಿಮೆ ಬೆಲೆಯಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಿರುವುದರಿಂದ, ಉತ್ತಮ ಆದಾಯ ಪಡೆಯಬಹುದು. ಮಹಿಳಾ ಸಶಕ್ತತೆಯ ದೃಷ್ಟಿಯಿಂದ, ಈ ರೀತಿಯ ಉದ್ಯಮಗಳು ಬಹಳ ಪರಿಣಾಮಕಾರಿಯಾಗಿವೆ. ಏಕೆಂದರೆ ಈ ಉದ್ಯಮಗಳಿಂದ ಮಹಿಳೆಯರಿಗೆ ಗೌರವ ದೊರಕುತ್ತದೆ ಹಾಗೂ ಈ ರೀತಿಯ ಉದ್ಯೋಗಗಳು ಲಿಂಗತ್ವಕ್ಕೆ ಸಂಬಂಧಿಸಿದ ಏಕಪ್ರಕಾರದ ಪಾತ್ರಗಳನ್ನು ಬಲಹೀನಗೊಳಿಸುತ್ತವೆ. ಮಹಿಳೆಯರು ಇಲ್ಲಿ ಉದ್ಯೋಗಸ್ಥರು ಮಾತ್ರವಲ್ಲ, ಉತ್ಪನ್ನದ ಗುಣಮಟ್ಟ ಸುಧಾರಣೆ, ಗ್ರಾಹಕರ ವಿಸ್ತರಣೆ, ಉದ್ಯಮಕ್ಕೆ ಮರುಹೂಡಿಕೆ, ಹೆಚ್ಚಿನ ಅಗತ್ಯಗಳನ್ನು ಉದ್ದೇಶಿಸಲು ಉದ್ಯಮದ ವಿಸ್ತರಣೆಯೇ ಮೊದಲಾದ ಮುಖ್ಯ ನಿರ್ಧಾರಗಳನ್ನೂ ಮಾಡುತ್ತಾರೆ.

3. **ಐ.ಸಿ.ಟಿ.-ಆಧಾರಿತ ಸೇವಾ ಉದ್ಯಮಗಳು** – ಐ.ಸಿ.ಟಿ.ಗಳು ಅದರಲ್ಲಿಯೂ ಮುಖ್ಯವಾಗಿ ಕಂಪ್ಯೂಟರ್ ಮೂಲಕ ಮಹಿಳೆಯರು ಸೇವೆ ಒದಗಿಸುವ ಉದ್ಯಮಗಳು. ಇದರಲ್ಲಿ ಕಂಪ್ಯೂಟರ್‌ನಲ್ಲಿ ಟೈಪಿಂಗ್, ಡಿ.ಟಿ.ಪಿ., ಇತ್ಯಾದಿ ಸೇರಿವೆ. ಸಮುದಾಯದ ಅಗತ್ಯಗಳಿಗೆ ಸೂಕ್ತವಾಗಿ (ವಿವಾಹ, ನಾಮಕರಣ, ಹಬ್ಬ, ಜಾತ್ರೆ ಇತ್ಯಾದಿ) ಮತ್ತು ಸಮುದಾಯದ ಇತರ ಅಗತ್ಯಗಳಿಗೆ (ಪಡಿತರ ಚೀಟಿ, ಮತದಾರರ ಚೀಟಿ ಮಾಡಿಸಲು ಬೇಕಾದ ಛಾಯಾಚಿತ್ರಗಳು) ಮಹಿಳೆಯರು ಛಾಯಾಚಿತ್ರ ತೆಗೆಯುವುದು ಮತ್ತು ವಿಡಿಯೊ ಕ್ಯಾಮೆರಾ ಚಿತ್ರಣ ಕೂಡ ಸೇರಿವೆ. ಈ ಸೇವೆಗಳನ್ನು ಒದಗಿಸಲು ಮಹಿಳೆಯರು ಸ್ವಲ್ಪ ಮಟ್ಟಿಗೆ ಸಾಕ್ಷರರಾಗಿದ್ದು, ಈ ಸಾಧನಗಳನ್ನು ಬಳಸಲು ಬೇಕಾದ ತಾಂತ್ರಿಕ ಕೌಶಲ್ಯ ಹೊಂದಿರುವುದು ಅಗತ್ಯ. ಇಂತಹ ಉದ್ಯಮಗಳ ಕೆಲವು ಉದಾಹರಣೆಗಳೆಂದರೆ:

   ಎ) ಅಕ್ಷಯ, ಕೇರಳ

   ಬಿ) ಕುಡುಂಬಶ್ರೀ, ಕೇರಳ

   ಸಿ) ಟೆಲ್-ನೆಕ್, ಬಿಡದಿ, ಕರ್ನಾಟಕ

   ಡಿ) ಕುಪ್ಪಂ ಐ-ಕಮ್ಯುನಿಟಿ, ಆಂಧ್ರ ಪ್ರದೇಶ

ಈ ಉದ್ಯಮಗಳ ಲಾಭ ಸಮುದಾಯ ಮತ್ತು ಮಹಿಳೆಯರು ಇಬ್ಬರಿಗೂ ಲಭ್ಯವಾಗುತ್ತದೆ. ಇಲ್ಲಿ ಒದಗಿಸುವ ಸೇವೆಗಳು ಸಂಪೂರ್ಣ ಸಮುದಾಯಕ್ಕೆ ಅಗತ್ಯವಾಗಿರುತ್ತವೆ – ಶಾಲಾ ಮಕ್ಕಳಿಂದ ವೃದ್ಧರವರೆಗೆ ಎಲ್ಲರಿಗೂ ದಾಖಲೆ ಪತ್ರಗಳನ್ನು ಟೈಪಿಂಗ್ ಮಾಡಿಸಿಕೊಳ್ಳುವುದು, ಅವುಗಳನ್ನು ಅಚ್ಚು (ಪ್ರಿಂಟ್) ಹಾಕಿಸುವುದು, ಅರ್ಜಿಗಳನ್ನು ಒದಗಿಸಿ, ಭರ್ತಿ ಮಾಡಿ ಸಲ್ಲಿಸುವುದು, ನೆರಳಚ್ಚು ಪ್ರತಿಗಳನ್ನು ಮಾಡುವುದು, ದಾಖಲೆಗಳಿಗೆ ಬೇಕಾದ ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರಗಳನ್ನು ತೆಗೆಯುವುದು ಮತ್ತು ಕಂಪ್ಯೂಟರ್ ಬಳಕೆಯಲ್ಲಿ ತರಬೇತಿಯ ಅಗತ್ಯವಿದೆ. ಆದ್ದರಿಂದಲೇ, ಮಹಿಳಾ ಉದ್ಯಮಿಗಳು ಎರಡು ಪಟ್ಟು ಹೆಚ್ಚು ಕೆಲಸ ಮಾಡಿ, ಜನರಿಗೆ ಅಗತ್ಯವಿರುವ ಸೇವೆಗಳನ್ನು ಮತ್ತು ಮಾಹಿತಿಗಳನ್ನು ನಿಗದಿತ ಸಮಯದೊಳಗೆ ಒದಗಿಸಬೇಕು.

ಈ ಉದ್ಯಮಗಳ ಇನ್ನೊಂದು ದೊಡ್ಡ ಅನುಕೂಲತೆ ಎಂದರೆ ಇದರಲ್ಲಿ ಸ್ಪರ್ಧೆ ಬಹಳ ಕಡಿಮೆ. ಗ್ರಾಮಗಳಲ್ಲಿ ಈ ರೀತಿಯ ಸೇವೆಗಳನ್ನು ಪಡೆಯಲು ಹತ್ತಿರದ ಪಟ್ಟಣಕ್ಕೆ ಅಥವಾ ನಗರಕ್ಕೆ ಹೋಗಬೇಕಾಗುತ್ತದೆ. ಅಕ್ಕಪಕ್ಕದ ಗ್ರಾಮಗಳಲ್ಲೂ ಇವು ಅಷ್ಟಾಗಿ ಲಭ್ಯವಿರುವುದಿಲ್ಲ. ಈ ಅಗತ್ಯವಾದ ಸೇವೆಗಳಿಗೆ ಸಮಯದ ಮತ್ತು ಸಂಪನ್ಮೂಲದ ಹೂಡಿಕೆಗಳು ಬೇಕಾಗುವುದರಿಂದ ಗ್ರಾಮೀಣ ಜನತೆಯ ಬಹುಪಾಲು ಮಂದಿ ಈ ಸೇವೆಗಳನ್ನು ಪಡೆದುಕೊಳ್ಳಲು ಹೋಗುವುದೇ ಇಲ್ಲ.

4. **ಐ.ಸಿ.ಟಿ – ಆಧಾರಿತ ಸೇವೆ ಒದಗಿಸುವ ಉದ್ಯಮಗಳು** – ಸಾಮಾಜಿಕ ಅಭಿವೃದ್ಧಿ ಮತ್ತು ಸಶಕ್ತತೆಯ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ತಳಮಟ್ಟದ ಸಂಘಟನೆಗಳು ಐ.ಸಿ.ಟಿ.ಗಳನ್ನು ಬಳಸಿ ತಮ್ಮ ಕಾರ್ಯಚಟುವಟಿಕೆಗಳನ್ನು ಉತ್ತಮಗೊಳಿಸಿಕೊಂಡಿವೆ. ಇಂತಹ ಪ್ರಯತ್ನಗಳ ಕೆಲವು ಉದಾಹರಣೆಗಳೆಂದರೆ:

   ಎ) ಧಾನ್ ಫೌಂಡೇಶನ್, ಮಧುರೈ, ತಮಿಳು ನಾಡು

   ಬಿ) ಎಂ.ಎಸ್. ಸ್ವಾಮಿನಾಥನ್ ರಿಸರ್ಚ್ ಫೌಂಡೇಶನ್, ತಮಿಳು ನಾಡು

   ಸಿ) ಸಮೂಹ, ಕರ್ನಾಟಕ

   ಡಿ) ಮಾಹಿತಿ ಮಂಥನ, ಕರ್ನಾಟಕ

ಸಂಘಟನೆಗಳು ಟೆಲಿಕೇಂದ್ರ ಮತ್ತು ಕಿಯೋಸ್ಕ್‌ಗಳು, ಹಾಗೂ ವಿಡಿಯೋ ಮತ್ತು ರೇಡಿಯೋ ಕಾರ್ಯಕ್ರಮಗಳ ಮುಖಾಂತರ ಆರೋಗ್ಯ ಮತ್ತು ಶಿಕ್ಷಣ ಸೇವೆಗಳು, ಸೂಕ್ತ ಸ್ಥಳೀಯ ಕೃಷಿ ಮಾಹಿತಿ, ಹಾಗೂ ಸರ್ಕಾರದ ಯೋಜನೆಗಳ ಕುರಿತು ಜನರಿಗೆ ಮಾಹಿತಿ ನೀಡುತ್ತಿದ್ದಾರೆ. ಟೆಲಿಕೇಂದ್ರಗಳ ಆಪರೇಟರ್‌ಗಳು/ಚಿತ್ರ ತಯಾರಕರಾಗಿ ಸಂಘಟನೆಗಳಿಂದ ತರಬೇತಿ, ಬೆಂಬಲ ಪಡೆದು ಸಮುದಾಯಕ್ಕೆ ಸೇವೆ ಸಲ್ಲಿಸುತ್ತಿರುವವರು ಸ್ಥಳೀಯ ಮಹಿಳೆಯರೇ. ಈ ಕೆಲಸಕ್ಕೆ ಮಹಿಳೆಯರಿಗೆ ಸ್ಟೈಪಂಡ್/ಶಿಷ್ಯ ವೇತನ ಕೊಡಲಾಗುತ್ತದೆ. ಇದರ ಜೊತೆಗೆ ಅವರು ನೀಡುವ ಸೇವೆಗಳಿಗೆ ಪ್ರತಿಯಾಗಿ ಸಮುದಾಯದಿಂದ ಬರುವ ಆದಾಯವೂ ಇವರಿಗೆ ದೊರಕುತ್ತದೆ. ಮಹಿಳೆಯರು ಸಮುದಾಯಕ್ಕೆ ನೀಡುವ ಸೇವೆಗಳೊಂದಿಗೆ ಐ.ಸಿ.ಟಿ. ಉದ್ಯಮಗಳನ್ನೂ ನಡೆಸಬಹುದು. ಕಂಪ್ಯೂಟರ್ ಟೈಪಿಂಗ್, ಕಂಪ್ಯೂಟರ್ ತರಬೇತಿ, ಅರ್ಜಿಗಳನ್ನು ಕೊಡುವುದು ಮತ್ತು ಭರ್ತಿ ಮಾಡಿಕೊಡುವುದು ಇತ್ಯಾದಿ.

ಸಮುದಾಯಕ್ಕೆ ಸಂಬಂಧಿಸಿದಂತೆ, ಈ ಸೇವೆಗಳು ಅವರ ಹಕ್ಕು ಎಂದು ಪರಿಗಣಿಸಲ್ಪಟ್ಟಿರುವುದರಿಂದ ಅವರಿಗೆ ಇವು ಉಚಿತವಾಗಿ ದೊರಕುತ್ತವೆ. ಆದಾಗ್ಯೂ, ಇಲ್ಲಿ ಕೂಡ ಉಚಿತ ಸೇವೆಗಳು ಮತ್ತು ಶುಲ್ಕ-ಆಧಾರಿತ ಸೇವೆಗಳು ಎರಡೂ ಇರಬಹುದು. ಉದಾಹರಣೆಗೆ,

ಸರ್ಕಾರಿ ಮಾಹಿತಿಯನ್ನು ಉಚಿತವಾಗಿ ನೀಡಬಹುದು. ಆದರೆ ದಾಖಲೆಗಳ ಟೈಪಿಂಗ್ ಮತ್ತು ಅವುಗಳನ್ನು ಪ್ರಿಂಟ್ ಮಾಡಿ ಕೊಡುವುದಕ್ಕೆ ಸೂಕ್ತವಾದ ಹಣ ನೀಡಬೇಕಾಗುತ್ತದೆ. ಸಮುದಾಯದ ಒಬ್ಬ ವ್ಯಕ್ತಿ ಇವುಗಳನ್ನು ತಯಾರಿಸಲು ಹಾಕಬೇಕಾದ ಸಮಯ, ಶ್ರಮ ಮತ್ತು ಹಣದ ವೆಚ್ಚಕ್ಕೆ ಈ ಬೆಲೆ ಅನುಗುಣವಾಗಿರುತ್ತದೆ. ಆದುದರಿಂದ, ಐ.ಸಿ.ಟಿ.ಗಳ ಮೂಲಕ ಮಹಿಳೆಯರು ಸಮುದಾಯದ ಪ್ರಮುಖ ಅಗತ್ಯಗಳನ್ನು ಪೂರೈಸಬಹುದು. ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಮಹಿಳಾ ಉದ್ಯಮಿಗಳು ಈ ಸೇವೆಗಳನ್ನು ಒದಗಿಸುತ್ತಿದ್ದಾರೆ ಎಂದು ಸಮುದಾಯದವರು ಕೂಡ ಗುರುತಿಸುತ್ತಾರೆ.

## ದುರ್ಬಲ ವರ್ಗದ ಮಹಿಳಾ ಗುಂಪುಗಳಿಗೆ (ಸಂಘಟನೆಗಳಿಗೆ) ಐ.ಸಿ.ಟಿ–ಆಧಾರಿತ ಉದ್ಯಮಗಳು ಏಕೆ ಅಗತ್ಯವಾಗಿವೆ?

*''ಸ್ವಸಹಾಯ ಸಂಘಗಳ ಮಹಿಳೆಯರಲ್ಲಿ ಐ.ಸಿ.ಟಿ.ಗಳ ಕುರಿತು ಹೆಚ್ಚುತ್ತಿರುವ ಅರಿವಿನಿಂದ ಮಹಿಳೆಯರ ಮೆದುಳು ಅವರ ತಲೆಯ ಮೇಲಿದೆಯೇ ಹೊರತು, ಅವರ ಕಾಲಿನ ಕೆಳಗಿಲ್ಲ ಎಂದು ಜನರಿಗೆ ಅರಿವಾಗುತ್ತಿದೆ.''*[6]

ಹಿಂದಿನ ಉಪಭಾಗದಲ್ಲಿ ವಿವರಿಸಿದಂತೆ, ದುರ್ಬಲ ವರ್ಗದ ಮಹಿಳೆಯರಿಗೆ ಮತ್ತು ಸಮುದಾಯಕ್ಕೆ ಐ.ಸಿ.ಟಿ.–ಆಧಾರಿತ ಉದ್ಯಮದ ಚಟುವಟಿಕೆಗಳಿಂದ ಹಲವು ರೀತಿಯ ಅನುಕೂಲತೆಗಳಿವೆ ಎಂದು ಅರಿವಾಗಿದೆ. ಈ ಕಾರಣಗಳೇ ಸಾಕಷ್ಟು ಶಕ್ತವಾಗಿದ್ದರೂ ಕೂಡ, ದುರ್ಬಲ ಮಹಿಳೆಯರ ಸಂಘಟನೆಗಳು ತಮ್ಮ ಸಮುದಾಯದಲ್ಲಿ ಐ.ಸಿ.ಟಿ. – ಆಧಾರಿತ ಉದ್ಯಮಗಳ ಒಡೆತನ ಹೊಂದಿ, ನಿರ್ವಹಿಸಬೇಕು ಎನ್ನುವುದನ್ನು ಬೆಂಬಲಿಸಲು ಹಾಗೂ ಈ ಸಂಘಟನೆಗಳು ಮತ್ತು ಬೆಂಬಲಿಸುವ ಸಂಸ್ಥೆಗಳು ತಮ್ಮ ಸಶಕ್ತತೆ/ಸಬಲೀಕರಣದ ಗುರಿಯನ್ನು ಪರಿಣಾಮಕಾರಿಯಾಗಿ ಮುಟ್ಟಲು ಇತರ ಉದ್ಯಮಗಳ (ಟೈಲರಿಂಗ್, ಮೋಂಬತ್ತಿ ತಯಾರಿಕೆ ಇತ್ಯಾದಿ) ಬದಲಿಗೆ ಐ.ಸಿ.ಟಿ. ಉದ್ಯಮಗಳನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡಿಕೊಳ್ಳಬೇಕು ಎನ್ನುವುದಕ್ಕೆ ಇನ್ನೂ ಬಲವಾದ ಕಾರಣಗಳಿವೆ.

### *ಸಮುದಾಯದ ಇತರ ಸದಸ್ಯರಿಗೆ ಹೋಲಿಸಿದಾಗ, ದುರ್ಬಲ ವರ್ಗದ ಮಹಿಳೆಯರೇ ಐ.ಸಿ.ಟಿ. ಉದ್ಯಮಗಳ ಒಡೆತನ ಹೊಂದಿ, ನಿರ್ವಹಿಸುವುದು ಏಕೆ ಮುಖ್ಯ?*

ಈ ಹಿಂದಿನ ವಿಭಾಗದಲ್ಲಿ ಪಟ್ಟಿ ಮಾಡಿದ ಉದಾಹರಣೆಗಳಲ್ಲದೆ, ದಕ್ಷಿಣ ಭಾರತದ ಬಡ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಐ.ಸಿ.ಟಿ–ಆಧಾರಿತ ಉದ್ಯಮದ ಚಟುವಟಿಕೆಗಳನ್ನು ಪ್ರಾರಂಭಿಸಿದ ಅನೇಕ ಉದಾಹರಣೆಗಳಿವೆ. ಈ ಯೋಜನೆಗಳಲ್ಲಿ ಸಂಘಟನೆಗಳು ಸಮುದಾಯದ ಯಾವುದೇ ಒಂದು ನಿರ್ದಿಷ್ಟ ಗುಂಪನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡಿಕೊಂಡಿಲ್ಲ – ಅಂದರೆ ಕೆಲವು ಗುಂಪುಗಳ ಕಡೆಗೆ ಸಕಾರಾತ್ಮಕ ಪಕ್ಷಪಾತ ತೋರಿವೆ. ಇದರ ಅರ್ಥವೇನೆಂದರೆ, ತಮ್ಮ ಯೋಜನೆಯ ಯಶಸ್ಸು ಖಚಿತಪಡಿಸಿಕೊಳ್ಳಲು ಸಂಘಟನೆಗಳು ಸಮುದಾಯದಲ್ಲಿ ಈಗಾಗಲೇ ಐ.ಸಿ.ಟಿ. ಉದ್ಯಮವನ್ನು ನಿರ್ವಹಿಸುವ ಕೌಶಲ್ಯವುಳ್ಳ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡಿವೆ. ಹಲವು

6 ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯ ಮತ್ತು ಡಿ.ಐ.ಎಫ್.ಡಿ, ಯು.ಕೆ. ಅವರ ಬೆಂಬಲದಿಂದ ಐ.ಟಿ. ಫಾರ್ ಚೇಂಜ್ ಮಾರ್ಚ್ 2006 ರಲ್ಲಿ ಮೈಸೂರಿನಲ್ಲಿ ಆಯೋಜಿಸಿದ್ದ ''ಮಹಿಳೆಯರು ನಿರ್ವಹಿಸುವ ಐ.ಸಿ.ಟಿ. ಉದ್ಯಮಗಳು : ಅಭಿವೃದ್ಧಿಯಲ್ಲಿ ಉದ್ಯಮಶೀಲತೆ'' ಎಂಬ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಮಹಿಳಾ ಸಮಾಖ್ಯಾ ಕರ್ನಾಟಕ, ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಟಿ.ಎಸ್. ಸವಿತಾ ಕುಮಾರಿ ಅವರ ಹೇಳಿಕೆ.

ಯೋಜನೆಗಳಲ್ಲಿ, ಸಂಸ್ಥೆಗಳು ಉದ್ಯಮದಲ್ಲಿ ಬಂಡವಾಳ ಹಾಕಿ, ಅದರ ಜವಾಬ್ದಾರಿ ತೆಗೆದುಕೊಳ್ಳಬಲ್ಲ ಸಮುದಾಯದ ಯಾವುದೇ ವ್ಯಕ್ತಿಗೆ ಪ್ರಾಥಮಿಕ ತರಬೇತಿ ನೀಡಿತ್ತು. ಸ್ವಾಭಾವಿಕವಾಗಿಯೇ, ಆಪರೇಟರ್ ಮತ್ತು ಮ್ಯಾನೇಜರ್‌ಗಳೆಂದು ಆಯ್ಕೆಯಾದವರೆಲ್ಲರೂ 20-35 ವರ್ಷದೊಳಗಿನ ಗಂಡಸರಾಗಿದ್ದು, ಶಾಲೆ ಅಥವಾ ಕಾಲೇಜು ಶಿಕ್ಷಣ ಪಡೆದಿದ್ದು, ಸ್ವಲ್ಪ ಮಟ್ಟಿನ ತಾಂತ್ರಿಕ ಮತ್ತು ನಿರ್ವಹಣಾ ಅನುಭವ ಹೊಂದಿದ್ದರು. ಮಹಿಳೆಯರು, ಅದರಲ್ಲಿಯೂ ವಿಶೇಷವಾಗಿ, ದುರ್ಬಲವರ್ಗದ ಮತ್ತು ಕೆಳಜಾತಿಗೆ ಸೇರಿದ, ಸಾಕ್ಷರರಲ್ಲದ ಮಹಿಳೆಯರು ಸಂಸ್ಥೆಗಳು ನಿಗದಿಪಡಿಸಿದ ಅರ್ಹತೆಗಳನ್ನು ಹೊಂದಿರಲಿಲ್ಲವಾದ್ದರಿಂದ, ಕಿಯೋಸ್ಕ್ ನಡೆಸುವವರಾಗಿ, ಟೆಲಿಕೇಂದ್ರದ ಆಪರೇಟರ್‌ಗಳು, ವಿಡಿಯೋ ವರದಿಗಾರರಲ್ಲಿ ಇವರ ಸಂಖ್ಯೆ ಅತ್ಯಂತ ಕಡಿಮೆ ಮಟ್ಟದಲ್ಲಿದೆ.

ಲಿಂಗತ್ವದ ದೃಷ್ಟಿಯಿಂದ ನೋಡಿದರೆ, ಯೋಜನೆಯನ್ನು ರೂಪಿಸುವಾಗ ಆದ್ಯತೆಯ ಮೇರೆಗೆ ಆಯ್ಕೆ ಮಾಡಿಕೊಳ್ಳದಿದ್ದಲ್ಲಿ, ಮಹಿಳೆಯರು ಮತ್ತು ದಲಿತರಿಗೆ ಅನ್ಯಾಯವಾಗುತ್ತದೆ. ಗ್ರಾಮಗಳಲ್ಲಿ, ಹಲವಾರು ದಶಕಗಳಿಂದ ತಮ್ಮ ಶ್ರೀಮಂತಿಕೆ, ಉತ್ತಮ ಆದಾಯ ಮಟ್ಟ, ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನು ಹೊಂದಿರುವ ವರ್ಗದ ಜನರನ್ನೇ ಯೋಜನೆಯಲ್ಲಿ ಆದ್ಯತೆ ಮೇರೆಗೆ ಆಯ್ಕೆ ಮಾಡಿ ಐ.ಸಿ.ಟಿ. ತಂದಿರುವ ಹೊಸ ಅವಕಾಶಗಳಲ್ಲಿ ಈ ಪ್ರಬಲ ವರ್ಗದವರಿಗೇ ಹೆಚ್ಚು ಅವಕಾಶ ನೀಡಿದಂತಾಗುತ್ತದೆ. (ಮುಂದಿನ ಅಧ್ಯಾಯದಲ್ಲಿ ಈ ಕುರಿತು ಹೆಚ್ಚು ವಿವರವಾಗಿ ಚರ್ಚೆ ಮಾಡಲಾಗಿದೆ.)

ಸಾಮಾಜಿಕ ಪರಿವರ್ತನೆ ಮತ್ತು ಅಧಿಕಾರ ಸಂಬಂಧಗಳಿಗೆ ಸವಾಲೊಡ್ಡುವ ಯತ್ನಗಳನ್ನು ಮಾಡುತ್ತಿರುವ ಸಂಘಟನೆಗಳು ದುರ್ಬಲವರ್ಗದ ಮಹಿಳೆಯರು ಐ.ಸಿ.ಟಿ ಉದ್ಯಮಗಳ ಒಡೆಯರು, ಆಪರೇಟರ್‌ಗಳು ಮತ್ತು ಮ್ಯಾನೇಜರ್‌ಗಳಾಗುವಂತೆ ಖಚಿತಪಡಿಸಿಕೊಳ್ಳಲು ಹಲವಾರು ಕಾರಣಗಳಿವೆ.

**ಭಾಗವಹಿಸುವಿಕೆ ಮತ್ತು ಸ್ಥಾನಮಾನ :** ಆಸ್ತಿಯಲ್ಲಿ ಮಹಿಳೆಯರಿಗಿರುವ ಅಸಮಾನತೆ, ಮಹಿಳೆಯರಿಗೆ ಐತಿಹಾಸಿಕವಾಗಿ ಭೂಮಿ, ಕಟ್ಟಡಗಳು ಮತ್ತು ಇತರ ಆಸ್ತಿಗಳಿಗೆ ಹಕ್ಕು ನಿರಾಕರಿಸಲ್ಪಟ್ಟಿರುವ ಹಿನ್ನೆಲೆಯಲ್ಲಿ, ಮಹಿಳೆಯರು ಟೆಲಿಕೇಂದ್ರ /ಕಿಯೋಸ್ಕ್‌ಗಳ ಒಡೆತನ ಹೊಂದಿ, ತಾಂತ್ರಿಕ ಸಾಧನಗಳಾದ ಕಂಪ್ಯೂಟರ್, ರೇಡಿಯೋ ಮತ್ತು ವಿಡಿಯೋ ಉಪಕರಣಗಳನ್ನು ಹೊಂದಿರುವುದರಿಂದ ಸಮುದಾಯದಲ್ಲಿ ಅವರ ಭಾಗವಹಿಸುವಿಕೆ ಮತ್ತು ಸ್ಥಾನಮಾನ ಹೆಚ್ಚುತ್ತದೆ. ಇದರ ಜೊತೆಗೆ, ಗ್ರಾಮೀಣ ಪ್ರದೇಶಗಳಲ್ಲಿ ಮಾಹಿತಿಯ ಕೊರತೆ ಇದ್ದು, ಇದು ಗ್ರಾಮೀಣ ಮಹಿಳೆಯರ ವಿಷಯದಲ್ಲಿ ಇನ್ನೂ ಹೆಚ್ಚು ತೀವ್ರವಾಗಿರುವುದರಿಂದ, ಐ.ಸಿ.ಟಿ. ಆಧಾರಿತ ಉದ್ಯಮಗಳ ಒಡೆತನ ಹೊಂದಿರುವ ಮಹಿಳೆಯರು ಸಮುದಾಯದಲ್ಲಿ ಮಾಹಿತಿಯ ಕೇಂದ್ರಬಿಂದುಗಳಾಗುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮಾಹಿತಿ ಮತ್ತು ಸಂವಹನ ಸೌಲಭ್ಯಗಳ ಕೊರತೆಯನ್ನು ಕಡಿಮೆಗೊಳಿಸುವುದರಲ್ಲಿ ಮಹಿಳೆಯರು ಮುಖ್ಯ ಪಾತ್ರ ವಹಿಸುವುದರಿಂದ ಅವರಿಗೆ ಹೆಚ್ಚಿನ ಭಾಗವಹಿಸುವಿಕೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಹೆಚ್ಚಿನ ಸಾಮಾಜಿಕ ಸ್ಥಾನಮಾನ ದೊರಕುತ್ತದೆ.[7]

---

7 ಇಲ್ಲಿ ಮತ್ತು ಪುಸ್ತಕದ ಇತರೆಡೆ ನೀಡಿರುವ ಅಭಿಪ್ರಾಯಗಳನ್ನು ದಕ್ಷಿಣ ಭಾರತದ ನಾಲ್ಕು ಯೋಜನೆಗಳಲ್ಲಿ ಮಹಿಳಾ ಐ.ಸಿ.ಟಿ. ಉದ್ಯಮಿಗಳೊಡನೆ ನಡೆಸಿದ ಸಂದರ್ಶನಗಳಿಂದ ತೆಗೆದುಕೊಳ್ಳಲಾಗಿದೆ : ಧಾನ್ ಫೌಂಡೇಶನ್, ಕುಡುಂಬಶ್ರೀ, ಅಕ್ಷಯ ಯೋಜನೆ ಮತ್ತು ಇ-ಸೇವಾ. ''ಎಕ್ಸ್‌ಪ್ಲೋರಿಂಗ್ ನ್ಯೂ ಹೊರೈಜನ್ಸ್ : ಸ್ಟೋರೀಸ್ ಆಫ್ ವಿಮೆನ್ ಅಂಡ್ ಕಂಪ್ಯುಟರ್ಸ್'' ಚಲನಚಿತ್ರಕ್ಕಾಗಿ ಈ ಸಂದರ್ಶನಗಳನ್ನು ನಡೆಸಲಾಗಿತ್ತು.

*''ಈಗ, ನಾನು ಹೋದಲ್ಲೆಲ್ಲಾ, ನನ್ನ ಹೆಸರು ಹಿಡಿದು ಯಾರೂ ಕರೆಯುವುದೇ ಇಲ್ಲ, ನನ್ನನ್ನು ಕಂಪ್ಯೂಟರ್ ಅಕ್ಕ ಎಂದು ಕರೆಯುತ್ತಾರೆ. ಗ್ರಾಮದಲ್ಲಿ ನನ್ನ ಪರಿಚಯ ಇಲ್ಲದವರು ಯಾರೂ ಇಲ್ಲ.''*

*''ತ್ವರಿತ ಮತ್ತು ಉತ್ತಮ ಸೇವೆಗಳನ್ನು ಸಮುದಾಯಕ್ಕೆ ಒದಗಿಸುವವರು ಎಂದೇ ನಮ್ಮನ್ನು ಗುರುತಿಸಲಾಗುತ್ತಿದೆ.''*

*''ನಮ್ಮಲ್ಲಿ ಬಂದರೆ ಅವರ ಕೆಲಸ ಸರಿಯಾಗಿ ಆಗುತ್ತದೆ ಎಂದು ಜನರಿಗೆ ಗೊತ್ತು. ಜನರು ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಸರ್ಕಾರಿ ಆಫೀಸುಗಳಿಗೆ ಹೋದಲ್ಲಿ, 5-6 ದಿನಗಳು ಅಥವಾ ಕೆಲವೊಮ್ಮೆ ಇನ್ನೂ ತಡವಾಗುತ್ತದೆ. ನಮ್ಮಲ್ಲಿ ಬಂದರೆ ಈ ಕೆಲಸಗಳು ಬರೀ ಒಂದು ದಿನದಲ್ಲಿ ಮುಗಿಯುತ್ತದೆ.''*

*''ನಾವು ಸರ್ಕಾರ ಮತ್ತು ಜನರ ನಡುವಿನ ಸೇತುವೆ ಇದ್ದಂತೆ. ಜನರು ತಾವಾಗಿಯೇ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವುದಿಲ್ಲ, ಏಕೆಂದರೆ ಅದರ ಕುರಿತು ಅವರಿಗೆ ಮಾಹಿತಿಯೂ ಇರುವುದಿಲ್ಲ. ನಾವು ಈ ಕೆಲಸಗಳನ್ನು ಮಾಡಿಕೊಟ್ಟರೆ ಅವರ ಸಮಯ ಮತ್ತು ದಿನಗೂಲಿ ಎರಡೂ ಉಳಿಯುತ್ತದೆ.''*

**ಸಂಧಾನದ ಅಧಿಕಾರ :** ಆಸ್ತಿಗಳ ಒಡೆತನದಿಂದ ಸಮುದಾಯದಲ್ಲಿ ಮಹಿಳೆಯರ ಸಂಧಾನದ ಅಧಿಕಾರ ಹೆಚ್ಚುತ್ತದೆ. ಮಹಿಳೆಯರಿಗೆ ಆಸ್ತಿಯ ಮೇಲೆ ಅಧಿಕಾರ, ನಿಯಂತ್ರಣ ಹೊಂದಲು ಸಾಧ್ಯವಿದ್ದಾಗ ಸಮುದಾಯದ ಇತರರಿಗೆ ಮಹಿಳೆಯರಿಗೆ ನ್ಯಾಯಬದ್ಧ ಹಕ್ಕಿದೆ ಎಂಬ ಭಾವನೆ ಉಂಟಾಗುತ್ತದೆ. ಈ ಅಧಿಕಾರದ ಮೂಲಕ ಮಹಿಳೆಯರು ಇತರ ಅವಕಾಶಗಳಿಗೂ ಹೋರಾಡಿ, ಇತರ ವಲಯಗಳಲ್ಲಿಯೂ ಸಶಕ್ತತೆಯನ್ನು ಪಡೆದುಕೊಳ್ಳಬಹುದು.

**ಮಹಿಳಾ-ಸ್ನೇಹಿ ಪರಿಸರ :** ಸಾರ್ವಜನಿಕ ಚಟುವಟಿಕೆಗಳಲ್ಲಿ ಮಹಿಳೆಯರಿಗೆ ಭಾಗವಹಿಸುವ ಅವಕಾಶ ಸೀಮಿತವಾಗಿದೆ ಹಾಗೂ ಅವರ ಚಲನವಲನಗಳ ಮೇಲೆ ನಿಯಂತ್ರಣ ಇದೆ. ಆದ್ದರಿಂದ ಒಬ್ಬ ಪುರುಷ ನಡೆಸುತ್ತಿರುವ ಟೆಲಿಕೇಂದ್ರಕ್ಕೆ ಪುರುಷರೇ ಹೆಚ್ಚಾಗಿ ಬರುವುದರಿಂದ ಮಹಿಳೆಗೆ ಇಲ್ಲಿ ಬರಲು ಅವಕಾಶ ಕಡಿಮೆ ಇರುತ್ತದೆ. ಆದರೆ, ಒಬ್ಬ ಮಹಿಳೆ ಟೆಲಿಕೇಂದ್ರ ನಡೆಸುತ್ತಿದ್ದರೆ, ವಯಸ್ಕ ಮತ್ತು ಸಣ್ಣವಯಸ್ಸಿನ ಮಹಿಳೆಯರಿಗೆ ಇಲ್ಲಿ ಬರಲು ಕಸಿವಿಸಿ ಎನ್ನಿಸುವುದಿಲ್ಲ. ಇದೇ ರೀತಿ ರೇಡಿಯೋ ಕಾರ್ಯಕ್ರಮಗಳಲ್ಲಿ ಕೂಡ ಮಹಿಳೆಯರು ಪ್ರಸಾರದ ನಿಯಂತ್ರಣ ಹೊಂದಿದ್ದಲ್ಲಿ, ಅವರಿಗೆ ಸಂಬಂಧಿಸಿದ ವಿಷಯಗಳು ಹೆಚ್ಚು ಪ್ರಸರಣವಾಗುತ್ತವೆ ಹಾಗೂ ಮಹಿಳೆಯರು ತಮ್ಮ ವಿಚಾರಗಳು, ಕಾಳಜಿಗಳು, ಭಾವನೆಗಳನ್ನು ಮುಕ್ತವಾಗಿ, ಯಾವುದೇ ಹಿಂಜರಿಕೆ ಇಲ್ಲದೆ ವ್ಯಕ್ತಪಡಿಸಲು ಸಾಧ್ಯವಿದೆ.

**ಮಹಿಳಾ-ಕೇಂದ್ರಿತ ವಿಷಯವಸ್ತು :** ಒಬ್ಬ ಪುರುಷ ಉದ್ಯಮಿ ಟೆಲಿಸೆಂಟರ್‌ನ ಒಡೆತನ ಹೊಂದಿದ್ದಲ್ಲಿ, ಕೇಂದ್ರಕ್ಕೆ ಹೆಚ್ಚಾಗಿ ಭೇಟಿ ನೀಡುವವರ, ಅಂದರೆ ಪುರುಷರ ಅಗತ್ಯಗಳಿಗೆ ಸೂಕ್ತವಾದ ಸೇವೆಗಳನ್ನು ಒದಗಿಸಿ, ಪುರುಷರು ಈ ಸೇವೆಗಳನ್ನು ಹೆಚ್ಚು ಹೆಚ್ಚಾಗಿ ಪಡೆಯುವಂತೆ ಮಾಡಲು ಯತ್ನಿಸುತ್ತಾನೆ. ಇಂತಹ ಸನ್ನಿವೇಶಗಳಲ್ಲಿ, ಸಮುದಾಯ ಅಭಿವೃದ್ಧಿ ಚಟುವಟಿಕೆಗಳಾದ ಆರೋಗ್ಯ, ಶಿಕ್ಷಣ, ಕೃಷಿ ಮತ್ತು ಜೀವನೋಪಾಯ, ಸರ್ಕಾರಿ ಕಛೇರಿಗಳೊಡನೆ ಸಂಪರ್ಕ, ಬಿಲ್ ಪಾವತಿ ಇತ್ಯಾದಿಗಳಿಗಿಂತ ಇಂಟರ್‌ನೆಟ್ ಬಳಕೆ, ಕಂಪ್ಯೂಟರ್ ಆಟಗಳು, ಮಾತುಕತೆ (ಚ್ಯಾಟ್), ಚಲನಚಿತ್ರಗಳು ಇತ್ಯಾದಿ ಮನೋರಂಜನಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ದೊರಕಬಹುದು. ಒಬ್ಬ ದಲಿತ ಅಥವಾ ಸ್ವಸಹಾಯ ಸಂಘದ ಮಹಿಳೆ ಕೇಂದ್ರ ನಡೆಸುತ್ತಿದ್ದಲ್ಲಿ, ಮನೋರಂಜನೆ ಅಥವಾ ವ್ಯವಹಾರ ಸೇವೆಗಳಿಗಿಂತ ಮಹಿಳಾ ಸಶಕ್ತತೆ ಮತ್ತು ಸಮುದಾಯದ ಅಗತ್ಯಗಳು ಆದ್ಯತೆಯಾಗುತ್ತವೆ. ಚಲನಚಿತ್ರ ತಯಾರಿಕೆಯಲ್ಲಿ ತರಬೇತಿ ಪಡೆದ ಮಹಿಳೆಯರು ಸಮುದಾಯದಲ್ಲಿ ವಿವಾಹ ಮತ್ತು ಇತರ ಸಮಾರಂಭಗಳ ವಿಡಿಯೋ ಮಾಡುವುದರ ಜೊತೆಗೆ, ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆ/ವಿಷಯಗಳಿಗೆ ಆದ್ಯತೆ ನೀಡುತ್ತಾರೆ.

**ಸಮುದಾಯ ಸೇವೆ :** ಟೆಲಿಸೆಂಟರ್ ಮತ್ತು ಕಿಯೋಸ್ಕ್‌ಗಳನ್ನು ನಡೆಸುತ್ತಿರುವ ಮಹಿಳೆಯರು ತಮಗೆ ಈ ಕೆಲಸದಿಂದ ಉತ್ತಮ ಆದಾಯ ದೊರಕುತ್ತಿದ್ದರೂ, ಸಮುದಾಯ ಸೇವೆ ತಮ್ಮ ಕಾರ್ಯದ ಕೇಂದ್ರ ಚಟುವಟಿಕೆ ಎನ್ನುತ್ತಾರೆ. ಅವರು ಲಾಭ ಪಡೆಯಲು ಮಾತ್ರ ಈ ಸೇವೆಗಳನ್ನು ಒದಗಿಸುವುದಿಲ್ಲ, ಹಣದ ಜೊತೆಗೆ ಈ ಸೇವೆಗಳು ಸರಿಯಾದ ವ್ಯಕ್ತಿ/ಗುಂಪಿಗೆ ತಲುಪುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಯಾರಿಗೆ ಹಣದ ಸಮಸ್ಯೆ ಇದೆಯೋ ಅವರಿಗೆ ಕಡಿಮೆ ವೆಚ್ಚದಲ್ಲಿ ಸೇವೆಗಳನ್ನು ಒದಗಿಸುವುದು; ಸಮುದಾಯದಲ್ಲಿನ ಕುಟುಂಬಗಳನ್ನು ಭೇಟಿ ಮಾಡುವುದು ಹಾಗೂ ಅವರು ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಸೇವೆಗಳನ್ನು ಪಡೆದುಕೊಳ್ಳುವುದಕ್ಕೆ ಉತ್ತೇಜನ ನೀಡುವುದು; ಸರ್ಕಾರ ಮತ್ತು ಜನರ ನಡುವೆ ಸಂಪರ್ಕಸೇತುವಾಗಿದ್ದು, ಸರ್ಕಾರದ ಸೇವೆಗಳು ಜನರಿಗೆ ಶೀಘ್ರವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ದೊರಕುವಂತೆ ಮಾಡುವುದು; ಗ್ರಾಮದ ಮಕ್ಕಳಿಗೆ ತರಬೇತಿ ನೀಡಿ ಅವರೂ ಈ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವುದು ಇತ್ಯಾದಿಗಳೂ ಸೇರಿವೆ. ಮಹಿಳಾ ಆಪರೇಟರ್‌ಗಳಿಗೆ ಇತರ ಮಹಿಳೆಯರು ಎದುರಿಸುವ ಸಮಯದ ಕಟ್ಟುಪಾಡುಗಳ ಅರಿವಿರುತ್ತದೆ. ಆದ್ದರಿಂದ ಮಹಿಳೆಯರು ಸೇವೆಗಳನ್ನು ಪಡೆಯಲು ಅನುಕೂಲಕರ ಸಮಯದ ಕೇಂದ್ರಗಳನ್ನು ತೆರೆಯುತ್ತಾರೆ. ಹಲವಾರು ಮಹಿಳಾ ಉದ್ಯಮಿಗಳು ಸಮುದಾಯ ಸೇವೆಗಳ ಅಂಶವನ್ನು ಈ ಹೇಳಿಕೆಗಳ ಮೂಲಕ ವ್ಯಕ್ತಪಡಿಸಿದ್ದಾರೆ.

> *''ನಿಜವಾದ ಕೆಲಸ ಕೇಂದ್ರದ ಹೊರಗೆ ಜನರೊಂದಿಗೆ ವ್ಯವಹರಿಸುವುದು. ಜನರಿಗೆ ನಾವು ಒದಗಿಸುವ ಸೇವೆಗಳ ಕುರಿತು ಮಾಹಿತಿ ನೀಡಬೇಕು. ನಾನು ಮನೆಮನೆಗೆ ಹೋಗಿ, ಜನರೊಂದಿಗೆ ನಮ್ಮ ಸೇವೆಗಳ ಕುರಿತು ಮಾತನಾಡುತ್ತೇನೆ.''*

> *''ಪುರುಷ ಆಪರೇಟರ್‌ಗಳಿಗೆ ಹೋಲಿಸಿ, ನಾವು ಯಾವ ರೀತಿ ಉತ್ತಮ ಎಂದು ನೀವು ಕೇಳಿದರೆ, ನಾವು ಮಾತನಾಡಲು ಒಂದೇ ಮನೆಗೆ ಹತ್ತು ಸಲ ಹೋಗಲೂ ಸಿದ್ಧ. ಆದರೆ ಪುರುಷರು ಹೀಗೆಲ್ಲಾ ಹೋಗುವುದಿಲ್ಲ. ಜನರು ನಮಗೆ ಬೈದರೂ, ನಾವು ಜನರನ್ನು ಭೇಟಿ ಮಾಡಿ ಮಾತನಾಡುತ್ತೇವೆ, ಪುರುಷರು ಹಾಗಲ್ಲ. ಅವರಿಗೆ ಇದು ಗೌರವದ ಪ್ರಶ್ನೆ.''*

> *''ಮಹಿಳೆಯರು ಡಾಕ್ಟರನ್ನು ಭೇಟಿ ಮಾಡಲು ಹಿಂಜರಿಯುತ್ತಾರೆ. ನಮ್ಮ ವಿಡಿಯೋ ಕಾನ್‌ಫರೆನ್ಸಿಂಗ್ ಸೌಲಭ್ಯದ ಮೂಲಕ ಅವರಿಗೆ ಕೇಂದ್ರಕ್ಕೆ ಬರುವುದು ಸುಲಭವಾಗಿದೆ. ಆರೋಗ್ಯ ಕೇಂದ್ರಕ್ಕೆ ಹೋಗಲು ಬೇಕಾಗುವ ಸಮಯ ಮತ್ತು ಶ್ರಮವನ್ನು ಇದು ಉಳಿಸುತ್ತದೆ.''*

> *''ಒಂದು ಸಲ, ಸ್ವಸಹಾಯ ಸಂಘದವರಿಗೆ ಸಾಲಕ್ಕೆ ಅರ್ಜಿಯನ್ನು ಮರುದಿನವೇ ಸಲ್ಲಿಸಲು ಕೆಲವು ದಾಖಲೆಗಳನ್ನು ತುರ್ತಾಗಿ ಪ್ರಿಂಟ್ ಮಾಡಬೇಕಾಗಿತ್ತು. ಖಾಸಗಿ ಟೈಪಿಂಗ್ ಕೇಂದ್ರಗಳು ಆಗಲೇ ಮುಚ್ಚಿದ್ದರಿಂದ ನನ್ನನ್ನು ಕೇಳಿಕೊಂಡರು. ನಾನು ಕೇಂದ್ರದಲ್ಲಿ ರಾತ್ರಿಯೆಲ್ಲಾ ಕುಳಿತು ದಾಖಲೆಗಳನ್ನು ತಯಾರಿಸಿದೆ. ಈ ದಾಖಲೆಗಳನ್ನು ಸಲ್ಲಿಸಿ, ಒಂದು ಡೈರಿ ಫಾರ್ಮ್ ಪ್ರಾರಂಭಿಸಲು ಅವರು ಸಾಲ ಪಡೆದುಕೊಂಡರು. ನಾನು ಮಾಡಿದ ಸಹಾಯಕ್ಕೆ ಅವರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.''*

**ಮಹಿಳೆಯರು ಮಹಿಳೆಯರಿಗೆ ಸಹಾಯ ಮಾಡುತ್ತಾರೆ :** ಸಮುದಾಯದ ಮಾಹಿತಿ ಮತ್ತು ಸಂವಹನದ ಅಂತರಗಳನ್ನು ಕಡಿಮೆಗೊಳಿಸಲು ಸೇತುವೆಯಂತೆ ಕಾರ್ಯನಿರ್ವಹಿಸುವುದರ ಜೊತೆಗೆ, ಐ.ಸಿ.ಟಿ. ಉದ್ಯಮಗಳನ್ನು ನಡೆಸುವ ಮಹಿಳೆಯರು ತಮ್ಮ ಸಮುದಾಯದ ಇತರ ಮಹಿಳೆಯರಿಗೆ ತರಬೇತಿ, ಉದ್ಯೋಗಗಳನ್ನು ನೀಡುವ ಮೂಲಕ ಹಾಗೂ ಸೇವೆಗಳನ್ನು ಒದಗಿಸುವ ಮೂಲಕ ಸಹಾಯ ಮಾಡುತ್ತಾರೆ. ಒಬ್ಬ ಪುರುಷ ಉದ್ಯಮಿ ಟೆಲಿಕೇಂದ್ರ/ಕಿಯೋಸ್ಕ್ ನಡೆಸುತ್ತಿದ್ದರೆ ತಲುಪುವ ಕುಟುಂಬಗಳಿಗಿಂತ ಹೆಚ್ಚು ಕುಟುಂಬಗಳನ್ನು ಮಹಿಳೆಯರು ತಲುಪಬಹುದು. ಮಹಿಳಾ ಆಪರೇಟರ್‌ಗಳು, ಚಲನಚಿತ್ರ ತಯಾರಕರು ಮತ್ತು ರೇಡಿಯೋಗಳಲ್ಲಿ ಕೆಲಸ ಮಾಡುವವರು

ಸಮಾಜದಲ್ಲಿ ಮಾದರಿಯಾಗುತ್ತಾರೆ. ಸಮುದಾಯದಲ್ಲಿ ಇತರ ಮಹಿಳೆಯರೂ ಸಂಪನ್ಮೂಲಗಳ ಒಡೆತನ ಹೊಂದಲು ಅವರಲ್ಲಿ ಆತ್ಮವಿಶ್ವಾಸ ಮೂಡಿಸುತ್ತಾರೆ.

*"ನಮ್ಮ ಉದ್ಯಮಗಳು ವಿಸ್ತರಿಸಿರುವುದಲ್ಲದೆ, ಬಡಕುಟುಂಬಗಳಿಗೆ ಸೇರಿದ ಸುಮಾರು 50 ಮಹಿಳೆಯರಿಗೆ ಉದ್ಯೋಗ ದೊರಕಿಸಿವೆ."*

**ತಂತ್ರಜ್ಞಾನ ಮತ್ತು ವಾಸ್ತವಿಕತೆ :** ಈಗಾಗಲೇ ಅಧಿಕಾರ ಹೊಂದಿರುವವರು/ಪ್ರಬಲರಾದವರು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮ ಸ್ಥರದಲ್ಲಿರುವವರು ತಂತ್ರಜ್ಞಾನಗಳನ್ನು ನಿಯಂತ್ರಿಸಿದಲ್ಲಿ, ಅವರು ತಮ್ಮದೇ ಗುಂಪಿಗೆ ಸೇವೆಗಳನ್ನು ಒದಗಿಸುತ್ತಾರೆಯೇ ಹೊರತು ಮೂಲೆಗುಂಪಾದ ಮತ್ತು ಬಡವರ್ಗದವರ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಬಡವರಲ್ಲಿ ಬಡವರು ಹಾಗೂ ದುರ್ಬಲ ವರ್ಗದವರು ಹೊಸ ತಂತ್ರಜ್ಞಾನಗಳನ್ನು ಹೊಂದಿ, ನಿಯಂತ್ರಿಸಿ, ಬಳಸಲು ಸಾಧ್ಯವಾದಲ್ಲಿ ಮಾತ್ರ ಈ ತಂತ್ರಜ್ಞಾನಗಳು ಅಭಿವೃದ್ಧಿಯ ಗುರಿಯನ್ನು ಸಾಧಿಸುತ್ತಿವೆ ಎಂದು ಪ್ರಮಾಣೀಕರಿಸಲು ಸಾಧ್ಯ; ಗ್ರಾಮೀಣ ಅಗತ್ಯಗಳಿಗೆ ಮತ್ತು ಮಹಿಳೆಯರ ಅಗತ್ಯಗಳಿಗೆ ಸೂಕ್ತವಾಗಿ ಇವುಗಳನ್ನು ಮಾರ್ಪಡಿಸಿ, ಮರುವಿನ್ಯಾಸಗೊಳಿಸಿದಲ್ಲಿ ಅವರ ಅಗತ್ಯಗಳನ್ನು ಇವು ಪೂರೈಸುತ್ತವೆ.

## *ಸಂಘಟನೆಗಳು ಇತರ ರೀತಿಯ ಉದ್ಯಮಗಳಿಗಿಂತ ಐ.ಸಿ.ಟಿ.–ಆಧಾರಿತ ಉದ್ಯಮಗಳನ್ನು ಆದ್ಯತೆಯ ಮೇರೆಗೆ ಏಕೆ ಆಯ್ದುಕೊಳ್ಳಬೇಕು?*

*"ಈ ಕ್ಷೇತ್ರದಲ್ಲಿ ಹೆಚ್ಚಿನ ತಂತ್ರಜ್ಞಾನ ಇದೆ ಮತ್ತು ನಮ್ಮ ಶಿಕ್ಷಣ ಮತ್ತು ಕೌಶಲ್ಯದ ಹಿನ್ನೆಲೆಗೆ ಇದು ಸೂಕ್ತವಾಗಿದೆ. ಐ.ಸಿ.ಟಿ. ಅಲ್ಲದ ಉದ್ಯಮಗಳಿಗೆ ಹೋಲಿಸಿದಾಗ, ಇದು ಮೇಲ್ಮಟ್ಟದ ಕೆಲಸ. ಇದು ಬೆಳೆಯುತ್ತಿದೆ ಹಾಗೂ ಇದಕ್ಕೆ ವಿಶ್ವದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇದೆ."*[8]

ಮಹಿಳೆಯರ ಸ್ವಸಹಾಯ ಸಂಘಗಳನ್ನು ಪ್ರಾರಂಭಿಸುತ್ತಿರುವ ಹಲವು ಸಂಘಟನೆಗಳಿಗೆ ಆರ್ಥಿಕ ಸಶಕ್ತತೆ ಕೇಂದ್ರ ವಿಷಯವಾಗಿದೆ. ಆರೋಗ್ಯ, ಶಿಕ್ಷಣ, ಸ್ಥಳೀಯ ಆಡಳಿತ, ಕಾನೂನು ಹಕ್ಕುಗಳು ಇತ್ಯಾದಿ ವಿಷಯಗಳಲ್ಲಿ ಅರಿವು ಹೆಚ್ಚಿಸುವ ಹಾಗೂ ತರಬೇತಿ ಕಾರ್ಯಕ್ರಮಗಳ ಜೊತೆಗೆ, ಸಂಘಟನೆಗಳು ಮಹಿಳೆಯರನ್ನು ಉಳಿತಾಯ ಮತ್ತು ಸಾಲದ ಚಟುವಟಿಕೆ ಕೈಗೊಳ್ಳಲು ಉತ್ತೇಜಿಸಿವೆ. ಸಂಘಗಳಲ್ಲಿನ ಉಳಿತಾಯವನ್ನೇ ಸಾಲವಾಗಿ ಕೊಡಲಾಗುತ್ತದೆ ಅಥವಾ ಸರ್ಕಾರದ ಮೂಲಗಳಿಂದಲೂ ಸಾಲ ಪಡೆದುಕೊಳ್ಳಲಾಗುತ್ತದೆ. ಇದರಲ್ಲಿ ಬಹುಪಾಲು ಸಾಲಗಳನ್ನು ಮೊದಲು ಪಡೆದ ಸಾಲ ತೀರಿಸಲು, ಕುಟುಂಬದ ತಿಂಗಳ ಖರ್ಚು ನಿಭಾಯಿಸಲು, ವರ್ಷದ ಶೈಕ್ಷಣಿಕ ವೆಚ್ಚಕ್ಕೆ ಅಥವಾ ಕೃಷಿ ಹೂಡಿಕೆಗೆ ತೆಗೆದುಕೊಳ್ಳಲಾಗುತ್ತದೆ. ಕೆಲವು ಸಾಲಗಳನ್ನು ಮಹಿಳೆಯರು ನಡೆಸುತ್ತಿರುವ ಉದ್ಯಮಗಳನ್ನು ವಿಸ್ತರಿಸಲು ತೆಗೆದುಕೊಳ್ಳಲಾಗುತ್ತದೆ. ಉದಾಹರಣೆಗೆ ಬುಟ್ಟಿ ಹೆಣೆಯುವುದು, ಪ್ರಾಣಿ ಸಾಕಾಣಿಕೆ, ಪಾತ್ರೆ/ಬಟ್ಟೆ ಮಾರಾಟ, ಆಹಾರ ಪದಾರ್ಥಗಳನ್ನು ತಯಾರಿಸಿ ಮಾರುವುದು ಇತ್ಯಾದಿ. ಈ ಸಾಲಗಳ ಒಂದು ಸಣ್ಣ ಅಂಶವನ್ನು ಮಾತ್ರ ಮಹಿಳೆಯರು ಹೊಸ ಉದ್ಯಮಗಳನ್ನು ಪ್ರಾರಂಭಿಸಲು ಬಳಸಲಾಗುತ್ತದೆ – ಮಹಿಳೆಯರಿಗೆ ಮೋಂಬತ್ತಿ ತಯಾರಿಕೆ, ಸೋಪು ಮತ್ತು ಡಿಟರ್ಜೆಂಟ್ ತಯಾರಿಕೆ, ಟೈಲರಿಂಗ್ ಮತ್ತು ಎಂಬ್ರಾಯಿಡರಿ, ಹಪ್ಪಳ ಮತ್ತು ಉಪ್ಪಿನಕಾಯಿ ತಯಾರಿಕೆ ಇತ್ಯಾದಿಗಳಲ್ಲಿ ತರಬೇತಿ ನೀಡಲಾಗುತ್ತದೆ. ಗ್ರಾಮೀಣ ಮಹಿಳೆಯರು ತಮ್ಮ ಉದ್ಯಮಗಳನ್ನು ಸುಸ್ಥಿರಗೊಳಿಸಲು ಈ ತರಬೇತಿಗಳ ಜೊತೆಗೆ ನಾಯಕತ್ವ ತರಬೇತಿ, ಮಾರಾಟ ಮತ್ತು ವ್ಯವಹಾರ ಕೌಶಲ್ಯದಲ್ಲಿ ಕೂಡ ತರಬೇತಿ ನೀಡಲಾಗುತ್ತದೆ.

---

8 ಎಸ್. ಮಂಜು, ಕುಡುಂಬಶ್ರೀ ಯೋಜನೆ, ಕೇರಳ ಇವರು ತಾವು ಇತರ ಆರು ಮಹಿಳೆಯರ ಜೊತೆಗೂಡಿ ಪ್ರಾರಂಭಿಸಿದ ಕಂಪ್ಯೂಟರ್ ಹಾರ್ಡ್‌ವೇರ್ ಜೋಡಣೆ ಘಟಕ ಕುರಿತು ಹೇಳಿದ ಮಾತುಗಳು.

ಇರುವ ಆಯ್ಕೆಗಳನ್ನು ಪರಿಗಣಿಸಿದಾಗ, ಐ.ಸಿ.ಟಿ – ಆಧಾರಿತ ಉದ್ಯಮಗಳನ್ನು ಪ್ರಾರಂಭಿಸುವಾಗ ಮಹಿಳೆಯರಿಗೆ ಇರುವ ಅನುಕೂಲತೆಗಳು ಯಾವುವು? ಕೆಲವು ಅನುಕೂಲತೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

**ಲಿಂಗತ್ವಕ್ಕೆ ಸಂಬಂಧಿಸಿದ ಏಕಪ್ರಕಾರಗಳನ್ನು ತೊಡೆದು ಹಾಕುವುದು :** ಸಾಮಾನ್ಯವಾಗಿ ಮಹಿಳೆಯರಿಗೆ ತರಬೇತಿ ನೀಡುವ ಚಟುವಟಿಕೆಗಳು ಹೆಂಗಸರ ಚಟುವಟಿಕೆಗಳಿಗೆ ಸಂಬಂಧಿಸಿದವೇ ಆಗಿವೆ. ಇದಕ್ಕೆ ಸ್ಪಷ್ಟ ಉದಾಹರಣೆಗಳೆಂದರೆ ಟೈಲರಿಂಗ್, ಆಹಾರ ಸಂಸ್ಕರಣೆ, ಸೋಪ್ ತಯಾರಿಕೆ ಇತ್ಯಾದಿ. ಇವುಗಳು ಮಹಿಳೆಯರಿಗೆ ಹೊಸ ಮಾರ್ಗಗಳನ್ನು ಒದಗಿಸಿದರೂ ಕೂಡ, ಮಹಿಳೆಯರು ಸಾಮಾನ್ಯವಾಗಿ ಮಾಡುವ ಕೆಲಸಗಳಾದ ಅಡಿಗೆ, ಆರೈಕೆ, ಸ್ವಚ್ಛತೆ ಮತ್ತು ಇತರ ಮನೆಗೆಲಸಗಳಿಗೆ ಸಂಬಂಧಿಸಿದ್ದು ಲಿಂಗ ಪಾತ್ರಗಳನ್ನೇ ಪುನ: ಭದ್ರಗೊಳಿಸುತ್ತವೆ. ಆದರೆ, ಐ.ಸಿ.ಟಿ ಆಧಾರಿತ ಉದ್ಯಮದ ಚಟುವಟಿಕೆಗಳಲ್ಲಿ ಇನ್ನೂ ಲಿಂಗ ಪಾತ್ರಗಳು ನಿರ್ಧಾರಿತವಾಗಿಲ್ಲ. ತಂತ್ರಜ್ಞಾನಗಳು ನಮ್ಮ ಜೀವನವನ್ನು ರೂಪಿಸುತ್ತಿದ್ದಂತೆಯೇ, ಮಹಿಳೆಯರು ಈ ಹೊಸ ಸಾಧನಗಳ ನಿಯಂತ್ರಣ ತೆಗೆದುಕೊಂಡು, ಇವುಗಳ ಲಾಭಗಳನ್ನು ಪಡೆದುಕೊಳ್ಳಬೇಕಾಗಿದೆ.

*''ಮೊದಲಿಗೆ ಮಹಿಳೆಯರು ಕಂಪ್ಯೂಟರ್ ಬಳಸಿದರೆ ಜನರು ಏನೆನ್ನುತ್ತಾರೋ ಎಂಬ ಕಾಳಜಿ ಇತ್ತು. ಕೆಲವರಂತೂ ಪದವೀಧರ ನಿರುದ್ಯೋಗಿಗಳಿರುವಾಗ, ಕೇವಲ ಹತ್ತನೇ ತರಗತಿ ಪಾಸ್ ಮಾಡಿದ ಈ ಮಹಿಳೆಯರನ್ನು ಯೋಜನೆಗೆ ಏಕೆ ಆಯ್ಕೆ ಮಾಡಿಕೊಂಡಿದ್ದಾರೆ? ಇವರು ಕೆಲಸ ಮಾಡಲು ಹೇಗೆ ಸಾಧ್ಯ? ಎಂದೆಲ್ಲ ತಮಾಷೆ ಮಾಡುತ್ತಿದ್ದರು. ಈ ಯೋಜನೆ ಯಶಸ್ವಿಯಾಗುವುದಿಲ್ಲ ಎಂದೆಲ್ಲ ಹೇಳಿದ್ದರು. ಆದರೆ ನಾವು ಮುಂದುವರಿದು ನಾವು ಸರಿ ಎಂದು ಸಾಧಿಸಿ ತೋರಿಸಿದೆವು. ಈಗ ಸಮುದಾಯದಲ್ಲಿ ನಮ್ಮ ಕೆಲಸವನ್ನು ಎಲ್ಲರೂ ಗುರುತಿಸುತ್ತಾರೆ.''*

*''ಈ ಕೇಂದ್ರ ಮುಚ್ಚಿಹೋಗುತ್ತದೆ ಎಂದು ಜನರೆಲ್ಲ ಹೇಳುತ್ತಿದ್ದರು. ಹಸಿದ ಹೊಟ್ಟೆಗಳಿರುವಾಗ ಇದೆಲ್ಲ ಯಾರಿಗೆ ಬೇಕು? ಎನ್ನುತ್ತಿದ್ದರು. ಆದರೆ ಈಗ, ಜನರಿಗೆ ತಮಗೆ ಯಾವುದೇ ಸರ್ಟಿಫಿಕೇಟ್ ಬೇಕಾದಾಗ ಅಥವಾ ಏನಾದರೂ ಕೆಲಸ ಇದ್ದಾಗ, ಯಾವುದೇ ಹೆಚ್ಚಿನ ಹಣ ನೀಡದೆ ಕೇಂದ್ರಕ್ಕೆ ಬಂದು ಸೇವೆಗಳನ್ನು ಪಡೆಯಬಹುದು.''*

**ವ್ಯವಹಾರಜ್ಞಾನ :** ಸಾಂಪ್ರದಾಯಿಕ ಉದ್ಯಮಗಳ ಮೂಲಕ ತಯಾರಾದ ಉತ್ಪನ್ನಗಳನ್ನು ಇತರ ಮಹಿಳೆಯರ ಗುಂಪುಗಳಿಗೆ ಮಾರಲಾಗುತ್ತದೆ ಅಥವಾ ಸ್ವಸಹಾಯ ಸಂಘಗಳ ನಡುವೆ ವಿನಿಮಯವಾಗುತ್ತವೆ. ಇದರಿಂದ ಸಮಸ್ಯೆಯೇ ಹೆಚ್ಚು. ಏಕೆಂದರೆ ಒಂದು ಸಣ್ಣ ಗ್ರಾಮೀಣ ಸಮುದಾಯದಲ್ಲಿನ ಮಹಿಳೆಯರಿಂದ ಬರುವ ಬೇಡಿಕೆ ಬಹಳ ಕಡಿಮೆ. ಇದಲ್ಲದೆ, ಸಾಂಪ್ರದಾಯಿಕ ಉದ್ಯಮಗಳಲ್ಲಿ ತಯಾರಿಸುವ ಸೋಪು, ಫಿನಾಯಿಲ್ ಇತ್ಯಾದಿಗಳನ್ನು ಮನೆಯೊಳಗೆ ಅಥವಾ ದೊಡ್ಡ ಪ್ರಮಾಣದ ಕಂಪೆನಿಗಳಲ್ಲಿ ಉತ್ಪಾದಿಸಲಾಗುತ್ತದೆ. ಯಾವುದೇ ಹೆಚ್ಚಿನ ವ್ಯವಹಾರ ಕೌಶಲ್ಯ ಮತ್ತು ಬಂಡವಾಳವಿಲ್ಲದೆ ಗ್ರಾಮೀಣ ಮಹಿಳೆಯರು ಸಣ್ಣ ಪ್ರಮಾಣದಲ್ಲಿ ಉತ್ಪಾದಿಸುವ ಈ ವಸ್ತುಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಮಾರಿ, ಲಾಭ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಕುಗ್ರಾಮಗಳಿಗೂ ಜಾಹೀರಾತು ಮತ್ತು ಮಾಧ್ಯಮಗಳ ಮೂಲಕ ಮಾರಾಟವಾಗುವ ವಸ್ತುಗಳ ಎದುರು ಸ್ವಸಹಾಯ ಸಂಘದ ಮಹಿಳೆಯರು ತಮ್ಮ ಉತ್ಪನ್ನಗಳನ್ನು ಖರೀದಿಸುವಂತೆ ಜನರ ಮನವೊಲಿಸುವುದು ಕಠಿಣವಾಗುತ್ತದೆ. ದೊಡ್ಡ ಪಟ್ಟಣಗಳಿಗೆ ಹೋಗಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದು ಹೊರಗೆ ಓಡಾಡಲು ಕಟ್ಟುಪಾಡುಗಳಿರುವ ಮಹಿಳೆಯರಿಗೆ ಸುಲಭಸಾಧ್ಯವಲ್ಲ. ಇವೆಲ್ಲ ಕಾರಣಗಳಿಂದ, ಉತ್ಪನ್ನಗಳು ಮಾರಾಟವಾಗದೆ ಹಾಗೆಯೇ ಉಳಿಯಬಹುದು, ಮಹಿಳೆಯರು ಕಡಿಮೆ ಬೆಲೆಗೆ, ಇರುವ ಸಮುದಾಯದಲ್ಲಿಯೇ ಲಾಭವಿಲ್ಲದೆ ಅವುಗಳನ್ನು ಮಾರಬೇಕಾಗವಹುದು ಅಥವಾ ಈ ಉದ್ಯಮವನ್ನು ಮುಚ್ಚಬೇಕಾಗಬಹುದು.

ಇನ್ನೊಂದು ಕಡೆ, ಐ.ಸಿ.ಟಿ. ಉದ್ಯಮಗಳನ್ನು ಪರಿಗಣಿಸಿದಾಗ, ಇಲ್ಲಿ ದೊರಕುವ ಸೇವೆಗಳು ಎಲ್ಲಾ ವಯೋಮಾನದ ಮತ್ತು ಗುಂಪಿನ ಜನರಿಗೆ ಒಂದಲ್ಲಾ ಒಂದು ರೀತಿಯಲ್ಲಿ ಉಪಯುಕ್ತವಾಗಿವೆ – ಶಾಲಾ ಮಕ್ಕಳು ಮತ್ತು ಯುವಕರಿಗೆ ಕಂಪ್ಯೂಟರ್ ತರಬೇತಿ, ಜನರಿಗೆ ತಮ್ಮ ಮಕ್ಕಳಿಗಾಗಿ ಬೇಕಾಗುವ ಪ್ರಮಾಣ ಪತ್ರಗಳು, ವೃದ್ಧರಿಗೆ ಪಿಂಚಣಿ ಮತ್ತು ಇತರ ಸೌಲಭ್ಯಗಳ ಮಾಹಿತಿ, ರೈತರಿಗೆ ಬೇಕಾದ ಕೃಷಿ ಹೂಡಿಕೆಗಳ ಬೆಲೆ ಅಥವಾ ರಸಗೊಬ್ಬರಗಳ ಕುರಿತು ಮಾಹಿತಿ, ಬೀಜಗಳ ವೈವಿಧ್ಯತೆ, ಹವಾಮಾನ ವರದಿ ಮತ್ತು ಎಲ್ಲಾ ವರ್ಗದ ಜನರಿಗೆ ಬೇಕಾಗುವ ಕೆಲವು ಸಾಮಾನ್ಯ ಸೇವೆಗಳಾದ ಫೋಟೋಕಾಪಿಗಳು (ಜೆರಾಕ್ಸ್ – ನೆರಳಚ್ಚು ಪ್ರತಿ), ದಾಖಲೆಗಳ ಟೈಪಿಂಗ್, ಪ್ರಿಂಟ್ ಮಾಡುವುದು, ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸುವುದು, ಬಿಲ್ ಪಾವತಿ, ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರಗಳು, ವಿಡಿಯೋ ಇತ್ಯಾದಿ ಒದಗಿಸಲಾಗುತ್ತದೆ. ಇ–ವಾಣಿಜ್ಯ ಆಧಾರಿತ ಚಟುವಟಿಕೆಗಳಾದರೆ, ಮಹಿಳೆಯರು ಗ್ರಾಮ ಸಮುದಾಯ ಅಥವಾ ಸುತ್ತಮುತ್ತಲಿನ ಊರುಗಳಲ್ಲದೆ ಇತರ ಮಾರುಕಟ್ಟೆಗಳನ್ನೂ ತಲುಪಬಹುದು. ಹೆಚ್ಚು ಜನರಿಂದ ಬೇಡಿಕೆ ಬರಬಹುದು.

ಮೊದಲೇ ತಿಳಿಸಿದಂತೆ ಇನ್ನೊಂದು ಅನುಕೂಲತೆಯೆಂದರೆ, ಗ್ರಾಮಗಳಲ್ಲಿ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಐ.ಸಿ.ಟಿ.–ಆಧಾರಿತ ಸೇವೆಗಳು ವಿರಳವಾಗಿರುವುದರಿಂದ, ಈ ಉದ್ಯಮದಲ್ಲಿ ಸ್ಪರ್ಧೆ ಹೆಚ್ಚಿರುವುದಿಲ್ಲ. ಖಾಸಗಿ ಐ.ಸಿ.ಟಿ – ಆಧಾರಿತ ಉದ್ಯಮಗಳಿದ್ದರೂ ಕೂಡ, ಗ್ರಾಮದ ಜನರು ಕಡಿಮೆ ವೆಚ್ಚದ ಕಾರಣದಿಂದ (ಲಾಭದ ಪ್ರಮಾಣ ಕಡಿಮೆ ಇರುತ್ತದೆ), ಉತ್ತಮ ಮಟ್ಟದ ಸೇವೆ (ತಕ್ಷಣವೇ ಅಥವಾ ಕೆಲದಿನಗಳಲ್ಲಿಯೇ ಕೆಲಸ ಮಾಡಿಕೊಡುತ್ತಾರೆ) ಹಾಗೂ ಹೆಚ್ಚು ಹೊಂದಾಣಿಕೆ ಇರುವುದರಿಂದ (ತಮ್ಮ ನಿಗದಿತ ಕೆಲಸಗಳಲ್ಲದೇ ಇತರ ಕೆಲಸವನ್ನೂ ಮಾಡುತ್ತಾರೆ), ಮಹಿಳೆಯರು ನಡೆಸುವ ಉದ್ಯಮವನ್ನು ಹೆಚ್ಚು ಇಷ್ಟ ಪಡುತ್ತಾರೆ.

(ಉದ್ಯಮಿಯ ಕುರಿತು ಪಂಚಾಯತ್ ಸದಸ್ಯರು ಹೇಳಿದ್ದು) *''ಮೊದಲು, ನಾವು 10–20 ಕಿಲೋಮೀಟರ್ ದೂರ ಇರುವ ಪಟ್ಟಣ ಅಥವಾ ನಗರಕ್ಕೆ ಹೋಗಬೇಕಾಗುತ್ತಿತ್ತು. ಈಗ, ನಾವು ಕೆಲಸವನ್ನು ಟೆಲಿಕೇಂದ್ರದ ಆಪರೇಟರ್‌ಗೆ ಕೊಡುತ್ತೇವೆ ಮತ್ತು ಅದನ್ನು ಆಕೆ ಕಡಿಮೆ ವೆಚ್ಚದಲ್ಲಿ ಬೇಗ ಮಾಡಿಕೊಡುತ್ತಾಳೆ. ಇದು ನಮಗೆ ಬಹಳ ಅನುಕೂಲಕರವಾಗಿದೆ.''*

> *''ಜನರು ಕಂಪ್ಯೂಟರ್ ತರಬೇತಿ ಅಥವಾ ಇತರ ಸೇವೆಗಳನ್ನು ಬೇರೆ ಕಡೆ ಪಡೆಯಲು ಹೋದಲ್ಲಿ, ಅವರು ಹೆಚ್ಚು ಹಣ ನೀಡಬೇಕಾಗುತ್ತದೆ. ನಮ್ಮ ಸೇವೆಗಳು ಈಗ ಗ್ರಾಮದಲ್ಲಿಯೇ ದೊರಕುತ್ತವೆ ಮತ್ತು ಅದೂ ಬಹಳ ಕಡಿಮೆ ವೆಚ್ಚದಲ್ಲಿ.''*
>
> *''ಕಂಪ್ಯೂಟರ್ ಭಾಗಗಳನ್ನು ನಾವೇ ತಂದು ಜೋಡಣೆ ಮಾಡುವುದರಿಂದ, ಕಡಿಮೆ ದರದಲ್ಲಿ ಇದನ್ನು ನೀಡಬಹುದು. ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಸೇವೆಗಳನ್ನು ನಾವು ಒದಗಿಸುತ್ತೇವೆ.''*
>
> *''ನಾವು ಕೂಡ ಹಣಕ್ಕಾಗಿಯೇ ಕೆಲಸ ಮಾಡಿಕೊಟ್ಟರೂ, ಬೇರೆ ಖಾಸಗಿ ಕೇಂದ್ರಗಳಿಗೆ ಹೋಲಿಸಿದರೆ, ಡಿ.ಟಿ.ಪಿ. ಮತ್ತು ತರಬೇತಿಗೆ ಅವರು ಹೆಚ್ಚು ಹಣ ಕೇಳುತ್ತಾರೆ. ನಮ್ಮ ದರಗಳು ಕಡಿಮೆ.''*
>
> *''ನಾವು ಗ್ರಾಹಕರ ಕೆಲಸಗಳನ್ನು ಹೇಳಿದ ಸಮಯಕ್ಕೆ ಮೊದಲೇ ಅವರಿಗೆ ಸರಿ ಎನ್ನಿಸುವಂತೆ ಮಾಡಿಕೊಡುತ್ತೇವೆ. ಅವರಿಗೆ ಸಂತೋಷವಾಗಿದ್ದರಿಂದ, ನಮ್ಮ ಆತ್ಮವಿಶ್ವಾಸವೂ ಬೆಳೆದಿದೆ.''*

**ವೈಯಕ್ತಿಕ ಲಾಭದ ಜೊತೆಗೆ ಸಮುದಾಯ ಸೇವೆ :** ಈ ಮೊದಲೇ ವಿವರಿಸಿದಂತೆ, ಐ.ಸಿ.ಟಿ.ಗಳನ್ನು ಬಳಸಿಕೊಂಡು ಮಹಿಳೆಯರು ಸಮುದಾಯಕ್ಕೆ ಅಗತ್ಯವಾದ ಸೇವೆಗಳನ್ನು ಒದಗಿಸಬಲ್ಲರು. ಐ.ಸಿ.ಟಿ ಉದ್ಯಮಗಳನ್ನು ನಡೆಸುವುದರಿಂದ ಅವರಿಗೆ ಆದಾಯ ಬಂದರೂ ಕೂಡ, ತನಗೆ ಉಪಯುಕ್ತವಾದ ಈ ಸೇವೆಗಳನ್ನು ಸಮುದಾಯ ಗುರುತಿಸುತ್ತದೆ. ಸಮುದಾಯದ ಒಬ್ಬ ವ್ಯಕ್ತಿ ಇದೇ ಸೇವೆಗಳನ್ನು

ಪಡೆಯಲು ಖರ್ಚು ಮಾಡಬೇಕಾದ ಸಮಯ, ಶ್ರಮ ಮತ್ತು ಹಣಕ್ಕೆ ಹೋಲಿಸಿದರೆ ಮಹಿಳೆಯರು ಈ ಸೇವೆಗಳಿಗೆ ಪಡೆದುಕೊಳ್ಳುವ ಹಣ ತೀರ ಕಡಿಮೆ. ಸಮುದಾಯದಲ್ಲಿ ಕೇಂದ್ರ ಪ್ರಾರಂಭಿಸಿದರೆ ಸಾಲದು, ಇದಕ್ಕೆ ಭೇಟಿ ನೀಡುವಂತೆ ಜನರ ಮನವೊಲಿಸಬೇಕೆಂದು ಮಹಿಳೆಯರಿಗೆ ಗೊತ್ತು. ಇವರು ಮನೆಮನೆಗೆ ಭೇಟಿ ನೀಡಿ, ಜನರೊಂದಿಗೆ ಮಾತನಾಡಿ, ಕೇಂದ್ರದಲ್ಲಿ ಒದಗಿಸುವ ಸೇವೆಗಳು ಹಾಗೂ ಅವುಗಳ ಲಾಭದ ಕುರಿತು ವಿವರಿಸಿ, ಸಮುದಾಯಕ್ಕೆ ಸೇವೆ ಸಲ್ಲಿಸಲು ಹೊಸ ಹೊಸ ಮಾರ್ಗಗಳನ್ನು ಕಂಡು ಹಿಡಿದುಕೊಳ್ಳುತ್ತಾರೆ. ಕೆಲವು ಸೇವೆಗಳಿಗೆ ನೀಡಬೇಕಾದ ಹಣ ಕೊಡಲು ಸಾಧ್ಯವಾಗದಿದ್ದರೆ ಅವರಿಗೆ ರಿಯಾಯಿತಿಯನ್ನೂ ನೀಡುತ್ತಾರೆ, ಇತರ ಮಹಿಳೆಯರು ಮತ್ತು ಯುವತಿಯರಿಗೆ ತರಬೇತಿ ನೀಡುತ್ತಾರೆ ಮತ್ತು ಕೆಲಸ ತೃಪ್ತಿಕರವಾಗಿ ನಡೆಯುತ್ತಿದೆ ಎಂದು ಖಚಿತಪಡಿಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಾರೆ.

> *''ಈ ರೀತಿಯ ಕೆಲಸದಿಂದ ನಮಗೆ ಮತ್ತು ಇತರರಿಗೂ ಅನುಕೂಲವಾಗಿದೆ.''*
>
> *''ಇದು ಬರಿ ಹಣ ಮಾಡುವ ಉದ್ಯಮವಲ್ಲ. ಸಮಾಜ ಸೇವೆಯೇ ಮುಖ್ಯ ಉದ್ದೇಶ.''*
>
> *''ನಾನು ಪ್ರತಿದಿನ ಹಲವಾರು ಗ್ರಾಮಗಳಿಗೆ ಹೋಗುತ್ತೇನೆ. ನಾನೇ ಅಲ್ಲಿಗೆ ಹೋದರೆ, ಒಬ್ಬ ವ್ಯಕ್ತಿ ಓಡಾಡಿದಂತಾಗುತ್ತದೆ. ಆದರೆ ಎಲ್ಲಾ ಗ್ರಾಮಸ್ಥರು ತಾಲ್ಲೂಕು ಕೇಂದ್ರಕ್ಕೆ ಬರಬೇಕಾದರೆ, ನೂರಾರು ಜನರು ಪ್ರಯಾಣ ಮಾಡಬೇಕಾಗುತ್ತದೆ.''*
>
> (ಮಹಿಳಾ ಉದ್ಯಮಿಯ ಕುರಿತು ಗ್ರಾಮಸ್ಥ) *''ಸಾಮಾನ್ಯವಾಗಿ ಆಫೀಸುಗಳು 9 ಅಥವಾ 10 ಗಂಟೆಗೆ ತೆರೆಯುತ್ತದೆ, ನಾವು ಆ ಸಮಯದಲ್ಲಿ ಕೆಲಸಗಳಿಗೆ ಹೋಗಿರುತ್ತೇವೆ. ಆದರೆ, ಈ ಮಹಿಳೆಯರು ನಮ್ಮ ಗ್ರಾಮಗಳಿಗೆ ಬೆಳಿಗ್ಗೆಯೇ ಬರುತ್ತಾರೆ. ಇದು ನಮಗೆ ತುಂಬಾ ಅನುಕೂಲಕರವಾಗಿದೆ.''*
>
> *''ಇದು ಹಣ-ಮಾಡುವುದಕ್ಕಿಂತ ಹೆಚ್ಚಿನದು. ಹಣವೇ ಗುರಿಯಾಗಿದ್ದಲ್ಲಿ, ಅದನ್ನು ಯಾವ ರೀತಿಯಾದರೂ ಗಳಿಸಬಹುದು. ನಮ್ಮ ಉದ್ದೇಶ ನಮ್ಮ ಕೆಲಸದ ಮೂಲಕ ಜನರ ಸೇವೆ ಮಾಡುವುದು.''*

**ಗೌರವ ಮತ್ತು ಮೌಲ್ಯ :** ಮೊದಲೇ ವಿವರಿಸಿದಂತೆ, ಐ.ಸಿ.ಟಿ.-ಆಧಾರಿತ ಉದ್ಯಮಗಳಲ್ಲಿ ಕೆಲಸ ಮಾಡುವ ಮಹಿಳೆಯರು, ಈ ಕೆಲಸ ತರುವ ಗೌರವ ಮತ್ತು ಪ್ರಶಂಸೆಯ ಕುರಿತು ಮಾತನಾಡಿದ್ದಾರೆ. ಈ ಕೆಲಸಗಳು ದೈಹಿಕ ಶ್ರಮದ ಕೆಲಸವಾಗಿರದೆ, 'ಜ್ಞಾನಕ್ಕೆ' ಸಂಬಂಧಿಸಿದ್ದಾಗಿವೆ. ಸರ್ಕಾರ, ಹೊರಗಿನ ಸಂಸ್ಥೆಗಳು, ಮತ್ತು ವೃತ್ತಿಪರರಾದ ಡಾಕ್ಟರುಗಳು, ಲಾಯರುಗಳೇ ಮೊದಲಾದವರೊಂದಿಗೆ ಸೇತುವೆಯಂತೆ ಕಾರ್ಯನಿರ್ವಹಿಸುವ ಮಾಹಿತಿಯ ಕೇಂದ್ರ ಬಿಂದು ಎಂದು ಪರಿಗಣಿಸಲಾಗುತ್ತದೆ. ಇದರಿಂದ ಮಹಿಳೆಯರಿಗೆ ಹೊರಗಿನ ಪ್ರಪಂಚದಲ್ಲಿ ಹೆಚ್ಚಿನ ಗೋಚರತೆ ದೊರೆತು ಬಡ, ಗ್ರಾಮೀಣ, ಅಲ್ಪ-ಸಾಕ್ಷರರಾದ ಮಹಿಳೆಯರು ಕೂಡ ಪರಿಣಾಮಕಾರಿ, ಕಡಿಮೆ ವೆಚ್ಚದ ಮತ್ತು ಉಪಯುಕ್ತ ಸೇವೆಗಳನ್ನು ಒದಗಿಸಬಲ್ಲ ನವೀನ ತಂತ್ರಜ್ಞಾನದ ನಿಯಂತ್ರಣ ಹೊಂದುವುದರಿಂದ ಅವರಿಗೆ ಹೊಸ ವ್ಯಕ್ತಿತ್ವ ದೊರೆಯುತ್ತದೆ. ಮಹಿಳೆಯರು ಬ್ಲಾಕ್ ಮತ್ತು ತಾಲೂಕು-ಮಟ್ಟದ ಸರ್ಕಾರಿ ಕಛೇರಿಗಳಿಗೆ ಹೋಗಿ, ತಜ್ಞರನ್ನು ಭೇಟಿ ಮಾಡಿ ಗ್ರಾಮದೊಂದಿಗೆ ಟೆಲಿ-ಸಂಪರ್ಕ ವ್ಯವಸ್ಥೆ ಮಾಡಿದಾಗ, ಸಮುದಾಯದಲ್ಲಿ ಮುಖ್ಯ ಸಮಾರಂಭಗಳ ವಿಡಿಯೋ ಚಿತ್ರೀಕರಣ ಮಾಡಿದಾಗ, ಸಮುದಾಯದ ಅಗತ್ಯಗಳ ಕುರಿತು ಮಾಹಿತಿ ಸಂಗ್ರಹಿಸಲು ಮನೆ-ಮನೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಾಗ, ರೇಡಿಯೋ ಚಾನೆಲ್‌ಗಳ ಮೂಲಕ ಕಾಣಿಸಿಕೊಂಡಾಗ, ಹೆಚ್ಚು ಜನರೊಂದಿಗೆ ಮಾತುಕತೆ ನಡೆಸಿದಾಗ, ಸಾಂಪ್ರದಾಯಿಕವಾಗಿ ಪುರುಷರಿಗೆ ಮೀಸಲು ಎಂದುಕೊಂಡ ಕ್ಷೇತ್ರಗಳಲ್ಲಿ ಮಹಿಳೆಯರು ಹಾಗೂ ಅವರ ಇರುವಿಕೆಯನ್ನು ಒಪ್ಪಿಕೊಳ್ಳುವುದು, ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಅವರ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳುವುದು ಹೆಚ್ಚಿ, ಅಸಮಾನ ಲಿಂಗತ್ವದ ರೂಢಿಗಳಿಗೆ ಸವಾಲೊಡ್ಡಿ, ಅವುಗಳನ್ನು ನಿಶ್ಶಕ್ತಗೊಳಿಸುತ್ತವೆ.

*''ಈ ಕೇಂದ್ರ ಸೇರಿದ 4 ತಿಂಗಳಲ್ಲೇ ನಾನು ಬದಲಾದೆ. ನಾನು ಬದಲಾಗಲೇಬೇಕಾಗಿತ್ತು, ಏಕೆಂದರೆ ನನ್ನ ಕೆಲಸದ ಅಂಗವಾಗಿ ಇತರರೊಡನೆ ಮಾತನಾಡಬೇಕಾಗುತ್ತಿತ್ತು. ಬೇರೆಯವರು ನನ್ನ ಬಗ್ಗೆ ಏನು ಬೇಕಾದರೂ ಅಂದುಕೊಳ್ಳಲಿ. ನಾನು ಏನು ಮಾಡಬೇಕೋ ಅದನ್ನು ಮಾಡಿಯೇ ಮಾಡುತ್ತೇನೆ. ಯಾವಾಗಲೂ ಧೈರ್ಯದಿಂದಿರಬೇಕೆಂದು ನಮ್ಮ ತಾಯಿ ನನಗೆ ಹೇಳುತ್ತಿದ್ದರು. ನನ್ನ ಕೆಲಸದಿಂದ ನಾನೀಗ ಧೈರ್ಯವಂತಳಾಗಿದ್ದೇನೆ.''*

*''ಈಗ ನನಗೆ ಆತ್ಮವಿಶ್ವಾಸ ಬಂದಿದೆ. ಇದೆಲ್ಲವೂ ನನ್ನ ಕೆಲಸದಿಂದ ಸಾಧ್ಯವಾಗಿದೆ.''*

*''ಈ ಕೆಲಸ ನನಗೆ ಹೊಸ ದಿಕ್ಕು ತೋರಿಸಿದೆ. ಈಗ ನಾನು ಮನೆಯಲ್ಲಿದ್ದಾಗಲೂ ಕೆಲಸದ ಕುರಿತೇ ಯೋಚಿಸುತ್ತೇನೆ!''*

*''ನಮಗೆ ಮೊದಲೆಲ್ಲ ಏನೂ ತಿಳಿದಿರಲಿಲ್ಲ. ನಮಗೆ ಕಂಪ್ಯೂಟರ್‌ಗಳ ವಿಷಯ ಏನೂ ಗೊತ್ತಿರಲಿಲ್ಲ. ಈಗ ನನಗೆ ಹಲವಾರು ವಿಷಯಗಳು ಗೊತ್ತು ಮತ್ತು ಇನ್ನೂ ಹಲವಾರು ವಿಷಯಗಳನ್ನು ಕಲಿಯಬೇಕಾಗಿದೆ.''*

*''ಒಂದು ಉದ್ಯಮ ಪ್ರಾರಂಭಿಸಲು ನಮಗೆ ನಾವು ಮಹಿಳೆಯರು ಎಂಬ ಹಿಂಜರಿಕೆ ಇತ್ತು. ಆದರೆ ಸಂಸ್ಥೆ ನಮಗೆ ಪೂರ್ಣ ಬೆಂಬಲ ಮತ್ತು ಪ್ರೋತ್ಸಾಹ ನೀಡಿತು. ಈಗ ನಾವು ಬದಲಾಗಿದ್ದೇವೆ.''*

*''ನಾವು ಏಕೆ ಸಂತೋಷವಾಗಿರಬಾರದು? ನಾವು ಗೃಹಿಣಿಯರಾಗಿದ್ದೆವು, ಸ್ವಸಹಾಯ ಸಂಘಗಳಲ್ಲಿ ಉಳಿತಾಯ ಪ್ರಾರಂಭಿಸಿದೆವು, ನಂತರ ನಮಗೆ ಕಂಪ್ಯೂಟರ್ ಕೇಂದ್ರಗಳನ್ನು ಪ್ರಾರಂಭಿಸಲು ತರಬೇತಿ ನೀಡಲಾಯಿತು! ನಾವು ಓದಿಲ್ಲ, ನಮಗೆ ಇಂಗ್ಲಿಷ್ ಮಾತನಾಡಲು ಬರುವುದಿಲ್ಲ. ಆದರೂ, ನಮ್ಮಲ್ಲಿನ ಶಕ್ತಿಯನ್ನು ಸಂಸ್ಥೆಯವರು ಗುರುತಿಸಿ, ನಮಗೆ ಎಲ್ಲಾ ವಿಷಯಗಳಲ್ಲಿ ಬೆಂಬಲ ನೀಡಿ, ನಾವು ಸ್ವತಂತ್ರರಾಗಿರಲು ಉತ್ತೇಜನ ನೀಡಿದರು. ಅವರು ನಮನ್ನು ಬೆಂಬಲಿಸುವುದನ್ನು ನಿಲ್ಲಿಸಿದರೂ ಕೂಡ, ನಾವು ಕಲಿತಿದ್ದನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ನಾವು ಮುಂದೆ ಹೋಗಲು ಅವರು ನಮಗೆ ಧೈರ್ಯ ನೀಡಿದ್ದಾರೆ.''*

**ಆಸ್ತಿ ಸ್ವತ್ತುಗಳ ವೃದ್ಧಿ :** ಈ ಕೆಳಗೆ ಪಟ್ಟಿ ಮಾಡಿರುವಂತೆ ಹಾಗೂ ಬಾಕ್ಸ್ 4 ರಲ್ಲಿ ತೋರಿಸಿರುವಂತೆ, ಐ.ಸಿ.ಟಿ.ಗಳು ಮಹಿಳೆಯರ ಆಸ್ತಿಯ ಒಡೆತನದ ವಿವಿಧ ಅಂಗಗಳನ್ನು ಬಲವರ್ಧನೆಗೊಳಿಸುತ್ತವೆ.[9]

* ಆರ್ಥಿಕ ಸ್ವತ್ತಿನಲ್ಲಿ ಹೆಚ್ಚಳ : ಐ.ಸಿ.ಟಿ. ಉದ್ಯಮಗಳಿಂದ ನಿಯತವಾಗಿ ಪಡೆದ ಆದಾಯದಿಂದ ಮಹಿಳೆಯರು ತಮ್ಮ ಕುಟುಂಬದ ಅಗತ್ಯಗಳಿಗೆ ಹಣ ನೀಡುತ್ತಾರೆ (ಆರೋಗ್ಯ, ಶಿಕ್ಷಣ ಅಥವಾ ಸಂಬಂಧಿಕರ ವಿವಾಹದ ಖರ್ಚು ಇತ್ಯಾದಿ) ಹಾಗೂ ನಿಯಮಿತವಾಗಿ ಉಳಿತಾಯವನ್ನು ಕೂಡ ಮಾಡುತ್ತಾರೆ.
* ಸ್ಥಿರಾಸ್ತಿಯಲ್ಲಿ ಹೆಚ್ಚಳ : ಐ.ಸಿ.ಟಿ ಉದ್ಯಮಗಳಿಂದ ಪಡೆದ ಆದಾಯವನ್ನು ಬಳಸಿಕೊಂಡು ಮಹಿಳೆಯರು ಭೂಮಿ, ಮನೆ, ಚಿನ್ನ ಅಥವಾ ಇತರ ಬೆಲೆಬಾಳುವ ವಸ್ತುಗಳನ್ನು ತಮ್ಮ ಕುಟುಂಬದ ಸಲುವಾಗಿ ಖರೀದಿಸುತ್ತಾರೆ. ಈ ಆದಾಯದಿಂದ ಅವರು ತಮ್ಮ ಉದ್ಯೋಗಕ್ಕೆ ಬೇಕಾಗುವ ಹಾರ್ಡ್‌ವೇರ್ ಉಪಕರಣ ಮತ್ತು ಸಾಫ್ಟ್‌ವೇರ್‌ಗಳನ್ನು ಕೂಡ ಖರೀದಿಸುತ್ತಾರೆ.

---

9 ರಿಚರ್ಡ್ ಡಾನ್‌ಕೋಂಬ್, ರಿಚರ್ಡ್ ಹೀಕ್ಸ್ ಮತ್ತು ಶಾರೋನ್ ಮೋರ್ಗನ್, 2005. ''ಮಹಿಳೆಯರ ಐ.ಸಿ.ಟಿ.–ಆಧಾರಿತ ಉದ್ಯಮಗಳು : ಎ ಹ್ಯಾಂಡ್‌ಬುಕ್ ಫಾರ್ ಏಜೆನ್ಸೀಸ್ ಇನ್ ಡೆವಲಪ್‌ಮೆಂಟ್'' ಇದರಿಂದ ತೆಗೆದುಕೊಳ್ಳಲಾಗಿದೆ.


- ಮಾನವ ಸಂಪನ್ಮೂಲ ಸ್ವತ್ತು : ಐ.ಸಿ.ಟಿ. ಉದ್ಯಮಗಳಲ್ಲಿರುವ ಮಹಿಳೆಯರು ವೈಯಕ್ತಿಕವಾಗಿ ಹಾಗೂ ವೃತ್ತಿಯಲ್ಲೂ ಅಭಿವೃದ್ಧಿ ಹೊಂದುತ್ತಾರೆ. ಇದರಲ್ಲಿ ವಿಶೇಷವಾಗಿ ತಾಂತ್ರಿಕ ಕೌಶಲ್ಯ ಅಭಿವೃದ್ಧಿ ಮತ್ತು ಆತ್ಮವಿಶ್ವಾಸದಲ್ಲಿ ಗಣನೀಯ ಸುಧಾರಣೆಯಾಗುತ್ತದೆ. ಬಹುತೇಕ ಮಹಿಳೆಯರು ನಿರ್ವಹಣೆ ಮತ್ತು ತೀರ್ಮಾನ ತೆಗೆದುಕೊಳ್ಳುವ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಾರೆ ಮತ್ತು ಕೆಲವರು ಉದ್ಯಮಶೀಲತೆ ಕೌಶಲ್ಯಗಳಾದ ಹಣದ ಹರಿವು, ಗ್ರಾಹಕ ಸೇವೆ ಇತ್ಯಾದಿಗಳಲ್ಲಿ ಪರಿಣಿತಿ ಪಡೆಯುತ್ತಾರೆ.

- ಸಾಮಾಜಿಕ ಆಸ್ತಿಗಳಲ್ಲಿ ಸುಧಾರಣೆ : ಐ.ಸಿ.ಟಿ. ಉದ್ಯಮಗಳಲ್ಲಿರುವ ಮಹಿಳೆಯರು ತಮ್ಮ ಸಾಮಾಜಿಕ ಸಂಬಂಧಗಳನ್ನು ಉತ್ತಮಗೊಳಿಸಿಕೊಂಡಿರುವುದನ್ನು ಗಮನಿಸಬಹುದು: ಗ್ರಾಹಕ ಮತ್ತು ಸರಬರಾಜುದಾರರ ಜೊತೆ ಸಂಪರ್ಕ (ವ್ಯಾಪಾರದ ಸಂಪರ್ಕ); ಸರ್ಕಾರಿ ಇಲಾಖೆಗಳು, ಬೆಂಬಲ ಸಂಸ್ಥೆಗಳು, ಬ್ಯಾಂಕುಗಳು, ಪಂಚಾಯಿತಿಗಳು ಇತ್ಯಾದಿಗಳ ಜೊತೆ ಸಂಪರ್ಕ (ಸಾಂಸ್ಥಿಕ ಸಂಪರ್ಕಗಳು); ಉದ್ಯಮದ ಸೇವೆಗಳನ್ನು ಬಳಸಿಕೊಂಡು, ಇದೇ ರೀತಿ ಉದ್ಯಮಗಳಲ್ಲಿರುವ ಇತರ ಮಹಿಳೆಯರು ಹಾಗೂ ಸಮುದಾಯ ಸದಸ್ಯರೊಂದಿಗೆ ಸಂಪರ್ಕ (ಸಾಮಾಜಿಕ ಮತ್ತು ಸಮುದಾಯ ಸಂಪರ್ಕ) ಹೊಂದಿರುತ್ತಾರೆ.

*''ಮಹಿಳೆಯರು ಮುಕ್ತವಾಗಿ ಓಡಾಡಲು ಸಾಧ್ಯವಿಲ್ಲದ ಪ್ರಸ್ತುತ ಸನ್ನಿವೇಶದಲ್ಲಿ, ಐ.ಸಿ.ಟಿ.ಗಳು ಅತಿ ಉಪಯುಕ್ತವಾಗಿವೆ. ಮಹಿಳೆಯರು ಮನೆಯಿಂದಲೇ ಉದ್ಯೋಗ ಮಾಡಿ ಮಾಹಿತಿ ಹಂಚಿಕೊಳ್ಳಲು ಹಾಗೂ ಆರ್ಥಿಕ ಸ್ವಾತಂತ್ರ ಗಳಿಸಲು ಇವು ಸಹಾಯ ಮಾಡಬಲ್ಲವು.''*

*''ಉದ್ಯಮಿಯಾಗಲು ಯಾವ ಗುಣಲಕ್ಷಣಗಳಿರಬೇಕು ಎಂದು ನೀವು ಕೇಳಿದರೆ... ಆಸಕ್ತಿ ಇರಬೇಕು, ಕಲಿಯುವ ಆಸೆ ಇರಬೇಕು, ಪ್ರಯತ್ನ ಮಾಡಿ ನೋಡಲು ಸಿದ್ಧರಿರಬೇಕು, ತಾಳ್ಮೆ, ಧೈರ್ಯ ಮತ್ತು ಚೆನ್ನಾಗಿ ಮಾತನಾಡಲು ಬರಬೇಕು ಎಂದು ನಾನು ಹೇಳುತ್ತೇನೆ.''*

**ಬಾಕ್ಸ್ 4: ಮಹಿಳೆಯರ ಆಸ್ತಿ ಒಡೆತನದ ವಿವಿಧ ಅಂಗಗಳನ್ನು ಐ.ಸಿ.ಟಿ.ಗಳು ಹೇಗೆ ಬಲವರ್ಧನೆಗೊಳಿಸುತ್ತವೆ?**



**ಗೌರವಾನ್ವಿತ ಕೆಲಸ :** ಕನಿಷ್ಠ ಆದಾಯ ಗಳಿಸಿಕೊಡುವ ಕೆಲವು ಸಾಂಪ್ರದಾಯಿಕ ಉದ್ಯಮ ಚಟುವಟಿಕೆಗಳಿಗೆ ಹೋಲಿಸಿದಾಗ, ಐ.ಸಿ.ಟಿ.ಗಳು ಉತ್ತಮಮಟ್ಟದ ಆದಾಯವನ್ನು ಮಹಿಳೆಗೆ ಒದಗಿಸುತ್ತವೆ. ಮಹಿಳಾ ಉದ್ಯಮಿಗಳು, ಪ್ರಾರಂಭದ ಹಂತದಲ್ಲಿ ಸರ್ಕಾರ ಅಥವಾ ಸ್ವಯಂಸೇವಾ ಸಂಸ್ಥೆಗಳಿಂದ ಬೆಂಬಲ ಪಡೆದುಕೊಂಡಾಗ, ವಿದ್ಯುಚ್ಛಕ್ತಿ, ಪ್ರಯಾಣ, ಪ್ರಿಂಟಿಂಗ್, ಪೇಪರ್ ಇತ್ಯಾದಿ ವೆಚ್ಚಗಳನ್ನು ಭರಿಸಿಕೊಳ್ಳಬಹುದು. ಹಾಗೂ ಕಂಪ್ಯೂಟರ್ ಮತ್ತು/ಅಥವಾ ಇತರ ಅವಶ್ಯಕತೆಗಳನ್ನು ಖರೀದಿಸಲು ಮಾಡಿದ ಸಾಲ ಮರುಪಾವತಿ ಮಾಡಬಹುದು. ಒಂದು ಐ.ಸಿ.ಟಿ. ಉದ್ಯಮದಲ್ಲಿ ಮಹಿಳೆಯರು ಒದಗಿಸುವ ಸೇವೆಗಳನ್ನು ಅವಲಂಬಿಸಿ, ಸುಮಾರು ರೂ. 1000/–ದಿಂದ ರೂ. 7000/– ದವರೆಗೆ ಆದಾಯ ಗಳಿಸುತ್ತಾರೆ. ಇದರ ಜೊತೆಗೆ, ಐ.ಸಿ.ಟಿ. ಉದ್ಯಮ ನಿರಂತರವಾಗಿ ಬದಲಾವಣೆ ಮತ್ತು ಸುಧಾರಣೆ ಕಾಣುತ್ತಿರುತ್ತದೆ. ಇದರಿಂದ ಮಹಿಳೆಯರಿಗೆ, ಅಂಗವಿಕಲ ಮಹಿಳೆಯರಿಗೆ ತಮ್ಮ ದಿನನಿತ್ಯದ ಏಕತಾನತೆಯ ಕೆಲಸ ಮತ್ತು ಸಾಂಪ್ರದಾಯಿಕ ಉದ್ಯಮಗಳಾದ ಆಹಾರ ಸಂಸ್ಕರಣೆ ಅಥವಾ ಎಂಬ್ರಾಯಿಡರಿಯ ಏಕತಾನತೆಯಿಂದ ಹೊರಬಂದು, ಹೊಸ ಆಸಕ್ತಿಪೂರ್ಣ ಕ್ಷೇತ್ರ ಪ್ರವೇಶಿಸಲು ಅವರಿಗೆ ಅವಕಾಶ ದೊರೆತಂತಾಗುತ್ತದೆ. ಮನೆಯ ನಾಲ್ಕು ಗೋಡೆಗಳ ಹೊರಗೆ ಬಂದು ಇತರ ಮಹಿಳೆಯರು ಮತ್ತು ಸಮುದಾಯದ ಸದಸ್ಯರೊಡನೆ ವ್ಯವಹರಿಸಲು ಅವಕಾಶವಾಗುತ್ತದೆ. ಇತರ ಜನರು ಮತ್ತು ಸಂಘಟನೆಗಳೊಡನೆ ಅವರು ಬೆಳೆಸುವ ಸಂಪರ್ಕಜಾಲದಿಂದ ಅವರ ಕೌಶಲ್ಯಗಳು ಮತ್ತು ಸಾಮರ್ಥ್ಯ ವೃದ್ಧಿಸುತ್ತದೆ ಹಾಗೂ ಅವರಿಗೆ ಅವಕಾಶಗಳು ಹೆಚ್ಚುತ್ತವೆ. ಈ ಉದ್ಯಮದ ಮೂಲಕ ಅವರಿಗೆ ಗೌರವ ದೊರೆಯುತ್ತದೆ, ಐ.ಸಿ.ಟಿ. ಉದ್ಯಮಗಳಲ್ಲಿ ಉದ್ಯೋಗ ಮಾಡುವ ಮಹಿಳೆಯರು ಆತ್ಮವಿಶ್ವಾಸ, ಗುರಿ ಸಾಧನೆಯ ಭಾವನೆ ಮತ್ತು ಗ್ರಾಮ ಸಮುದಾಯದೊಡನೆ ಸಕಾರಾತ್ಮಕ ವ್ಯಕ್ತಿತ್ವವನ್ನು ವರದಿ ಮಾಡಿದ್ದಾರೆ.

> *''ಐ.ಸಿ.ಟಿ.ಗಳಿಂದ ಮಹಿಳೆಯರಿಗೆ ಸಾಮಾಜಿಕ ಸ್ಥಾನಮಾನ ಮತ್ತು ಅವಕಾಶಗಳು ದೊರಕುತ್ತವೆ. ಸಮಾಜದಲ್ಲಿರುವ ಲಿಂಗತ್ವದ ಅಸಮಾನತೆಯನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಐ.ಸಿ.ಟಿ.ಗಳು ಮಹಿಳೆಯರು ಮತ್ತು ಪುರುಷರನ್ನು ಸಮಾನ ವೇದಿಕೆಗೆ ತರಲು ಉಪಯುಕ್ತವಾಗಿದೆ. ಹೊಸ ಕೌಶಲ್ಯವನ್ನು ಕಳಿತು ಮಹಿಳೆಯರು ಆತ್ಮವಿಶ್ವಾಸವನ್ನು ಗಳಿಸುತ್ತಾರೆ.''*

> *''ಸಮಾಜದಲ್ಲಿ ಐ.ಟಿ. ಉದ್ಯೋಗಗಳಿಗೆ ಗೌರವ ಇದೆ. ಸರ್ಕಾರದ ಎಲ್ಲಾ ಕಛೇರಿಗಳಲ್ಲಿ ಕಂಪ್ಯೂಟರೀಕರಣ ಆಗುತ್ತಿರುವುದರಿಂದ, ಹೆಚ್ಚು ಹೆಚ್ಚು ಅವಕಾಶಗಳುಂಟಾಗಿ, ಉತ್ತಮ ಆದಾಯ ಕೂಡ ದೊರಕುತ್ತಿದೆ. ಈಗ ಮನೆಯಿಂದ ಕೆಲಸ ಮಾಡುವ ಅವಕಾಶ ಕೂಡ ಇದೆ.''*

ಈ ಅಧ್ಯಾಯದಲ್ಲಿ, ಐ.ಸಿ.ಟಿ. ಉದ್ಯಮಗಳಿಗೆ ಇರುವ ಅವಕಾಶಗಳು ಮತ್ತು ಸ್ವಸಹಾಯ ಸಂಘದ ಮಹಿಳೆಯರಿಗೆ ಅವು ಯಾವ ರೀತಿಯ ಅನುಕೂಲತೆಗಳನ್ನು ಒದಗಿಸುತ್ತವೆ ಎಂಬ ಬಗ್ಗೆ ಮೇಲ್ನೋಟ ಒದಗಿಸಲಾಗಿದೆ. ಮಹಿಳಾ ಸಶಕ್ತತೆಯನ್ನು ಉತ್ತೇಜಿಸುವಲ್ಲಿ ಮತ್ತು ಸಮುದಾಯದಲ್ಲಿರುವ ಅಸಮಾನ ಲಿಂಗತ್ವ ರೂಢಿಗಳನ್ನು ಪ್ರಶ್ನಿಸುವಲ್ಲಿ ಐ.ಸಿ.ಟಿ. ಆಧಾರಿತ ಚಟುವಟಿಕೆಗಳು ಹೇಗೆ ಸಾಧನವಾಗಬಲ್ಲವು ಎಂದೂ ವಿವರಿಸಲಾಗಿದೆ. ಮುಂದಿನ ಅಧ್ಯಾಯದಲ್ಲಿ ಒಂದು ಸಂಘಟನೆ ಮಹಿಳೆಯರಿಗೆ ಐ.ಸಿ.ಟಿ–ಆಧಾರಿತ ಉದ್ಯಮಗಳನ್ನು ಬೆಂಬಲಿಸುವಾಗ ಪರಿಗಣಿಸಬೇಕಾದ ಕೆಲವು ಪ್ರಮುಖ ಅಂಶಗಳನ್ನು ಪರಿಶೀಲಿಸೋಣ.

## ಈ ಅಧ್ಯಾಯದಲ್ಲಿ ನಾವು ತಿಳಿದುಕೊಂಡ ವಿಷಯಗಳೇನು?

* ಉದ್ಯಮಶೀಲತೆ ಎಂದರೆ ಲಾಭದ ಉದ್ದೇಶದಿಂದ ಕೈಗೊಳ್ಳುವ ಯಾವುದೇ ವ್ಯಾಪಾರ ಚಟುವಟಿಕೆ ಎಂದು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳಲಾಗಿದೆ. ಆದರೂ, ಉದ್ಯಮದ ಅರ್ಥ/ವ್ಯಾಖ್ಯಾನ ಇದಕ್ಕಿಂತ ವಿಸ್ತಾರವಾಗಿದೆ. ಉದ್ಯಮದಲ್ಲಿ ಆವಿಷ್ಕಾರ, ಹೊಸ ಮಾರ್ಗಗಳು, ಸಮಸ್ಯೆ ಪರಿಹಾರ, ಅಪಾಯಗಳನ್ನು ಎದುರಿಸುವುದು – ಈ ಅಂಶಗಳೂ ಸೇರಿವೆ.
* ಪ್ರತಿ ಕ್ಷಣ ಬದಲಾಗುತ್ತಿರುವ ತಾಂತ್ರಿಕ ಜಗತ್ತಿನಲ್ಲಿ, ಐ.ಸಿ.ಟಿ.–ಆಧಾರಿತ ಉದ್ಯಮಗಳಲ್ಲಿ ಆವಿಷ್ಕಾರ ಮತ್ತು ಕ್ರಿಯಾತ್ಮಕತೆ ಅಗತ್ಯವಾಗಿವೆ.
* ಒಂದು ಸ್ಥಳೀಯ ಸಮುದಾಯದಲ್ಲಿ ದುರ್ಬಲ ವರ್ಗದ ಮಹಿಳೆಯರು ಐ.ಸಿ.ಟಿ.–ಆಧಾರಿತ ಉದ್ಯಮಗಳ ಒಡೆತನ ಹೊಂದಿ ಅವುಗಳನ್ನು ನಡೆಸುವುದು ಮುಖ್ಯವಾಗಿದೆ. ಏಕೆಂದರೆ ಇದರ ಮೂಲಕ ಮಹಿಳೆಯರಿಗೆ ಹೆಚ್ಚಿನ ಭಾಗವಹಿಸುವಿಕೆ, ಗೌರವ ಮತ್ತು ಇತರ ವಲಯಗಳಲ್ಲಿ ಕೂಡ ಪಾಲ್ಗೊಳ್ಳುವ ಅವಕಾಶ ಒದಗಿಸುತ್ತದೆ. ಮಹಿಳಾ–ಸ್ನೇಹಿ ಪರಿಸರವನ್ನು ಕಲ್ಪಿಸಿ, ದುರ್ಬಲ ವರ್ಗದ ಮಹಿಳೆಯರು ಇತರ ಮಹಿಳೆಯರಿಗೆ ಮತ್ತು ಇಡೀ ಸಮುದಾಯಕ್ಕೆ ಸಹಾಯ ಮಾಡುತ್ತಾರೆ.
* ಹಲವಾರು ವಿಧದ ಉದ್ಯಮ ಚಟುವಟಿಕೆಗಳಲ್ಲಿ, ಐ.ಸಿ.ಟಿ.–ಆಧಾರಿತ ಉದ್ಯಮಗಳು ಮಹಿಳಾ ಸಶಕ್ತತೆಯ ಉದ್ದೇಶಕ್ಕೆ ಹೆಚ್ಚು ಸೂಕ್ತವಾಗಿವೆ. ಇದು ಲಿಂಗತ್ವಕ್ಕೆ ಸಂಬಂಧಿಸಿದ ಏಕಪ್ರಕಾರದ ಪಾತ್ರಗಳನ್ನು ತೊಡೆದು, ಮಹಿಳೆಯರಿಗೆ ಗೌರವ ಕಲ್ಪಿಸುತ್ತದೆ, ಅವರ ಆಸ್ತಿ ಒಡೆತನವನ್ನು ಉತ್ತೇಜಿಸುತ್ತದೆ ಮತ್ತು ಸಮುದಾಯದ ಸೇವೆ ಮಾಡುತ್ತಲೇ ಮಹಿಳೆ ಒಂದು ಗೌರವಾನ್ವಿತ ಉದ್ಯೋಗದ ಮೂಲಕ ಸೂಕ್ತ ಆದಾಯ ಪಡೆದುಕೊಳ್ಳಬಹುದು.

## *ರಾಜಶ್ರೀ, ಟೆಲಿಸೆಂಟರ್ ಆಪರೇಟರ್, ಅಕ್ಷಯ ಯೋಜನೆ, ಮಲ್ಲಾಪುರಮ್, ಕೇರಳ: ಒಂದು ಪ್ರಕರಣಾಧ್ಯಯನ*

''ನಾನು ಬೇರೊಂದು ಯೋಜನೆಯಲ್ಲಿ ಪಡೆದ ತರಬೇತಿಯ ನಂತರ 2000 ಇಸವಿಯಲ್ಲಿ ಒಂದು ಟೆಲಿಸೆಂಟರ್ ಪ್ರಾರಂಭಿಸಿದ್ದೆ. 2003 ರಲ್ಲಿ ಅಕ್ಷಯ ಟೆಲಿಸೆಂಟರ್ ಯೋಜನೆಗೆ ಅರ್ಜಿಗಳನ್ನು ಕರೆಯಲಾಗಿತ್ತು. ನಾನು ಒಂದು ಕೇಂದ್ರ ನಡೆಸಲು ಆಯ್ಕೆಯಾದೆ. ಆಗಿನಿಂದ ನಾನು ಅಕ್ಷಯ ಯೋಜನೆಯೊಂದಿಗೆ ಕೆಲಸ ಮಾಡುತ್ತಿದ್ದೇನೆ.

ಸಂಸ್ಥೆ ನೀಡಿದ ಮೊದಲನೇ ತರಬೇತಿ ಉದ್ಯಮಶೀಲತೆ ಅಭಿವೃದ್ಧಿ ಕುರಿತಂತೆ. ಯೋಜನೆ ಮುಂದುವರಿದಂತೆ ಮತ್ತು ಇ-ಸಾಕ್ಷರತೆ ಇದರ ಪ್ರಮುಖ ಅಂಗವಾದಂತೆ, ನನಗೆ ಇದರಲ್ಲಿ ಕೂಡ ತರಬೇತಿ ದೊರಕಿತು. ನನ್ನ ಹತ್ತಿರ ಆಗಲೇ ಮೂರು ಕಂಪ್ಯೂಟರ್‌ಗಳಿದ್ದವು. ಅಕ್ಷಯ ಒಂದು ಹಾರ್ಡ್‌ವೇರ್ ಕಂಪೆನಿಯೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಮೂಲಕ ನನಗೆ ಕಡಿಮೆ ದರದಲ್ಲಿ ಇನ್ನೂ ಎರಡು ಕಂಪ್ಯೂಟರ್ ಕೊಳ್ಳಲು ಸಾಧ್ಯವಾಯಿತು. ಯೋಜನೆ ನನಗೆ ಇತರ ಮೂಲಭೂತ ಸೌಲಭ್ಯಗಳಾದ ವೆಬ್ ಕ್ಯಾಮೆರಾ ಇತ್ಯಾದಿಗಳನ್ನು ಖರೀದಿಸಲು ಸಾಲ ನೀಡುತ್ತಿತ್ತು. ಆದರೆ ನನ್ನ ಹತ್ತಿರ ಸ್ವಲ್ಪ ಹಣ ಇದ್ದದ್ದರಿಂದ ನಾನು ಸಾಲ ಪಡೆದುಕೊಳ್ಳಲಿಲ್ಲ.

ಬೆಳಿಗ್ಗೆ ಏಳು ಗಂಟೆಗೆ ಮೊದಲನೇ ಕ್ಲಾಸ್ ಪ್ರಾರಂಭಿಸುವ ಮೂಲಕ ನನ್ನ ದಿನಚರಿ ಶುರುವಾಗುತ್ತದೆ. ಅಕ್ಷಯ ಯೋಜನೆಯ ಇ-ಸಾಕ್ಷರತೆ ಯೋಜನೆಯ ಜೊತೆಗೆ ನಾನು ಸ್ನಾತಕೋತ್ತರ ಪದವಿ (ಪೋಸ್ಟ್ ಗ್ರಾಜುಯೇಟ್) ಕೋರ್ಸ್‌ಗಳನ್ನು ನೀಡುತ್ತೇನೆ. ಸರ್ಕಾರ ನನಗೆ ಕೋರ್ಸ್‌ನ ಸಾಮಗ್ರಿ ಒದಗಿಸುತ್ತದೆ ಮತ್ತು ಪಂಚಾಯಿತಿಯವರು ವಿದ್ಯಾರ್ಥಿಗಳಿಗೆ ಸಬ್ಸಿಡಿ ನೀಡಿದ ಹಣವನ್ನು ನನಗೆ ಕೊಡುತ್ತಾರೆ. ಈ ತರಗತಿಗಳನ್ನು ನಡೆಸಲು ಮತ್ತು ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸಲು ನನಗೆ ಸಹಾಯಕರಾಗಿ ಸಮೀಪದಲ್ಲಿಯೇ ಇರುವ ಮೂರು ಜನರನ್ನು ಶಿಕ್ಷಕರಾಗಿ ನೇಮಿಸಿಕೊಂಡಿದ್ದೇನೆ. ಕೇಂದ್ರದಲ್ಲಿ ಇಂಟರ್‌ನೆಟ್ ಬಳಕೆ, ಡಿ.ಟಿ.ಪಿ., ಬಿಲ್ ಪಾವತಿ ಮತ್ತು ಇತರ ಸೇವೆಗಳನ್ನೂ ನಾವು ಒದಗಿಸುತ್ತೇವೆ. ಅಕ್ಷಯ ನನಗೆ ಇವೆಲ್ಲ ವಿಷಯಗಳಲ್ಲಿ ತರಬೇತಿ ನೀಡಿದೆ ಮತ್ತು ಪ್ರತಿ ಸಲ ಹೊಸ ಕೋರ್ಸ್ ಪ್ರಾರಂಭಿಸಿದಾಗ, ಅದರಲ್ಲಿ ಕೂಡ ನನಗೆ ತರಬೇತಿ ನೀಡಲಾಗಿದೆ.

ಪ್ರತಿ ದಿನ ಕೇಂದ್ರಕ್ಕೆ ಇಂಟರ್‌ನೆಟ್ ಬಳಸಲು ಬರುವ ಗ್ರಾಮದ ಹಲವಾರು ಜನರೊಂದಿಗೆ ನಾನು ಮಾತುಕತೆಯಾಡುತ್ತೇನೆ. ಇ-ಸಾಕ್ಷರತೆ ಕೋರ್ಸ್‌ಗೆ ಬರುವವರಲ್ಲಿ ಮಹಿಳೆಯರೇ ಹೆಚ್ಚು. ಕೇಂದ್ರದಲ್ಲಿ ಅನೇಕ ಮಹಿಳೆಯರು ಕಲಿಯುತ್ತಿದ್ದಾರೆ. ಇದು ಬಹಳ ಒಳ್ಳೆಯದು. ಇಲ್ಲಿಗೆ ಬರುವವರು ಕೆಲವು ಕೆಲಸಗಳಿಗೆ ನನ್ನ ಸಹಾಯ ಪಡೆಯುತ್ತಾರೆ. ಇದರಿಂದ ನನ್ನ ಆತ್ಮವಿಶ್ವಾಸ ಹೆಚ್ಚಿದೆ. ನನ್ನ ಕಂಪ್ಯೂಟರ್ ಜ್ಞಾನ ಮತ್ತು ಕೇಂದ್ರ ನಡೆಸುವ ಅನುಭವದಿಂದ ನನಗೆ ಉದ್ಯೋಗಾವಕಾಶಗಳು ಹೆಚ್ಚಿವೆ. ಉದಾಹರಣೆಗೆ, ನಾನು ಒಂದು ಸರ್ಕಾರಿ ಶಾಲೆಯಲ್ಲಿ ಅರೆಕಾಲಿಕ ಶಿಕ್ಷಕಿಯಾಗಿ ಎರಡು ವರ್ಷ ಉದ್ಯೋಗ ಮಾಡಿದೆ. ಅಕ್ಷಯದ ಇ-ಸಾಕ್ಷರತೆ ತರಬೇತಿ ಕಾರ್ಯಕ್ರಮ ಪ್ರಾರಂಭಿಸಿದ ನಂತರವೇ ನನಗೆ ಈ ಅವಕಾಶ ದೊರಕಿತು.

ಸಮುದಾಯದ ಮಹಿಳೆಯರಿಗೆ ಆಗಿರುವ ಲಾಭಗಳ ಕುರಿತು ಹೇಳಬೇಕೆಂದರೆ, ಕೇಂದ್ರದ ಸೇವೆಗಳನ್ನು ಬಳಸುವವರಲ್ಲಿ 70% ಮಹಿಳೆಯರೇ ಎಂದರೆ ಇದು ಸ್ಪಷ್ಟವಾಗುತ್ತದೆ. ಈಗ ಪುರುಷರಿಗೂ ಇದರ ಉಪಯುಕ್ತತೆಯ ಅರಿವಾಗಿದೆ. ಪುರುಷರು ಮತ್ತು

ಮಹಿಳೆಯರು ಕೇಂದ್ರದ ಶೈಕ್ಷಣಿಕ ಮತ್ತು ಇತರ ಸೇವೆಗಳನ್ನು ಪಡೆಯಲು ಬರುತ್ತಾರೆ. ಈ ಯೋಜನೆಯಿಂದ ಮಹಿಳೆಯರಿಗೆ ಬಹಳ ಅನುಕೂಲವಾಗಿದೆ, ಏಕೆಂದರೆ ಯಾವುದಾದರೂ ಉದ್ಯೋಗಾವಕಾಶ ಇದ್ದರೆ ನಾನು ಅದನ್ನು ಅವರಿಗೆ ತಿಳಿಸುತ್ತೇನೆ. ಗ್ರಾಮದ ಮಹಿಳೆಯರು ಈ ಉದ್ಯೋಗಗಳನ್ನು ಮಾಡಲು ಪ್ರಾರಂಭಿಸಿದಾಗ ಅವರ ವ್ಯಕ್ತಿತ್ವವೇ ಬದಲಾಗುತ್ತದೆ ಮತ್ತು ಅವರಲ್ಲಿ ಹೆಚ್ಚಿನ ಆತ್ಮವಿಶ್ವಾಸ ಮೂಡುತ್ತದೆ.

ವೈಯಕ್ತಿಕ ಮಟ್ಟದಲ್ಲಿ, ನನಗೆ ಹೆಚ್ಚಿನ ಗೌರವ ದೊರಕಿದೆ. ನಾನು ನನ್ನ ಸಮುದಾಯಕ್ಕೆ ಸಹಾಯ ಮಾಡುತ್ತಿದ್ದೇನೆ ಎಂಬ ಭಾವನೆ ಇದೆ ಮತ್ತು ಇದರಿಂದ ನನಗೆ ಸಂತೋಷವಿದೆ. ಉದಾಹರಣೆಗೆ, ಸಲೀಂ ಎಂಬುವವರೊಬ್ಬರು ಹೆಚ್ಚು ಓದಿರಲಿಲ್ಲ, ಆದರೆ ಅವರಿಗೆ ವೈಜ್ಞಾನಿಕ ಅರಿವು ಇತ್ತು. ಅವರು ನನ್ನ ಬಳಿಗೆ ಬಂದು ಅವರ ವಿಚಾರಗಳನ್ನು ಹೊರತರಲು ಸಹಾಯ ಮಾಡುವಂತೆ ಕೇಳಿಕೊಂಡರು. ನಾನು ಅವರು ಹೇಳಿದ್ದನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿ, ಅದನ್ನು ರಾಷ್ಟ್ರಪತಿಯವರಿಗೆ ಕಳಿಸಿಕೊಟ್ಟೆ. ಅವರಿಗೆ ರಾಷ್ಟ್ರಪತಿಯವರಿಂದ ಇದಕ್ಕೆ ಉತ್ತರ ಬಂತು ಹಾಗೂ ಗುಜರಾತ್‌ನ ಒಂದು ಸಂಸ್ಥೆ ಇವರಿಗೆ ಪ್ರಾತ್ಯಕ್ಷಿಕೆ ಮಾಡುವಂತೆ ಆಹ್ವಾನ ನೀಡಿತು. ಜಿಲ್ಲಾ ಕಲೆಕ್ಟರ್ ಕೂಡ ಸಲೀಂ ಅವರ ಸೇತುವೆ ನಿರ್ಮಾಣದ ಪರ್ಯಾಯ ವಿಧಾನಗಳಿಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಈ ರೀತಿಯಲ್ಲಿ, ನನ್ನ ಕೌಶಲ್ಯ ಮತ್ತು ಸಂಪರ್ಕಗಳ ಮೂಲಕ ನಾನು ಸಮುದಾಯದ ಇತರರಿಗೆ ಸಹಾಯ ಮಾಡುತ್ತಿದ್ದೇನೆ. ಇದರ ಜೊತೆಗೆ, ನಾನು ಇತ್ತೀಚಿಗೆ ಆಯ್ಕೆಯಾಗಿ ಸೇರಿರುವ ಬಿ.ಎಡ್. ಕೋರ್ಸ್‌ನಲ್ಲಿ ಉತ್ತಮ ವಿದ್ಯಾರ್ಥಿನಿ ಎನಿಸಿಕೊಂಡಿದ್ದೇನೆ. ನಾನು ಹೋದಲ್ಲೆಲ್ಲ ನನಗೆ ಗೌರವ ದೊರೆಯುತ್ತದೆ. ಜನರು ತಾವೂ ಆದಾಯ ಗಳಿಸಲು ಅನುಕೂಲವಾಗುವಂತೆ, ಕಂಪ್ಯೂಟರ್ ಕಲಿಸಿಕೊಡುವಂತೆ ನನ್ನನ್ನು ಕೇಳಿಕೊಳ್ಳುತ್ತಾರೆ.

ಆದರೆ ನನಗೆ ನನ್ನದೇ ಆದ ಕೆಲವು ಸಮಸ್ಯೆಗಳಿವೆ. ನನಗೆ ಈಗಾಗಲೇ 30 ವರ್ಷ, ಇನ್ನೂ ಮದುವೆಯಾಗಿಲ್ಲ, ಈ ಬಗ್ಗೆ ನನಗೆ ಸ್ವಲ್ಪ ಬೇಸರವಿದೆ. ಯೋಜನೆಯ ರಚನೆ ಕುರಿತು ಹೇಳಬೇಕೆಂದರೆ, ಶಿಕ್ಷಕರ ಕೊರತೆಯೇ ಮುಖ್ಯ ಸಮಸ್ಯೆ. ನನಗೆ ಹೆಚ್ಚು ಸಂಬಳ ಕೊಡಲಾಗುವುದಿಲ್ಲ, ಆದ್ದರಿಂದ ನನ್ನಿಂದ ತರಬೇತಿ ಪಡೆದ ನಂತರ ಕೆಲಕಾಲ ಮಾತ್ರ ಇಲ್ಲಿ ಉದ್ಯೋಗ ಮಾಡುತ್ತಾರೆ, ನಂತರ ಉತ್ತಮ ವೇತನ ಸಿಗುವಲ್ಲಿಗೆ ಹೋಗುತ್ತಾರೆ. ಅಕ್ಷಯ ಯೋಜನೆಯು ಶಿಕ್ಷಕರ ವೇತನಕ್ಕೆ ಸ್ವಲ್ಪ ಕೊಡುಗೆ ನೀಡುವುದರ ಮೂಲಕ ಇದಕ್ಕೆ ಪರಿಹಾರ ಒದಗಿಸಬಹುದು. ನಮಗೆ ಹೆಚ್ಚು ತರಬೇತಿ ನೀಡುವ ಮೂಲಕವೂ ನಮಗೆ ಬೆಂಬಲ ನೀಡಬಹುದು.

ನಾನು ಈಗ ಬಿ.ಎಡ್. ಮಾಡುತ್ತಿರುವುದರಿಂದ, ನಮ್ಮ ತಂದೆ ಮತ್ತು ಅಣ್ಣ ಕೇಂದ್ರವನ್ನು ನಡೆಸುತ್ತಾರೆ. ಭವಿಷ್ಯದಲ್ಲಿ ಸರ್ಕಾರದ ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಯೋಜನೆಯಿದೆ. ಇದರಿಂದ ನಮ್ಮ ಕೇಂದ್ರದ ಮೂಲಕ ಹೆಚ್ಚು ಹೆಚ್ಚು ಸೇವೆಗಳನ್ನು ಒದಗಿಸಬಹುದು. ನಾನು ಈ ಕೇಂದ್ರದ ಕೆಲಸದಲ್ಲಿ ನನ್ನನ್ನು ತೊಡಗಿಸಿಕೊಂಡು, ಬಹಳ ಹೊತ್ತಿನವರೆಗೆ ಕೆಲಸ ಮಾಡುತ್ತಿದ್ದೆ. ಇದರಿಂದಲೇ ನನಗೆ ಮದುವೆಯಾಗಲು ಅವಕಾಶವಾಗಲಿಲ್ಲ. ಮುಂದೆ ಮದುವೆಯಾಗುವ ಭರವಸೆ ನನಗಿದೆ.''

# IV. ನಿರೀಕ್ಷಿಸಬಹುದಾದ ಅಪಾಯಗಳು, ಸವಾಲುಗಳು ಮತ್ತು ಅಡೆತಡೆಗಳು

### ಈ ಅಧ್ಯಾಯದಿಂದ ನನಗೇನು ಸಿಗುತ್ತದೆ?

- ಮಹಿಳೆಯರ ಐ.ಸಿ.ಟಿ. ಉದ್ಯಮಶೀಲತೆಯನ್ನು ಬೆಂಬಲಿಸಿ ಸ್ಥಾಪಿಸುವ ಸಮಯದಲ್ಲಿ ಸಂಸ್ಥೆಗಳು ಎದುರಿಸಬೇಕಾದ ಅಪಾಯಗಳು, ಸವಾಲುಗಳು ಮತ್ತು ಅಡೆತಡೆಗಳು ಯಾವುವು?
- ಐ.ಸಿ.ಟಿ ಪ್ರಯತ್ನಗಳಿಗಾಗಿ ಉದ್ಯಮಶೀಲತಾ ಮಾದರಿಗಳನ್ನು ಅಳವಡಿಸುವಲ್ಲಿ ಕಾರಣಗಳಾವುವು?
- ಐ.ಸಿ.ಟಿ. ಪ್ರಯತ್ನಕ್ಕೆ ಸಾಮಾಜಿಕ ಉದ್ಯಮಶೀಲತೆಯ ರೀತಿನೀತಿಗಳನ್ನು ಅಳವಡಿಸಲು ಕಾರಣಗಳೇನು?

ಈ ಕೈಪಿಡಿ ಇಲ್ಲಿಯವರೆಗೂ ಐ.ಸಿ.ಟಿ.ಯಿಂದ ಸಿಗಬಹುದಾದ ಪ್ರಯೋಜನಗಳನ್ನು ಎತ್ತಿ ಹಿಡಿಯುವ ಮತ್ತು ಮಹಿಳೆಯರ ಸಶಕ್ತತೆಗಾಗಿ ಶ್ರಮಿಸುತ್ತಿರುವ ಸಂಸ್ಥೆಗಳು ತಮ್ಮ ಗುರಿಯನ್ನು ಮತ್ತೂ ಪರಿಣಾಮಕಾರಿಯಾಗಿ, ವ್ಯಾಪಕವಾಗಿ ತಲುಪಲು ಐ.ಸಿ.ಟಿ. ಯಲ್ಲಿ ತೊಡಗಿಕೊಳ್ಳುವ ಅಗತ್ಯತೆಯನ್ನು ಒತ್ತಿ ಹೇಳಿದೆ. ಐ.ಸಿ.ಟಿ.ಗಳನ್ನು ಅಂತರ್ಗತಗೊಳಿಸುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿರುವ ಅವಧಿಯಲ್ಲೇ, ಈ ಪ್ರಯತ್ನದಲ್ಲಿ ಸಂಸ್ಥೆಗಳು ಎದುರಿಸಬಹುದಾದ ಸವಾಲುಗಳು ಮತ್ತು ಅವುಗಳನ್ನು ಹೇಗೆ ನಿವಾರಿಸಿಕೊಳ್ಳಬಹುದು ಎಂಬುದನ್ನೂ ಕೂಡಾ ಅರಿತಿರಬೇಕು. ಅವುಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

## ಐ.ಸಿ.ಟಿ. ಉದ್ಯಮವನ್ನು ಸ್ಥಾಪಿಸಿ ಬೆಂಬಲಿಸುವಾಗ ಗಮನಿಸಬೇಕಾದ ಅಂಶಗಳು

**ಲಿಂಗಾಧಾರಿತ ವಿಚಾರಗಳು** : ಉದ್ಯಮಶೀಲರಾಗಿರುವ ಮಹಿಳೆಯರು ಮೂರು ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಿರುತ್ತಾರೆ. ಕುಟುಂಬ, ಸಮುದಾಯ ಮತ್ತು ಅವರ ಉದ್ದಿಮೆ ಇವು ಅವರು ಉದ್ಯಮಶೀಲರಾಗಿ ನೀಡಬೇಕಾದ ಬದ್ಧತೆಯ ಮೇಲೆ ಪರಿಣಾಮ ಬೀರುತ್ತದೆ. ಮನೆಯಲ್ಲಿ ಗಂಡ ಮಕ್ಕಳನ್ನು ನೋಡಿಕೊಂಡು ಅವರಿಗಾಗಿ ಉರುವಲು, ನೀರು ಸಂಗ್ರಹಿಸಿ ತಂದು, ಅಡಿಗೆ ಮಾಡಿ, ಮನೆಯ ಸುತ್ತು ಕೆಲಸ ಮಾಡಬೇಕು, ಸಂಪಾದಿಸಬೇಕು. ಹೀಗಾಗಿ, ಪೂರ್ಣಾವಧಿ ಕೆಲಸ ಮಾಡಬೇಕೆಂದಿರುವುದು, ಸಂಜೆ ಹೆಚ್ಚಿನ ಕಾಲ ಕೆಲಸದಲ್ಲಿ ಉಳಿಯಬೇಕಿರುವುದು, ತುರ್ತು ಕರೆ ಬಂದಾಗ ಕೆಲಸಕ್ಕೆ ಹಾಜರಾಗುವುದು, ಜೊತೆಗೆ ಕೆಲಸಕ್ಕಾಗಿ ಹತ್ತಿರದ ಹಳ್ಳಿ, ಪಟ್ಟಣಗಳಿಗೆ ಹೋಗಿ ಬರಬೇಕಾದಲ್ಲಿ ಕಷ್ಟವಾಗುತ್ತದೆ. ಇದನ್ನು ದೀರ್ಘಾವಧಿಯಲ್ಲಿ ಗಮನಿಸಿದರೆ, ಮದುವೆ, ಮಕ್ಕಳು, ಸಂಸಾರವೆಂದೆಲ್ಲಾ ಹೊರೆ ಬಂದಾಗ, ತಮ್ಮ ಸಾಮಾನ್ಯ ನೆಲೆಯಿಂದ ಬೇರೆಡೆಗೆ ಸ್ಥಳಾಂತರಗೊಂಡಾಗ ಅಥವಾ ಮಹಿಳೆ ಉದ್ಯಮಶೀಲಳಾಗಿದ್ದರೂ ಕುಟುಂಬದ ಒತ್ತಡದಿಂದಾಗಿ, ಆಕೆ

ಹೊರಗಿನ ಕೆಲಸ ನಿಲ್ಲಿಸುವಂತಾಗುತ್ತದೆ. ಆರಂಭದಲ್ಲಿ, ಟೆಲಿ ಕೇಂದ್ರಗಳು ಅಥವಾ ಬೂತುಗಳಲ್ಲಿ ಪುರುಷ ಕೆಲಸಗಾರರಿರುವಾಗ ಇರುಸು ಮುರುಸಾಗುವುದು, ಚಲನ ಚಿತ್ರಗಳನ್ನು ಮಾಡುವಾಗ ಅಥವಾ ರೇಡಿಯೋಗಾಗಿ ಸಂದರ್ಶನಗಳನ್ನು ಮಾಡುವಾಗ ಪುರುಷರೂ ಇರುವುದು ಮತ್ತು ಕೆಲಸ ಮಾಡುತ್ತಿರುವ ಮಹಿಳೆಯರ 'ಚಾರಿತ್ರ್ಯ'ದ ಬಗ್ಗೆ ಸಮುದಾಯದವರಿಂದ ಬಿರು ಮಾತುಗಳನ್ನೂ ಕೇಳಬೇಕಾಗುತ್ತದೆ. ಐ.ಸಿ.ಟಿ. ಆಧಾರಿತ ಉದ್ದಿಮೆಗಳಲ್ಲಿ ಮಹಿಳೆಯರ ನಾಯಕತ್ವವನ್ನು ಬೆಳೆಸುವ ಉದ್ದೇಶ ಹೊಂದಿರುವ ಸಂಸ್ಥೆಗಳು ಮಹಿಳಾ ಉದ್ಯಮಿಗಳೊಂದಿಗೆ ಅವರ ನೈತಿಕ ಸ್ಥೈರ್ಯವನ್ನು ಬೆಳೆಸುವುದು ಮತ್ತು ಸಮುದಾಯಗಳೊಂದಿಗೆ ಮಹಿಳೆಯರೂ ದುಡಿಯುವ ವಾತಾವರಣವನ್ನು ಒಪ್ಪಿಕೊಳ್ಳುವಂತಹ ವಿಶಾಲ ಮನೋಭಾವವನ್ನು ಬೆಳೆಸಿ ಬೆಂಬಲಿಸಲು, ಮಹಿಳಾ ಉದ್ದಿಮೆದಾರರು ಮತ್ತು ಸಮುದಾಯದವರು ಇಬ್ಬರೊಡನೆಯೂ ಕೆಲಸ ಮಾಡಬೇಕು.

> *''ಮೊದಮೊದಲು ನನ್ನ ಗಂಡ ನನ್ನ ಕೆಲಸಗಳಿಗೆ ಒತ್ತಾಸೆಯಾಗಿರಲಿಲ್ಲ. ಆಗ ನಾನು ಬಹಳ ಹೊತ್ತು ಕೆಲಸ ಮಾಡಿದರೂ ನನ್ನ ಆದಾಯವೇನೂ ಅಷ್ಟಾಗಿರಲಿಲ್ಲ. ಅವರಿವರಿಂದ ಸಾಲ ತೆಗೆದುಕೊಳ್ಳುತ್ತಿದ್ದೆ. ಇದು ನನ್ನ ಗಂಡನಿಗೆ ಸಿಟ್ಟು ತರುತ್ತಿತ್ತು. ಧೂಳಿನಲ್ಲಿ ದಿನಪೂರ್ತಿ ಸಮಯದ ಪರಿವೆಯೇ ಇಲ್ಲದೆ ಕೆಲಸ ಮಾಡಬೇಕಾಗುತ್ತಿತ್ತು. ಆದರೆ ನಾನೀಗ ತಿಂಗಳಿಗೆ ರೂ. 5,000 ಸಂಪಾದಿಸುವುದಷ್ಟೇ ಅಲ್ಲ, ನನ್ನ ಕುಟುಂಬದ ನಿರ್ವಹಣೆಗೆ ನಾನೂ ಹಣ ನೀಡುತ್ತೇನೆ. ಈಗ ವಿರೋಧವೇ ಇಲ್ಲ. ಎಲ್ಲರೂ ಸಂತೋಷವಾಗಿದ್ದೇವೆ.''*
>
> *''ನಾನು ತರಬೇತಿಗೆ ಹೋಗಿ ಕಲಿಯಲಿಕ್ಕೆ ನಮ್ಮಮ್ಮ ಒಪ್ಪಿರಲಿಲ್ಲ. ತರಬೇತಿಗೆಂದು ಬೇರೆ ಊರಿಗೆ ಹೋಗುವುದು, ಯಾರು ಯಾರ ಜೊತೆಯಲ್ಲೋ ಹೊರಗೆ ಹೋಗುವುದು, ಕುಳಿತು ಮಾತನಾಡುವುದು, ಕೆಲಸ ಮಾಡುವುದು ಇದಾವುದೂ ಅವಳಿಗಿಷ್ಟವಿರಲಿಲ್ಲ.''*
>
> *''ನಾವು ಸಾಲ ತೆಗೆದುಕೊಂಡಿದ್ದೆವಲ್ಲಾ, ಹೀಗಾಗಿ ನನ್ನ ಗಂಡ ಮತ್ತು ಕುಟುಂಬದವರಾರೂ ಮೊದಲು ನನಗೆ ಬೆಂಬಲವಾಗಿರಲಿಲ್ಲ. ಒಂದೇ ವರ್ಷದಲ್ಲಿ ನಾವು ಸ್ವಲ್ಪ ಲಾಭ ಮಾಡಿ ತೋರಿಸುತ್ತಿದ್ದಂತೆ ಅವರೂ ಬೆನ್ನಿಗೆ ನಿಂತ್ರು. ಆದಾಯ ಜಾಸ್ತಿ ಆಯ್ತು, ಅದರ ಫಲ ನಮ್ಮ ಮಗಳು ಈಗ ಒಳ್ಳೆಯ ಶಾಲೆಗೆ ಹೋಗುತ್ತಿದ್ದಾಳೆ. ಅವಳ ಮನೆ ಪಾಠಕ್ಕೆ ಮತ್ತು ಚಿಕ್ಕ ಪುಟ್ಟ ಖರ್ಚಿಗೆ ನಾನು ಸಹಾಯ ಮಾಡುತ್ತೇನೆ.''*

## ಬಾಕ್ಸ್ 5: ಐ.ಸಿ.ಟಿ. ಉದ್ಯಮವನ್ನು ರಚಿಸುವಾಗ ಎದುರಿಸಬೇಕಾದ ಮಹಿಳಾ-ಕೇಂದ್ರಿತ ಪ್ರಶ್ನೆಗಳು

- ಲಿಂಗಾಧಾರಿತ ಕೆಲಸಗಳ ವಿಭಜನೆ : ಈಗ ಮಹಿಳೆಯರು ಎಂತಹ ಕೆಲಸಗಳಲ್ಲಿ ತೊಡಗಿದ್ದಾರೆ (ಯಾವ ಕೆಲಸಗಳನ್ನು ಮಾಡುವುದಿಲ್ಲ), ಮಹಿಳೆಯರು ಎಂತಹ ಕೆಲಸಗಳನ್ನು ಮಾಡಲು ಅಪೇಕ್ಷಿಸುತ್ತಾರೆ, ಅವರಿಗೆ ಅಂತಹ ಕೆಲಸಗಳೇಕೆ ಸಿಗುತ್ತಿಲ್ಲ?
- ಸಂಪನ್ಮೂಲಗಳ ಮೇಲೆ ಹತೋಟಿ ಮತ್ತು ಸಶಕ್ತತೆ : ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನವಿದೆಯೇ? (ಸಿಗುವ ಸೇವೆಗಳು, ಶುಲ್ಕ, ಕೆಲಸ ಮಾಡುವ ಅವಧಿ, ಇತ್ಯಾದಿ) ಸಂಸ್ಥೆಯ ಗುರಿ ಮತ್ತು ದಿಕ್ಕಿನ ಕಾರ್ಯತಂತ್ರ ಮತ್ತು ನೀತಿ ನಿಯಮ ರೂಪಿಸುವಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನವಿದೆಯೆ?
- ತಂತ್ರಜ್ಞಾನ ಲಭ್ಯತೆ : ಈ ಮಹಿಳೆಯರಿಗೆ ಎಂತಹ ಶಿಕ್ಷಣ/ತರಬೇತಿ ನೀಡಲಾಗಿದೆ, ಎಂತಹ ಶಿಕ್ಷಣ/ತರಬೇತಿ ಅವರಿಗೆ ಬೇಕು ಮತ್ತು ಅವರಿಗೆ ಎಂತಹ ಮಾಹಿತಿ ಲಭ್ಯವಿದೆ ಮತ್ತು ಬೇಕಿದೆ?

- ಲಿಂಗ ವಿಚಾರಗಳು ಮತ್ತು ತಂತ್ರಜ್ಞಾನ : ವಿವಿಧ ರೀತಿಯ ತಂತ್ರಜ್ಞಾನಗಳನ್ನು ಕುರಿತು ಮಹಿಳೆಯರಿಗೆ ಎಂತಹ ಅರಿವಿದೆ ಮತ್ತು ಅವರದನ್ನು ಹೇಗೆ ಬಳಸುತ್ತಾರೆ? ತಂತ್ರಜ್ಞಾನ, ಲಿಂಗಾಧಾರಿತ ವೃತ್ತಿ ಕುರಿತು ಮಹಿಳೆಯರಿಗಿರುವ ದೃಷ್ಟಿಕೋನವೇನು ಇತ್ಯಾದಿ?
- ಲಿಂಗಾಧಾರಿತ ಪಾತ್ರ : ತಂತ್ರಜ್ಞಾನ ಮತ್ತು ಮಹಿಳೆಯರ ತ್ರಿವಳಿ ಲಿಂಗಾಧಾರಿತ ಪಾತ್ರಗಳ ನಡುವೆ ಇರುವ ಸಂಬಂಧವೇನು? ಐ.ಸಿ.ಟಿ. ಉದ್ದಿಮೆಯಲ್ಲಿ ಮಹಿಳೆಯರು ಭಾಗವಹಿಸುವುದರಿಂದ ಸಮುದಾಯದಲ್ಲಿ ಮಹಿಳೆಯರ ಪಾತ್ರ ಮತ್ತು ಸ್ಥಾನಮಾನ ಕುರಿತು ಇರುವ ದೃಷ್ಟಿಕೋನವೇನು?
- ಲಿಂಗ ತಾರತಮ್ಯ : ಸಮಾಜ ಮತ್ತು ತಾರತಮ್ಯದ ಮೇಲೆ ಪರಿವರ್ತನೆಯ ಪರಿಣಾಮಗಳೇನು? ಮಹಿಳೆಯರು ಮತ್ತು ಲಿಂಗಾಧಾರಿತ ಪಾತ್ರಗಳ ಕುರಿತು ಸಮುದಾಯದ ದೃಷ್ಟಿಕೋನ ಮತ್ತು ಅಭಿಪ್ರಾಯಗಳಲ್ಲಿ ಪರಿವರ್ತನೆಗಳಾಗಿರುವ ಪುರಾವೆಗಳಿವೆಯೆ?

**ಕೌಶಲ್ಯಗಳು ಮತ್ತು ಸಾಮರ್ಥ್ಯ ಅಭಿವೃದ್ಧಿ :** ಐ.ಸಿ.ಟಿ. ಆಧಾರಿತ ಉದ್ಯಮ ನಡೆಸುವ ಮಹಿಳೆಯರು ಮತ್ತು ನೌಕರರಿಗೆ ಇವುಗಳನ್ನು ನಿರ್ವಹಿಸಲು ನಿರ್ದಿಷ್ಟವಾದ ಐ.ಸಿ.ಟಿ. ಕೌಶಲ್ಯಗಳ ಆವಶ್ಯವಿದೆ. ಸಾಮಾನ್ಯ ಕೌಶಲ್ಯಗಳೊಂದಿಗೆ ಕೆಲವೊಂದು ಕೆಲಸವನ್ನು ಮಾಡಬಹುದು. ಉದಾಹರಣೆಗೆ, ಮಾಹಿತಿ ಸೇರಿಸುವುದು (data-entry), ಪದ ಜೋಡಣೆ (word-processing) ಅಥವಾ ಇಂಟರ್‌ನೆಟ್‌ನಲ್ಲಿ ವಿಚಾರಗಳಿಗಾಗಿ ಹುಡುಕಾಟ ಇತ್ಯಾದಿ. ಆದರೆ ಇನ್ನಿತರ ಜವಾಬ್ದಾರಿಗಳಾದ ಮಾಹಿತಿ ತಂತ್ರಜ್ಞಾನ ನಿರ್ವಹಣೆ, ವೆಬ್‌ಸೈಟ್ ಅಭಿವೃದ್ಧಿ ಪಡಿಸುವುದು ಮತ್ತು ನಿರ್ವಹಣೆ, ಇ-ಕಾಮರ್ಸ್ (ವ್ಯಾಪಾರ), ಮಾಹಿತಿ ಆಧಾರಿತ ಕಡತಗಳ ನಿರ್ಮಾಣ, ರೇಡಿಯೋ ಮತ್ತು ವಿಡಿಯೋ ಸಂಪಾದನೆ (ಎಡಿಟಿಂಗ್), ಅಂತರ್ಜಾಲ ನಿರ್ವಹಣೆಯೇ ಮೊದಲಾದುವುಗಳಿಗೆ ವಿಶೇಷ ಕೌಶಲ್ಯಗಳು ಬೇಕೇಬೇಕು. ಮಹಿಳಾ ಉದ್ಯಮಿಗಳನ್ನು ಈ ಕೆಲಸಗಳಿಗೆ ತೆಗೆದುಕೊಳ್ಳಲು ಉದ್ದೇಶಿಸುವ ಸಂಸ್ಥೆಗಳು ಇಂತಹ ಕೌಶಲ್ಯಗಳನ್ನು ಕಲಿತುಕೊಂಡು ನಿರ್ವಹಿಸಲು ಸಿದ್ಧರಾಗಿರುವ ಮಹಿಳೆಯರನ್ನು ಹುಡುಕಿ ಕೆಲಸಕ್ಕೆ ತೆಗೆದುಕೊಳ್ಳುವ ಸವಾಲನ್ನು ಎದುರಿಸಬೇಕು. ಹಿಂದುಳಿದ ಮಹಿಳೆಯರು, ಉದಾ. ಶಿಕ್ಷಣ ಮಟ್ಟದಲ್ಲಿ ಅಷ್ಟೇನೂ ಉತ್ತಮವಾಗಿಲ್ಲದಿರುವ ಮಹಿಳೆಯರಿಗೆ ತರಬೇತಿಯಲ್ಲಿ ಹೆಚ್ಚಿನ ಕಾಲಾವಧಿ ಬೇಕಾಗುತ್ತದೆ. ಹಾಗಾದಾಗ ಸಂಸ್ಥೆಗಳು ತಮ್ಮ ಕೆಲಸಗಳನ್ನು ಆರಂಭಿಸಲು ತಡವಾಗುತ್ತದೆ. ಹೀಗಾಗಿ, ಇಂತಹ ತೊಡಕುಗಳನ್ನು ಎದುರಿಸಲು ಮತ್ತು ಮಹಿಳೆಯರಿಗೆ ಸಹಾಯ ಮಾಡಲು ಹೆಚ್ಚಿನ ಹಣ ತೊಡಗಿಸಲು ಮೂಲಗಳನ್ನು ಕಂಡುಕೊಳ್ಳಬೇಕು.

> *''ನಾವೆಲ್ಲಿ ಕಂಪ್ಯೂಟರ್‌ಗಳೆಲ್ಲಿ? ಕಂಪ್ಯೂಟರ್ ಎಂದ ಕೂಡಲೇ ನಡುಕ ಹುಟ್ತಾ ಇತ್ತು. ಆದರೆ ಇಲ್ಲಿನ ಅಧಿಕಾರಿಗಳು ನಮಗೆ ಧೈರ್ಯ ತುಂಬಿದರು. ತರಬೇತಿ ಕೊಟ್ಟರು ಮತ್ತು ಸಾಕಷ್ಟು ಬೆಂಬಲಾನೂ ಕೊಟ್ಟಿದ್ದಾರೆ. ಯಾವಾಗ ನಾವು ಸಮಸ್ಯೆಗಳಿವೆ, ತಿಳೀತಿಲ್ಲ ಅಂತ ಹೇಳಿದರೆ, ಆಗೆಲ್ಲಾ ಇನ್ನೂ ಒಂದು ಹತ್ತು ದಿನ ಜಾಸ್ತಿ ತರಬೇತಿ ತೆಗೆದುಕೊಳ್ಳಿ ಅಂತ ಒಂದು ವರ್ಷದ ತನಕ ಸಹಾಯ ಮಾಡಿದ್ದಾರೆ. ನಮಗೀಗ ಕೆಲಸ ಚೆನ್ನಾಗಿ ಗೊತ್ತು.''*

ತಂತ್ರಜ್ಞಾನ ಸದಾಕಾಲಕ್ಕೂ ಬದಲಾಗುತ್ತಲೇ ಇರುವುದರಿಂದ ಮತ್ತು ಹಿಂದೆ ಕಲಿತ ಕೌಶಲ್ಯಗಳೂ ಸಹ ಬಹು ಬೇಗ ಹಳತಾಗುವುದರಿಂದ ಕೆಲಸಗಾರರ ಸಾಮರ್ಥ್ಯ ವೃದ್ಧಿ ಕೂಡಾ ನಿರಂತರವಾಗಿ ದೀರ್ಘಕಾಲೀನವಾಗಿ ನಡೆಯುತ್ತಲೇ ಇರಬೇಕು. ಕೆಲಸಗಾರರ ಕೌಶಲ್ಯವೃದ್ಧಿಗೆ, ಬೆಳವಣಿಗೆಗೆ ಗಮನ ನೀಡದಿದ್ದರೆ ಉದ್ಯಮದ ಯಶಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಮದುವೆ, ಹೆರಿಗೆ ಅಥವಾ ಕುಟುಂಬಗಳು

ಹೇರುವ ನಿರ್ಬಂಧನಗಳಿಂದ ಕೌಶಲ್ಯಗಳಿರುವ ಮಹಿಳೆಯರು ಕೆಲಸಕ್ಕೆ ಬರದಿರುವುದು ಉದ್ಯಮದ ಸುಸ್ಥಿರತೆಯ ಮೇಲೆ ಋಣಾತ್ಮಕವಾಗಿ ಪರಿಣಾಮ ಬೀರುತ್ತದೆ. ಇದು ಹೀಗೇ ಇರುತ್ತದೆ ಎಂದೇನೂ ಅಲ್ಲ. ಆದರೂ, ಸದಾ ಕಾಲಕ್ಕೂ ಅರ್ಹ ಮಹಿಳೆಯರನ್ನು ಹುಡುಕಿ, ಗುರುತಿಸಿ, ತರಬೇತಿ ನೀಡಿ ಅಂತಹ ಮಹಿಳೆಯರು ಭಾಗವಹಿಸುವಂತೆ ಮಾಡಿ; ಮಧ್ಯದಲ್ಲೇ ಯಾರಾದರೂ ಮಹಿಳೆಯರು ವಿವಿಧ ಕಾರಣಗಳಿಗೆ ಕೆಲಸ ಬಿಟ್ಟು ಹೋದಲ್ಲಿ, ಅಲ್ಲಿ ಬೇರೆಯವರನ್ನು ತೆಗೆದುಕೊಳ್ಳಲು ಯೋಜನೆ ಮಾಡಿ, ಕೆಲಸಗಾರರು ಇಲ್ಲದಾಗ ಉಳಿದಿರುವ ಮಹಿಳೆಯರ ಮನೋಸ್ಥೈರ್ಯ ಉಳಿಸಿಕೊಂಡು, ಅವರ ಸಾಮರ್ಥ್ಯಗಳನ್ನು ಸೂಕ್ತವಾಗಿ ಬಳಸಿಕೊಳ್ಳಲು ಮತ್ತು ಸಿಬ್ಬಂದಿ ಕಡಿಮೆಯಾದಾಗ ಆಗಬಹುದಾದ 'ನಷ್ಟ'ವನ್ನು ಅತ್ಯಂತ ಕಡಿಮೆ ಮಾಡಿಕೊಳ್ಳುವುದೇ ಮೊದಲಾದವುಗಳಿಗೆ ಸೂಕ್ತವಾದ ಸಂಪನ್ಮೂಲಗಳನ್ನು ಯೋಜಿಸಿರಬೇಕು. ತೀರಾ ಸಂಕಷ್ಟದಲ್ಲಿರುವ ಕುಟುಂಬಗಳ ಮಹಿಳೆಯರೂ ಸೇರಿದಂತೆ, ಕಂಪ್ಯೂಟರ್ ಚಲಾಯಿಸಲು ಮೂಲ ಕೌಶಲ್ಯ ಹೊಂದಿರುವ ಮಹಿಳೆಯರ ಸಂಖ್ಯೆ ದಕ್ಷಿಣ ಭಾರತದ ಚಿಕ್ಕಪುಟ್ಟ ನಗರಗಳು, ಹಳ್ಳಿಗಳಲ್ಲೂ ಕೂಡಾ ಹೆಚ್ಚಾಗುತ್ತಿರುವುದರಿಂದ ಕೌಶಲ್ಯ ಹೊಂದಿರುವ ಮಹಿಳೆಯರ ಸಂಖ್ಯೆಯಲ್ಲಿ ಇಳಿಕೆ ಆಗುವ ಸಮಸ್ಯೆ ಕಡಿಮೆಯಾಗುತ್ತಿದೆ.

**ಸುಸ್ಥಿರತೆ :** ಐ.ಸಿ.ಟಿ. ತೀವ್ರವಾಗಿ ಬದಲಾಗುತ್ತಲೇ ಇದೆ. ಹೀಗಾಗಿ, ಮಾರುಕಟ್ಟೆಯ ಬದಲಾಗುತ್ತಿರುವ ಆವಶ್ಯಕತೆಗನುಗುಣವಾಗಿ ಹೊಸತನ್ನು ಕಲಿತುಕೊಳ್ಳುವುದು ಮತ್ತು ನಮ್ಯತೆಯನ್ನು ಅಳವಡಿಸಿಕೊಳ್ಳುವುದು ಅತ್ಯಾವಶ್ಯಕ. ಉದಾಹರಣೆಗೆ, ಗಣಕೀಕರಿಸುವ / ಡಿಜಿಟಲ್ ಮಾಹಿತಿಯನ್ನು ತೊಡಗಿಸುವ ಮಹಿಳೆಯರು ಹಲವಾರು ತೊಂದರೆ, ಆತಂಕಗಳನ್ನು ಎದುರಿಸುತ್ತಾರೆ : ಯಾವ ಮಾಹಿತಿಯನ್ನು ಗಣಕೀಕರಿಸಬೇಕೋ ಅವುಗಳ ಕಾಗದದ ಕಡತಗಳು ಲಭ್ಯವಿರುವುದಿಲ್ಲ; ಈ ಮಹಿಳಾ ಉದ್ಯಮಿಗಳಿಗೆ ಹೊರ ಗುತ್ತಿಗೆ ಕೊಡುವ ಮೊದಲೇ ಅಂತಹ ಕೆಲಸಗಳನ್ನು ಅವರ ಗ್ರಾಹಕರು ತಮ್ಮ ಕಛೇರಿಯಲ್ಲೇ ಸಿಬ್ಬಂದಿಯನ್ನು ಬಳಸಿ ಮಾಹಿತಿಯನ್ನು ಗಣಕೀಕರಿಸಿರಬಹುದು; ಅಥವಾ ದನಿಯನ್ನು ಗುರುತಿಸುವ ಮತ್ತು ಕಾಗದದ ಕಡತಗಳನ್ನು ಸ್ಕ್ಯಾನ್ ಮಾಡುವ ತಂತ್ರಜ್ಞಾನಗಳು ಪ್ರತಿ ಮಾಹಿತಿಯನ್ನೂ ಬೆರಳಚ್ಚು ಮಾಡಿ ಸಂಗ್ರಹಿಸುವ ಪರಿಪಾಠ ಇರುವುದಿಲ್ಲ. ಹೀಗಾಗಿ, ಉದ್ಯಮಶೀಲರು ಮತ್ತು ಸಂಸ್ಥೆಗಳು ಮಹಿಳೆಯರು ಉದ್ಯಮವನ್ನು ಪ್ರವೇಶಿಸುವಾಗ ಮಧ್ಯಮ ಮತ್ತು ದೂರಗಾಮಿ ಭವಿಷ್ಯವಿರುವ ಮಾರುಕಟ್ಟೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಯಾವಾಗಲಾದರೂ ಉದ್ಯಮದಲ್ಲಿ ಅತಂತ್ರತೆಯಾದೀತು ಎಂಬ ಅಪಾಯ ಎದುರಾದಾಗ, ಐ.ಸಿ.ಟಿಗೆ ಸಂಬಂಧಿಸಿದ ಬೇರೆ ಕ್ಷೇತ್ರಗಳಿಗೆ ಬದಲಾಗುವ, ಹರಡಿಕೊಳ್ಳುವ ಸಾಧ್ಯತೆಯನ್ನು ಯೋಜಿಸಿರಬೇಕು.

ಕೇವಲ ಐ.ಸಿ.ಟಿ. ಆಧಾರಿತ ಉದ್ಯಮದಿಂದ ಬರಬಹುದಾದ ಆದಾಯವನ್ನು ಮಾತ್ರ ಮಹಿಳೆಯರು ಅವಲಂಬಿಸುವಂತಾದರೆ ಅವರು ಸಂಕಷ್ಟಗಳಿಗೂ ಈಡಾಗುವ ಸಾಧ್ಯತೆಗಳಿವೆ. ಐ.ಸಿ.ಟಿ.ಯ ಕೆಲಸಗಳ ಲಭ್ಯತೆಯಲ್ಲಿ ಏನಾದರೂ ಏರುಪೇರಾದಲ್ಲಿ ಅವುಗಳನ್ನು ಎದುರಿಸಲು ಸಿದ್ಧರಾಗಲು ಮಹಿಳೆಯರಿಗೆ ಸಹಾಯ ಮಾಡಲು ಮತ್ತು ಅವರ ಖರ್ಚು ವೆಚ್ಚಗಳನ್ನು ತೂಗಿಸುವ ಮತ್ತು ಆದಾಯವನ್ನು ಸೂಕ್ತ ರೀತಿಯಲ್ಲಿ ಲಾಭಕಾರಿಯಾಗುವಂತೆ ಹೂಡಲೂ ಸಹ ಬೆಂಬಲ ಸಂಸ್ಥೆಗಳು ಸಹಾಯ ನೀಡಬೇಕು. ಅಕಸ್ಮಾತ್ ಬೆಂಬಲ ಸಂಸ್ಥೆಗಳ ಒತ್ತಾಸೆ ನಿಂತಲ್ಲಿ, ಈ ಉದ್ಯಮಗಳು ತಮ್ಮ ಕೆಲಸಗಳನ್ನು ಹೇಗೆ ವಿವಿಧ ರೀತಿಯಲ್ಲಿ ಬೆಳೆಸಿಕೊಳ್ಳಬೇಕು ಎಂಬುದರ ಬಗ್ಗೆ ಸೃಜನಾತಕವಾಗಿ ಪರಿಹಾರೋಪಾಯಗಳನ್ನೂ ಸಹ ಯೋಚಿಸಿರಬೇಕು. ಇಂತಹ ಕೆಲವು ಹೊಳಹುಗಳನ್ನು ಮಹಿಳಾ ಉದ್ಯಮಿಗಳು ಹೇಳಿರುವುದು ಮುಂದಿದೆ:

> *''ನಾವು ಕೇವಲ ಐಟಿ ಸೇವೆಗಳನ್ನು ಮಾತ್ರ ನೀಡುವುದಿಲ್ಲ. ಸಮುದಾಯದವರು ಯಾವ ಸೇವೆಗಳು ಮುಖ್ಯ ಎಂದು ಭಾವಿಸುತ್ತಾರೋ ಅವುಗಳನ್ನು ಸಹ ನೀಡುತ್ತೇವೆ. ಉದಾಹರಣೆಗೆ, ಮಕ್ಕಳಿಗೆ ಜನನ ಪ್ರಮಾಣ ಪತ್ರ, ಸರ್ಕಾರಿ ಸೇವೆಗಳಿಗೆ ಅರ್ಜಿ ಮಾಡಿಕೊಡುವುದು ಇತ್ಯಾದಿ...''*

*''ನಾವು ನೀಡುವ ಸೇವೆಗಳ ಯಶಸ್ಸು ನೋಡಿದ ಇತರರೂ ನಮ್ಮ ತರಹವೇ ಉದ್ಯಮಗಳನ್ನು ಆರಂಭಿಸಿ, ನಾವು ಕೊಡುವ ಸೇವೆಗಳನ್ನೇ ನೀಡಲಾರಂಭಿಸಿದರು. ಅದು ನಮಗೆ ಕಷ್ಟವಾಯಿತು. ಹೀಗಾದರೆ ಉದ್ಯಮ ಹೇಗೆ ನಡೆಸುವುದು ಎಂದು ನಾವು ಅಧಿಕಾರಿಗಳಿಗೆ ದೂರು ನೀಡಿದೆವು. ಆಗ ಅವರು ಒಂದು ನಿಯಮ ತಂದರು–ಇಂತಹ ಕೇಂದ್ರಗಳನ್ನು ನಡೆಸಬೇಕೆಂದರೆ ಯಾವುದೇ ಎರಡು ಕೇಂದ್ರಗಳ ನಡುವೆ ಕನಿಷ್ಟ ಮೂರು ಕಿ.ಮೀ. ಅಂತರವಿರಬೇಕು.''*

*''ಮಾಹಿತಿ–ಸಂಬಂಧಿತ ಸೇವೆಗಳನ್ನು ಮಾತ್ರ ಕೊಟ್ಟರೆ ಸಾಲದು. ಕೇಂದ್ರದ ಮೇಲೆ ಆಗುತ್ತಿರುವ ಖರ್ಚುವೆಚ್ಚಗಳನ್ನು ತೂಗಿಸಿಕೊಂಡು ಹೋಗಬೇಕೆಂದರೆ ನಾವು ಪಂಚಾಯಿತಿ, ಶಾಲೆಯೇ ಮೊದಲಾದುವುಗಳಿಗೂ ಸೇವೆಗಳನ್ನು ನೀಡಿ ಆದಾಯ ಗಳಿಸಲೇಬೇಕು. ನಾವು ಜನರನ್ನು ಸಂಪರ್ಕಿಸಲೇಬೇಕು.''*

*''ಹಲವಾರು ಜಿಲ್ಲೆಗಳ ಶಾಲೆಗಳು, ಪಂಚಾಯಿತಿ ಕಛೇರಿಯ ಕೆಲಸಗಳನ್ನು ನಮ್ಮ ಬೆಂಬಲ ಸಂಸ್ಥೆಯವರು ನಮಗೆ ಕೊಡಿಸಿದ್ದಾರೆ. ಇದರೊಂದಿಗೆ ನಾವೂ ಕೂಡಾ ಬೇರೆಯವರಿಂದ ಕೆಲಸಗಳನ್ನು ಆಕರ್ಶಿಸಲು ಜಾಹೀರಾತು ನೀಡಿ ಪ್ರಚಾರ ಮಾಡುತ್ತಿದ್ದೇವೆ.''*

*''ಶಾಲಾ ಅವಧಿಯಲ್ಲಿ, ನಮ್ಮ ಕೆಲಸದ ನಂತರ ಮಕ್ಕಳಿಗೆ ನಾವು ಕಂಪ್ಯೂಟರ್ ಕಲಿಸುತ್ತೇವೆ, ಜೊತೆಗೆ, ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಮಹಿಳೆಯರಿಗೆ ನಾವು ವಿವಿಧ ಕೋರ್ಸುಗಳನ್ನು ನಡೆಸುತ್ತಿದ್ದೇವೆ. ಇದರಿಂದ ನಮ್ಮ ಆದಾಯವೂ ಹೆಚ್ಚಾಗಿದೆ. ನಮಗೆ ಈಗಿರುವ ಶಾಲಾ ಗುತ್ತಿಗೆ ಆಕಸ್ಮಾತ್ ಮುಂದೆ ಸಿಗದಿದ್ದರೆ, ಸರ್ಕಾರದ ಯೋಜನೆಗಳಡಿ ನಾವು ಬೇರೆ ಯಾವುದಾದರೂ ಕೆಲಸ ತೆಗೆದುಕೊಂಡು ನಮ್ಮದೇ ಆದ ಐ.ಟಿ. ಕೇಂದ್ರದ ಸೇವೆಗಳನ್ನು ನೀಡಲು ಸಾಧ್ಯ ಎಂಬ ಆತ್ಮಸ್ಥೈರ್ಯ ನಮಗಿದೆ.''*

*''ಇನ್ನೂ ಹೆಚ್ಚಿನ ಸೇವೆಗಳನ್ನು ಒದಗಿಸುವುದು ಹೇಗೆ ಮತ್ತು ಇನ್ನೂ ಉತ್ತಮವಾಗಿ ನಮ್ಮ ಕೆಲಸಗಳನ್ನು ಮಾಡುವುದು ಹೇಗೆ ಎಂದು ನಾವು ಸದಾ ಚರ್ಚಿಸುತ್ತಲೇ ಇರುತ್ತೇವೆ. ಬೆಳಗ್ಗೆ ಬೇಗ ಎದ್ದು ಹಳ್ಳಿಗೆ ನಾವು ಭೇಟಿ ನೀಡುತ್ತೇವೆ. ಬೇರೆ ಹೊರಗಿನವರನ್ನು ತೆಗೆದುಕೊಳ್ಳದೆ ನಮ್ಮ ಕೇಂದ್ರಕ್ಕೆ ಸಂಬಂಧಿಸಿದ ವಿವಿಧ ಕೆಲಸಗಳ ಬಗ್ಗೆ ನಾವೇ ಕಲಿಯುತ್ತಿದ್ದೇವೆ. ಹೀಗಾಗಿಯೇ ನಾವು ನಮ್ಮ ಕೆಲಸಗಳನ್ನು ಇಷ್ಟು ಚೆನ್ನಾಗಿ ಮಾಡಿಕೊಂಡು ನಮ್ಮ ಕೇಂದ್ರದ ಮೇಲಿರುವ ಸಾಲವನ್ನು ತೀರಿಸಲು ಆಗುತ್ತಿದೆ. ನಮ್ಮಲ್ಲಿಗೆ ಬರುವ ಗ್ರಾಹಕರನ್ನು ನಾವು ಗೌರವಿಸಿ ಕೆಲಸ ಮಾಡಿಕೊಡುತ್ತಿದ್ದೇವೆ. ನಮ್ಮ ಇಂತಹ ಗುಣಮಟ್ಟದ ಕೆಲಸದಿಂದಾಗಿಯೇ ನಮಗೆ ಪ್ರಶಸ್ತಿ ಲಭಿಸಿದ್ದು.''*

**ಸಮುದಾಯದ ಸಮ್ಮತಿ :** ಐ.ಸಿ.ಟಿ. ಕ್ಷೇತ್ರ ಇನ್ನೂ ಬಲವಾಗಿ ತಳ ಊರಿಲ್ಲ ಮತ್ತು ಇನ್ನೂ ಹೆಚ್ಚಿನ ಜನರಿಗೆ ಅರ್ಥವಾಗಿಲ್ಲ, ಆದರೂ ಇನ್ನಿತರ ತಾಂತ್ರಿಕ ಕ್ಷೇತ್ರಗಳನ್ನು ಇದು 'ಗಂಡಸರ ಕೆಲಸ' ಎಂದು ಹೇಗೆ ಹೇಳುತ್ತಾರೋ ಹಾಗೆಯೇ ಇದನ್ನೂ ನೋಡುತ್ತಾರೆ. ಮಹಿಳೆಯರಿಗೆ ವ್ಯಾಪಾರವೇನು ತಿಳಿಯುತ್ತದೆ, ಅದರಲ್ಲೂ ಈ ವಿಜ್ಞಾನ, ತಂತ್ರಜ್ಞಾನವೆಲ್ಲಾ ಅವರಿಗೆ ಹೇಗೆ ಅರಿವಾಗುತ್ತದೆ ಎಂಬ ರೂಢಿಗತ ಭಾವನೆಗಳಗಳನ್ನು ಹೊಡೆದೋಡಿಸುವುದು ದೊಡ್ಡ ಸವಾಲೇ ಸರಿ. ಇದು ಐ.ಸಿ.ಟಿ. ಉದ್ಯಮಿಗಳು ಮತ್ತು ಸಮುದಾಯ ಹಾಗೂ ಇದಕ್ಕೆ ಸಂಬಂಧಿಸಿದ ಇನ್ನಿತರರು, ಸ್ಥಳೀಯ ಶ್ರೀಮಂತರು ಮತ್ತು ಸುಶಿಕ್ಷಿತರು, ಸರ್ಕಾರಿ ಅಧಿಕಾರಿಗಳು ಮತ್ತು ಉದ್ಯಮಕ್ಕೆ ಬೇಕಾದ ವಸ್ತುಗಳ ಸರಬರಾಜುದಾರರ ನಡುವಣ ಸಂಬಂಧದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ, ಇಂತಹದೊಂದು ಉದ್ಯಮಕ್ಕೆ ಕೈ ಹಾಕಿರುವವರು ಮಹಿಳೆಯರಾದರೆ, ಅದರಲ್ಲೂ ತೀರಾ ಸಂಕಷ್ಟದ ಹಿನ್ನೆಲೆಯುಳ್ಳ ಮಹಿಳೆಯಾದರೆ, ಸಮುದಾಯದ ಜನ (ಗಂಡಸರೂ, ಹೆಂಗಸರೂ) ಇಂತಹ ಉದ್ಯಮಿಗೆ

ಸಹಕಾರ ನೀಡಲು ಮೊದಮೊದಲು ಹಿಂಜರಿಯುವುದರಲ್ಲಿ ಅನುಮಾನವೇ ಇಲ್ಲ. ತಮಗೆ ಟೆಲಿ ಕೇಂದ್ರದಿಂದ ಸೇವೆ ಬೇಕಾದಲ್ಲಿ ಅಥವಾ ತಮ್ಮ ವಿಡಿಯೋವನ್ನು ಪಡೆಯಲು ಅಥವಾ ಇನ್ನಾವುದಕ್ಕೇ ಆಗಲಿ, ಆ ಕೇಂದ್ರ ನಡೆಸುತ್ತಿರುವವರು ಸ್ತ್ರೀ ಆದಲ್ಲಿ, ತಾವು ಸದಾಕಾಲಕ್ಕೂ ನಡೆಸಿಕೊಂಡು ಬಂದಿರುವ ಲಿಂಗ ತಾರತಮ್ಯವನ್ನು ತೊಡೆದು ಹಾಕಲು ಮನಸ್ಸು ಮಾಡುವುದೇ ಇಲ್ಲ.

> *''ನಾವು ಕೆಲಸ ಕೇಳಿಕೊಂಡು ಹಲವಾರು ಕಛೇರಿಗಳಿಗೆ ತಡಕಾಡಿದ್ದೇವೆ. ಅಲ್ಲೆಲ್ಲಾ ಒಂದೇ ಉತ್ತರ. ನೀವೊಬ್ಬ ಮಹಿಳೆ. ಈ ಉದ್ದಿಮೆಯಲ್ಲಿ ನಿಮಗೆ ಯಶಸ್ಸು ಸಿಗುವುದು ಕಷ್ಟ. ನೀವೊಬ್ಬ ಗಂಡಸಾಗಿದ್ದರೆ ಕೆಲಸ ಕೊಡಬಹುದಿತ್ತು. ಇಷ್ಟರ ಮಧ್ಯೆ ಒಂದು ಸಂಸ್ಥೆ ಈ ಮಹಿಳಾ ಉದ್ಯಮಿಯೊಂದಿಗೆ ಕೆಲಸ ಮಾಡುವ ಧೈರ್ಯ ಮಾಡಿತು. ನಮಗೆ ಕೆಲಸ ಸಿಕ್ಕಿತು. ನಾವು ಆರಂಭಿಸಿದೆವು.''*
>
> *''ನಾವು ಬೇರೆಯವರಿಗೆ ಕೆಲಸ ಕಲಿಸುವ ಕುರಿತು ಪ್ರಚಾರಕ್ಕೂ ಆಗಾಗ್ಗೆ ಹೋಗುತ್ತೇವೆ. ಆಗ ಜನ ನನ್ನನ್ನು ನೋಡಿ, ಈ ಹೆಂಗಸರ ಹತ್ತಿರ ನಾವು ಕೆಲಸ ಕಲಿಯುವುದೇ ಅಂತ ಹೋಗಿದ್ದುಂಟು. ಅದನ್ನೆಲ್ಲಾ ನಾನು ತಲೆಗೆ ಹಚ್ಚಿಕೊಳ್ಳುವುದಿಲ್ಲ.''*
>
> *''ಇಲ್ಲಿನ ಅಧಿಕಾರಿಗಳು ಹಳ್ಳಿಯಲ್ಲಿ ಡಂಗುರ ಹೊಡೆದು ನಮ್ಮ ಹತ್ತಿರ ಯಾವ ಯಾವ ಸೇವೆಗಳು ಇವೆ, ಮತ್ತು ಜನ ಬಂದು ನಮ್ಮ ಹತ್ತಿರವೇ ಇಂತಹ ಸೇವೆಗಳನ್ನು ಪಡೆದುಕೊಳ್ಳಬೇಕೆಂದು ಪ್ರಚಾರ ಮಾಡಿದರು. ಆಮೇಲೆ ಜನ ಬರಲಾರಂಭಿಸಿದರು.''*

ತಮ್ಮ ಕೇಂದ್ರದಲ್ಲಿ ಲಭ್ಯವಿರುವ ಸೇವೆಗಳ ಬಗ್ಗೆ ಇಲ್ಲಿನ ಮಹಿಳೆಯರು ಮನೆಮನೆಗೆ, ಗ್ರಾಹಕರಿರುವ ಸ್ಥಳಗಳಿಗೆ ತೆರಳಿ ಮೇಲಿಂದ ಮೇಲೆ ಹೇಳುತ್ತಿರಲೇಬೇಕು ಮತ್ತು ಜನರಿಗೆ ಅದನ್ನು ನೆನಪಿಸುತ್ತಲೇ ಇರಬೇಕು. ತಮ್ಮ ಸೇವೆಗಳನ್ನು ಸತತವಾಗಿ ಹಾಗೂ ಹೊಸದಾಗಿ ಸೇರ್ಪಡೆಯಾದ ಸೇವೆಗಳನ್ನು ಬಳಸಲು ತೋರಿಸುತ್ತಿರಲೇಬೇಕು. ಇದರ ಜೊತೆ, ಸಮುದಾಯದ ಆವಶ್ಯಕತೆಗಳು ಮತ್ತು ಬೇಡಿಕೆಗಳನ್ನು ತಿಳಿಯುವ ಮತ್ತು ಅದಕ್ಕೆ ಸ್ಪಂದಿಸುವ ರೀತಿಯಲ್ಲಿ ಸಂಸ್ಥೆಗಳು ಹೊಸ ಸೇವೆಗಳನ್ನು ಮಹಿಳಾ ಉದ್ಯಮಿಗಳಿಗೆ ತಿಳಿಸಿ, ಅವರು ಸತತವಾಗಿ ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಬೇಕು.

ಸ್ಥಳೀಯ ನಾಯಕರು, ಸರ್ಕಾರಿ ಅಧಿಕಾರಿಗಳು ಮತ್ತು ಸಮುದಾಯಕ್ಕೆ ಇಂತಹ ಹೊಸ ಪ್ರಯತ್ನಗಳ ಬಗ್ಗೆ ತಿಳಿಸಿ, ಅವರ ವಿಶ್ವಾಸಗಳಿಸಲು ಈ ಯೋಜನೆಗಳು ಹೆಚ್ಚಿನ ಪ್ರಯತ್ನವನ್ನು ಹಾಕದಿದ್ದಲ್ಲಿ ಮುಂದಿನ ದಿನಗಳಲ್ಲಿ ಅವರಿಂದ ನಿರಂತರವಾದ ಬೆಂಬಲ ಮತ್ತು ಭಾಗವಹಿಸುವಿಕೆ ಸಿಗದಿರಬಹುದು. ಇಂತಹವರನ್ನು ಯೋಜನೆಗಳಲ್ಲಿ ತೊಡಗಿಸಲು ಆರಂಭದ ಹಂತಗಳಲ್ಲಿ ಸಾಧ್ಯವಿದ್ದರೂ, ಮುಂದಿನ ದಿನಗಳಲ್ಲಿ ಯೋಜನೆ ಮುಂದುವರೆಯಲು, ವಿಸ್ತಾರವಾಗಲು ಅಡೆತಡೆಗಳಾಗಿ ನಿಧಾನವಾಗಬಹುದು. ಐ.ಸಿ.ಟಿ.ಯ ಒಂದು ಧನಾತ್ಮಕ ಅಂಶವೆಂದರೆ, ಇಂತಹ ಪ್ರಯತ್ನಗಳಲ್ಲಿ ಪುರುಷರಿಗಿಂತಲೂ ಮಹಿಳೆಯರು ನಡೆಸುವ ಕೇಂದ್ರಗಳೇ ಹೆಚ್ಚಿವೆ. ಈ ಕ್ಷೇತ್ರದಲ್ಲಿ ಇನ್ನೂ ಲಿಂಗಾಧಾರಿತ ಪಾತ್ರಗಳು ಸಮುದಾಯದ ಭಾವನೆಗಳಲ್ಲಿ ಗಟ್ಟಿಯಾಗಿ ಇಳಿದಿಲ್ಲ. ಹೀಗಾಗಿ, ಈ ಬೆಳವಣಿಗೆ ಸಮುದಾಯದ ಕೆಲವು ನಿಯಮ ನಂಬಿಕೆಗಳನ್ನು ಈಗಾಗಲೇ ಪ್ರಶ್ನಿಸಿದೆ.

**ಬಂಡವಾಳ ಹೂಡಿಕೆ ಮತ್ತು ಧನ ಸಹಾಯ :** ಐ.ಸಿ.ಟಿ.ಗೆ ಅತ್ಯಾವಶ್ಯಕವಾದ ಸಾಧನ ಸಲಕರಣೆಗಳು (ಉಪಕರಣಗಳು ಮತ್ತು ಸಾಫ್ಟ್‌ವೇರ್-hardware and software) ಈ ಎರಡೂ ಸಹ ಕೇಂದ್ರವನ್ನು ಆರಂಭಿಸುವಾಗ ಮತ್ತು ನಿರ್ವಹಿಸುವಾಗ ಬಹಳ ಖರ್ಚಿನ ಬಾಬ್ತು. ಇವುಗಳನ್ನು ಕಾಲಕಾಲಕ್ಕೆ ನವೀಕರಿಸುವುದೆಂದರೂ ಖರ್ಚೇ. ಮಹಿಳೆಯರು ತಮ್ಮ ಕೆಲಸದಲ್ಲಿ ಸ್ಪರ್ಧಾತ್ಮಕವಾಗಿರಬೇಕೆಂದರೆ

ಕೇಂದ್ರವನ್ನು ಆರಂಭಿಸುವಾಗ ಮತ್ತು ಆ ನಂತರವೂ ಸಹ ಅವರ ಕೌಶಲ್ಯ ವೃದ್ಧಿಗೆ ತರಬೇತಿಗಳನ್ನು ನೀಡುತ್ತಲೇ ಇರಬೇಕು. ಹೀಗಾಗಿ ಯಾವುದೇ ಉಪಕರಣ ಕೊಳ್ಳುವಾಗ ಇವೆಲ್ಲವನ್ನೂ ಯೋಚಿಸಿರಲೇಬೇಕು – ಯಾವ ತರಹದ ಕಂಪ್ಯೂಟರುಗಳನ್ನು ಕೊಳ್ಳಬೇಕು – ನಿರ್ದಿಷ್ಟ ಕಂಪೆನಿಗಳು ತಯಾರಿಸಿದ್ದೋ ಅಥವಾ ಸ್ಥಳೀಯರು ಜೋಡಿಸಿ ಕೊಡುವುದು ಸಾಕೋ, ಎಂತಹ ಸಾಫ್ಟ್‌ವೇರ್ ತೆಗೆದುಕೊಳ್ಳಬೇಕು ಕಂಪೆನಿಗಳು ಮಾರುವುದೋ ಅಥವಾ ಉಚಿತವಾಗಿ ದೊರಕುವ ಸಾಫ್ಟ್‌ವೇರ್ ಬಳಸುವುದೋ ಇತ್ಯಾದಿ. ಇದರೊಂದಿಗೆ ಕೇಂದ್ರದ ಉಪಕರಣಗಳ ನಿರ್ವಹಣೆ ಮತ್ತು ನಿಶ್ಚಿತ ಅವಧಿಯಲ್ಲಿ ಉಪಕರಣಗಳು ಹಾಳಾದರೆ ಅವುಗಳ ಬದಲಾಗಿ ಹೊಸತನ್ನು ಕೊಡುವ ಎಂತಹ ಒಪ್ಪಂದ ತೆಗೆದುಕೊಳ್ಳಬೇಕು ಎಂಬುದೆಲ್ಲವನ್ನೂ ಯೋಚಿಸಬೇಕು.

ಒಂದು ಟೆಲಿಕೇಂದ್ರ ಅಥವಾ ಕಿಯೋಸ್ಕ್ (ಬೂತು) ಆಧಾರಿತ ಸೇವಾಕೇಂದ್ರ ನಡೆಸಬೇಕೆಂದರೆ ಉಪಕರಣಗಳಷ್ಟೇ ಅಲ್ಲ, ಅವುಗಳನ್ನು ಇಟ್ಟು ಕೇಂದ್ರ ನಡೆಸಲು ಬೇಕಾದ ಸ್ಥಳ ಮತ್ತು ಅದಕ್ಕೆ ಬೇಕಾದ ಹಣದ ಬಗ್ಗೆಯೂ ಯೋಜಿಸಬೇಕು. ಕೇಂದ್ರ ನಡೆಸಲು ಜಾಗ, ಅಲ್ಲಿ ಕೇಂದ್ರ ಅಥವಾ ಕಿಯೋಸ್ಕ್‌ನ ಕಟ್ಟಡ, ವಿದ್ಯುತ್ ಮತ್ತು ಇಂಟರ್‌ನೆಟ್ ಸಂಪರ್ಕ ಇವೆಲ್ಲವೂ ಈ ವ್ಯವಸ್ಥೆಯ ಭಾಗ. ಕೇಂದ್ರಗಳಿಗೆ ಹೊಸತಾಗಿ ವಿದ್ಯುತ್ ಸಂಪರ್ಕ ತೆಗೆದುಕೊಳ್ಳಬೇಕಾದಾಗ ಅದಕ್ಕೆ ಹಲವಾರು ತಿಂಗಳುಗಳೇ ಆಗಬಹುದು. ಇಲ್ಲಿನ ಎಷ್ಟೋ ಚಿಕ್ಕ ಚಿಕ್ಕ ಊರುಗಳು, ಹಳ್ಳಿಗಳಲ್ಲಿ ಇನ್ನೂ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸಂಪರ್ಕ ಬಂದಿಲ್ಲ. ಅಂತಹ ಕಡೆ ಈ ಯೋಜನೆ ಆರಂಭಿಸಲೇ ಸಾಕಷ್ಟು ತಡವಾಗುತ್ತದೆ.

ಸ್ಥಳೀಯವಾಗಿ ಕೆಲಸ ಮಾಡುತ್ತಿರುವ ಒಂದು ಬೆಂಬಲ ಸಂಸ್ಥೆಗೆ ಇದನ್ನೆಲ್ಲಾ ಎದುರಿಸಿ ಸಮಸ್ಯೆಗಳನ್ನು ಪರಿಹರಿಸಿ ಕೇಂದ್ರಗಳನ್ನು ಸ್ಥಾಪಿಸಲು ನೆರವಾಗುವುದು ಹರಸಾಹಸದಂತೆ ಕಾಣುತ್ತದೆ. ಆದರೆ, ಹಳ್ಳಿಗಳಿಗೂ ಸಹ ಬ್ರಾಡ್‌ಬ್ಯಾಂಡ್ ಮತ್ತು ಟೆಲಿಫೋನ್ ಸಂಪರ್ಕ ನೀಡಲು, ಹಳ್ಳಿಹಳ್ಳಿಗೂ ವಿದ್ಯುತ್ ಸಂಪರ್ಕ ಒದಗಿಸಲು ರಾಜ್ಯ ಸರ್ಕಾರಗಳು ಹೆಚ್ಚಿನ ಬಂಡವಾಳ ಹೂಡಲು, ಉಚಿತ ಮತ್ತು ಮುಕ್ತ ಸಾಫ್ಟ್‌ವೇರ್‌ಗಳನ್ನು ಬಳಸಲು ಸಾರ್ವಜನಿಕ ನಿಲುವುಗಳನ್ನು ತೆಗೆದುಕೊಳ್ಳಲು, ಸರ್ಕಾರದ ಇಲಾಖೆಗಳು, ಕಛೇರಿಗಳು ಮಹಿಳಾ ಉದ್ಯಮಿಗಳಿಂದ ಸೇವೆ ಪಡೆದುಕೊಳ್ಳುವಂತೆ ಖಾತ್ರಿ ಮಾಡಿಕೊಳ್ಳಲು, ಬ್ಯಾಂಕುಗಳಿಂದ ಸಾಲ ಸೌಲಭ್ಯಗಳು ಸುಲಭವಾಗಿ ದೊರೆಯಲು ಮತ್ತು ಕೃಷಿ ಮತ್ತು ಆರೋಗ್ಯವೇ ಮೊದಲಾದ ಯೋಜನೆಗಳ ಮಾಹಿತಿ ಹಂಚಿಕೊಳ್ಳಲು ಪರಿಣಿತರನ್ನು ಉತ್ತೇಜಿಸಿ ವಿಶೇಷ ವಿಚಾರಗಳನ್ನು ನೀಡಲು ಅವಕಾಶಗಳನ್ನು ಕೊಡುವಂತೆ ರಾಷ್ಟ್ರೀಯ ಮಟ್ಟದಲ್ಲಿ ನೀತಿ, ನಿಯಮಗಳನ್ನು ರೂಪಿಸುವಲ್ಲಿ ನಡೆಯುವ ಕೆಲಸಗಳಿಗೆ ಗಮನ ಕೊಡಲು ಇದು ಇಂಬು ನೀಡುತ್ತದೆ. ಇವುಗಳಲ್ಲಿ ಕೆಲವನ್ನಾದರೂ ಸಾಧ್ಯವಾಗಿಸಲು ಐ.ಸಿ.ಟಿ.ಗಳ ಅಂತರ್ಜಾಲ ತಮ್ಮ ವಕೀಲಿ ಯತ್ನಗಳನ್ನು ಮಾಡಬಹುದು.

ಐ.ಸಿ.ಟಿ. ಉದ್ಯಮಗಳನ್ನು ಸ್ಥಾಪಿಸಲು ಮುಂದಾಗುವ ಬೆಂಬಲ ಸಂಸ್ಥೆಗಳಿಗೆ ಎದುರಾಗುವುದು ಇಂತಹ ಸಮಸ್ಯೆಗಳು ಮತ್ತು ಪ್ರಶ್ನೆಗಳೆಂದು ಚುಟುಕಾಗಿ ಹೇಳಬಹುದಷ್ಟೆ. ಐ.ಸಿ.ಟಿ. ಪ್ರಯತ್ನಗಳಿಗೆದುರಾಗುವ ಕೆಲವು ಪ್ರಮುಖ ಎಡರುತೊಡರುಗಳನ್ನು ಮುಂದಿನ ಪುಟದಲ್ಲಿರುವ ಚೌಕಟ್ಟಿನಲ್ಲಿ ತೋರಲಾಗಿದೆ.[10]

10 ಇಲ್ಲಿ ನೀಡಲಾಗಿರುವ ಅಂಶಗಳು ಮಹಿಳೆಯರು ನಡೆಸುತ್ತಿರುವ ಐ.ಸಿ.ಟಿ. ಪ್ರಯತ್ನಗಳನ್ನು ಕುರಿತ ಕಾರ್ಯಾಗಾರದಲ್ಲಿ ತಿಳಿದುಬಂದಿತು. ದಕ್ಷಿಣ ಭಾರತದಲ್ಲಿ ನಡೆಯುತ್ತಿರುವ ಐ.ಸಿ.ಟಿ.ಗಳಲ್ಲಿ ಕೆಲಸ ಮಾಡುತ್ತಿರುವ ಸಂಯೋಜಕರು ಹಾಗೂ ಸ್ಥಳೀಯ ಮಹಿಳೆಯರು ಹಂಚಿಕೊಂಡ ಅನುಭವಗಳು ವಿಚಾರಗಳನ್ನು ಇಲ್ಲಿ ನೀಡಲಾಗಿದೆ.

## ಬಾಕ್ಸ್ 6: ಐ.ಸಿ.ಟಿ. ಉದ್ಯಮ ನಡೆಸುವ ಸಂಸ್ಥೆಗಳು ಎದುರಿಸುವ ಸಮಸ್ಯೆಗಳು ಮತ್ತು ಸಾಧ್ಯತೆ ಇರುವ ಪರಿಹಾರೋಪಾಯಗಳು

1. ವಿದ್ಯುತ್, ವಿದ್ಯುತ್, ವಿದ್ಯುತ್ : ವಿದ್ಯುಚ್ಛಕ್ತಿ ಸಿಗದಿರುವುದೇ ಎಲ್ಲ ಯೋಜನೆಗಳು ಎದುರಿಸುವ ಮೊದಲ ಸಮಸ್ಯೆ. ಸೌರಶಕ್ತಿಯನ್ನು ಬಳಸಲು ಕೆಲವರು ಪ್ರಯತ್ನಿಸಿದ್ದಾರೆ. ಯೂ.ಪಿ.ಎಸ್. ಬಳಸಿ ಅದಕ್ಕೆ ವಿದ್ಯುತ್ ಕಾದಿರಿಸುವ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ. ಆದರೆ ಇವೆಲ್ಲಾ ಅತ್ಯಂತ ಖರ್ಚಿನ ಬಾಬ್ತು ಎಂಬುದು ಅವರ ಅಳಲು.

2. ತಂತ್ರಜ್ಞಾನ : ಹೊಸ ತಂತ್ರಜ್ಞಾನದ ಅಳವಡಿಕೆ, ಯಂತ್ರೋಪಕರಣಗಳ ದುರಸ್ತಿ ಮತ್ತು ಬಿಡಿಭಾಗಗಳನ್ನು ಬದಲಿಸುವುದಕ್ಕೆ ಗ್ರಾಮೀಣ ಐ.ಸಿ.ಟಿ.ಕೇಂದ್ರಗಳು ನಗರಗಳನ್ನು ಅವಲಂಬಿಸಿರುವುದನ್ನು ಎತ್ತಿ ತೋರಲಾಗಿದೆ.

3. ಲಿಂಗಾಧಾರಿತ ಸಮಸ್ಯೆಗಳು : ತಮ್ಮ ಕೆಲಸಗಳನ್ನು ನಿರ್ವಹಿಸಲು ವಿವಿಧ ಸ್ಥಳಗಳಿಗೆ ತೆರಳಿ ಸಂಪರ್ಕ, ಬೆಂಬಲ, ಕೆಲಸಗಳನ್ನು ಪಡೆಯುವಲ್ಲಿ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ. ಯೋಜನೆಯ ದಿಶೆಯಲ್ಲಿ ಹೇಳಬೇಕೆಂದರೆ, ಉದ್ಯಮಶೀಲತೆಯುಳ್ಳ ಮತ್ತು ಇಂತಹ ಪ್ರಯತ್ನಗಳಿಗೆ ಕೈಹಾಕುವ ಉಮೇದಿರುವ ಮಹಿಳೆಯರು ಸಿಗುವುದು ಕಷ್ಟ. ಅಷ್ಟೇ ಅಲ್ಲ, ಇಂತಹ ಹೊಸ ಪ್ರಯತ್ನಗಳಿಗೆ ಅವರನ್ನು ಉತ್ತೇಜಿಸುವುದೂ ಕಷ್ಟ.

4. ಸಮುದಾಯಗಳ ಬೆಂಬಲ ಇಲ್ಲದೆ ಇರುವುದು : ಐ.ಸಿ.ಟಿ.ಯಿಂದ ಸಿಗಬಹುದಾದ ಸೇವೆಗಳು ಮತ್ತು ಅವುಗಳಿಂದ ಅವರಿಗೆ ಆಗುವ ಪ್ರಯೋಜನದ ಬಗ್ಗೆ ಜನರಿಗೆ ತಿಳಿದಿರುವುದಿಲ್ಲ. ಅವರಲ್ಲಿ ಈ ಅರಿವನ್ನು ಮೂಡಿಸಲು ಎಲ್ಲವನ್ನೂ ವಿವರಿಸುವುದು, ಇದರ ಸೇವೆಗಳ ಮೌಲ್ಯವನ್ನು ಮನಗಾಣುವಂತೆ ಮಾಡುವುದಕ್ಕೆ ಹೆಚ್ಚಿನ ಪ್ರಯತ್ನಗಳಾಗಬೇಕು. ಇದರೊಂದಿಗೆ, ಯಾವ ಯೋಜನೆಗಳು ಲಿಂಗ ಸೂಕ್ಷ್ಮತೆಯನ್ನು ಹೊಂದಿರುವುವೋ, ಮಹಿಳೆಯರನ್ನು ಕೇಂದ್ರೀಕರಿಸಿ ನಡೆದಿರುವುವೋ, ಬಡವರ, ದಲಿತರ ಪರವಾದ ಯೋಜನೆಗಳಿವೆಯೋ ಅಂತಹವುಗಳನ್ನು ವಿರೋಧಿಸುವ ಮತ್ತು ತೊಂದರೆ ನೀಡುವ ಕೆಲವು ಪಟ್ಟಭದ್ರ ಹಿತಾಸಕ್ತಿಗಳನ್ನೂ ಸಹ ಎದುರಿಸಬೇಕು. ಇದಕ್ಕೂ ಸಹ ಸಾಮಾಜಿಕ ಬೆಂಬಲ, ಪ್ರಚಾರ ಮತ್ತು ಸಮುದಾಯದ ಜನರ ಆವಶ್ಯಕತೆಗಳೇನು ಎಂಬುದನ್ನು ತಿಳಿಯುವ ಪ್ರಯತ್ನಗಳಾಗಬೇಕು.

5. ರಾಜಕೀಯ ಇಚ್ಛಾಶಕ್ತಿ : ಅಧಿಕಾರಿಗಳಿಂದ ಇಂತಹ ಪ್ರಯತ್ನಗಳಿಗೆ ಬೆಂಬಲ ಮತ್ತು ಒಪ್ಪಿಗೆ ಸಿಗುವುದು ಕಷ್ಟ. ಕಾರಣ, ಇದಕ್ಕೆ ಪೂರಕವಾಗುವಂತಹ ಕಾಯಿದೆಗಳಿಲ್ಲದಿರುವುದು. ಉದಾಹರಣೆಗೆ, ಸಮುದಾಯ ರೇಡಿಯೋ ನಿಲಯಗಳನ್ನು ಆರಂಭಿಸಲು ಕಾನೂನಿನ ಬೆಂಬಲವಿಲ್ಲದಿರುವುದೂ ಸಹ ಇಂತಹ ಪ್ರಯತ್ನಗಳು ಆರಂಭವಾಗದಿರಲು ಕಾರಣ.

6. ರಾಜಕೀಯ ಒತ್ತಡ : ಯಾವುದಾದರೊಂದು ರಾಜಕೀಯ ಪಕ್ಷ ಅಧಿಕಾರದಲ್ಲಿದ್ದಾಗ ಆರಂಭಿಸಿದ ಯೋಜನೆಗಳು ಮತ್ತೊಂದು ಪಕ್ಷ ಅಧಿಕಾರಕ್ಕೆ ಬಂದಾಗ ಪ್ರಾಮುಖ್ಯತೆ ಕಳೆದುಕೊಳ್ಳುತ್ತವೆ. ಇಲ್ಲಿನ ಆವಶ್ಯಕತೆ, ಜನರ ಆವಶ್ಯಕತೆಗಳು ಏನು, ತಮಗೆ ಎಂತಹ ಸೇವೆಗಳು ಬೇಕೇಬೇಕು ಎಂದು ಗಟ್ಟಿಯಾಗಿ ಒತ್ತಾಯಿಸುವಂತಾಗಬೇಕು. ಆಗ ಈ ಸೇವೆಗಳ ಗುಣಮಟ್ಟದಲ್ಲಿ ಇಳಿಕೆಯಾಗುವುದನ್ನು ತಪ್ಪಿಸಬಹುದು.

7. ಸುಸ್ಥಿರತೆ : ಇದನ್ನು ಹಲವಾರು ಆಯಾಮಗಳಿಂದ ಪರಿಶೀಲಿಸಲಾಗಿದೆ.

ಎ) ಅನೇಕ ಬಾರಿ ದಾನಿ ಸಂಸ್ಥೆಗಳು ಹೇಳಿದ್ದನ್ನೇ ಮಾಡಬೇಕಾಗುತ್ತದೆ. ಸಮುದಾಯಗಳ ನಿಜವಾದ ಆವಶ್ಯಕತೆಯನ್ನು ಗಣನೆಗೆ ತೆಗೆದುಕೊಳ್ಳದೆ, ದಾನಿ ಸಂಸ್ಥೆಗಳ ವಿಚಾರವನ್ನು ಮುಂದಿಡಬೇಕಾಗುತ್ತದೆ.

ಬಿ) ಐ.ಸಿ.ಟಿ. ಸೇವೆಗಳನ್ನು ಉಚಿತವಾಗಿ ನೀಡಲಾಗದು. ಏಕೆಂದರೆ ಆಗ ಕೇಂದ್ರವನ್ನು ನಡೆಸಲು ಆಗದು. ಪ್ರತಿ ಸೇವೆಗೆ ಕನಿಷ್ಟ ಸೇವಾ ಶುಲ್ಕವನ್ನು ವಿಧಿಸಲೇಬೇಕು ಅಥವಾ ಯಾರಿಗೆ ಕೊಡಲಾಗುತ್ತದೋ ಅಂತಹವರಿಂದ ಹೆಚ್ಚಿನ ಶುಲ್ಕ ಪಡೆದು ಬಡವರ ಸೇವೆಗೆ ಆದರಿಂದ ತುಂಬಿಕೊಳ್ಳಬಹುದು. ಇನ್ನೊಂದು ವಿಧಾನ, ಈಗ ನೀಡುತ್ತಿರುವ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸಿದಲ್ಲಿ ಜನರಿಗೆ ಅಂತಹ ಸೇವೆಗಳ ಆವಶ್ಯಕತೆ ಕಂಡು ಬಂದು ಅವರು ಹೆಚ್ಚಿನ ಸೇವೆಗಳಿಗೆ ಬೇಡಿಕೆ ಸಲ್ಲಿಸುತ್ತಾರೆ. ಆಗ ಮಹಿಳೆಯರ ಸಾಮರ್ಥ್ಯ ಮತ್ತು ಅವರು ನೀಡುತ್ತಿರುವ ಸೇವೆಗಳಿಗೆ ಬೆಲೆ ಬಂದು, ಕೇಂದ್ರಗಳ ಸುಸ್ಥಿರತೆ ಸಾಧ್ಯವಾಗುತ್ತದೆ. ಜೊತೆಜೊತೆಯಲ್ಲಿ ಈಗ ಚಾಲ್ತಿಗೆ ಬಂದಿರುವ ಇ-ವ್ಯಾಪಾರವನ್ನೂ ಸಹ ರೂಢಿಸಿಕೊಂಡಲ್ಲಿ ಹೆಚ್ಚಿನ ಆದಾಯ ಗಳಿಸಿ, ಸುಸ್ಥಿರತೆ ವಾಸ್ತವವಾಗಬಹುದು.

ಸಿ) ಅಂತಿಮವಾಗಿ ಮಹಿಳೆಯರು ಹೇಳಿದ್ದು, ಆರಂಭಿಕ ಬೆಂಬಲ ಏನೇನೂ ಸಾಲದು. ಅವರ ಜ್ಞಾನ, ಕೌಶಲ್ಯವನ್ನು ಬೆಳೆಸಿಕೊಳ್ಳಲು, ವಿವಿಧ ಜಾಲಗಳೊಡನೆ ಸಂಪರ್ಕ ಬೆಳೆಸಲು ಮತ್ತು ಅವರ ಸೇವೆಗಳನ್ನು ವಿಸ್ತರಿಸಲು, ಹೊಸತನ್ನು ಕಂಡುಕೊಳ್ಳಲು ಮತ್ತು ದೀರ್ಘಾವಧಿಯಲ್ಲಿ ಸ್ಪರ್ಧಾತ್ಮಕವಾಗಿರಲು ಅವರಿಗೆ ಸತತವಾದ ತರಬೇತಿ ಬೇಕು.

## ಸೇವೆಗಳ ನಿರ್ವಹಣೆ ಮತ್ತು ಉದ್ಯಮಶೀಲತೆ ನಡುವಿನ ತಾಕಲಾಟ : ಸಂಸ್ಥೆಗಳು ತಮ್ಮ ಸೇವಾ ನಿರ್ವಹಣೆ ಮತ್ತು ಉದ್ಯಮಶೀಲತೆಯ ಗುರಿಗಳ ನಡುವಿನ ತಾಕಲಾಟವನ್ನು ಹೇಗೆ ತೂಗಿಸಿಕೊಂಡು ಹೋಗುತ್ತಾರೆ?

ಐ.ಸಿ.ಟಿ. ಉದ್ಯಮದ ರೀತಿನೀತಿಗಳು, ಅಳವಡಿಸುವಿಕೆಯ ಹಿನ್ನೆಲೆಯಲ್ಲಿ, ಸಂಸ್ಥೆಗಳೂ ಸಹ ಯೋಜಿತ ಕಾರ್ಯತಂತ್ರಗಳು, ಆದ್ಯತೆಗಳನ್ನು ಆರಿಸಿಕೊಳ್ಳಬೇಕು. ಉದಾಹರಣೆಗೆ, ಹಿಂದುಳಿದ, ಸಂಕಷ್ಟಕ್ಕೀಡಾದ ಮಹಿಳೆಯರಿಗೆ ಐ.ಸಿ.ಟಿ. ಕೌಶಲ್ಯದಲ್ಲಿ ತರಬೇತಿ ನೀಡುವುದು ಮತ್ತು ಎಲ್ಲಿಯಾದರೂ ಅವರಿಗೆ ಉದ್ಯೋಗ ದೊರಕಿಸಿಕೊಳ್ಳಲು ಸಂಪರ್ಕಿಸುವುದು ಅಥವಾ ಒಂದು ಐ.ಸಿ.ಟಿ. ಕೇಂದ್ರವನ್ನು ಸ್ಥಾಪಿಸಿ ಅದನ್ನು ನಡೆಸಲು ಬೇಕಾದ ಮಾಹಿತಿ ಸೇವೆಯನ್ನಷ್ಟೇ ನೀಡುವುದು ಸಂಸ್ಥೆಯ ಗುರಿಯೇ ಅಥವಾ, ಇನ್ನೂ ಮುಂದಕ್ಕೆ ಯೋಚಿಸಿ, ಮಹಿಳೆಯರ ಗುಂಪುಗಳನ್ನು ಸಂಘಟಿಸಿ, ಅವರಿಗೆ ತರಬೇತಿ, ಮಾಹಿತಿ ನೀಡಿ ಅವರೇ ಜಂಟಿಯಾಗಿ ಸಮುದಾಯದಲ್ಲೊಂದು ಉದ್ಯಮವನ್ನು ಆರಂಭಿಸಲು ಉತ್ತೇಜಿಸುವುದೋ. ಕೆಲವು ಸಂಸ್ಥೆಗಳು ಒಂದೊಂದು ಟೆಲಿಕೇಂದ್ರಗಳನ್ನು ಆರಂಭಿಸಿ ಮಹಿಳೆಯರ ವಿಚಾರಗಳನ್ನು ಕುರಿತು ವಿಡಿಯೋ ಚಿತ್ರ ಮಾಡುವುದರ ಮೂಲಕ ಸ್ಥಳೀಯವಾಗಿ, ಚುಟುಕಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವುದರ ಮೇಲೆ ಗಮನ ಕೇಂದ್ರೀಕರಿಸಬಹುದು. ಹೊಸ ತಂತ್ರಜ್ಞಾನಗಳ ಅವಕಾಶಗಳನ್ನು ಬಳಸಿಕೊಂಡು ತಮ್ಮ ಸೇವೆಯನ್ನು ವಿಸ್ತರಿಸುವ ಹಾಗೂ ಒಗ್ಗೂಡಿದ ಪ್ರಯತ್ನಕ್ಕೆ ಮತ್ತೆ ಕೆಲವರು ಪ್ರಯತ್ನಿಸಬಹುದು. ಅದರಲ್ಲಿ ಎ) ದೊಡ್ಡ ಪ್ರದೇಶದಲ್ಲಿ ಐ.ಸಿ.ಟಿ. ಆಧಾರಿತ ಸೇವೆಗಳನ್ನು ಹರಡುವುದು; ಬಿ) ವಿವಿಧ ಮಹಿಳಾ ಗುಂಪುಗಳೊಂದಿಗೆ ಅವರ ಅಂತರ್ಜಾಲ, ಸಂಪನ್ಮೂಲ ಮತ್ತು ಅನುಭವಗಳನ್ನು ಹಂಚಿಕೊಳ್ಳಬಹುದು.

ಸಂಸ್ಥೆಗಳು ತೆಗೆದುಕೊಳ್ಳಬೇಕಾದ ಅತ್ಯಂತ ಪ್ರಮುಖವಾದ ನಿರ್ಧಾರ, ವ್ಯಾಪಾರಿ ಉದ್ಯಮದ ಗುರಿಗಳು ಮತ್ತು ಸಾಮಾಜಿಕ ಉದ್ಯಮದ ಗುರಿಗಳ ನಡುವೆ ಸಮತೋಲನವನ್ನು ಕಾಪಾಡಿಕೊಳ್ಳುವುದು. ಮೊದಲನೆಯದಕ್ಕೆ ಸಂಸ್ಥೆಗಳು ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದೇ

ಆದಲ್ಲಿ (ಐ.ಸಿ.ಟಿ. ಸೇವೆಗಳಾಗಲಿ ಅಥವಾ ಮಾಹಿತಿ ಸೇವೆಗಳಾಗಲಿ), ಅವಕ್ಕೆ ಸೇವಾಶುಲ್ಕವನ್ನು ವಿಧಿಸಿ ಅದನ್ನು ತಮ್ಮ ಮಾಸಿಕ ಖರ್ಚು ವೆಚ್ಚಗಳಿಗೆ, ಮಹಿಳಾ ಉದ್ಯಮಿಗಳಿಗೆ ಹಣ ನೀಡಲು ಮತ್ತು ತಮ್ಮ ಸಂಸ್ಥೆಯ ಆರ್ಥಿಕ ಸುಸ್ಥಿರತೆಯನ್ನು ಕಾಪಾಡಿಕೊಳ್ಳಲು ಬಳಸುತ್ತಾರೆ. ಎರಡನೆಯದಕ್ಕೆ ಒತ್ತು ನೀಡುವ ಸಂಸ್ಥೆಗಳು–ಅವರಿಗೆ ಬೇರೆ ಬೆಂಬಲವಿದ್ದಲ್ಲಿ–ಉಚಿತವಾಗಿ ಸೇವೆಗಳನ್ನು ನೀಡಬಹುದು, ಅಥವಾ ಕೆಲವು 'ಮುಖ್ಯ' ಸೇವೆಗಳಿಗೆ (ಸರ್ಕಾರಿ ಯೋಜನೆಗಳು ಅಥವಾ ಕೃಷಿ ಮಾಹಿತಿ) ಶುಲ್ಕದಲ್ಲಿ ವಿನಾಯಿತಿ ಅಥವಾ ನಿರ್ದಿಷ್ಟ ಹಿನ್ನೆಲೆಯ ಗುಂಪುಗಳಿಗೆ ನೀಡುವ ಸೇವೆಗಳಿಗೆ (ಮಕ್ಕಳು, ಮಹಿಳೆಯರು ಮತ್ತು ವೃದ್ಧರ ಗುಂಪುಗಳು) ಶುಲ್ಕದಲ್ಲಿ ವಿನಾಯಿತಿ ಅಥವಾ ಕೆಲವು ನಿರ್ದಿಷ್ಟ ಅವಧಿಯಲ್ಲಿ ಕಡಿಮೆ ಶುಲ್ಕವನ್ನು ವಿಧಿಸುವುದು (ಉದಾಹರಣೆಗೆ ಮೊದಮೊದಲು ತಮಗೆ ಬೆಂಬಲವಿದ್ದು ನೀಡುವ ಮಾಹಿತಿ, ಸೇವೆಗಳನ್ನು ಉಚಿತವಾಗಿ ನೀಡುವುದು, ಅಥವಾ ಮುಂದೆ ಯಾವಾಗಲಾದರೂ ಬೆಂಬಲ ನಿಂತಾಗ ಅಥವಾ ಸಮುದಾಯವೇ ಇಡೀ ಸೇವೆಗೆ ಹಣ ನೀಡಿದ್ದಲ್ಲಿ).

ಒಂದು ಮಾದರಿಯನ್ನು ಬಿಟ್ಟು ಮತ್ತೊಂದು ಮಾದರಿಯನ್ನು ಅವಲಂಬಿಸಲು ಸಂಘಟಕರನ್ನು ಪ್ರಚೋದಿಸುವುದಾದರೂ ಹೇಗೆ? ಸಾಮಾಜಿಕ ಉದ್ಯಮಿಗಳಾಗುವತ್ತ ಇರುವ ಮಾದರಿಯನ್ನು ಅಪ್ಪಿಕೊಳ್ಳಲು ಕೆಲವು ಅಂಶಗಳಿವೆ. ಹಣ ನೀಡಲು ಅಸಮರ್ಥರಾದ ಬಡ ಸಮುದಾಯಗಳ ಮಧ್ಯದಲ್ಲಿ ಅವರ ಆವಶ್ಯಕತೆಗಳನ್ನು ಪೂರೈಸಲೆಂದೇ ಆರಂಭವಾಗುವ ಐ.ಸಿ.ಟಿ. ಉದ್ಯಮಗಳು ಶುಲ್ಕ ವಸೂಲಿ ಮಾಡುವ ವಿಧಾನವು ಈ ಮುಂದಿನ ಕಾರಣಗಳಿಂದಾಗಿ ಸಾಧುವಲ್ಲ.

ಈ ಕೇಂದ್ರಗಳು ನೀಡುವ ಸೇವೆಗಳು ಸಮುದಾಯದ ಜನರಿಗೆ ಅಷ್ಟೊಂದು ಮೇಲಿಂದ ಮೇಲೆ ಬೇಕಾಗುವುದಿಲ್ಲ (ಉದಾಹರಣೆಗೆ ಜನ್ಮ ದಾಖಲೆ ಅಥವಾ ಶಾಲಾ ದಾಖಲೆ ಒಮ್ಮೆ ಮಾತ್ರ ಸಿಕ್ಕರೆ ಸಾಕು). ತಿಂಗಳೊಂದಕ್ಕೆ ಸಿಗುವ ಗ್ರಾಹಕರ ಸಂಖ್ಯೆಯನ್ನು ಗಮನಿಸಿದರೆ, ಕೇಂದ್ರವನ್ನು ನಡೆಸುವ ಸಿಬ್ಬಂದಿಗೆ ಅಲ್ಲಿ ಸಿಗುವ ಆದಾಯ ಏನೇನೂ ಸಾಲುವುದಿಲ್ಲ ಮತ್ತು ಸುಸ್ಥಿರಗೊಳಿಸುವುದಿಲ್ಲ. ಈ ಉದ್ಯಮದ ಪ್ರಗತಿ, ಯಶಸ್ಸನ್ನು ಅದು ಗಳಿಸಬಹುದಾದ ಆದಾಯ, ಲಾಭವನ್ನು ಗಮನಿಸಿ ಅಳೆಯುವುದಾದರೆ, ಸಮುದಾಯದ ಅತ್ಯಂತ ಪ್ರಮುಖವಾದ ಆವಶ್ಯಕತೆಯನ್ನು ಈ ಕೇಂದ್ರಗಳು ಪೂರೈಸುತ್ತಿದ್ದರೂ ಇಡೀ ಪ್ರಯತ್ನವನ್ನು ಒಂದು 'ಸೋಲು' ಎಂದೇ ಹೇಳಬೇಕಾಗುತ್ತದೆ. ಸಣ್ಣ ಮಟ್ಟದ ವ್ಯಾಪಾರ ವ್ಯವಹಾರಗಳನ್ನು ನಡೆಸುವ ಮಹಿಳೆಯರೆದುರು, ಕೇವಲ ಲಾಭ ಮಾಡುವ ದೃಷ್ಟಿ ಇಲ್ಲದಿರುವ ಮಹಿಳಾ ಉದ್ಯಮಿಗಳು ಹೊಸ ವಿಧಾನಗಳು, ವಿಚಾರಗಳನ್ನು ಕಂಡುಕೊಳ್ಳುವ ಸಾಮರ್ಥ್ಯವಿರುವುದರಿಂದ ಭಿನ್ನವಾಗಿರುತ್ತಾರೆ. ಮಹಿಳಾ ಉದ್ಯಮಿಗಳು ಲಾಭದ ಮೇಲೆ ಹೆಚ್ಚು ಒತ್ತು ಕೊಟ್ಟಿದ್ದೇ ಆದಲ್ಲಿ, ಹೊಸ ವಿಚಾರ, ಹೊಸ ವಿಧಾನ, ಹೊಸ ಹೊಳಹುಗಳ ಮೇಲೆ ಪ್ರಯೋಗ ಮಾಡುವ ಧನಾತ್ಮಕ ತಿರುವುಗಳತ್ತ ಗಮನಿಸುವುದಿಲ್ಲ ಮತ್ತು ಅದರಿಂದಾಗಿ ಸಮುದಾಯದಲ್ಲಿ ಅವರಿಗಿರುವ ಸ್ಥಾನಮಾನ ಮತ್ತು ಅವರ ಸೇವೆಗಳ ಗುಣಮಟ್ಟದ ಮೇಲೂ ಅದು ಪರಿಣಾಮ ಬೀರುತ್ತದೆ.

ಈ ಮೇಲಿನ ವಿಚಾರಗಳನ್ನು ಗಮನಿಸಿದಾಗ, ಆದಾಯ ಗಳಿಕೆಯತ್ತ ಮಾತ್ರ ಗಮನ ಹರಿಸಿದರೆ, ಸೇವೆಯತ್ತ ಇರುವ ಒಲವನ್ನು ಮರೆ ಮಾಚುವಂತೆ ಮಾಡುವುದೇ ಅಲ್ಲದೆ ಐ.ಸಿ.ಟಿ. ಕೇಂದ್ರಗಳ ಸ್ವಭಾವ ಮತ್ತು ಉದ್ದೇಶದಿಂದ ದೂರ ಹೋದಂತಾಗುತ್ತದೆ. ಉದಾಹರಣೆಗೆ, ಸೇವೆಗಳನ್ನು ನೀಡುವ ಉದ್ದೇಶಗಳ ಪರಿಧಿಯಿಂದ ಹೊರಬಿದ್ದು, ಯಾವುದರಲ್ಲಿ ಹಣವಿದೆ, ಲಾಭವಿದೆಯೋ ಅಂತಹ ಸೇವೆಗಳತ್ತ ಮಾತ್ರ ಕೇಂದ್ರೀಕರಿಸುವಂತಾಗುತ್ತದೆ. ಸಮುದಾಯಗಳ ಬಡ ಮಹಿಳೆಯರಿಗೆ ಯಾವಾಗಲೂ ಬೇಕಾದ ಮಾಹಿತಿಗಳು–ಕೃಷಿ ಉತ್ಪನ್ನಗಳ ಬೆಲೆ,

ಮಕ್ಕಳಿಗೆ ರೋಗ ನಿರೋಧಕಗಳನ್ನು ಹಾಕುವ ಅವಧಿಗಳ ವಿವರ ಅಥವಾ ದೂರ ಸಂಪರ್ಕ ಆರೋಗ್ಯ ಸೇವೆಗಳೇ ಮೊದಲಾದವು ಅಷ್ಟೊಂದು ಲಾಭಕರವಲ್ಲ. ಇದರ ಬದಲು, ವಿದ್ಯುತ್, ನೀರು, ಟೆಲಿಫೋನ್ ಇತ್ಯಾದಿಗಳ ಬಿಲ್ಲಿನ ಹಣ ಕಟ್ಟಿಸಿಕೊಳ್ಳುವುದು, ಇ-ಮೇಲ್, ವೆಬ್ ಸೈಟ್ ನೋಡಲು ಬರುವವರಿಗೆ ಸಹಾಯ ಮಾಡುವುದರಲ್ಲಿ ಹಣವಿದೆ ಮತ್ತು ಅದಕ್ಕೇ ಪ್ರಾಮುಖ್ಯತೆ ಬಂದುಬಿಡುತ್ತದೆ.

ಇದರೊಂದಿಗೆ ಯಾವ ಬಡ ಸಮುದಾಯಗಳು ಮತ್ತು ಅದರಲ್ಲೂ ಮಹಿಳೆಯರಿಗೆ ಐ.ಸಿ.ಟಿ.ಯಂತಹ ಸೇವೆಗಳು ಮತ್ತವುಗಳ ಸಾಧ್ಯತೆಗಳು ತಿಳಿದಿರುವುದಿಲ್ಲವೋ, ಅವರು ಈ ಕೇಂದ್ರದಲ್ಲಿ ಸೇವೆ ಪಡೆಯಲು ಶುಲ್ಕ ನೀಡಬೇಕೆಂದರೆ, ಆ ಸೇವೆಗಳು ಅವರಿಗೆ ಬೇಕಾದರೂ ಅವರು ಅಲ್ಲಿಗೆ ಬರುವುದೂ ಇಲ್ಲ, ಪ್ರಯತ್ನಿಸುವುದೂ ಇಲ್ಲ. ಹೀಗಾದಾಗ, ಯಾರಿಗೆ ಸಮಯವಿರುತ್ತದೆ, ಯಾರು ಹಣ ಹಾಕಲು ಅಷ್ಟೇನೂ ಕಷ್ಟ ಪಡಬೇಕಿಲ್ಲವೋ, ಯಾರು ಹೊಸ ವಿಧಾನ, ಪ್ರಯತ್ನಗಳಿಗೆ ಒಡ್ಡಿಕೊಳ್ಳಲು ಸಿದ್ಧರಿದ್ದಾರೋ, ಯಾರಿಗೆ ಅದರಿಂದ ಏನೂ ನಷ್ಟವಾಗುವುದಿಲ್ಲವೋ ಅಂತಹ ಪುರುಷರು, ಆರ್ಥಿಕವಾಗಿ ಮುಂದುವರಿದ ಮಹಿಳೆಯರು ಟೆಲಿಕೇಂದ್ರದ ಸೇವೆಗಳನ್ನು ಪಡೆಯಲು ಸಿದ್ಧರಿರುತ್ತಾರೆ. ಇಂತಹ ಸೇವೆಗಳನ್ನು ನೀಡಲು ಇನ್ನೂ ಮೂಲಭೂತ ಸೌಕರ್ಯಗಳನ್ನು ಕಟ್ಟಬೇಕಿದೆ. ಸಮುದಾಯದ ಬೇಡಿಕೆಯೇನು, ಅದನ್ನು ಅವರು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ತಿಳಿಯಬೇಕಿದೆ, ಅದಕ್ಕೆ ಇನ್ನೂ ಸಮಯ ಮತ್ತು ಸಂಪನ್ಮೂಲಗಳನ್ನು ಹೂಡಬೇಕಿದೆ - ಹೀಗಿರುವಾಗ, ಮಹಿಳೆಯರು ನಡೆಸುವ ಮತ್ತು ಅದರಲ್ಲಿ ಆದಾಯ, ಲಾಭ ಇರಲೇಬೇಕೆಂದು ಬಯಸುವ ಐ.ಸಿ.ಟಿ. ಕೇಂದ್ರಗಳನ್ನು ಆರಂಭಿಸುವ ಪ್ರಸ್ತಾಪ ಅಷ್ಟೇನೂ ಸೂಕ್ತವಲ್ಲ.

ಇದಕ್ಕೆ ಸಂಬಂಧಿಸಿದ ಇನ್ನೊಂದು ವಿಚಾರ ಹೀಗಿದೆ - ಇದನ್ನು ಉದ್ಯಮವಾಗಿ ನಡೆಸಬೇಕು ಎನ್ನುತ್ತಿದ್ದ ಹಾಗೆ ಸಮುದಾಯದ ಹಿಂದುಳಿದ, ಸಂಪನ್ಮೂಲಗಳಿಲ್ಲದ ಜನ ಯಾರಿಗೆ ಹೊಸ ಕ್ಷೇತ್ರಗಳಿಗೆ ಕಾಲಿಡಲು ಕಷ್ಟವಿರುವುದೋ, ಯಾರಿಗೆ ಇಂತಹವುಗಳನ್ನು ನಿರ್ವಹಿಸುವಲ್ಲಿ ಅನುಭವವಿರುವುದಿಲ್ಲವೋ, ಅಂತಹ ಮಹಿಳೆಯರು, ದಲಿತರು, ಭೂವಿಹೀನರೇ ಮೊದಲಾದವರು ಹಿಂಜರಿಯುತ್ತಾರೆ. ತಿಂಗಳು ತಿಂಗಳೂ ಆದಾಯ ತರಬೇಕು ಎನ್ನುವುದೇ ಅನುಭವವಿಲ್ಲದವರಿಗೆ ತಾವು ಉದ್ಯಮ ನಡೆಸುವುದು, ಟೆಲಿ ಕೇಂದ್ರವನ್ನು ಸ್ವಂತವಾಗಿ ನಿರ್ವಹಿಸುವ ವಿಚಾರವೇ ದಿಗಿಲುಂಟು ಮಾಡುತ್ತದೆ. ಚಿಕ್ಕಪುಟ್ಟ ವ್ಯಾಪಾರೀ ಪ್ರಯತ್ನಗಳನ್ನು ಮಾಡಿ ಅದರ ಹಣಕಾಸನ್ನು ನಿರ್ವಹಿಸುವ ಚಾಕಚಕ್ಯತೆ ಹೊಂದಿರುವ ಸಮುದಾಯದ ಜನರು ಬಹು ಶೀಘ್ರವಾಗಿ ಐ.ಸಿ.ಟಿ. ಕೇಂದ್ರಗಳನ್ನು ಸಹ ಅವರದನ್ನಾಗಿಸಿಕೊಂಡು ಬಿಟ್ಟರೆ, ಬಡ ಜನರನ್ನು ಇಂತಹ ಸೇವೆಗಳಿಂದ ಇನ್ನೂ ದೂರ ಮಾಡುತ್ತದೆ.

ಹೀಗೆ, ಯಾವು ಸಂಸ್ಥೆಯು ಕಡು ಬಡವರನ್ನು ತಲುಪಬೇಕು, ಅವರಿಗೆ ಸೇವೆ ನೀಡಿ ಅವರ ಸಾಮಾಜಿಕ, ಆರ್ಥಿಕ ಬದಲಾವಣೆಗೆ ಸಹಾಯ ಮಾಡಬೇಕು, ಯಾರಿಗೆ ಉದ್ಯಮಗಳನ್ನು ನಡೆಸುವ ಧೈರ್ಯವಿಲ್ಲವೋ ಅವರನ್ನು ಐ.ಸಿ.ಟಿ. ಉದ್ಯಮದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು ಎನ್ನುವ ಉದ್ದೇಶವನ್ನು ಹೊಂದಿರುತ್ತದೋ, ಅಲ್ಲಿ ವ್ಯಾಪಾರೀ ಉದ್ದೇಶದ ಉದ್ಯಮ ಮಾದರಿ ಸರಿ ಹೊಂದುವುದಿಲ್ಲ. ಇದರ ಬದಲು, ಚಿಕ್ಕ ಪುಟ್ಟ ಸೇವೆಗಳನ್ನು ಒದಗಿಸಿದಾಗಲೂ ಸಹ ಸಣ್ಣ ಪ್ರಮಾಣದ ಶುಲ್ಕವನ್ನು ವಿಧಿಸುವುದಕ್ಕೆ ಸಾಕಷ್ಟು ಕಾರಣಗಳಿವೆ.

ಬಡವರಿಗೂ ಸಹ, ಅವರಿಗೆ ಅತ್ಯಂತ ಆವಶ್ಯಕವಾಗಿ ಬೇಕೇ ಬೇಕಾದ ಸೇವೆಗಳು ಸ್ಥಳೀಯವಾಗಿ ಮತ್ತು ಶೀಘ್ರವೇ ಸಿಗುವುದು ಎಂದಾಗ ಕಿಂಚಿತ್ ಪ್ರಮಾಣದ ಶುಲ್ಕವನ್ನು ನೀಡಲು ತೊಂದರೆಯಾಗದು. ಅದಕ್ಕೆ ಅವರ ಸಮ್ಮತಿ ಇರುತ್ತದೆ. ಉದಾಹರಣೆಗೆ ವಿವಿಧ ರೀತಿಯ ಅರ್ಜಿಗಳಿಗೆ ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರ ತೆಗೆಸಲು, ಜನ್ಮದಾಖಲೆ/ಜಾತಿ ದಾಖಲೆ/ಮರಣ ದಾಖಲೆಯೇ

ಮೊದಲಾದವುಗಳನ್ನು ಪಡೆಯಲು ದೂರದೂರಕ್ಕೆ ಪ್ರಯಾಣಿಸಬೇಕು, ಅದಕ್ಕೂ ದುಬಾರಿ ಖರ್ಚು ಮಾಡಬೇಕು ಎಂದಾಗ, ಹತ್ತಿರದಲ್ಲೇ ದೊರಕುವ ಮಾಹಿತಿ, ಸೇವೆಗೆ ಕೊಂಚ ಪ್ರಮಾಣದ ಶುಲ್ಕ ನೀಡುವುದರಲ್ಲಿ ತಪ್ಪೇನಿದೆ ಎಂದು ಹೇಳುತ್ತಾರೆ.

ಇನ್ನೊಂದು ಆಯಾಮದಲ್ಲಿ ನೋಡಿದಾಗ, ಉಚಿತವಾಗಿ ನೀಡಿದಲ್ಲಿ ಕಳೆದುಕೊಳ್ಳುವ ಮೌಲ್ಯ, ಗೌರವವನ್ನು ಶುಲ್ಕ ವಿಧಿಸಿದಾಗ ಸೇವೆಗಳು ಸಹಜವಾಗಿ ಪಡೆದುಕೊಳ್ಳುತ್ತವೆ. ಶುಲ್ಕ ವಿಧಿಸುವುದರಿಂದ ಸೇವೆ ನೀಡುವ ಉದ್ಯಮಿಗೆ ಹಾಗೂ ಸೇವೆ ಪಡೆಯುತ್ತಿರುವ ಗ್ರಾಹಕರಿಬ್ಬರಿಗೂ ಬದ್ಧತೆ ಬೆಳೆಸಿಕೊಳ್ಳಲು ನೆರವಾಗುತ್ತದೆ. ಉದಾಹರಣೆಗೆ, ಕುಡುಂಬಶ್ರೀ ಯೋಜನೆಯು ಮಹಿಳೆಯರಿಗೆ ಎಲ್ಲ ರೀತಿಯ ತರಬೇತಿಗಳನ್ನು ಉಚಿತವಾಗಿ ನೀಡುತ್ತಿತ್ತು. ಆದರೆ ನಂತರ ನಡೆದ ಒಂದು ಸರ್ವೇಕ್ಷಣೆ ತೋರಿಸಿದ್ದು ಪ್ರತಿ ಶತ 99 ಮಹಿಳೆಯರಿಗೆ ಈ ತರಬೇತಿಯ ಪ್ರಾಮುಖ್ಯತೆ ಮತ್ತು ಮೌಲ್ಯದ ಅರಿವಾದುದರಿಂದ ತರಬೇತಿಗೆ ಶುಲ್ಕ ನೀಡಲು ತಯಾರಿದ್ದಾರೆ ಎಂಬುದು.

ಶುಲ್ಕವನ್ನು ವಿಧಿಸುವುದರಿಂದ, ಮಹಿಳೆಯರಿಗೆ ಸರ್ಕಾರದ ಮೇಲೋ ಅಥವಾ ಸ್ವಯಂಸೇವಾ ಸಂಸ್ಥೆ ಅಥವಾ ನೆರವು ನೀಡುವ ಸಂಸ್ಥೆಯ ಮೇಲೆ ಅವಲಂಬಿತರಾಗುವ ಸಂಸ್ಕೃತಿಗೆ ಜೋತು ಬೀಳುವುದು ತಪ್ಪುತ್ತದೆ. ಆರಂಭದ ದಿನಗಳಲ್ಲಿ ಸ್ವಲ್ಪ ಮಟ್ಟಿನ ಬೆಂಬಲ ನೆರವು ಪಡೆದರೂ, ಮುಂದಿನ ದಿನಗಳಲ್ಲಿ ನೀಡುವ ಸೇವೆಗಳಿಗೆ ಶುಲ್ಕ ವಿಧಿಸಿ ಅದರಿಂದ ಬರುವ ಮಾಸಿಕ ಆದಾಯವಿರುವುದರಿಂದ, ಬೆಂಬಲ ಸಂಸ್ಥೆಗಳ ನೀತಿ ನಿಯಮಗಳಲ್ಲಿ ಏನಾದರೂ ಬದಲಾವಣೆಗಳು ಬಂದರೂ ಸಹ ಎದೆಗುಂದದೆ ಉದ್ದಿಮೆಯನ್ನು ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ. ಜೊತೆಗೆ, ವ್ಯಾಪಾರೀ ಮಾದರಿಯಲ್ಲಿ ಈ ಉದ್ದಿಮೆಯನ್ನು ನಡೆಸಿ, ಮಹಿಳಾ ಉದ್ಯಮಿಯ ಆದಾಯ ಆಕೆ ನೀಡುವ ಸೇವೆಯ ಮೇಲೆ ಅವಲಂಬಿಸಿದೆ ಎಂದಾಗ, ಆಕೆ ಹೊಸ ಸಾಧ್ಯತೆಗಳನ್ನು ಹುಡುಕಲು, ಹೊಸ ವಿಧಾನಗಳ ಪ್ರಯೋಗಗಳನ್ನು ಮಾಡಲು ಸಿದ್ಧರಾಗುತ್ತಾರೆ. ಅದರ ಕೆಲಸದ ರೀತಿಯಿಂದಲೇ ಐ.ಸಿ.ಟಿ. ಕೊನೆಯೇ ಇಲ್ಲದಂತಹ ಸಾಧ್ಯತೆಗಳನ್ನು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಹೀಗಾಗಿ, ಇವುಗಳನ್ನು ಸಮರ್ಥವಾಗಿ ಉಪಯೋಗಿಸಿಕೊಂಡಿದ್ದೇ ಆದಲ್ಲಿ, ಸಮುದಾಯದ ಹಲವಾರು ಸೇವಾ ಸಾಧ್ಯತೆಗಳನ್ನು ಮಹಿಳಾ ಉದ್ಯಮಿಗಳು ನೀಡುವುದೇ ಅಲ್ಲದೆ, ಅದರಿಂದ ಹೆಚ್ಚಿನ ಆದಾಯವನ್ನೂ ಪಡೆಯಲು ಸಾಧ್ಯವಿದೆ.

ಕೊನೆಯದಾಗಿ, ಶುಲ್ಕ ವಿಧಿಸುವುದರಿಂದ ದೀರ್ಘಾವಧಿಯಲ್ಲಿ ಉದ್ಯಮಿಗಳಿಗೆ ಸುಸ್ಥಿರತೆಯನ್ನು ಒದಗಿಸುತ್ತದೆ. ಆದಾಯ ಉತ್ಪತ್ತಿ ವಿಧಾನದಲ್ಲಿ ಉದ್ಯಮಿಗಳು ಕೆಲಸ ಮಾಡಿದ್ದೇ ಆದಲ್ಲಿ, ಸಮುದಾಯಕ್ಕೆ ನೆರವಾಗುತ್ತಾ ಅವರಿಗೆ ಅತ್ಯಾವಶ್ಯಕವಾದ ಸೇವೆಯನ್ನು ನೀಡುತ್ತಾ ಮುಂದಿನ ದಿನಗಳಲ್ಲಿ ನೆರವು ಸಂಸ್ಥೆಯಿಲ್ಲದೆ ಸ್ವತಂತ್ರವಾಗಿ ತಾವೇ ದೀರ್ಘಾವಧಿಯಲ್ಲಿ ಹೇಗೆ ಆ ಉದ್ಯಮದಲ್ಲಿ ಉಳಿಯಬಹುದು ಎಂದು ಯೋಚಿಸಲು ನೆರವಾಗುತ್ತದೆ.

ಈ ಎರಡನ್ನೂ ತುಲನೆ ಮಾಡಿದರೆ, ಸಾಮಾಜಿಕ ಉದ್ಯಮಿ ಅಥವಾ ವ್ಯಾಪಾರಿ ಉದ್ಯಮಿಯಾಗಬಹುದಾದ ಎರಡೂ ಸಾಧ್ಯತೆಗಳಿಗೆ ಬಲವಾದ ಕಾರಣಗಳಿವೆ. ಅತ್ಯಂತ ಬಡವರಿಗೆ ಸೇವೆಗಳನ್ನು ತಲುಪಿಸಲು ಮತ್ತು ಸಾಕಷ್ಟು ಪ್ರಮಾಣದಲ್ಲಿ ಸಾಮಾಜಿಕ ಬದಲಾವಣೆಗಳನ್ನು ತರಲು ಸಾಮಾಜಿಕ ಉದ್ಯಮಿಯ ಮಾದರಿ ಅತ್ಯಂತ ಯಶಸ್ವಿಯಾದರೂ, ಬೆಂಬಲ ಸಂಸ್ಥೆಯ ಹಣಕಾಸು ಮತ್ತು ಇತರ ನೆರವುಗಳು ನಿಂತು ಹೋದಲ್ಲಿ, ದೀರ್ಘಾವಧಿಯಲ್ಲಿ ಉದ್ದಿಮೆಯನ್ನು ಸುಸ್ಥಿರವಾಗಿ ನಡೆಸಿಕೊಂಡು ಹೋಗುವಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇನ್ನೊಂದು ದೃಷ್ಟಿಯಲ್ಲಿ, ವ್ಯಾಪಾರಿ ಉದ್ದಿಮೆಯ ಮಾದರಿ ಬೆಂಬಲ ಸಂಸ್ಥೆ ಇರಲಿ ಇರದಿರಲಿ, ಎಂತಹದೇ ಪ್ರಸಂಗ ಬಂದರೂ ತನ್ನನ್ನು ತಾನು ಸಂಭಾಳಿಸಿಕೊಂಡು ದೀರ್ಘಕಾಲ ನಡೆಸಿಕೊಂಡು ಹೋಗುವಷ್ಟು ಶಕ್ತಿ ಪಡೆದುಕೊಂಡರೂ, ಸಮುದಾಯದವರಿಂದ, ಅದರಲ್ಲೂ ಬಡವರಾದ ದಲಿತರು ಮತ್ತು ಮಹಿಳೆಯರಿಂದ ಸಮ್ಮತಿ ಪಡೆದುಕೊಳ್ಳುವುದು ಕಷ್ಟ.

**ಹೀಗಾಗಿ, ಗ್ರಾಮೀಣ ಪ್ರದೇಶದಲ್ಲಿ ಈ ಎರಡರ ತೂಕವರಿತು, ಒಂದು ಸೂಕ್ತವಾದ ಉದ್ಯಮದ ಮಾದರಿಯನ್ನು ಕಂಡುಕೊಳ್ಳುವುದು ಮುಖ್ಯ.** ಇದನ್ನು ಅಳವಡಿಸಲು ಸ್ಥಳೀಯ ಸಮುದಾಯ, ಸಂಸ್ಕೃತಿ, ಪರಿಸರ, ಸಾಮಾಜಿಕ-ಆರ್ಥಿಕ ಪರಿಸ್ಥಿತಿ, ಅಲ್ಲಿನ ಬೇಡಿಕೆಗಳು ಮತ್ತು ಆವಶ್ಯಕತೆಗಳು, ವ್ಯಾಪಾರೀ ಮಾರುಕಟ್ಟೆಯ ಸ್ಥಿತಿಗತಿ, ಅಲ್ಲಿ ಐ.ಸಿ.ಟಿ.ಗೆ ಇರಬಹುದಾದ ಸ್ಪರ್ಧೆಯೇ ಮೊದಲಾದವುಗಳ ಜೊತೆ ಈ ಉದ್ಯಮದ ಗುರಿಯೇನು ಮತ್ತು ಅದಕ್ಕೆ ಬೆಂಬಲವಾಗಿರುವ ಸಂಸ್ಥೆಯ ಗುರಿಯೇನು ಎಂಬಿವೇ ವಿಚಾರಗಳ ಬಗ್ಗೆ ಸೂಕ್ಷ್ಮವಾಗಿ ಅರಿತುಕೊಳ್ಳುವುದು ಅತ್ಯಾವಶ್ಯಕ.

ಇದಕ್ಕೆ ಬೆಂಬಲ ಸಂಸ್ಥೆಯ ನಿಲುವು ಬದ್ಧತೆಗಳು ಏನು ಎಂಬುದು ಕೂಡಾ ಮುಖ್ಯವಾಗುತ್ತದೆ - ಸಂಸ್ಥೆಯು ಹಣಕಾಸಿನ ನೆರವು ನೀಡುತ್ತದೋ - ಆರಂಭಿಕ ಬಂಡವಾಳ/ಕೇಂದ್ರ ನಡೆಸಲು ಬೇಕಾದ ಆಸ್ತಿ ಅಥವಾ ಸಮುದಾಯದಿಂದ ನಿವೇಶನ/ಸಂಪರ್ಕ; ನಿರಂತರವಾಗಿ ತರಬೇತಿಗಳನ್ನು ನೀಡುವುದು/ಕೌಶಲ್ಯ ವೃದ್ಧಿ/ಕೇಂದ್ರದ ಯಂತ್ರೋಪಕರಣಗಳು ಮತ್ತು ಸಾಫ್ಟ್‌ವೇರ್‌ನ್ನು ನವೀಕರಿಸುವುದು/ಹೊರ ಸಂಸ್ಥೆಗಳೊಡನೆ ಸಂಪರ್ಕ ಏರ್ಪಡಿಸಿ ಅಂತರ್ಜಾಲವನ್ನು ಹಿಗ್ಗಿಸುವುದು/ಸಾಂಸ್ಥಿಕ ಸಂಪರ್ಕಗಳನ್ನು ಬಲಪಡಿಸುವುದರತ್ತ ಗಮನ ಹರಿಸುವುದೋ; ಉದ್ಯಮಿಗಳಿಗೆ ಮಾಸಿಕ ಆದಾಯ ಒದಗಿಸಲು ಒಂದಷ್ಟು ಹಣವನ್ನು ನಿಗದಿಪಡಿಸುವುದೋ/ಉದ್ಯಮ ನಡೆಸುವ ಮಹಿಳೆಯರು ಕೈಗೊಳ್ಳುವ ಪ್ರತಿ ವ್ಯವಹಾರಕ್ಕೆ ಇಂತಿಷ್ಟು ಹಣ ಸಂಭಾವನೆಯಾಗಿ ನೀಡುವುದೆಂಬ ವ್ಯವಸ್ಥೆ ಮಾಡುವುದೋ (ಉದಾಹರಣೆಗೆ, ಐ.ಸಿ.ಟಿ. ನಡೆಸುವ ಮಹಿಳೆ ಪ್ರತಿ ಬಾರಿ ಒಂದು ಬಿಲ್ಲಿನ ಹಣವನ್ನು ಪಾವತಿಯಾಗಿ ತೆಗೆದುಕೊಂಡಾಗ ಆಕೆಗೆ ಇಂತಿಷ್ಟು ಹಣವನ್ನು ನೀಡುವುದು)-ಅಥವಾ ಈ ಮೇಲಿನವುಗಳ ಯಾವ ಸಂಯೋಜನೆಯಲ್ಲಿ ಮಹಿಳಾ ಉದ್ಯಮಿಗಳಿಗೆ ನೆರವಾಗುವಂತಹ ತಂತ್ರವನ್ನು ಬೆಂಬಲ ಸಂಸ್ಥೆಗಳು ಅಳವಡಿಸಿಕೊಳ್ಳುತ್ತದೆ ಎಂಬುದು ಮುಖ್ಯ.

ಮಹಿಳೆಯರು ಉದ್ಯಮಿಗಳಾಗಬೇಕು ಮತ್ತು ಅವರಲ್ಲಿ ಸಶಕ್ತತೆ ತರಬೇಕೆಂಬ ಗುರಿಯನ್ನು ಮುಟ್ಟಬೇಕು ಎನ್ನುವ ಅವಸರದಲ್ಲಿ ಸಂಸ್ಥೆಗಳು ತಮ್ಮ ಮೂಲ ಉದ್ದೇಶಗಳಾದ ಮಹಿಳೆಯರಿಗಾಗಿ ಇರುವ ಅವಕಾಶಗಳನ್ನು ಹೆಚ್ಚಿಸಬೇಕು ಮತ್ತು ಸಮುದಾಯಗಳಲ್ಲಿ ಲಿಂಗ ಸಮಾನತೆಯನ್ನು ಬೆಳೆಸಬೇಕೆಂಬುದನ್ನು ಮರೆಯಬಾರದು. ಈ ನಿಟ್ಟಿನಲ್ಲಿ, ನಾವು ಈ ಹಿಂದೆ ಕೇಳಲಾದ ಪ್ರಶ್ನೆಗಳೊಡನೆ ಇನ್ನಷ್ಟು ವಿಚಾರಗಳತ್ತ ಗಮನ ಹರಿಸಬೇಕು ಮತ್ತು ಅದಕ್ಕನುಗುಣವಾಗಿ ಗ್ರಾಮೀಣ ಮಹಿಳೆಯರ ಸಂಕೀರ್ಣವಾದ ಬದುಕಿಗೆ ಸೂಕ್ತವಾದಂತಹ ಮಾದರಿಯನ್ನು ಅಭಿವೃದ್ಧಿಪಡಿಸಬೇಕಿದೆ. ಇವೆಲ್ಲದರೊಂದಿಗೆ, ದೀರ್ಘಾವಧಿಯಲ್ಲಿ ಮಹಿಳೆಯರಿಗೆ ಲಾಭ ತರುವಂತಹ ಮಾದರಿಗಳಲ್ಲಿ ನಮ್ಮ ಬಂಡವಾಳವನ್ನು ಹೂಡುವಂತಹ ಅಚಲವಾದ ಸಾಂಸ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಆವಶ್ಯಕತೆಯನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಟೆಲಿಸೆಂಟರ್ ನಿರ್ವಹಿಸಲು ಅಥವಾ ರೇಡಿಯೋ ವಿಡಿಯೋ ಕಾರ್ಯಕ್ರಮಗಳನ್ನು ಮಾಡಲು ತರಬೇತಿ ಮುಗಿಸಿದ ಸ್ಥಳೀಯ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಯಾವ ವಿಧಾನದಲ್ಲಿ ತಮ್ಮ ಕೇಂದ್ರವನ್ನು ನಡೆಸಿದರೆ ಲಾಭದಾಯಕ, ಉತ್ತಮ ಎಂದು ಆರಂಭದಲ್ಲಿ ನಿರ್ಧರಿಸಲು ಅಸಾಧ್ಯ. ಈ ಮಹಿಳಾ ಗುಂಪುಗಳು ನಿಜವಾದ ಅರ್ಥದಲ್ಲಿ ಸಶಕ್ತರಾಗಿ ಉದ್ಯಮವನ್ನು ಸ್ವಶಕ್ತಿಯಿಂದ ನಡೆಸಿಕೊಂಡು ಹೋಗುವವರೆಗೆ ಈ ಮಹಿಳಾ ಗುಂಪುಗಳು ನಿಜವಾದ ಅರ್ಥದಲ್ಲಿ ಸಶಕ್ತರಾಗಿ ಉದ್ಯಮವನ್ನು ಸ್ವಶಕ್ತಿಯಿಂದ ನಡೆಸಿಕೊಂಡು ಹೋಗುವವರೆಗೆ ಅವರಿಗೆ ಬದ್ಧತೆಯುಳ್ಳ ಬೆಂಬಲ ಸಂಸ್ಥೆಗಳು - ಸರ್ಕಾರ ಅಥವಾ ಸ್ವಯಂಸೇವಾ ಸಂಘಟನೆಗಳು - ಈ ಎರಡರದ್ದೂ ಬೆಂಬಲವಿದ್ದಲ್ಲಿ ಒಳಿತು. ಅವರಿಗೆ ಬದ್ಧತೆಯುಳ್ಳ ಬೆಂಬಲ ಸಂಸ್ಥೆಗಳು -ಸರ್ಕಾರ ಅಥವಾ ಸ್ವಯಂಸೇವಾ ಸಂಘಟನೆಗಳು - (ಈ ಎರಡರದ್ದೂ ಬೆಂಬಲವಿದ್ದಲ್ಲಿ ಒಳಿತು!)

## ಈ ಅಧ್ಯಾಯ ಕೇಂದ್ರೀಕರಿಸಿದ ವಿಚಾರಗಳು ಯಾವುವು?

- ಮಹಿಳಾ ಸಶಕ್ತತೆಯನ್ನು ಸಾಕಾರಗೊಳಿಸುವಲ್ಲಿ ಐ.ಸಿ.ಟಿ.ಗೆ ಇರುವ ಅಗಾಧವಾದ ಸಾಧ್ಯತೆಗಳನ್ನು ಗುರುತಿಸುವುದು, ಐ.ಸಿ.ಟಿ ಆಧಾರಿತ ಉದ್ದಿಮೆಯನ್ನು ಆರಂಭಿಸಲು ಇರುವ ಹಲವಾರು ಎಡರುತೊಡರುಗಳು ಮತ್ತು ಪರಿಹಾರೋಪಾಯಗಳು. ಅವು : ಲಿಂಗಾಧಾರಿತ ಉದ್ಯೋಗದ ವಿಭಜನೆ ಮತ್ತು ಉದ್ಯಮಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಇರುವ ಇತಿಮಿತಿಗಳು; ಐ.ಸಿ.ಟಿ.ಆಧಾರಿತ ಉದ್ಯಮಗಳಲ್ಲಿ ತೊಡಗಲು ತರಬೇತಿ ಹೊಂದಿರುವ ಮಹಿಳೆಯರ ಅಲಭ್ಯತೆ, ಮದುವೆ, ಹೆರಿಗೆ ಇವೇ ಮೊದಲಾದ ಕಾರಣಗಳಿಂದ ಮಹಿಳೆಯರು ಕೆಲಸ ಬಿಟ್ಟು ಹೋಗುವುದು, ಮಾರುಕಟ್ಟೆಯ ಬೇಡಿಕೆಯಲ್ಲಿ ಏರುಪೇರು ಮತ್ತು ಬೆಂಬಲ ಸಂಸ್ಥೆಯ ನೀತಿ ನಿಯಮಗಳಲ್ಲಿ ಬದಲಾವಣೆ ಹಾಗೂ ಸಮುದಾಯಗಳು ಈ ಸೇವೆಗಳನ್ನು ತಮ್ಮದಾಗಿಸಿಕೊಳ್ಳುವಲ್ಲಿ ಹಿಂದೆ ಮುಂದೆ ನೋಡುವುದು, ಕೇಂದ್ರ ನಡೆಸಲು ಅತ್ಯಾವಶ್ಯಕವಾಗಿರುವ ಯಂತ್ರೋಪಕರಣಗಳು ಮತ್ತು ಸಾಫ್ಟ್‌ವೇರ್ ಕೊಳ್ಳಲು ಧನ ಸಹಾಯವಿಲ್ಲದಿರುವುದು.
- ಈ ಪಟ್ಟಿಯನ್ನು ನೋಡಿ ಪರಿಸ್ಥಿತಿ ಇಷ್ಟೊಂದು ದುಸ್ಥಿತಿಯಲ್ಲಿದೆಯೇ ಎಂದು ಹಿಂಜರಿಯಬೇಕಿಲ್ಲ. ಬೆಂಬಲ ಸಂಸ್ಥೆಗಳು ಹಲವಾರು ಕ್ರಮಗಳನ್ನು ತೆಗೆದುಕೊಂಡು ವಾಸ್ತವವಾಗಿ ತೊಂದರೆಗಳು ಆಗದಂತೆ ನೋಡಿಕೊಳ್ಳಬಹುದು. ಇದು ಸಾಧ್ಯವಾಗುವುದು ಉದ್ಯಮಿಗಳು ಸಮುದಾಯದ ವಿವಿಧ ಬೇಡಿಕೆಗಳನ್ನು ಗಮನಕ್ಕೆ ತೆಗೆದುಕೊಂಡು, ಅದರಂತೆ ತಮ್ಮ ಸೇವೆಗಳನ್ನು ಕೂಡಾ ವಿಸ್ತರಿಸಿಕೊಂಡಾಗ.
- ಸಂಸ್ಥೆಗಳೂ ಸಹ ಹಲವಾರು ಅವಕಾಶಗಳನ್ನು ಎದುರಿಟ್ಟುಕೊಂಡು ನಿರ್ಧಾರಗಳನ್ನು ಮಾಡಬೇಕು. ಉದ್ಯಮಿಗಳು ವ್ಯಾಪಾರೀ ಮನೋಭಾವವನ್ನು ತೋರಬೇಕೋ ಅಥವಾ ಸಾಮಾಜಿಕ ಸೇವಾ ವಿಧಾನದತ್ತ ಒಲವು ತೋರಬೇಕೋ ಎನ್ನುವುದು ಬಹಳ ಮುಖ್ಯವಾದುದು. ಈ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ಬಲವಾದ ಕಾರಣಗಳು ಇವೆ.
- ಸ್ಥಳೀಯ ಆವಶ್ಯಕತೆಗಳನ್ನು ಪೂರೈಸುತ್ತಾ ತಮ್ಮ ಗುರಿ ಉದ್ದೇಶಗಳನ್ನೂ ಸಹ ತಲುಪಲು ಬಹುತೇಕ ಎಲ್ಲ ಸಂಸ್ಥೆಗಳು ಈ ಎರಡರ ಹದವಾದ ಮತ್ತು ಸೂಕ್ತವಾದ ಮಿಶ್ರಣದಿಂದ ತಮ್ಮ ಉದ್ಯಮವನ್ನು ಸಮತೋಲನದಲ್ಲಿ ನಡೆಸಿಕೊಂಡು ಹೋಗುವ ವಿಧಾನವನ್ನು ಅನುಸರಿಸಬೇಕು.

# V. ಮಹಿಳಾ ಐ.ಸಿ.ಟಿ. ಉದ್ಯಮದಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಯಾವ ಒಳನೋಟಗಳನ್ನು ಹಂಚಿಕೊಳ್ಳುತ್ತಾರೆ?

**ಈ ಅಧ್ಯಾಯದಿಂದ ನನಗೇನು ಸಿಗುತ್ತದೆ?**

ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಯೋಜನಾ ಸಂಯೋಜನಾಧಿಕಾರಿಗಳಿಗೆ ಯೋಜನೆಯ ವಿನ್ಯಾಸ, ಜಾರಿ, ಸುಸ್ಥಿರತೆ, ಯಶಸ್ಸು, ಕಲಿಕೆಗಳು ಹಾಗೂ ಇವೆಲ್ಲಕ್ಕಿಂತ ಮುಖ್ಯವಾಗಿ, ಲಿಂಗತ್ವದ ವಿಚಾರ ಕುರಿತು ಯಾವ ದೃಷ್ಟಿಕೋನವಿದೆ?

ಗ್ರಾಮೀಣ ಮಟ್ಟದಲ್ಲಿ ಯಾವ ವಿಧದ ಮಾಹಿತಿ ಮತ್ತು ಸಂವಹನದ ಆವಶ್ಯಕತೆಗಳಿವೆ, ಐ.ಸಿ.ಟಿ. ಆಧಾರಿತ ಉದ್ದಿಮೆಗಳು ಈ ಆವಶ್ಯಕತೆಗಳನ್ನು ಪೂರೈಸುವಲ್ಲಿ ಹೇಗೆ ನೆರವಾಗುತ್ತವೆ, ಮಹಿಳೆಯರು, ಅದರಲ್ಲೂ ವಿಶೇಷವಾಗಿ ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಮಹಿಳೆಯರು ಉದ್ದಿಮೆಗಳ ಮಾಲೀಕರಾಗಿ, ಅದನ್ನು ಮುನ್ನಡೆಸುತ್ತಿದ್ದರೆ ಆಗುವ ಪ್ರಯೋಜನಗಳೇನು ಹಾಗೂ ಈ ಪ್ರಯತ್ನಕ್ಕೆ ಕೈ ಹಾಕಿದಾಗ ಸಂಸ್ಥೆಗಳು ಎದುರಿಸಬೇಕಾದ ಸವಾಲುಗಳು ಮತ್ತು ಮಾಡಬೇಕಾದ ಆಯ್ಕೆಗಳು ಯಾವುವು ಇವೇ ಮೊದಲಾದ ಮಹಿಳಾ ಐ.ಸಿ.ಟಿ. ಉದ್ದಿಮೆಯ ಸುತ್ತಮುತ್ತಲಿರುವ ಕೆಲವು ಮುಖ್ಯ ವಿಷಯಗಳನ್ನು ಚರ್ಚಿಸಲು ಈ ಕೈಪಿಡಿಯು ಪ್ರಯತ್ನಿಸಿದೆ. ಈ ಅಧ್ಯಾಯದಲ್ಲಿ ಮೇಲೆ ಹೇಳಿದ ಅಂಶಗಳನ್ನು ದಕ್ಷಿಣ ಭಾರತದಲ್ಲಿ ಪ್ರಸ್ತುತ ಇರುವ ಯೋಜನೆಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಈ ಯೋಜನೆಗಳಲ್ಲಿ ಕಾರ್ಯನಿರತರಾಗಿರುವ ಪರಿಣಿತರು ಐ.ಸಿ.ಟಿ. ಆಧಾರಿತ ಉದ್ದಿಮೆಗಳ ವಿವಿಧ ವಿಚಾರಗಳ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ ಈ ಚರ್ಚೆಗಳಿಗೆ ಜೀವ ತುಂಬಿದ್ದಾರೆ.[11]

---

11 ಮೇಲೆ ಹೇಳಿದಂತೆ, ಈ ಅಧ್ಯಾಯ ಮಾರ್ಚ್ 2006ರಲ್ಲಿ ನಡೆದ ಕಾರ್ಯಾಗಾರದ ಅನುಭವಗಳನ್ನು ಆಧರಿಸಿದೆ. ಇದರ ಜೊತೆಗೆ, ದಕ್ಷಿಣ ಭಾರತದ ಮೂರು ಯೋಜನಾ ನಿರ್ದೇಶಕರು/ಸಂಯೋಜನಾಧಿಕಾರಿಗಳೊಂದಿಗೆ ನವೆಂಬರ್ 2006ರಲ್ಲಿ ದೂರವಾಣಿ ಮೂಲಕ ಸಂದರ್ಶನ ನಡೆಸಲಾಯಿತು. ಈ ಮೂರು ಯೋಜನೆಗಳು ಕೇರಳದ ಅಕ್ಷಯ ಯೋಜನೆ, ಆಂಧ್ರ ಪ್ರದೇಶದಲ್ಲಿ ಐಕುಪ್ಪನ್ ಯೋಜನೆ ಮತ್ತು ಇ-ಸೇವಾ ಯೋಜನೆ. ಇವರ ಅನುಭವಗಳನ್ನು ಕ್ರಮವಾಗಿ ಯೋಜನೆ 1, 2 ಹಾಗೂ 3ರಲ್ಲಿ ನೀಡಲಾಗಿದೆ.

## ಪ್ರಾರಂಭಿಕ ಹೂಡಿಕೆ ಮತ್ತು ಬೆಂಬಲ

ಪ್ರಾರಂಭಿಕ ವ್ಯವಸ್ಥೆ, ಬಂಡವಾಳ ಹೂಡಿಕೆ ಹಾಗೂ ವಿವಿಧ ಕಾರ್ಯಚಟುವಟಿಕೆಗಳ ಸುತ್ತ ವಿವಿಧ ಪಾತ್ರಧಾರಿಗಳನ್ನು ಹೇಗೆ ಸಂಘಟಿಸಲಾಗಿದೆ ಎಂಬುದರ ಕುರಿತು ಯೋಜನೆಯ ಪ್ರತಿನಿಧಿಗಳನ್ನು ಪ್ರಶ್ನಿಸಲಾಯಿತು. ಈ ಎಲ್ಲಾ ಯೋಜನೆಗಳಲ್ಲಿ ಸಂಯೋಜಿತ ಕಾರ್ಯತಂತ್ರವನ್ನು ಬಳಸಲಾಯಿತು. ನೆರವು ನೀಡುವ ಸಂಸ್ಥೆಯು ಯೋಜನೆಯ ಕೆಲವು ಅಂಶಗಳಿಗೆ ಸಹಾಯವನ್ನು ಒದಗಿಸಿಕೊಟ್ಟರೆ, ಯೋಜನೆಯ ಉಳಿದ ಅಂಶಗಳಿಗೆ ಮಹಿಳಾ ಉದ್ದಿಮೆದಾರರೇ ಜವಾಬ್ದಾರರು. ಈ ಎರಡನೆಯ ಅಂಶಕ್ಕೆ ಸಂಬಂಧಪಟ್ಟಂತೆಯೂ ನೆರವು ನೀಡುವ ಸಂಸ್ಥೆಯು ಮಹಿಳಾ ಉದ್ದಿಮೆದಾರರಿಗೆ ಬಾಹ್ಯ ತಂತ್ರಜ್ಞಾನ ಒದಗಣೆದಾರರೊಂದಿಗೆ ಸಂಪರ್ಕ ಕಲ್ಪಿಸಿಕೊಟ್ಟಿತು. ಉದಾಹರಣೆಗೆ ಉಪಕರಣಗಳು, ಸಾಫ್ಟ್‌ವೇರ್ ಹಾಗೂ ಮಾಹಿತಿ ಉತ್ಪಾದಕರು, ದೂರವಾಣಿ ಮತ್ತು ಅಂತರ್ಜಾಲ ಒದಗಣೆದಾರರೇ ಮೊದಲಾದವರೊಂದಿಗೆ ಸಂಪರ್ಕ ಕಲ್ಪಿಸಿ, ಉದ್ದಿಮೆದಾರರು ತಮ್ಮ ಉದ್ದಿಮೆಯನ್ನು ಸ್ಥಾಪಿಸುವಲ್ಲಿ ಉತ್ತಮ ಒಪ್ಪಂದ ಮಾಡಿಕೊಳ್ಳುವಂತೆ ನೆರವು ನೀಡಿದೆ. ಈ ಪ್ರಯತ್ನಕ್ಕಾಗಿ ಉಪಕರಣಗಳನ್ನು ಕಡಿಮೆ ಬಡ್ಡಿ ದರದಲ್ಲಿ ಖರೀದಿಸಲು ಉದ್ದಿಮೆದಾರರಿಗೆ ಬ್ಯಾಂಕುಗಳೊಂದಿಗೆ ಸಂಬಂಧ ಏರ್ಪಡಿಸಿಕೊಡಲಾಗಿದೆ. ಮಹಿಳಾ ಉದ್ದಿಮೆದಾರರು ಐ.ಸಿ.ಟಿ. ಆಧಾರಿತ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಲು ಈ ವಿಧದ ನೆರವು ಅತ್ಯಾವಶ್ಯಕ ಎಂದು ಪರಿಗಣಿಸಲಾಗಿದೆ.

**ಯೋಜನೆ 1 :** *''ನಾವು ಟೆಲಿಕೇಂದ್ರಗಳಿಗೆ PPT ಮಾದರಿಯನ್ನು ಅಭಿವೃದ್ಧಿಗೊಳಿಸಿದೆವು. ಇದರಲ್ಲಿ ಉಪಕರಣದ ವೆಚ್ಚ ಹಾಗೂ ಮೂಲಭೂತ ಸೌಕರ್ಯದ ಅಭಿವೃದ್ಧಿಯು ನೂರಕ್ಕೆ ನೂರು ಭಾಗ ಸ್ಥಳೀಯ ಸಮುದಾಯದ ಉದ್ದಿಮೆದಾರರ ಜವಾಬ್ದಾರಿಯಾಗಿತ್ತು. ಇಲ್ಲೂ ಕಡಿಮೆ ದರದಲ್ಲಿ ಉಪಕರಣಗಳನ್ನು ಖರೀದಿಸಲು ಸರ್ಕಾರ ವ್ಯವಸ್ಥೆ ಮಾಡಿತು ಹಾಗೂ ಟೆಲಿಕೇಂದ್ರಗಳಿಗೆ ಸ್ಥಳವನ್ನು ಗುರುತಿಸುವಲ್ಲೂ ನೆರವಾಯಿತು. ವ್ಯವಸ್ಥಾಪಕ ವೆಚ್ಚ ಹಾಗೂ ಯೋಜನೆ ಕಾರ್ಯಗತಗೊಳಿಸುವ ವೆಚ್ಚವನ್ನು ಸರ್ಕಾರವೇ ಭರಿಸಿತು. ಟೆಲಿಕೇಂದ್ರಗಳಲ್ಲಿ ಕೆಲಸ ಮಾಡಲು ಉಚಿತ ತರಬೇತಿ ಮತ್ತು ಮಾಹಿತಿಯನ್ನು (ಈಗಿರುವ ಮಾಹಿತಿಯನ್ನು ಕಾಲದಿಂದ ಕಾಲಕ್ಕೆ ನವೀಕರಿಸುವುದು ಹಾಗೂ ಹೊಸ ಮಾಹಿತಿಯನ್ನು ನೀಡುವುದು) ನಾವೇ ನೀಡುತ್ತೇವೆ.*

*ಈ ಕಾರ್ಯಕ್ರಮದಲ್ಲಿರುವ ವಿದ್ಯಾರ್ಥಿಗಳಿಗೆ ತರಬೇತಿ ಶುಲ್ಕಕ್ಕೂ ಸಹ ವಿನಾಯಿತಿ ನೀಡುತ್ತೇವೆ. ಕಠಿಣವಾದ ಆಯ್ಕೆಯ ಪ್ರಕ್ರಿಯೆಯ ಮೂಲಕ ಉದ್ದಿಮೆದಾರರನ್ನು ಆರಿಸಲಾಗುತ್ತದೆ. ಇವರೇ ಮುಖ್ಯ ತರಬೇತುದಾರರು ಮತ್ತು ಕೇಂದ್ರಗಳಲ್ಲಿ ಎರಡನೇ ಹಂತದ ತರಬೇತುದಾರರನ್ನು ನೇಮಕ ಮಾಡುವ ಜವಾಬ್ದಾರಿ ಇವರದೇ. ತರಬೇತಿಗಾಗಿ ವಿದ್ಯಾರ್ಥಿಗಳಿಂದ ವಿನಾಯಿತಿ ದರದಲ್ಲಿ ಪಡೆದ ಶುಲ್ಕವು ನೇರವಾಗಿ ಟೆಲಿಕೇಂದ್ರದ ಮಾಲೀಕರಿಗೆ ತಲುಪುತ್ತದೆ.''*

**ಯೋಜನೆ 2 :** *''ನಮ್ಮ ಆಯ್ಕೆಯ ಪ್ರಕ್ರಿಯೆಯು ಕಠಿಣವಾಗಿತ್ತು. ಯಾವುದೇ ಖರ್ಚಿಲ್ಲದೇ ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ಉಚಿತ ತರಬೇತಿ ನೀಡಿದೆವು. ಆರಂಭದಲ್ಲಿ ಅವರು 3,000 ರೂಪಾಯಿ ಕಟ್ಟಿದರೆ, ನಾವು ಅವರಿಗೆ 50,000 ರೂಪಾಯಿ ಮೌಲ್ಯದ ಉಪಕರಣಗಳನ್ನು ನೀಡಿದೆವು. ಅವರು ಗಳಿಸಿದ ಹಣದಲ್ಲಿ ಸ್ವಲ್ಪ ಭಾಗವನ್ನು ನಮ್ಮ ಸಂಸ್ಥೆಗೆ ಹಿಂದಿರುಗಿಸುವ ಒಪ್ಪಂದವೂ ಆಗಿತ್ತು. ಆರಂಭದಿಂದಲೂ ಯೋಜನೆ ತನ್ನ ವೆಚ್ಚವನ್ನು ತಾನೇ ಭರಿಸುವ ಭವಿಷ್ಯದ ಚಿಂತನೆಯ ಮಾದರಿ ಇದಾಗಿತ್ತು.''*

**ಯೋಜನೆ 3 :** *''ಈ ಯೋಜನೆಯಲ್ಲಿ ಸರ್ಕಾರದ ಇಲಾಖೆಗಳೇ ಪ್ರಮುಖ ಪಾಲುದಾರರು. ಏಕೆಂದರೆ, ಕೇಂದ್ರಗಳು ಒದಗಿಸುತ್ತಿರುವ ಪ್ರಮುಖ ಸೇವೆಗಳಲ್ಲಿ ಒಂದು G2C ಸೇವೆ. ಜನರಿಗೆ ಅಧಿಕಾರವನ್ನು ಬಿಟ್ಟು ಕೊಡುವಲ್ಲಿ ಸ್ಥಳೀಯ ರಾಜಕೀಯ ಪ್ರತಿನಿಧಿಗಳು ಪ್ರಮುಖ ಪಾತ್ರ ವಹಿಸಿದರು. ಬ್ಯಾಂಕುಗಳು ಮುಂದೆ ಬಂದು ಕೇಂದ್ರಗಳಿಗೆ ಆರ್ಥಿಕ ನೆರವು ನೀಡಿದವು. ಈ ಪ್ರಯತ್ನದ ಬಗ್ಗೆ ಜನರೇ ಹೆಚ್ಚು ಉತ್ಸುಕರಾಗಿದ್ದರು. ಏಕೆಂದರೆ ಇವರ ಜೊತೆಯಲ್ಲಿರುವ ಜನರೇ ಇವರಿಗೆ ಸರ್ಕಾರದ ಸೇವೆಯನ್ನು ಅನುಭವಿಸಲು ಅನುಕೂಲ ಮಾಡಿಕೊಡುವವರು. ಜಿಲ್ಲಾ ತರಬೇತಿ ಕೇಂದ್ರವು ಯೋಜನೆಗೆ ತರಬೇತಿ ಮತ್ತು ಸಲಹೆಯ ನೆರವನ್ನು ನೀಡುತ್ತದೆ ಹಾಗೂ ವಿವಿಧ ಪಾತ್ರಧಾರಿಗಳ ಸ್ಪರ್ಧಾತ್ಮಕತೆಯ ಮೌಲ್ಯಮಾಪನದ ಜವಾಬ್ದಾರಿಯನ್ನೂ ತೆಗೆದುಕೊಳ್ಳುತ್ತದೆ. ಕಂಪ್ಯೂಟರ್ ಸಾಫ್ಟ್‌ವೇರ್ ಹಾಗೂ ಜಿಲ್ಲಾ ಪೋರ್ಟಲನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾಗಿದೆ. ಇವೆಲ್ಲದರಿಂದಾಗಿ ದೂರದೂರದ ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಜನರು ಬಂದು, ಈ ಸೇವೆಗಳನ್ನು ಪಡೆಯುವಂತೆ ಕಂಪ್ಯೂಟರ್ ಬೂತುಗಳನ್ನು ಸ್ಥಾಪಿಸಲು ಸಾಧ್ಯವಾಯಿತು.*

*ಎಲ್ಲ ಕೇಂದ್ರಗಳನ್ನು ವಾಣಿಜ್ಯ ಕೇಂದ್ರಗಳಾಗಿ ನಡೆಸಲಾಗುತ್ತಿದ್ದು, ಕೇಂದ್ರಗಳ ಮೂಲಕ ನೀಡಿದ ಸೇವಾಸೌಲಭ್ಯಗಳಿಗೆ ಶುಲ್ಕವನ್ನು ಸ್ವೀಕರಿಸಲಾಗುತ್ತದೆ. ಪ್ರತಿ ಕೇಂದ್ರಕ್ಕೆ ನೀಡಿರುವ ಉಪಕರಣಗಳಿಗೆ ಬ್ಯಾಂಕಿನಿಂದ ಹಣ ಸಹಾಯ ಪಡೆಯಲಾಗಿದೆ. ಇದಲ್ಲದೇ, ಮಹಿಳೆಯರ ಗುಂಪುಗಳ ಮೇಲಿರುವ ಜವಾಬ್ದಾರಿಯನ್ನು ಕಡಿಮೆ ಮಾಡಲು ಪ್ರಾರಂಭದಲ್ಲಿ ವಿನಾಯಿತಿಯನ್ನೂ ನೀಡಲಾಗುತ್ತದೆ. ಒಮ್ಮೆ ಕೇಂದ್ರ ಪ್ರಾರಂಭವಾದರೆ, ಬರುವ ಖರ್ಚುವೆಚ್ಚಗಳನ್ನು ಭರಿಸುವುದು ಮತ್ತು ಸಾಲದ ಮರು ಪಾವತಿ ಮಾಡುವುದಷ್ಟೇ ಅಲ್ಲ, ಜೊತೆಗೆ ತಾವು ಖರ್ಚು ಮಾಡಿದ್ದಕ್ಕೆ ಸಾಕಷ್ಟು ಪ್ರತಿಫಲ ಪಡೆದು ಅದನ್ನೇ ಯೋಜನೆಗೆ ಪುನಃ ಹೂಡುವಲ್ಲಿ ಗುಂಪುಗಳು ಸಮರ್ಥವಾಗುತ್ತವೆ. ಈ ಕಾರಣದಿಂದಲೇ ಈ ವಿಧದ ಹೂಡುವಿಕೆ ಯೋಜನೆಯ ಪ್ರತಿಯೊಬ್ಬ ಪಾತ್ರಧಾರಿಯೂ ಸಾಕಷ್ಟು ಲಾಭ ಗಳಿಸುವಂತೆ ಮತ್ತು ತನ್ಮೂಲಕ ಯೋಜನೆಯ ಮುಂದುವರಿಕೆಯಲ್ಲಿ ಆಸಕ್ತಿ ಉಳಿಸಿಕೊಳ್ಳುವಂತೆ ಖಾತ್ರಿಪಡಿಸಿಕೊಳ್ಳುತ್ತದೆ.''*

ಈ ಮೇಲಿನ ನಿದರ್ಶನಗಳಲ್ಲಿ ನೋಡಿದಂತೆ, ಪ್ರಾರಂಭಿಕ ಹಂತದ ಪ್ರಮುಖ ಅಂಶವೆಂದರೆ ತರಬೇತಿ. ಅದರಲ್ಲೂ ವಿಶೇಷವಾಗಿ ಈ ಯೋಜನೆ ಉದ್ದೇಶಿಸುತ್ತಿರುವುದು ತಾಂತ್ರಿಕ ಕೌಶಲ್ಯಗಳಿಲ್ಲದ ಅಥವಾ ಮೊದಲ ಬಾರಿಗೆ ಕಂಪ್ಯೂಟರನ್ನು ನೋಡುತ್ತಿರುವ ಮಹಿಳೆಯರನ್ನು. ಎಲ್ಲ ಯೋಜನೆಗಳಲ್ಲೂ ಆರಂಭಿಕ ಹಂತದಲ್ಲಿ ತೀವ್ರಗತಿಯ ತರಬೇತಿಯನ್ನು ನೀಡಲಾಗುವುದು. ನಂತರದ ತಿಂಗಳುಗಳಲ್ಲಿ ಮಹಿಳೆಯರು ತರಬೇತಿಯ ಆವಶ್ಯಕತೆಯನ್ನು ವ್ಯಕ್ತಪಡಿಸಿದಾಗ ಅಥವಾ ಹೊಸ ಉತ್ಪನ್ನಗಳನ್ನು ಪರಿಚಯಿಸಿದಾಗ ಮತ್ತು ಬಳಸಿದಾಗ ತರಬೇತಿಯನ್ನು ಬಲಪಡಿಸಲಾಗುತ್ತದೆ.

## ಕಾರ್ಯವಿಧಾನ ಮತ್ತು ಉದ್ದೇಶಗಳು

ಐ.ಸಿ.ಟಿ. ಉದ್ದಿಮೆಯನ್ನು ಆರಂಭಿಸುವಾಗ ಸಂಸ್ಥೆಗಳಿಗಿದ್ದ ಉದ್ದೇಶಗಳು ಮತ್ತು ಅವು ಅಳವಡಿಸಿಕೊಂಡ ಕಾರ್ಯವೈಖರಿಯ ಬಗ್ಗೆಯೂ ಪ್ರಶ್ನಿಸಲಾಯಿತು. ಯಾವ ವಿಧದ ಪ್ರಕ್ರಿಯೆಗಳನ್ನು ಅನುಸರಿಸಲಾಯಿತು ಮತ್ತು ಯಾವ ವಿಧದ ಚಟುವಟಿಕೆಗಳನ್ನು ಕೈಗೊಳ್ಳಲಾಯಿತು ಎಂಬ ಬಗ್ಗೆ ಮಾಹಿತಿಯನ್ನು ನೀಡುವುದರಿಂದ ಇವು ಮುಖ್ಯವಾಗುತ್ತವೆ.

**ಯೋಜನೆ 1 :** *''ಒಂದು ಜಿಲ್ಲೆಯಲ್ಲಿ ಬೃಹತ್ ಸಂಖ್ಯೆಯಲ್ಲಿ ಕೆಲಸಗಾರರಿದ್ದು, ಯಾವುದೇ ಔದ್ಯೋಗಿಕ ಅವಕಾಶಗಳಿಲ್ಲದಿದ್ದರಿಂದ ತಳಮಟ್ಟದಲ್ಲಿ ಅಗತ್ಯತೆ ಕಂಡು ಬಂತು. ಆದ್ದರಿಂದ ಸಮುದಾಯದ ಜನರ ಪ್ರಾಥಮಿಕ ಜ್ಞಾನದ ಮಟ್ಟವನ್ನು ಹಾಗೂ ಉದ್ಯೋಗಾರ್ಹತೆಯನ್ನು ಹೆಚ್ಚಿಸುವುದರಿಂದ, ಕೆಲಸಕ್ಕೆ ನೇಮಿಸಿಕೊಳ್ಳುವುದು ಹೆಚ್ಚಬಹುದೆಂಬ ಅಭಿಪ್ರಾಯ ನಮ್ಮದಾಗಿತ್ತು.''*

**ಯೋಜನೆ 2 :** *''ನಮ್ಮ ಮುಖ್ಯ ಉದ್ದೇಶ ಚಿಕ್ಕ ಭೌಗೋಳಿಕ ಪ್ರದೇಶದಲ್ಲಿ ತೀವ್ರವಾಗಿ ಕೆಲಸ ಮಾಡುವುದು ಮತ್ತು ಪ್ರಯೋಗಾಲಯ ಮಾದರಿಯಲ್ಲಿ ಐ.ಸಿ.ಟಿ. ಉದ್ದಿಮೆಯನ್ನು ನಡೆಸುವುದಾಗಿತ್ತು. ಹಳ್ಳಿಗಳೊಳಗೆ ಐ.ಸಿ.ಟಿ.ಯ ಪ್ರವೇಶ ಒಂದು ಹೊಸ ಆಲೋಚನೆ. ಇದರಿಂದಾಗಿ ಐ.ಸಿ.ಟಿ. ಆಧಾರಿತ ಉತ್ಪನ್ನಗಳಿಗೆ ಹಾಗೂ ಸೇವೆಗಳಿಗೆ ಒಳ್ಳೆಯ ಮಾರುಕಟ್ಟೆಯಿದೆ. ಇದರ ಫಲಿತಾಂಶ ಸಮುದಾಯ ಮಟ್ಟದಲ್ಲಿ ಪ್ರಯೋಜನಗಳು ಮತ್ತು ಆದಾಯ ಮೂಲಗಳನ್ನು ಒಳಗೊಳ್ಳುವುದು ಮಾತ್ರವಲ್ಲ, ನೆರವು ನೀಡುವ ಸಂಸ್ಥೆಯಾಗಿ ನಮಗೂ ನಮ್ಮ ಕೆಲಸದಲ್ಲಿ ನವೀನ, ಸೃಜನಶೀಲ ಆಲೋಚನೆಗಳು ದೊರೆಯಬಹುದು. ಇದರಿಂದಾಗಿ ಹೊಸ ಉತ್ಪನ್ನಗಳು ಮತ್ತು ಆಲೋಚನೆಗಳು ಹೊರಬರಬಹುದು ಮತ್ತು ಅದನ್ನು ವಿಸ್ತರಗೊಳಿಸಬಹುದೆಂದು ನಮಗೆ ಅನಿಸಿತು. ಈ ಯೋಜನೆ ತನ್ನಿಂತಾನೇ ಸುಸ್ಥಿರವಾಗುವ ಸಾಧ್ಯತೆ ಇಲ್ಲದಿದ್ದರೂ, ಆಲೋಚನೆಗಳು ನಿಶ್ಚಿತವಾಗಿ ಸುಸ್ಥಿರವಾಗಿವೆ.*

*ಒಟ್ಟಾರೆ ಯೋಜನೆಯ ಸಾಧ್ಯತೆ ವಿಶಾಲವಾಗಿತ್ತು ಹಾಗೂ ಈ ಮಧ್ಯಸ್ಥಿಕೆ ಸಮುದಾಯದ ಪ್ರತಿ ಅಂಶವನ್ನೂ ಒಳಗೊಂಡಿತ್ತು. ಆರೋಗ್ಯ, ಆರ್ಥಿಕ ಉಪಯೋಗಗಳು ಮತ್ತು ಜನರ ಸಶಕ್ತತೆ ಇವು ಯೋಜನೆಯ ಮೂರು ಮುಖ್ಯ ಉದ್ದೇಶಗಳಾಗಿದ್ದವು.''*

**ಯೋಜನೆ 3:** *''ಮಾಹಿತಿ ತಂತ್ರಜ್ಞಾನದ ಪರಿಹಾರಗಳು ಬಡಜನ ವಿರೋಧಿ ಹಾಗೂ ಭಾರತದಂಥ ರಾಷ್ಟ್ರಕ್ಕೆ ಭರಿಸಲಾಗದಂಥ ವೈಭೋಗ ಎಂಬ ಮಿಥ್ಯವನ್ನು ಈ ಯೋಜನೆ ತಳ್ಳಿಹಾಕುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಡಿಜಿಟಲ್ (ತಂತ್ರಜ್ಞಾನದ) ಅಂತರವನ್ನು ತೊಡೆದುಹಾಕುವುದು ಹಾಗೂ ಮಾಹಿತಿ ತಂತ್ರಜ್ಞಾನದ ಮೂಲಕ ಹಲವು ಜನರಿಂದ ಜನರಿಗೆ ಹಾಗೂ ಸರ್ಕಾರದಿಂದ ಜನರಿಗಿರುವ ಸೇವೆಗಳನ್ನು ಗ್ರಾಮೀಣ ಜನರಿಗೆ ತೆರೆದಿಡುವುದು ನಮ್ಮ ಯೋಜನೆಯ ಉದ್ದೇಶ. ಈ ಯೋಜನೆಯಡಿಯಲ್ಲಿ ಅಂತರ್ಜಾಲವನ್ನು ಆಧರಿಸಿದ ಗ್ರಾಮಾಂತರ ಬೂತುಗಳನ್ನು ಉಪಜಿಲ್ಲಾ ವಿಭಾಗದ ಮಟ್ಟದಲ್ಲಿ ತೆರೆಯಲಾಗಿದೆ.*

*ಪ್ರಾಥಮಿಕವಾಗಿ ಮಾಹಿತಿಯ ಅಂತರದಿಂದಾಗಿ ಸಶಕ್ತತೆಯ ಕೊರತೆ (ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಗುಂಪುಗಳಿಗೆ) ಇದೆಯೆಂದು ಮತ್ತು ಒಮ್ಮೆ ಸೂಕ್ತವಾದ ಅವಕಾಶ ದೊರೆತರೆ ಈ ಸಮುದಾಯಗಳ ದೃಷ್ಟಿಕೋನದಲ್ಲಿ ನಿಜವಾದ ಪರಿವರ್ತನೆ ತರಬಹುದೆಂಬ ಚಿತ್ರಣ ಯೋಜನೆಗೆ ಇತ್ತು. ನಾವು ಆರಂಭಿಸಿರುವ ಗ್ರಾಮಾಂತರ ಬೂತುಗಳ ವಿಶಿಷ್ಟತೆ ಏನೆಂದರೆ ಇವನ್ನು ನಡೆಸುತ್ತಿರುವವರು ಹಾಗೂ ಉಸ್ತುವಾರಿ ಮಾಡುತ್ತಿರುವವರು ಸ್ವಸಹಾಯ ಗುಂಪುಗಳ ಮಹಿಳೆಯರು ಮತ್ತು ಈ ಯೋಜನೆಯು ಲಿಂಗಾಧಾರಿತ ಅಂತರವನ್ನು ತೊಡೆದುಹಾಕಲು ಗ್ರಾಮೀಣ ಮಹಿಳೆಯರನ್ನು ಮಾಹಿತಿ ಮುಖಂಡರ ಸ್ಥಾನದಲ್ಲಿರಿಸಿದೆ.''*

## ಲಿಂಗಾಧಾರಿತ ವಿಚಾರಗಳನ್ನು ಉದ್ದೇಶಿಸುವುದು

ಮೇಲೆ ನೋಡಿದಂತೆ, ಐ.ಸಿ.ಟಿ. ಆಧಾರಿತ ಯೋಜನೆಗಳನ್ನು ಆರಂಭಿಸುವಲ್ಲಿ ಮೂರೂ ಸಂಸ್ಥೆಗಳಿಗೆ ಬಲವಾದ ಅಭಿವೃದ್ಧಿ ಕೇಂದ್ರೀಕೃತ ದೂರದೃಷ್ಟಿ ಇತ್ತು. ಗ್ರಾಮೀಣ ಜನತೆಗೆ ಹೊಸ ಅವಕಾಶಗಳನ್ನು ನೀಡುವುದರ ಮೂಲಕ ಗ್ರಾಮೀಣ ಪ್ರದೇಶಗಳ ವಾಸ್ತವತೆಗಳನ್ನು ಬದಲಾಯಿಸಲು ಪ್ರಯತ್ನಿಸುವ ಬಡಜನಪರ ಕಾರ್ಯತಂತ್ರವಿದ್ದಾಗ್ಯೂ, ಐ.ಸಿ.ಟಿ.ಯಿಂದ ಸೃಷ್ಟಿಸಲ್ಪಟ್ಟ ಹೊಸ ಮಾರ್ಗಗಳಿಂದ ಗ್ರಾಮೀಣ ಮಹಿಳೆಯರು, ಅದರಲ್ಲೂ ಸಮುದಾಯದ ವೃದ್ಧ, ನಿರಕ್ಷರಸ್ಥ, ದಲಿತ ಮತ್ತು ಅಲ್ಪ ಸಂಖ್ಯಾತ ಮಹಿಳೆಯರು ಲಾಭ ಪಡೆಯುತ್ತಾರೆ ಎಂಬ ಬಗ್ಗೆ ಯಾವ ಖಾತ್ರಿಯೂ ಇಲ್ಲ. ಲಿಂಗಾಧಾರಿತ ವಿಚಾರಗಳನ್ನು ಹೇಗೆ ನಿರ್ವಹಿಸಲಾಗುತ್ತಿದೆ ಎಂದು ನಿರ್ದಿಷ್ಟವಾಗಿ ಸಂಸ್ಥೆಗಳ ಪ್ರತಿನಿಧಿಗಳನ್ನು ಪ್ರಶ್ನಿಸಲಾಯಿತು. ಯೋಜನೆಗಳು ಲಿಂಗಾಧಾರಿತ ವಿಚಾರಗಳ ಬಗ್ಗೆ ಕುರುಡಾಗಿವೆಯೇ? ಮಹಿಳೆಯರನ್ನು ಗ್ರಾಹಕರಾಗಿ/

ಫಲಾನುಭವಿಗಳಾಗಿ ಸೇರಿಸಲಾಗಿದೆಯೆ? ಐ.ಸಿ.ಟಿ. ಉದ್ದಿಮೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿ ಮಹಿಳೆಯರು ಸೇರಿದ್ದಾರೆಯೆ? ಯೋಜನೆಯ ರೂಪುರೇಷೆಯಲ್ಲಿ ಮಹಿಳೆಯರು ಇದ್ದಾರೆಯೆ? – ಇಂತಹ ಪ್ರಶ್ನೆಗಳನ್ನು ಮುಂದಿರಿಸಲಾಯಿತು. ಇದಕ್ಕೆ ವಿಭಿನ್ನ ಪ್ರತಿಕ್ರಿಯೆಗಳು ಬಂದವು.

**ಯೋಜನೆ 1 :** *''ಉದ್ದಿಮೆದಾರರೇ ಯೋಜನೆಯ ಕಾರ್ಯತಂತ್ರದಲ್ಲಿ ಪ್ರಮುಖ ಆಧಾರ ಸ್ತಂಭಗಳು ಮತ್ತು ಇವರಲ್ಲಿ ಪ್ರತಿ ಶತ 33 ಭಾಗ ಮಹಿಳೆಯರು. ಆಯ್ಕೆಯ ಪ್ರಕ್ರಿಯೆಯಲ್ಲಿ ಮಹಿಳೆಯರಿಗೇ ಪ್ರಾಶಸ್ತ್ಯ ಕೊಡಲಾಗಿದ್ದರೂ, ಅವರು ಭಾಗವಹಿಸುವಂತೆ ಅವರ ಮನವೊಲಿಸಿರಲಿಲ್ಲ. ಹೀಗಿದ್ದರೂ, ಭಾಗವಹಿಸಿದವರಲ್ಲಿ 1/3 ಭಾಗ ಮಹಿಳೆಯರಿದ್ದರು.*

*ಇನ್ನೊಂದೆಡೆ, ಮಹಿಳೆಯರ ಭಾಗವಹಿಸುವಿಕೆ ಕುರಿತು ಯೋಜನೆಗೆ ಯಾವುದೇ ನಿರ್ದಿಷ್ಟ ಆದೇಶವಿಲ್ಲದಿದ್ದರೂ, ಇ-ಸಾಕ್ಷರತೆಯ ಫಲಾನುಭವಿಗಳಲ್ಲಿ ಶೇಖಡಾ 50ಕ್ಕಿಂತ ಹೆಚ್ಚು ಮಂದಿ ಮಹಿಳೆಯರು. ದಿನದಿಂದ ದಿನಕ್ಕೆ ಮಹಿಳೆಯರ ಪ್ರತಿಕ್ರಿಯೆ ಹೆಚ್ಚುತ್ತಿದೆ. ಇದಕ್ಕೆ ಕಾರಣ ಯೋಜನೆಯ ಕೇಂದ್ರ ಗಮನ ತಳಮಟ್ಟದಲ್ಲಿದ್ದು, ಈ ಮಟ್ಟದಲ್ಲಿಯೇ ಎಲ್ಲ ತರಬೇತಿಗಳು ಹಾಗೂ ಮಾಹಿತಿ ಹಂಚಿಕೆಯಾಗುತ್ತಿದೆ. ಹೀಗಾಗಿ ಸಮುದಾಯದ ಮಹಿಳೆಯರನ್ನು ಯೋಜನೆ ಸುಲಭವಾಗಿ ತಲುಪಿದೆ. ಜೊತೆಗೆ ಸರ್ಕಾರವೂ ಕೂಡ ಎರಡು ಹಂತಗಳಲ್ಲಿ ಯೋಜನೆಯನ್ನು ಪ್ರೋತ್ಸಾಹಿಸಿದೆ: ಮೊದಲನೆಯದಾಗಿ ಪ್ರಖ್ಯಾತ ಚಿತ್ರನಟರನ್ನು ಹೊಂದಿದ, ರಾಜ್ಯಾದ್ಯಂತ ನಡೆಸಿದ ಪ್ರಚಾರಾಂದೋಲನ. ಎರಡನೆಯದಾಗಿ, ತಳಮಟ್ಟದಲ್ಲಿ ನಡೆಸಿದ ಆಂದೋಲನ. ಈ ಎರಡನೆಯ ಕಾರಣದಿಂದಾಗಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿದೆ. ಏಕೆಂದರೆ, ಯಾವುದೇ ರೀತಿಯ ಒತ್ತಡ ಹೇರದೆಯೇ, ತಮ್ಮ ಮನೆಯ ಮುಂದೆ ಭಾಗವಹಿಸುವ ಸಾಮರ್ಥ್ಯ ಮಹಿಳೆಯರಿಗಿದೆ.''*

**ಯೋಜನೆ 2 :** *''ಸಾರ್ವಜನಿಕ ಸಂಪರ್ಕದ ಕಾರಣಗಳಿಂದಾಗಿ ಮಹಿಳೆಯರನ್ನು ಯೋಜನೆಯಲ್ಲಿ ಸೇರಿಸಿಕೊಳ್ಳಲು ನಾವು ಇಚ್ಛೆ ಪಟ್ಟೆವು. ಈ ಯೋಜನೆಗೆ ವಿಶೇಷವಾಗಿ ಮಹಿಳೆಯರನ್ನೇ ಗುರಿಯಾಗಿಟ್ಟುಕೊಂಡಿದ್ದೆವು. ಮಹಿಳೆಯರು ಮುಂಗಡ ಹಣ/ಠೇವಣಿ ಇಟ್ಟು, ಉಚಿತ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿತ್ತು. ಹೀಗಾಗಿ ಆರಂಭದಿಂದಲೇ ಮಹಿಳೆಯರು ಯೋಜನೆಯಲ್ಲಿ ಸೇರಿದ್ದರು.*

*ಮಹಿಳೆಯರ ಈ ಉನ್ನತ ಮಟ್ಟದ ಭಾಗವಹಿಸುವಿಕೆ ವಿಶ್ವಾಸದ ಒಂದು ನಿದರ್ಶನ. ಅವರಿಗೆ ಕೊಟ್ಟ ಉಪಕರಣಗಳು ಬಹಳ ದುಬಾರಿ ಬೆಲೆಯವು. ಆದರೂ ಮಹಿಳೆಯರು ಅವನ್ನು ಹಾಳು ಮಾಡಲಿಲ್ಲ ಅಥವಾ ಇತರ ಉಪಯೋಗಗಳಿಗೆ ಬಳಸಿಕೊಳ್ಳಲಿಲ್ಲ. ನಮ್ಮ ಕಡೆಯಿಂದ ನಾವು ಕಛೇರಿಯನ್ನು ಸ್ಥಾಪಿಸಿ, ಕ್ಷೇತ್ರ ಕಾರ್ಯಕರ್ತರನ್ನು ಮತ್ತು ಮಹಿಳೆಯರು ತಮ್ಮ ಕೆಲಸದಲ್ಲಿ ಎದುರಿಸಬಹುದಾದ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಲು ಉತ್ತಮ ತರಬೇತಿ ಹೊಂದಿದ ಸಿಬ್ಬಂದಿಯನ್ನು ನೇಮಕ ಮಾಡಿದೆವು. 10-15 ಮಹಿಳೆಯರು ಛಾಯಾಗ್ರಹಣವನ್ನು ಹೊಸ ನೌಕರಿಯಾಗಿ ಕೈಗೊಂಡು, ಹೊಸ ಮಾರುಕಟ್ಟೆಯನ್ನು ಹಿಡಿದರು. ಸ್ವಸಹಾಯ ಸಂಘಗಳು ಸಾಮಾನ್ಯವಾಗಿ ಹಿಡಿಯುವ ಬುಟ್ಟಿ ಹೆಣಿಗೆ ಇತ್ಯಾದಿ ಈಗಾಗಲೇ ಇರುವ ಮಾರುಕಟ್ಟೆಯನ್ನು ಪ್ರವೇಶಿಸುವುದಕ್ಕಿಂತ ಇದು ವಿಭಿನ್ನವಾಗಿತ್ತು. ಪ್ರಮಾಣ ಪತ್ರ, ಪಾಸ್‌ಪೋರ್ಟ್ ಮುಂತಾದ ಸರ್ಕಾರದ ಕೆಲಸಗಳಿಗೆ ಬೇಕಾದ ಭಾವಚಿತ್ರಗಳನ್ನು ಈ ಮಹಿಳೆಯರು ತೆಗೆದರು. ಹಾಗೆಯೇ ಹಳ್ಳಿಯವರ ವೈಯಕ್ತಿಕ ಅಗತ್ಯಗಳ ಭಾವಚಿತ್ರಗಳೂ ಕೂಡ. ಒಂದು ತಿಂಗಳಿಗೆ ಈ ಮಹಿಳೆಯರು 1000-1500 ರೂಪಾಯಿ ಸಂಪಾದಿಸುತ್ತಾರೆ.''*

**ಯೋಜನೆ 3 :** *''ಈ ಜಿಲ್ಲೆಯಲ್ಲಿ ಹಿಂದೆ ಮಹಿಳೆಯರು ಶೋಷಣೆಗೆ ಗುರಿಯಾಗಿದ್ದಾರೆ ಮತ್ತು ಪುರುಷರಿಗೆ ಹೋಲಿಸಿದರೆ ಅವರನ್ನು ಕೀಳು ಮಟ್ಟದಲ್ಲಿ ನಡೆಸಿಕೊಳ್ಳಲಾಗುತ್ತಿತ್ತು. ಆದ್ದರಿಂದ ಮಹಿಳೆಯರ ಆಂದೋಲನವನ್ನು ಬೇರೆಯೇ ಒಂದು ಸ್ಥರಕ್ಕೆ ಕೊಂಡೊಯ್ದು, ಅವರು*

*ಮಾಹಿತಿ ಮುಖಂಡರಾಗಿ ವಿಕಾಸ ಹೊಂದಲು ಅನುವು ಮಾಡಿಕೊಡುವಂತೆ ಯೋಜನೆಯ ಕಾರ್ಯತಂತ್ರವನ್ನು ರೂಪಿಸಲಾಯಿತು. ಇದರ ಉದ್ದೇಶ ಅವರು ಬದಲಾವಣೆಯ ಹರಿಕಾರರಾಗಲು ನೆರವಾಗುವುದು ಮತ್ತು ಯೋಜನೆಯೊಂದಿಗೆ ಅವರ ಬಲ ಹಾಗೂ ಸ್ಥಾನಮಾನವೂ ಬೆಳೆಯುವಂತೆ ಸಹಕಾರಿಯಾಗುವುದು.*

*ಮಹಿಳೆಯರು ಪರಸ್ಪರ ಭೇಟಿಯಾಗಲು ಮತ್ತು ತಮ್ಮ ಪ್ರಯತ್ನಗಳನ್ನು ಒಗ್ಗೂಡಿಸಲು ಈ ಕೇಂದ್ರಗಳು ವೇದಿಕೆಯಾಗಿವೆ. ಅವರ ಉಳಿತಾಯದ ಲೆಕ್ಕಗಳನ್ನು ಗುಂಪುಗಳು ನಿರ್ವಹಿಸುವುದರ ಬದಲು, ಆಂತರಿಕ ಸಾಲದ ದಾಖಲೆಗಳ ಮೇಲ್ವಿಚಾರಣೆಗಾಗಿ ಯೋಜನೆಯ ಕಂಪ್ಯೂಟರನ್ನೇ ಬಳಸುವ ಮತ್ತು ತಮ್ಮ ಬ್ಯಾಂಕುಗಳೊಂದಿಗೆ ಅಂತರ್ಜಾಲದ ಮೂಲಕ ವ್ಯವಹರಿಸುವ ಮಟ್ಟವನ್ನು ಮಹಿಳೆಯರು ತಲುಪಿದ್ದಾರೆ. ಕೆಲವು ಬ್ಯಾಂಕುಗಳು ಈ ಗುಂಪುಗಳ ಕೆಲಸವನ್ನು ಮತ್ತೂ ಸುಗಮಗೊಳಿಸಲು ಕೆಲವು ಕೇಂದ್ರಗಳಲ್ಲಿ ಎ.ಟಿ.ಎಮ್. ಕೇಂದ್ರಗಳನ್ನು ಆರಂಭಿಸಲು ಪ್ರಸ್ತಾವನೆ ಮುಂದಿಟ್ಟಿವೆ.*

*ಇದರ ಫಲವಾಗಿ, ಕಂಪ್ಯೂಟರನ್ನು ನಿರ್ವಹಿಸಲು ಮತ್ತು ಇಡೀ ಯೋಜನೆಯ ಆಡಳಿತದ ಪ್ರಕ್ರಿಯೆಗಳಲ್ಲಿ ತರಬೇತಿ ಹೊಂದಿದ ಮಹಿಳಾ ಸ್ವಸಹಾಯ ಗುಂಪುಗಳು ಮಾಹಿತಿಯ ಮಧ್ಯಸ್ಥಿಕೆದಾರರಾಗಿದ್ದು, ಪುರುಷರೊಂದಿಗೆ ಅವರ ಸಂಧಾನಶಕ್ತಿಯನ್ನು ಹೆಚ್ಚಿಸುವಲ್ಲಿ ಇದು ಸಹಕಾರಿಯಾಗುತ್ತದೆ. ಸಮಾಜದಲ್ಲಿ ಕಡು ಬಡತನವಿರುವ ಭಾಗಗಳಿಂದ ಬಂದ ಈ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಸಾಧಿಸಲು ಯೋಜನೆಯು ನೆರವಾಗುತ್ತದೆ. ಅವರು ಯೋಜನೆಯಿಂದ ಬಲ ಪಡೆಯುವುದರೊಂದಿಗೆ, ತಮ್ಮ ಶಕ್ತಿಯಿಂದ ಯೋಜನೆಯನ್ನು ಪೋಷಿಸುತ್ತಾ ಗೆಲುವು-ಗೆಲುವಿನ ಪರಿಸ್ಥಿತಿಯನ್ನು ಸೃಷ್ಟಿಸುತ್ತಾರೆ.''*

## ಯಶಸ್ವೀ ನಿದರ್ಶನಗಳು ಮತ್ತು ಕಲಿಕೆಗಳು

ಸಂಸ್ಥೆಗಳ ಪ್ರತಿನಿಧಿಗಳು ಯೋಜನೆಯನ್ನು ನಡೆಸುವಲ್ಲಿ ತಮ್ಮ ಕಲಿಕೆ ಹಾಗೂ ಅನುಭವಗಳನ್ನು ಹಂಚಿಕೊಂಡರು. ಇವು ಯೋಜನೆಯ ಉದ್ದೇಶಗಳು, ಸುಸ್ಥಿರತೆ ಹಾಗೂ ಲಿಂಗ ಸಮಾನತೆಯ ಗುರಿಗಳ ಹಿನ್ನೆಲೆಯಲ್ಲಿ ಇದ್ದವು.

**ಯೋಜನೆ 1 :** *''ನಾವು ನೋಡುವ ದೃಷ್ಟಿಯಲ್ಲಿ ಬದಲಾವಣೆಯಾಗಬೇಕಿದೆ. ಮಹಿಳೆಯರು ವಿದ್ಯಾವಂತರಾಗಿದ್ದರೂ ಕೂಡ ಮನೆಯಲ್ಲಿರಲು ಮತ್ತು ಮನೆ ನಡೆಸಿಕೊಂಡು ಹೋಗಲು ಅವಮಾನ ಪಟ್ಟುಕೊಳ್ಳುವುದಿಲ್ಲ. ಅವರನ್ನು ಮನೆಯಿಂದ ಹೊರಗೆ ಕರೆ ತಂದು, ಅವರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಶಕ್ತರಾಗಲು ಹೊಸ ಮಾರ್ಗಗಳನ್ನು ಕಂಡುಕೊಳ್ಳುವಂತೆ ಪ್ರೋತ್ಸಾಹಿಸುವ ಅಗತ್ಯತೆಯಿದೆ. ನಾವು ಯೋಜನೆಯಿಂದ ಪಡೆದ ಕಲಿಕೆಯೆಂದರೆ, ಅವಕಾಶಗಳು ದೊರೆತಾಗ ಅವನ್ನು ಬಳಸಿಕೊಂಡು, ಅದರಿಂದ ಲಾಭ ಪಡೆಯುವ ಸಾಮರ್ಥ್ಯ ಮಹಿಳೆಯರಿಗಿದೆ.''*

**ಯೋಜನೆ 2 :** *''ಯೋಜನೆಯಲ್ಲಿದ್ದ ಕೆಲವು ಮಹಿಳೆಯರ ಉದ್ಯಮಶೀಲತೆಯನ್ನು ನೋಡಿ ನಮಗೆ ಆಶ್ಚರ್ಯವಾಯಿತು. ತಾಂತ್ರಿಕ ಕೌಶಲ್ಯಗಳನ್ನು ಅವರು ಬಹು ಬೇಗ ಕಲಿತರು. ನಿಜ ಹೇಳಬೇಕೆಂದರೆ ಅವರಲ್ಲಿ ಕೆಲವರು ನಿರಕ್ಷರಸ್ಥರಾಗಿದ್ದರೂ, ಮುಂದುವರೆದ ಸಾಫ್ಟ್‌ವೇರನ್ನು ಕಲಿಯುವ ಇಚ್ಛೆ ವ್ಯಕ್ತಪಡಿಸಿದರು. ಉತ್ಸಾಹದ ಚಿಲುಮೆಗಳಾಗಿದ್ದರು. ಕೆಲವರು ತರಬೇತಿ ಕಾರ್ಯಕ್ರಮಕ್ಕೆಂದೇ 10-15 ಕಿ.ಮೀ. ಪ್ರಯಾಣಿಸುತ್ತಿದ್ದರು.*

*ಮಹಿಳೆಯರು ಉತ್ತಮ ಜೀವನ ನಡೆಸಲು ಹಾಗೂ ಈ ದಿಕ್ಕಿನಲ್ಲಿ ಪ್ರಯತ್ನಪಡಲು ಇಚ್ಛಿಸುತ್ತಾರೆ. ವೈಯಕ್ತಿಕ ಸಶಕ್ತತೆ ಹಾಗೂ ಪ್ರಯೋಜನದ ದೃಷ್ಟಿಯಿಂದ ಯೋಜನೆ ಎಲ್ಲ ಹಂತಗಳಲ್ಲೂ ಅತ್ಯಂತ ಯಶಸ್ವಿಯಾಗಿದೆ. ಆದರೂ, ಇದನ್ನು ವಿಸ್ತರಿಸುವುದು ಸಾಧ್ಯವಾಗಲಿಲ್ಲ, ಏಕೆಂದರೆ ಯೋಜನೆಯ ಅಂತ್ಯದ ವೇಳೆಗೆ 15 ಮಹಿಳೆಯರಿಗೆ ಛಾಯಾಗ್ರಹಣದಲ್ಲಿ ನಾವು ತರಬೇತಿ ನೀಡಿದ್ದೆವು. ಇದೊಂದು ಯೋಜನೆಯ ಸೀಮಿತ ಅಂಶವಾಗಿತ್ತು. ಈ ವಿಧದ ಯೋಜನೆಗಳ ಸುಸ್ಥಿರತೆಗೆ ಎರಡು ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು : ಉಪಕರಣಗಳ ವೆಚ್ಚ ಮತ್ತು ಲಭ್ಯತೆ ಹಾಗೂ ಗ್ರಾಮ ಮಟ್ಟದ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಮತ್ತು ಯೋಜನೆಯಲ್ಲಿ ಅವರು ಆಸಕ್ತಿ ಉಳಿಸಿಕೊಳ್ಳುವಂತೆ ನೋಡಿಕೊಳ್ಳಲು ತಗಲುವ ವೆಚ್ಚ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡರೆ, ಗ್ರಾಮ ಮಟ್ಟದಲ್ಲಿ ಯೋಜನೆ ಯಶಸ್ವಿಯಾಗುವುದು ಖಚಿತ.''*

**ಯೋಜನೆ 3 :** *''ಸಣ್ಣ, ಕಾರ್ಯಸಾಧ್ಯವಾದ ಕೆಲಸಗಳಾಗಿ ವಿಭಾಗಿಸಿ, ವಿವಿಧ ಪಾತ್ರಧಾರಿಗಳಿಗೆ ವಹಿಸಿದರೆ ದೊಡ್ಡ ಕೆಲಸಗಳನ್ನು ಎಷ್ಟು ಸುಲಭವಾಗಿ ಸಾಧಿಸಬಹುದೆಂಬುದಕ್ಕೆ ಈ ಯೋಜನೆ ಒಂದು ನಿದರ್ಶನ. ಇಚ್ಛಾಶಕ್ತಿ ಇದ್ದು, ವಾಣಿಜ್ಯ ಚಟುವಟಿಕೆಯಲ್ಲದಂತೆ ತೋರುವ ಉದ್ದಿಮೆಯಲ್ಲಿ ಜವಾಬ್ದಾರಿ ನೀಡುವ ಮೂಲಕ ಪಾಲುದಾರರನ್ನು ಒಲಿಸುವ ಸಾಮರ್ಥ್ಯವಿದ್ದರೆ ಏನಾದರೂ ಸಾಧಿಸಬಹುದು ಎಂದು ಯೋಜನೆ ತೋರಿಸುತ್ತದೆ. ಯೋಜನೆಯನ್ನು ಸರಬರಾಜು ಆಧಾರಿತವಾಗದೆ, ಬೇಡಿಕೆ-ಆಧಾರಿತವಾಗಿ ವಿನ್ಯಾಸಗೊಳಿಸಲಾಗಿದೆ. ಆದ್ದರಿಂದ ಗ್ರಾಹಕರ ಒತ್ತಡದಿಂದಾಗಿ ಆಡಳಿತ ವರ್ಗದವರು ಸದಾ ಸೇವೆಗೆ ಸಿದ್ಧವಾಗಿರುವಂತೆ ಮತ್ತು ಈ ಮೂಲಕ ಯೋಜನೆಯ ದೀರ್ಘಕಾಲಿಕ ಸುಸ್ಥಿರತೆಯನ್ನು ಖಚಿತಗೊಳಿಸುತ್ತದೆ.*

*ಮಹಿಳೆಯರು ಯಾರಿಗೂ ಕಡಿಮೆಯಿಲ್ಲ ಹಾಗೂ ಏನಾದರೂ ಸಾಧಿಸುತ್ತಾರೆ ಎಂದು ಯೋಜನೆ ತೋರಿಸುತ್ತದೆ. ಒಂದೆಡೆ, ಯೋಜನೆ ಮಹಿಳೆಯರ ಸ್ವಸಹಾಯ ಗುಂಪುಗಳ ಮನವೊಲಿಸುವಲ್ಲಿ ಸಫಲವಾಗಿದ್ದರೆ, ಇನ್ನೊಂದೆಡೆ ಗ್ರಾಹಕಸ್ನೇಹಿ, ಗೊಂದಲವಿಲ್ಲದ ನಾಗರಿಕ ಸೇವೆಗಳನ್ನು ಸಾರ್ವಜನಿಕರಿಗೆ ನೀಡುತ್ತಿದೆ. ಜಿಲ್ಲೆಯ ಬಡ ಜನತೆಗೆ ಅವಕಾಶಗಳು ಮತ್ತು ಅಭಿವೃದ್ಧಿಯನ್ನು ತರುವುದರ ಮೂಲಕ ಹಳ್ಳಿಗಳು ಜ್ಞಾನದ ಕೇಂದ್ರಗಳಾಗಿ ಪರಸ್ಪರ ಲಾಭ ಪಡೆಯುವುದರೊಂದಿಗೆ ಜಾಗತಿಕ ಸಂಪರ್ಕಜಾಲಗಳಿಂದಲೂ ಪ್ರಯೋಜನ ಗಳಿಸುವಂಥ ಜ್ಞಾನಿಯಾದ ಹಾಗೂ ಮಾಹಿತಿಯುಳ್ಳ ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸುವಲ್ಲಿ ಯೋಜನೆಯು ನೆರವಾಗಿದೆ.''*

## ಬಾಕ್ಸ್ 7: ಮಹಿಳಾ ಐ.ಸಿ.ಟಿ. ಉದ್ದಿಮೆಗಳನ್ನು ಪ್ರಾರಂಭಿಸಲು ಹಾಗೂ ನಡೆಸಲು ಅಗತ್ಯವಾದ ನೆರವು

ಸಣ್ಣ ಚರ್ಚೆಯಾಗಿ, ಮಹಿಳಾ ಐ.ಸಿ.ಟಿ. ಉದ್ದಿಮೆಯನ್ನು ಆರಂಭಿಸಲು ಮತ್ತು ನಡೆಸಲು ಯಾವ ರೀತಿಯ ಸಹಾಯ ಮತ್ತು ಸಂಪನ್ಮೂಲಗಳು ಬೇಕೆಂದು ಸ್ವಯಂಸೇವಾ ಸಂಸ್ಥೆಗಳನ್ನು ಪ್ರಶ್ನಿಸಲಾಯಿತು. ಇದಕ್ಕೆ ಬಂದ ಪ್ರತಿಕ್ರಿಯೆಗಳು ಹೀಗಿವೆ :

1. ಸರ್ಕಾರದ ಸಹಾಯ :

ಎ) ಹಿರಿಯ ಅಧಿಕಾರಿಗಳು, ಸ್ಥಳೀಯ ಸರ್ಕಾರದ ಪ್ರತಿನಿಧಿಗಳು ಮತ್ತು ಸಮುದಾಯದ ಪ್ರಭಾವಶಾಲಿ ವ್ಯಕ್ತಿಗಳಿಂದ ಒಪ್ಪಿಗೆ.

ಬಿ) ಸಂಪನ್ಮೂಲ ಒದಗಿಸುವಿಕೆ – ಸಾಲ, ರಿಯಾಯಿತಿ ಅಥವಾ ಬೆಂಬಲದ ಒಪ್ಪಂದಗಳ ಮೂಲಕ ಸಂಪನ್ಮೂಲ ಒದಗಿಸಿ, ಸಾಲಕ್ಕಾಗಿ ಉದ್ದಿಮೆದಾರರು ಖಾಸಗಿ ಮೂಲಗಳನ್ನು ಅವಲಂಬಿಸುವ ಸಾಧ್ಯತೆಯನ್ನು ಕಡಿಮೆಗೊಳಿಸುವುದು.

ಏಕೆಂದರೆ, ಸಾಮಾನ್ಯವಾಗಿ ಖಾಸಗಿ ಮೂಲಗಳು ಮಹಿಳಾ ಐ.ಸಿ.ಟಿ. ಉದ್ದಿಮೆಗಳಿಗೆ ಧನಸಹಾಯ ನೀಡಲು ಅನಾಸಕ್ತರಾಗಿರುತ್ತಾರೆ.

ಸಿ) ಸ್ಥಳ ಮತ್ತು ಮೂಲಭೂತ ಸೌಕರ್ಯಗಳ ಒದಗಿಸುವಿಕೆ.

ಡಿ) ನಂಬಲರ್ಹವಾದ ವಿದ್ಯುಚ್ಛಕ್ತಿ ಸರಬರಾಜು ಮತ್ತು ಇಂಟರ್‌ನೆಟ್ ಸಂಪರ್ಕಜಾಲ.

2. ಸಾಮಾನ್ಯ ಮಾರ್ಗದರ್ಶಕ ಸೂತ್ರಗಳು :

ಎ) ತಾಂತ್ರಿಕ ನೆರವು ಅಗತ್ಯ ಬಿದ್ದಾಗ ಶೀಘ್ರ ನೆರವು ದೊರೆಯುವಂತೆ ವ್ಯವಸ್ಥೆಯನ್ನು ಖಾತ್ರಿಗೊಳಿಸುವುದು.

ಬಿ) ಉದ್ದಿಮೆದಾರರ ಸ್ವಪ್ರೇರಣಾ ಪ್ರಯತ್ನಗಳೊಂದಿಗೆ ಯೋಜನೆಯನ್ನು ಆರಂಭಿಸುವವರಿಂದ ನಿರಂತರ ತರಬೇತಿ ಕಾರ್ಯಕ್ರಮಗಳು. ಉದ್ದಿಮೆದಾರರು ಹೊಸ ಕೌಶಲ್ಯಗಳನ್ನು ಪಡೆಯಲು ಮತ್ತು ಸ್ಪರ್ಧಾತ್ಮಕತೆಯನ್ನು ಬೆಳೆಸಿಕೊಳ್ಳಲು ಇವು ನೆರವಾಗುತ್ತವೆ.

ಸಿ) ಉದ್ಯಮಕ್ಕೆ ಸಂಬಂಧಿಸಿದ ಕ್ಷೇತ್ರಗಳಾದ ಮಾರುಕಟ್ಟೆ ಮತ್ತು ನಿರ್ವಹಣೆಯಲ್ಲಿ ಪರಿಣಿತರಿಂದ ಮಾರ್ಗದರ್ಶನ.

ಡಿ) ಮಹಿಳಾ ಉದ್ದಿಮೆದಾರರ ಆವಶ್ಯಕತೆಗಳಿಗೆ ಅನುಗುಣವಾದ ಸ್ಥಳೀಯ ಭಾಷಾ ಮಾಹಿತಿ ಮತ್ತು ಸಾಫ್ಟ್‌ವೇರ್.

3. ಸಮುದಾಯದ ನೆರವು :

ಎ) ಯೋಜನೆಯ ವಿನ್ಯಾಸದಿಂದಲೇ ಸಮುದಾಯದ ಭಾಗವಹಿಸುವಿಕೆ, ನಿರ್ಧಾರ ಕೈಗೊಳ್ಳುವಿಕೆ ಮತ್ತು ಸಮುದಾಯದ ಆವಶ್ಯಕತೆಗಳನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ನೆರವು.

ಬಿ) ಮಹಿಳೆಯರ ಮಾಲೀಕತ್ವದ ಮತ್ತು ಮಹಿಳೆಯರೇ ನಡೆಸುತ್ತಿರುವ ಉದ್ಯಮಗಳನ್ನು ಬೆಂಬಲಿಸುವಂತೆ ಮತ್ತು ಲಿಂಗತ್ವದ ಬಗ್ಗೆ ಸೂಕ್ಷ್ಮತೆ ಮೂಡಿಸುವುದು.

ಸಿ) ಜನಜಾಗೃತಿ ಮೂಡಿಸುವುದು ಮತ್ತು ಉತ್ತಮ ಗುಣಮಟ್ಟದ ಸೇವೆಯನ್ನು ನೀಡುವುದರ ಮೂಲಕ ಈ ವಿಧದ ಸೇವೆಗಳಿಗೆ ಸಾರ್ವಜನಿಕ ಬೇಡಿಕೆಯನ್ನು ಬಲಗೊಳಿಸುವುದು. ಹೀಗೆ ಮಾಡುವುದರಿಂದ ರಾಜಕೀಯ ಬದಲಾವಣೆಗಳಾದರೂ, ಈ ವಿಧದ ಸೇವೆಗಳು ಮುಂದುವರೆಯುವುದನ್ನು ಖಾತ್ರಿಗೊಳಿಸಿದಂತಾಗುತ್ತದೆ.

4. ಕೌಟುಂಬಿಕ ಸಹಕಾರ : ಕೌಟುಂಬಿಕ ಸಹಕಾರ ಬಹಳ ಮುಖ್ಯ. ಏಕೆಂದರೆ, ಮಹಿಳೆಯರು ವಿಶ್ವಾಸದಿಂದ ತಮ್ಮ ಕೆಲಸದಲ್ಲಿ ಮುಂದುವರೆಯಬಹುದು. ತರಬೇತಿ ಮತ್ತು ಅನುಭವ ಭೇಟಿಗಳಿಗಾಗಿ ಪ್ರಯಾಣ ಮಾಡಬೇಕಾದಲ್ಲಿ ಪ್ರಯಾಣಿಸಬಹುದು.

5. ಉದ್ದಿಮೆದಾರರ ಸ್ವಪ್ರೇರಣಾ ಗುಣಗಳು : ಇದರಿಂದ ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳಬಹುದು :

ಎ) ಉದ್ಯಮಶೀಲತಾ ಚಟುವಟಿಕೆಗಳು ಮತ್ತು ಸಾಮುದಾಯಿಕ ಸೇವೆ ಚಟುವಟಿಕೆಗಳ ನಡುವೆ ಸೂಕ್ತ ಸಮತೋಲನ ಕಾಪಾಡಬಹುದು.

ಬಿ) ಈ ಉದ್ಯಮಗಳು ನೀಡುವ ಸೇವೆಗಳು ಮಕ್ಕಳು, ಹಿರಿಯರು, ಮಹಿಳೆಯರು ಮತ್ತು ಯುವಕರೂ ಸೇರಿದಂತೆ ವಿವಿಧ ಕ್ಷೇತ್ರಗಳ ಜನರ ಅಗತ್ಯತೆಗಳನ್ನು ಪೂರೈಸುತ್ತವೆ.

# VI. ಇದು ತುಂಬಾ ಆಸಕ್ತಿಪೂರ್ಣವಾಗಿದೆ ! ನಾನು ಇಲ್ಲಿಂದ ಮುಂದೆ ಹೋಗುವುದು ಹೇಗೆ?

**ಈ ಅಧ್ಯಾಯದಿಂದ ನನಗೇನು ಸಿಗುತ್ತದೆ?**

- ಟೆಲಿಕೇಂದ್ರದ ಸ್ಥಾಪನೆ ಮತ್ತು ಅದನ್ನು ನಡೆಸುವುದು, ರೇಡಿಯೋ ಕಾರ್ಯಕ್ರಮ ಅಥವಾ ವಿಡಿಯೋ ಚಿತ್ರಗಳ ನಿರ್ಮಾಣದ ಮೂಲಕ ಸಂಸ್ಥೆಗಳು ಹೇಗೆ ತಮ್ಮ ಗುರಿಗಳು ಮತ್ತು ಚಟುವಟಿಕೆಗಳನ್ನು ಬಲಗೊಳಿಸಬಹುದೆಂಬ ಬಗ್ಗೆ ಪ್ರಾಯೋಗಿಕ ಹಂತಗಳು.
- ದಕ್ಷಿಣ ಭಾರತದ ಹಲವು ಭಾಗಗಳಲ್ಲಿ ಐ.ಸಿ.ಟಿ ಆಧಾರಿತ ಉದ್ಯಮಗಳು ಮಹಿಳೆಯರನ್ನು ಹೇಗೆ ಸಶಕ್ತಗೊಳಿಸುತ್ತಿವೆ ಎಂಬ ಬಗ್ಗೆ ಸವಿವರವಾದ ಚಿತ್ರಣ ಪಡೆಯಲು ಸಂಪರ್ಕಿಸಬಹುದಾದ ಐ.ಸಿ.ಟಿ. ಪ್ರಯತ್ನಗಳ ಕುರಿತು ಮಾಹಿತಿ.
- ಉಪಸಂಹಾರ.

ಕೈಪಿಡಿಯ ಈ ಕೊನೆಯ ವಿಭಾಗದಲ್ಲಿ ಆಸಕ್ತ ಸಂಸ್ಥೆಗಳು ತಮ್ಮ ಈಗಿರುವ ಕಾರ್ಯ ವಿಧಾನಗಳು ಮತ್ತು ಚಟುವಟಿಕೆಗಳಲ್ಲಿ ಹೇಗೆ ಐ.ಸಿ.ಟಿ.ಯನ್ನು ಬಳಸಬಹುದೆಂಬ ಬಗ್ಗೆ ಪ್ರಾಯೋಗಿಕ ಮಾಹಿತಿಯನ್ನು ನೀಡಲು ಪ್ರಯತ್ನಿಸಲಾಗಿದೆ. ಐ.ಸಿ.ಟಿ.ಯನ್ನು ಹೇಗೆ ಬಳಸಬೇಕು ಮತ್ತು ಬಳಸಬಹುದು ಎಂಬುದು ಸ್ಥಳೀಯ ಪರಿಸ್ಥಿತಿಯ ಮೇಲೆ ನಿರ್ಧಾರಿತವಾಗಿರುವುದರಿಂದ ಐ.ಸಿ.ಟಿ.ಯ ಯಾವುದೇ ಒಂದು ಅಂಶವನ್ನು ಕುರಿತು ಸಂಪೂರ್ಣ ಮಾಹಿತಿ ನೀಡುವುದು ಕಷ್ಟ ಸಾಧ್ಯವೇ. ಆದ್ದರಿಂದ ಈ ಅಧ್ಯಾಯ ಪ್ರಾರಂಭಿಕ ಘಟ್ಟವಾಗಿ, ಸಂಸ್ಥೆಗಳು ಇಲ್ಲಿಂದ ಪ್ರಾರಂಭಿಸಿ, ತಮ್ಮ ನಿರ್ದಿಷ್ಟ ಆಸಕ್ತಿಗಳನ್ನು ಹೆಚ್ಚು ಹೆಚ್ಚು ಆಳವಾಗಿ ಮುಂದುವರೆಸಬಹುದು. ಇದಕ್ಕೆ ಅನುಗುಣವಾಗಿ, ಈ ಅಧ್ಯಾಯದ ಮೊದಲ ಭಾಗ ಮಹಿಳೆಯರ ಸಂಸ್ಥೆಗಳು ಹೇಗೆ ಟೆಲಿಕೇಂದ್ರವನ್ನು ಸ್ಥಾಪಿಸಬಹುದು, ವಿಡಿಯೋ ಚಿತ್ರವನ್ನು ಹೇಗೆ ತೆಗೆಯಬಹುದು, ಲಿಂಗ ಸೂಕ್ಷ್ಮತೆ ಇರುವ, ಸಾಂದರ್ಭಿಕವಾಗಿರುವ ರೇಡಿಯೋ ಕಾರ್ಯಕ್ರಮವನ್ನು ಹೇಗೆ ರೂಪಿಸಬಹುದು ಎಂಬುದರ ಬಗ್ಗೆ ಹಂತ ಹಂತವಾಗಿ ಮಾರ್ಗದರ್ಶನ ನೀಡುತ್ತದೆ. ಇಂಥಹ ಪ್ರಯತ್ನಗಳನ್ನು ಮಾಡುತ್ತಿರುವ ಸಂಸ್ಥೆಗಳಿಗೆ ಲಭ್ಯವಿರುವ ಸಂಪನ್ಮೂಲಗಳು ಮತ್ತು ನೆರವಿನ ಬಗ್ಗೆ ಉಪಯುಕ್ತ ಮಾಹಿತಿಯನ್ನು ಅಧ್ಯಾಯದ ಎರಡನೆಯ ಭಾಗದಲ್ಲಿ ನೀಡಲಾಗಿದೆ. ಅಧ್ಯಾಯದ ಕೊನೆಯಲ್ಲಿ ಮಹಿಳಾ ಐ.ಸಿ.ಟಿ. ಆಧಾರಿತ ಉದ್ಯಮಗಳನ್ನು ಕುರಿತು ಕೆಲವು ಆಲೋಚನೆಗಳನ್ನು ನೀಡಲಾಗಿದೆ.

## ಟೆಲಿಕೇಂದ್ರವನ್ನು ಸ್ಥಾಪಿಸುವುದು

ಹೊರಗಿನ ಸಂಸ್ಥೆಗಳೊಡನೆ ಹೊಸ ಸಂವಹನ ಮತ್ತು ಸಂಪರ್ಕಜಾಲಗಳ ಮೂಲಕ ಸಮುದಾಯದ ಜನರು ಮಾಹಿತಿ ಪಡೆಯುವ ಮತ್ತು ಮಾಹಿತಿ ಹಂಚಿಕೊಳ್ಳುವ ಸಾಮುದಾಯಿಕ ಸ್ಥಳಗಳೆಂದು ಟೆಲಿಕೇಂದ್ರಗಳನ್ನು ನೋಡಲಾಗುತ್ತದೆ. ಟೆಲಿಕೇಂದ್ರದ ಸ್ಥಾಪನೆಯ ಪ್ರಕ್ರಿಯೆ ಅತಿ ಮುಖ್ಯ. ಏಕೆಂದರೆ, ಟೆಲಿಕೇಂದ್ರದಿಂದ ದೊರೆಯುವ ಸ್ಥಳ ಮತ್ತು ಅದು ನೀಡುವ ಸೇವೆಗಳಿಂದ ಸಮುದಾಯದ ಮಹಿಳೆಯರು ಹಾಗೂ ಪುರುಷರಿಗೆ ಹೇಗೆ ಪ್ರಯೋಜನವಾಗಿದೆ ಎಂಬ ಅಂಶದ ಮೇಲೆ ಇದು ಗಣನೀಯ ಪ್ರಭಾವ ಬೀರುತ್ತದೆ.

### ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ಪರಿಚಯ/ತರಬೇತಿ

* ಪ್ರಕ್ರಿಯೆಯ ಮೊದಲ ಮತ್ತು ಅತ್ಯಂತ ಪ್ರಮುಖ ಹಂತ ಸಂಘ ಮಹಿಳೆಯರನ್ನು ಟೆಲಿಕೇಂದ್ರದ ಕಲ್ಪನೆಗೆ ಪರಿಚಯಿಸುವುದು ಮತ್ತು ಇದರ ಬಗ್ಗೆ ಅವರಿಗೆ ವಿವರಿಸುವುದು. ಇದು ವಿವಿಧ ಐ.ಸಿ.ಟಿ. ವಿವರಗಳನ್ನು ಒಳಗೊಂಡಿದೆ–ಟೆಲಿಫೋನ್, ಕಂಪ್ಯೂಟರ್, ಇಂಟರ್‌ನೆಟ್, ಸಹಾಯವಾಣಿಗಳು ಮತ್ತು ನೆರಳಚ್ಚು ಯಂತ್ರ (Photocopier). ಈ ವಿಧದ ಐ.ಸಿ.ಟಿ. ಗಳನ್ನು ಮಹಿಳೆಯರು ಎಲ್ಲಿ ನೋಡಿದ್ದಾರೆ ಮತ್ತು ಯಾವ ಉದ್ದೇಶಗಳಿಗೆ ಬಳಸಿದ್ದಾರೆ ಎಂದು ಪರೀಕ್ಷಿಸುವುದು. (ಉದಾಹರಣೆಗೆ, ಬಸ್ ನಿಲ್ದಾಣದಲ್ಲಿ ಟಿಕೆಟ್ ನೀಡುವ ಕಿಟಕಿಯಲ್ಲಿ ಮಹಿಳೆಯರು ಕಂಪ್ಯೂಟರ್ ನೋಡಿರಬಹುದು.)
* ಇದಾದ ನಂತರ, ಮಹಿಳೆಯರು ತಮ್ಮ ಈಗಿನ ಮಾಹಿತಿ ಮತ್ತು ಸಂವಹನದ ಪರಿಸ್ಥಿತಿಯನ್ನು ಮತ್ತು ತಮ್ಮ ಜೀವನದಲ್ಲಿ ಸುಧಾರಣೆ ತರಲು ಅವರಿಗೆ ಯಾವ ರೀತಿಯ ಮಾಹಿತಿ ಮತ್ತು ಸಂವಹನದ ಅಗತ್ಯವಿದೆ ಎಂಬುದನ್ನು ಕೂಲಂಕುಶವಾಗಿ ಅವಲೋಕಿಸುವಂತೆ ತಿಳಿಸಬೇಕು. ಟೆಲಿಕೇಂದ್ರದ ಸ್ಥಾಪನೆಯಿಂದ ಈ ಕೆಲವು ಬೇಡಿಕೆಗಳು/ಅಗತ್ಯಗಳನ್ನು ಮತ್ತು ಇತರ ಸಾಮಾನ್ಯ ಸಾಮುದಾಯಿಕ ಅಗತ್ಯಗಳನ್ನು ಐ.ಸಿ.ಟಿ.ಗಳು ಹೇಗೆ ಪೂರೈಸಲು ಸಾಧ್ಯ ಎಂಬ ಬಗ್ಗೆ ಹೊಂದಾಣಿಕೆ ಕಲ್ಪಿಸಿ, ನಂತರವೇ ಸಂಸ್ಥೆಗಳು ಟೆಲಿಕೇಂದ್ರಗಳ ಸ್ಥಾಪನೆಯಲ್ಲಿ ಒಳಗೊಂಡಿರುವ ಪ್ರಕ್ರಿಯೆಗಳನ್ನು ಮಹಿಳೆಯರಿಗೆ ವಿವರಿಸಬೇಕು.
* ಟೆಲಿಕೇಂದ್ರ ಸ್ಥಾಪಿಸಲು ಸ್ಥಳವಿರದ ಕಡೆ ಸಮುದಾಯದ ಕಟ್ಟಡವನ್ನು ಈ ಉದ್ದೇಶಕ್ಕಾಗಿ ಬಳಸಬಹುದು. ಈ ಪ್ರಕ್ರಿಯೆಯಲ್ಲಿ ಬಹಳ ಮುಖ್ಯವಾದ ಅಂಶ ಸಮುದಾಯದ ಗಣ್ಯರ ಒಪ್ಪಿಗೆ ಮತ್ತು ಸಹಾಯ ಪಡೆಯುವುದು. ಈ ಉದ್ದೇಶಕ್ಕಾಗಿ, ಸಂಸ್ಥೆಗಳು ಸಮುದಾಯದಲ್ಲಿ ಪ್ರಭಾವಶಾಲಿ ವ್ಯಕ್ತಿಗಳು ಯಾರೆಂದು ಅರ್ಥಮಾಡಿಕೊಳ್ಳಬೇಕು; ಈ ಗಣ್ಯರ ಅಧಿಕಾರ ಹಾಗೂ ಪಾತ್ರಗಳಿಗೆ ಸಂಬಂಧಪಟ್ಟಂತೆ ಮಹಿಳಾ ಸಂಘಗಳ ಸಂಬಂಧ ಹೇಗಿದೆ ಎಂದು ತಿಳಿದುಕೊಳ್ಳಬೇಕು; ಮತ್ತು ಮಹಿಳೆಯರ ಸಂಘವೇ ಮಾಲೀಕತ್ವ ಹೊಂದಿರುವ ಟೆಲಿಕೇಂದ್ರಗಳನ್ನು ಸ್ಥಾಪಿಸುವುದರಿಂದ ಈ ಸಂಬಂಧದ ಮೇಲೆ ಏನು ಪರಿಣಾಮವಾಗಬಹುದೆಂದು ಸಂಸ್ಥೆಗಳು ತಿಳಿದಿರಬೇಕು.
* ಯೋಜನೆಗೆ ಸಂಘ ಮಹಿಳೆಯರ ಒಪ್ಪಿಗೆ ಪಡೆಯುವುದು ಇನ್ನೊಂದು ಪ್ರಮುಖ ಅಂಶ. ಮಹಿಳೆಯರು ಕೇಳುವ ಪ್ರಶ್ನೆಗಳು ಮತ್ತು ಸಂಸ್ಥೆ ಮಹಿಳೆಯರ ಮುಂದಿಡಬೇಕಾದ ಈ ಮುಂದಿನ ಪ್ರಶ್ನೆಗಳನ್ನು ಇದು ಒಳಗೊಳ್ಳುತ್ತದೆ: ಈ ಪ್ರಕ್ರಿಯೆಗಳಿಗೆ ಮಹಿಳೆಯರು ಹೇಗೆ ಕೊಡುಗೆ ನೀಡಬಹುದು – ಆರ್ಥಿಕವಾಗಿ ಮತ್ತು ಮಾನವ ಸಂಪನ್ಮೂಲ ಒದಗಿಸುವುದರ ಮೂಲಕ; ಟೆಲಿಕೇಂದ್ರದ ಜಾಗವೂ ಸಾಧ್ಯವಾದಷ್ಟು ಎಲ್ಲರಿಗೂ ದೊರೆಯುವಂತೆ ವಿವಿಧ ಸಂಘಗಳ ಸದಸ್ಯರು ತಮ್ಮ ಮಾಲೀಕತ್ವ ಹಾಗೂ ಕೊಡುಗೆಯ ವಿಚಾರವನ್ನು ಹೇಗೆ ಪರಿಹರಿಸಿಕೊಳ್ಳುತ್ತಾರೆ; ಎಲ್ಲ ಮಹಿಳೆಯರಿಗೂ, ಶೋಷಿತ ವರ್ಗದವರಿಗೂ ಅನುಕೂಲವಾಗುವಂತೆ ಟೆಲಿಕೇಂದ್ರವನ್ನು ಹಳ್ಳಿಯಲ್ಲಿ

ಎಲ್ಲಿ ಸ್ಥಾಪಿಸಲಾಗುತ್ತದೆ ಇವೇ ಮೊದಲಾದ ಪ್ರಶ್ನೆಗಳು. ಅಂತಿಮವಾಗಿ, ಟೆಲಿಕೇಂದ್ರದ ಮಾಲೀಕತ್ವ ಮತ್ತು ಸ್ಥಾಪನೆಯ ಪ್ರಕ್ರಿಯೆಯ ಬಗ್ಗೆ ಮಹಿಳೆಯರು ವ್ಯಕ್ತಪಡಿಸುವ ಆಸಕ್ತಿಯನ್ನು ಆಧರಿಸಿ, ಸಂಸ್ಥೆಗಳು ಅವರ ಔಪಚಾರಿಕ ಒಪ್ಪಿಗೆಯನ್ನು ಪಡೆಯಬಹುದು.

## ಹಳ್ಳಿಯ ಮುಖ್ಯಸ್ಥರಿಗೆ ಪರಿಚಯಿಸುವುದು

- ಗ್ರಾಮವನ್ನು ಪ್ರವೇಶಿಸುವ ಪ್ರಕ್ರಿಯೆಯ ಅತಿ ಮುಖ್ಯವಾದ ಈ ಹಂತದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ವಿವಿಧ ಕುಲಗಳ ಮುಖಂಡರು, ಭೂಮಾಲೀಕರು, ಸರ್ಕಾರದ ಅಧಿಕಾರಿಗಳು, ಶಿಕ್ಷಕರು, ಗ್ರಾಮ ಪಂಚಾಯತ್ ಸದಸ್ಯರೇ ಮೊದಲಾದ ಗ್ರಾಮದ ಪ್ರಭಾವಶಾಲಿ ವ್ಯಕ್ತಿಗಳನ್ನು ಗುರುತಿಸಬೇಕು, ಅವರೊಡನೆ ಮುಂದೆ ಹಮ್ಮಿಕೊಳ್ಳಲಿರುವ ಯೋಜನೆಯನ್ನು ಕುರಿತು ಚರ್ಚಿಸಬೇಕು. ಅವರ ಸಹಕಾರ ಮತ್ತು ಹೊಳಹುಗಳು ದೊರಕಿದರೆ, ಈ ಹೊಸ ಸಾಹಸದಲ್ಲಿರುವ ಭಯ ತುಸು ಕಡಿಮೆಯಾಗುವುದು ಮತ್ತು ದೀರ್ಘ ಕಾಲದಲ್ಲಿ ಆಪ್ತತೆ ಬೆಳೆಸಿಕೊಳ್ಳಲು ನೆರವಾಗುವುದು. ಸಂಘ ಮಹಿಳೆಯರ ಜೊತೆ ಇವರನ್ನು ಭೇಟಿಯಾಗುವುದರಿಂದ ಇಬ್ಬರೂ ಪರಸ್ಪರ ಅರ್ಥಮಾಡಿಕೊಳ್ಳಲು ನೆರವಾಗುತ್ತದೆ ಹಾಗೂ ಯೋಜನೆಗೆ ಈ ಇಬ್ಬರ ಕೊಡುಗೆ ಏನು ಎಂದು ಚರ್ಚಿಸಲು ಅವಕಾಶ ಒದಗಿಸುತ್ತದೆ.
- ಇದರೊಂದಿಗೆ ಸಮುದಾಯದ ಪರಿಚಯವನ್ನು ಮಾಡಿಕೊಡಬಹುದು. ಇಲ್ಲಿ ಎಲ್ಲರೂ ಭಾಗವಹಿಸಿ ಚರ್ಚೆ ಮತ್ತು ಪ್ರಶ್ನಿಸುವುದರ ಮೂಲಕ ಯೋಜನೆಯ ಬಗ್ಗೆ ಹೆಚ್ಚು ತಿಳಿವಳಿಕೆ ಪಡೆಯಬಹುದು. ಗ್ರಾಮದ ಪ್ರತಿಷ್ಠಿತರು ಇದರಲ್ಲಿ ಭಾಗವಹಿಸುವುದರಿಂದ ಯೋಜನೆಗೆ ಅವರ ಬೆಂಬಲ ಮತ್ತು ಅವರು ಯೋಜನೆಯಲ್ಲಿ ಇಟ್ಟಿರುವ ನಂಬಿಕೆಯನ್ನು ಬಲಪಡಿಸಿದಂತಾಗುತ್ತದೆ.

## ಟೆಲಿಕೇಂದ್ರಕ್ಕೆ ಸಖಿಯ ಆಯ್ಕೆ

- ಪ್ರಕ್ರಿಯೆಯಲ್ಲಿ ಮೊದಲ ಆವಶ್ಯಕತೆ – ಸಂಘ ಮಹಿಳೆಯರು ಸಮುದಾಯದ ಹುಡುಗಿಯರನ್ನು ಮೊದಲ ಸುತ್ತಿನಲ್ಲಿ ಸಂದರ್ಶಿಸಿ, ಅವರಲ್ಲಿ ಯಾರು ಸೂಕ್ತ ಎಂದು ಕಂಡು ಬರುತ್ತಾರೋ, ಅವರನ್ನು 'ಸಖಿ'ಯಾಗಿ ಆರಿಸುವುದು. ಒಟ್ಟಾರೆ ಹೆಣ್ಣು ಮಕ್ಕಳಲ್ಲಿ ಆಯ್ಕೆಯಾದವರಿಗೆ ಸಂಸ್ಥೆ ಔಪಚಾರಿಕ ಸಂದರ್ಶನವನ್ನು ನಡೆಸಬಹುದು. ಅವರ ಬದ್ಧತೆ ಮತ್ತು ಕೌಶಲ್ಯಗಳ ಮೌಲ್ಯಮಾಪನ ಮಾಡಬಹುದು.
- ಗ್ರಾಮದ ಹೆಣ್ಣು ಮಕ್ಕಳಿಗೆ ಟೆಲಿಕೇಂದ್ರಗಳ ಆಪರೇಟರ್‌ಗಳಾಗಿ ಕೆಲಸ ನಿರ್ವಹಿಸುವ ತಾಂತ್ರಿಕ ಕೌಶಲ್ಯವಿಲ್ಲದಿರುವುದರಿಂದ ಸಖಿಯರಿಗೆ ತರಬೇತಿ ಅತ್ಯಗತ್ಯ. ಈ ತರಬೇತಿ ಎರಡು ತಿಂಗಳು ತೆಗೆದುಕೊಳ್ಳಬಹುದು ಹಾಗೂ ಈ ಮಧ್ಯೆ ಸಖಿ ಕೇಂದ್ರದಲ್ಲಿ ಪ್ರಾಥಮಿಕ ಸೇವೆಗಳನ್ನು ಆರಂಭಿಸಬಹುದು. ತಾಂತ್ರಿಕ ತರಬೇತಿಗೆ ಶೇ. 25 ರಷ್ಟು ವೆಚ್ಚವನ್ನು ಸಖಿಯೇ ಭರಿಸುವಂತೆ ಖಾತ್ರಿ ಪಡಿಸಿಕೊಂಡರೆ ಉತ್ತಮ.
- ಸಖಿಯರ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಮಾಹಿತಿ ಕೊಡುವುದರ ಜೊತೆಗೆ ಕಾಲಕಾಲಕ್ಕೆ ತರಬೇತಿ ಮಾಡ್ಯೂಲ್‌ಗಳನ್ನು ನೀಡಬೇಕು.
- ಸಂಬಳ ಅಥವಾ ತರಬೇತಿ ವೇತನದ ಬಗ್ಗೆ ಒಪ್ಪಂದವಾಗಿರಬೇಕು. ಸ್ಥಳೀಯ ಪ್ರದೇಶದ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಮತ್ತು ಸಖಿಗೆ ಲಭ್ಯವಿರುವ ಪರ್ಯಾಯ ಉದ್ಯೋಗಾವಕಾಶಗಳನ್ನು ಆಧರಿಸಿ, ಇದು ಸ್ಥಳದಿಂದ ಸ್ಥಳಕ್ಕೆ ಬೇರೆಯಾಗಬಹುದು. ಕನಿಷ್ಟ ತರಬೇತಿ ವೇತನ ತಿಂಗಳಿಗೆ ರೂ. 500 ಆಗಿದ್ದು, ಕಾಲದಿಂದ ಕಾಲಕ್ಕೆ ಪ್ರೋತ್ಸಾಹಕಗಳೊಂದಿಗೆ ಈ ವೇತನವನ್ನು ಹೆಚ್ಚಿಸಬಹುದು.

## ಟೆಲಿಕೇಂದ್ರದ ಸ್ಥಾಪನೆ

* ಸಖಿಯ ಆಯ್ಕೆಯೊಡನೆ ಟೆಲಿಕೇಂದ್ರದ ಸ್ಥಾಪನೆಯ ವಿಚಾರವೂ ನಿರ್ಧಾರವಾಗಬಹುದು. ಸಂಘಕ್ಕೆ ಈಗಾಗಲೇ ಭೇಟಿಯಾಗುವ ಒಂದು ಸ್ಥಳವಿದ್ದರೆ, ಟೆಲಿಕೇಂದ್ರವನ್ನು ಇಲ್ಲೇ ಸ್ಥಾಪಿಸಬಹುದು. ಎಲ್ಲಿ ಸಂಘಕ್ಕೆ ತನ್ನದೇ ಜಾಗವಿಲ್ಲವೋ ಅಲ್ಲಿ ಸಮುದಾಯದ ಕಟ್ಟಡವೊಂದನ್ನು ಬಳಸಬಹುದು. ಆದರೆ, ಈ ಪ್ರಕ್ರಿಯೆ ನಿಧಾನವಾಗಬಹುದು. ಏಕೆಂದರೆ ಸಂಘ ಮಾಲೀಕತ್ವ ಹೊಂದಿರುವ ಮತ್ತು ನಡೆಸುತ್ತಿರುವ ಚಟುವಟಿಕೆಗಾಗಿ ಸಮುದಾಯದ ಸ್ಥಳವನ್ನು ಬಳಸಲು ಸಂಸ್ಥೆಗಳು/ಸಂಘಗಳು ಸಮುದಾಯದ ಬೆಂಬಲವನ್ನು ಪಡೆಯಬೇಕು. ಈ ಪ್ರಕ್ರಿಯೆಯಲ್ಲಿ ಸಮುದಾಯವನ್ನು ಒಪ್ಪಿಸುವಲ್ಲಿ ಈ ಮೊದಲೇ ಗ್ರಾಮದ ಗಣ್ಯರ ಒಪ್ಪಿಗೆ ಪಡೆದಿರುವುದನ್ನು ಬಳಸುವುದು ಒಳ್ಳೆಯ ಕಾರ್ಯತಂತ್ರ!

* **ಉಪಕರಣಗಳ ಖರೀದಿ :** ಪೀಠೋಪಕರಣಗಳು, ಲೇಖನ ಸಾಮಗ್ರಿಗಳು ಮತ್ತು ತಾಂತ್ರಿಕ ಉಪಕರಣಗಳನ್ನು ಖರೀದಿಸಬೇಕು. ಮೂಲಭೂತ ಉಪಕರಣಗಳು ಕಂಪ್ಯೂಟರ್, ಧ್ವನಿವರ್ಧಕಗಳು, ಧ್ವನಿಗ್ರಾಹಕ (ಮೈಕ್ರೋಫೋನ್), ವೆಬ್ ಕ್ಯಾಮೆರಾ, ಮುದ್ರಣ ಯಂತ್ರ, ಸ್ಕಾನರ್ ಹಾಗೂ ಯು.ಪಿ.ಎಸ್., ದೂರವಾಣಿ ಸಂಪರ್ಕ ಮತ್ತು ಉಪಕರಣ, ಇಂಟರ್‌ನೆಟ್ ಸಂಪರ್ಕಜಾಲ, ಸ್ಥಳೀಯ ಭಾಷೆಯ ಸಾಫ್ಟ್‌ವೇರ್ ಮತ್ತು ಇತರ ಸೂಕ್ತವಾದ ಸಾಫ್ಟ್‌ವೇರ್‌ಗಳು, ಟೆಲಿಕೇಂದ್ರದಲ್ಲಿ ಲಭ್ಯವಾಗುವ ಮಾಹಿತಿಯ ಬ್ಯಾಂಕ್ (ಉದಾಹರಣೆಗೆ, ಸಾಮಾಜಿಕವಾಗಿ ಸೂಕ್ತವಾದ ವಿಡಿಯೋ, ಸಿ.ಡಿ.ಗಳು, ಸಮುದಾಯಕ್ಕೆ ಸಂಬಂಧಿಸಿದ ಸರ್ಕಾರದ ಯೋಜನೆಗಳು ಹಾಗೂ ಸ್ಥಳೀಯ ಕೃಷಿ ಪದ್ಧತಿಗಳಿಗೆ ಅನುಗುಣವಾಗಿ ಕೃಷಿ ನೆರವು) ಇತ್ಯಾದಿ. ಸ್ಥಿರ ದೂರವಾಣಿ ಸಂಪರ್ಕ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಲಭ್ಯವಿಲ್ಲದೆಯೇ ಇರಬಹುದು ಅಥವಾ ಸಂಪರ್ಕವನ್ನು ಪಡೆಯಲು ಆರು ವಾರಗಳಿಗೂ ಹೆಚ್ಚು ಸಮಯವಾಗಬಹುದು ಅಥವಾ ಸರ್ಕಾರೀ ಅಧಿಕಾರಿಗಳು ಕೆಲವು ಮಾಹಿತಿಗಳನ್ನು ಹಂಚಿಕೊಳ್ಳಲು ಹಿಂದೇಟು ಹಾಕಬಹುದು – ಈ ರೀತಿಯ ಪರಿಸ್ಥಿತಿಯಲ್ಲಿ ಸಂಸ್ಥೆಗಳು ಇರುವ ಅವಕಾಶಗಳ ಉತ್ತಮ ಬಳಕೆ ಮಾಡಿಕೊಳ್ಳುತ್ತಲೇ, ಪರ್ಯಾಯಗಳಿಗಾಗಿ ಹುಡುಕಾಟ ನಡೆಸಬೇಕು. ಮೂಲಭೂತ ಉಪಕರಣಗಳಿಗೆ ರೂ. 55,000 ದಿಂದ ರೂ. 60,000 ವೆಚ್ಚವಾಗಬಹುದು. ಆದರೆ, ಟೆಲಿಕೇಂದ್ರದ ಸ್ಥಾಪನೆ ಮತ್ತು ನಡೆಸುವುದಕ್ಕಾಗಿ ಲಭ್ಯವಿರುವ ಹಣಕಾಸು ಮತ್ತು ಟೆಲಿಕೇಂದ್ರದ ಅಂತಿಮ ಗುರಿಯನ್ನು ಆಧರಿಸಿ, ಹೆಚ್ಚುವರಿ ಉಪಕರಣಗಳು ಮತ್ತು ಸಾಫ್ಟ್‌ವೇರನ್ನು ಆಯ್ಕೆ ಮಾಡಬೇಕು. ಉದಾಹರಣೆಗೆ, ಸಂಸ್ಥೆಯ ಪ್ರಮುಖ (ಕೇಂದ್ರ) ಮಧ್ಯಪ್ರವೇಶಿಸುವಿಕೆ ಆರೋಗ್ಯದ ವಿಷಯಕ್ಕೆ ಸಂಬಂಧಿಸಿದ್ದರೆ, ಟೆಲಿ ವೈದ್ಯಕೀಯ ಉಪಕರಣಗಳು ಮತ್ತು ಸಾಫ್ಟ್‌ವೇರನ್ನು ಖರೀದಿಸಬಹುದು. ಆದರೆ, ಇದರ ಬೆಲೆ ದುಬಾರಿಯಾಗಬಹುದು ಹಾಗೂ ಸಂಸ್ಥೆ ಈ ವೆಚ್ಚಕ್ಕೆ ಲೆಕ್ಕ ನೀಡಬೇಕು. ಎಲ್ಲಿ ಸಾಧ್ಯವೋ ಅಲ್ಲಿ ಸಂಸ್ಥೆಗಳು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ, ವೆಚ್ಚವನ್ನು ಕಡಿಮೆಗೊಳಿಸಬೇಕು ಹಾಗೂ ಯೋಜನೆಯ (ಕಾರ್ಯಕ್ರಮದ) ಸುಸ್ಥಿರತೆಯನ್ನು ಹೆಚ್ಚಿಸಲು ಪ್ರಯತ್ನಿಸಬೇಕು.

## ಟೆಲಿಕೇಂದ್ರ ಸಮಿತಿಯ ರಚನೆ

* ಸಂಘ ಮಹಿಳೆಯರ ಒಪ್ಪಿಗೆ ಪಡೆದುಕೊಳ್ಳುವುದು ಮೊದಲ ಹಂತವಾದರೆ, ಟೆಲಿಕೇಂದ್ರದ ಪ್ರಕ್ರಿಯೆಯಲ್ಲಿ ಅವರನ್ನು ವ್ಯವಸ್ಥಿತವಾಗಿ ಹಾಗೂ ನಿರಂತರವಾಗಿ ಸೇರಿಸಿಕೊಳ್ಳಲು ಒಂದು ಸಮಿತಿಯ ರಚನೆ ಅತ್ಯಗತ್ಯ. ಸಖಿ, ಗ್ರಾಮದಲ್ಲಿರುವ ವಿವಿಧ ಮಹಿಳಾ ಸಂಘಗಳ ಪ್ರತಿನಿಧಿಗಳು, ಗ್ರಾಮದ ಒಬ್ಬ ಗಣ್ಯ ವ್ಯಕ್ತಿಗಳು ಮತ್ತು ನೆರವು ನೀಡುತ್ತಿರುವ ಸಂಸ್ಥೆಯ ಒಬ್ಬ ಪ್ರತಿನಿಧಿ ಈ ಸಮಿತಿಯಲ್ಲಿ ಇರಬೇಕಾಗುತ್ತದೆ. ಸಮಿತಿಯ ಯಾರೇ ಒಬ್ಬ ಸದಸ್ಯರು ಟೆಲಿಕೇಂದ್ರ ನಡೆಸುವುದರ ಜವಾಬ್ದಾರಿ ತೆಗೆದುಕೊಳ್ಳದಿದ್ದ ಪಕ್ಷದಲ್ಲಿ, ಸಮಿತಿಯ ಎಲ್ಲ ಸದಸ್ಯರೂ ಹೊಣೆಗಾರಿಕೆ ತೆಗೆದುಕೊಳ್ಳುವಂತೆ ಸಮಿತಿಯ ರಚನೆ ವೈವಿಧ್ಯಮಯವಾಗಿದ್ದು, ವಿವಿಧ ಹಿನ್ನೆಲೆಯ ವ್ಯಕ್ತಿಗಳು ಸಮಿತಿಯಲ್ಲಿರಬೇಕು.

## ಟೆಲಿಕೇಂದ್ರದಲ್ಲಿ ಲಭ್ಯವಿರುವ ಸೇವೆಗಳನ್ನು ಅಂತಿಮವಾಗಿ ನಿರ್ಧರಿಸುವುದು

* ಈ ವೇಳೆಗೆ ಸಂಸ್ಥೆಗಳಿಗೆ ಟೆಲಿಕೇಂದ್ರಗಳಲ್ಲಿ ವಿವಿಧ ಸೇವೆಗಳನ್ನು ನೀಡಬಹುದು ಎಂಬ ಅರಿವಾಗಿರುತ್ತದೆ. ಇವನ್ನು ಶುಲ್ಕವಿರುವ ಹಾಗೂ ಶುಲ್ಕವಿರದ ಸೇವೆಗಳಾಗಿ ವಿಂಗಡಿಸಬಹುದು.
* ಶುಲ್ಕವಿರುವ ಸೇವೆಯನ್ನು ಉಚಿತವಾಗಿಯೂ ಹಾಗೂ ಉಚಿತ ಸೇವೆಯನ್ನು ಶುಲ್ಕ ಪಡೆದು ಕೊಡಬಹುದಾದರೂ, ಸಮುದಾಯದವರು ಈ ಸೇವೆಗಳನ್ನು ಶುಲ್ಕ ನೀಡಿ ಭರಿಸಬಹುದೇ ಎಂದು ಸಂಘ ಮಹಿಳೆಯರಿಂದ ತಿಳಿದುಕೊಂಡು ಸಂಸ್ಥೆಗಳು ಇವಕ್ಕೆ ಬೆಲೆ ನಿರ್ಧರಿಸಬೇಕು. ಟೆಲಿಕೇಂದ್ರದ ಸಮಯ, ಮಹಿಳೆಯರಿಗಾಗಿ ಮಾತ್ರ ಅಥವಾ ಮಕ್ಕಳಿಗಾಗಿ ಮಾತ್ರ ಸಮಯ ಇತ್ಯಾದಿ ನಿರ್ದಿಷ್ಟ ವಿವರಗಳನ್ನು ನಿರ್ಧರಿಸಬೇಕು. ಅಂತಿಮವಾಗಿ ಕಟ್ಟಡದ ಬಾಡಿಗೆ, ವಿದ್ಯುಚ್ಛಕ್ತಿ, ದೂರವಾಣಿ, ಇಂಟರ್‌ನೆಟ್ ಖರ್ಚು ಹಾಗೂ ಸಖಿಯ ತರಬೇತಿ ವೇತನದಂಥಹ ಖರ್ಚುವೆಚ್ಚಗಳು ಹಾಗೂ ಶುಲ್ಕವಿರುವ ಸೇವೆಗಳಿಂದ ಬಂದ ಆದಾಯವನ್ನು ಸಂಘ ಮಹಿಳೆಯರು, ಸಮುದಾಯದವರು ಹಾಗೂ ನೆರವು ಸಂಸ್ಥೆಗಳ ಮಧ್ಯೆ ಹೇಗೆ ಹಂಚಿಕೊಳ್ಳಬೇಕೆಂದು ನಿರ್ಧರಿಸಬೇಕು.

| ಟೆಲಿಕೇಂದ್ರದಲ್ಲಿ ಶುಲ್ಕವಿರುವ ಸೇವೆಗಳು | ಟೆಲಿಕೇಂದ್ರದಲ್ಲಿ ಶುಲ್ಕವಿರದ ಸೇವೆಗಳು |
|---|---|
| 1. ಇ-ಮೇಲ್ | 1. ಕೃಷಿ, ಪ್ರಾಣಿ ಸಾಕಣೆ, ಶಿಕ್ಷಣ, ಆರೋಗ್ಯದ ಬಗ್ಗೆ ಮಾಹಿತಿ ಮತ್ತು ಈ ವಿಷಯಗಳ ಬಗ್ಗೆ ವಿಡಿಯೋ ಚಿತ್ರ |
| 2. (ಚ್ಯಾಟಿಂಗ್) ತತ್‌ಕ್ಷಣದ ಸಂದೇಶ | 2. ಶೈಕ್ಷಣಿಕ ಮನರಂಜನೆ |
| 3. ಇಂಟರ್‌ನೆಟ್ ಜಾಲ ವೀಕ್ಷಣೆ | 3. ಮಾಹಿತಿ ಹಕ್ಕಿನ ಸೌಕರ್ಯ ಒದಗಣೆ |
| 4. ಡಿ.ಟಿ.ಪಿ. ಅಥವಾ ಮುದ್ರಣಕ್ಕಾಗಿ ಅಕ್ಷರ ಜೋಡಣೆ | 4. ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ |
| 5. ಇಂಟರ್‌ನೆಟ್‌ನಲ್ಲಿ ಉದ್ಯೋಗ ಹುಡುಕಾಟ | 5. ಜೀವನ ಮಟ್ಟವನ್ನು ಉತ್ತಮಗೊಳಿಸಿಕೊಳ್ಳಲು ಮಾಹಿತಿ |
| 6. ವಿಡಿಯೋ ಸಮಾಲೋಚನೆ | 6. ಸಮುದಾಯದ ವಿವಿಧ ವರ್ಗಗಳಿಗೆ ಲಭ್ಯವಿರುವ ಸರ್ಕಾರೀ ಯೋಜನೆಗಳ ಬಗ್ಗೆ ಮಾಹಿತಿ ಮತ್ತು ವಿವಿಧ ಸರ್ಕಾರಿ ಇಲಾಖೆಗಳ ಬಗ್ಗೆ ಸೂಕ್ತ ಮಾಹಿತಿ |
| 7. ಐ.ಸಿ.ಟಿ. ತರಬೇತಿ (ಅಲ್ಪಾವಧಿ /ದೀರ್ಘಾವಧಿ) | |
| 8. ಇ-ಸರ್ಕಾರದ ಸೇವೆಗಳು, ಬಿಲ್ ಪಾವತಿ, ಅರ್ಜಿಗಳನ್ನು ಇಂಟರ್‌ನೆಟ್ ಜಾಲದ ಮೂಲಕ ಪಡೆಯುವುದು ಇತ್ಯಾದಿ. | |
| 9. ಡಿಜಿಟಲ್ ಛಾಯಾಗ್ರಹಣ | |
| 10. ಮುದ್ರಣ ಮತ್ತು ನೆರಳಚ್ಚು (ಫೋಟೋಕಾಪಿ) | |
| 11. ಟೆಲಿವೈದ್ಯಕೀಯ ಸೇವೆಗಳು | |

## ಟೆಲಿಕೇಂದ್ರವನ್ನು ನಡೆಸುವುದು

* ಟೆಲಿಕೇಂದ್ರ ಸ್ಥಾಪನೆಯಾದ ನಂತರ ಸಂಸ್ಥೆಯ ಪಾತ್ರ ಕಡಿಮೆಯಾಗುವುದಿಲ್ಲ, ವಾಸ್ತವದಲ್ಲಿ ಹೆಚ್ಚಾಗುತ್ತದೆ. ಕೇಂದ್ರದ ಚಟುವಟಿಕೆಗಳು ಮತ್ತು ಸಖಿಯ ಕೆಲಸದ ನಿರ್ವಹಣೆಯನ್ನು ಉಸ್ತುವಾರಿ ಮಾಡುವಲ್ಲಿ ಹಾಗೂ ಸಖಿಯು ಅತ್ಯಾಧುನಿಕ ಕೌಶಲ್ಯಗಳನ್ನು ಕಲಿಯುವಲ್ಲಿ

ನೆರವಾಗುವುದರಲ್ಲಿ ಸಂಸ್ಥೆಗಳು ಸಂಘ ಮಹಿಳೆಯರಿಗೆ ಸಹಕಾರ ನೀಡಬೇಕು (ಹಿಂದಿನ ಅಧ್ಯಾಯದಲ್ಲಿ ಈ ಅಂಶವನ್ನು ಯೋಜನಾ ನಿರ್ದೇಶಕರು ಸುದೀರ್ಘವಾಗಿ ಚರ್ಚಿಸಿದ್ದಾರೆ). ಟೆಲಿಕೇಂದ್ರವನ್ನು ನಡೆಸುವ ಖರ್ಚುವೆಚ್ಚಕ್ಕಾಗಿ ಸಂಪನ್ಮೂಲಗಳ ಉಸ್ತುವಾರಿಯನ್ನು ಸಂಸ್ಥೆಗಳು ಮಾಡಬೇಕು. ಈ ವೆಚ್ಚ ತಿಂಗಳಿಗೆ ರೂ. 2,000 ದಿಂದ ರೂ. 6,000 ಗಳವರೆಗೆ ಆಗಬಹುದು. (ಕಟ್ಟಡದ ಬಾಡಿಗೆ, ವಿದ್ಯುಚ್ಛಕ್ತಿ, ಇಂಟರ್‌ನೆಟ್, ಲೇಖನ ಸಾಮಗ್ರಿಗಳು, ಸಖಿಯ ಸಂಬಳ, ಸಖಿ ಸರ್ಕಾರಿ ಇಲಾಖೆಗಳಿಗೆ ಭೇಟಿ ನೀಡಲು, ವ್ಯವಹಾರಕ್ಕಾಗಿ ಓಡಾಡುವ ಪ್ರಯಾಣದ ವೆಚ್ಚ ಇತ್ಯಾದಿ).

## ರೇಡಿಯೋ ಕಾರ್ಯಕ್ರಮದ ರಚನೆ

ಅಭಿವೃದ್ಧಿ ಕೇಂದ್ರಿತ ರೇಡಿಯೋ ಕಾರ್ಯಕ್ರಮವನ್ನು ರೂಪಿಸುವಲ್ಲಿ ಮೂರು ಪ್ರಮುಖ ಅಂಶಗಳಿವೆ :

* ಶ್ರೋತೃಗಳು/ಕೇಳುಗರು : ಒಂದು ರೇಡಿಯೋ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ, ಅದಕ್ಕೆ ಯಾರು ಕೇಳುಗರು ಇದ್ದಾರೆ ಎಂದು ಸ್ಪಷ್ಟವಾಗಬೇಕು. ಅವರು ರೇಡಿಯೋ ಗ್ರಾಹಕವನ್ನು ಹೊಂದಿರಬೇಕು ಹಾಗೂ ಕಾರ್ಯಕ್ರಮ ಕೇಳಲು ಆಸಕ್ತರಾಗಿರಬೇಕು. ಈ ರೇಡಿಯೋ ಕಾರ್ಯಕ್ರಮವನ್ನು ಕೇಳುಗರೇ ಅವರ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸ್ಥಾಪಿಸಬೇಕು ಅಥವಾ ರೇಡಿಯೋವನ್ನು ಅಭಿವೃದ್ಧಿ ಸಂವಹನದ ಒಂದು ಸಾಧನವಾಗಿ ಬಳಸಲು ಪ್ರಯತ್ನಿಸುತ್ತಿರುವ ಸಂಸ್ಥೆಯು ಸ್ಥಾಪಿಸಬೇಕು. ಈ ಕಾರ್ಯಕ್ರಮವು ಸಮುದಾಯಕ್ಕಾಗೇ ಇದ್ದು, ಈ ಕಾರ್ಯಕ್ರಮಗಳ ಪ್ರಸರಣದ ಉಪಯೋಗದ ಬಗ್ಗೆ ಸಮುದಾಯಕ್ಕೆ ಅರಿವಿರಬೆಕು.
* ಕಾರ್ಯಕ್ರಮ : ನೆರವು ನೀಡುವ ಸಂಸ್ಥೆ ಆದ್ಯತೆಯಾಗಿ ಗುರುತಿಸಿರುವ ವಿಷಯಗಳ ಕುರಿತು ಸೂಕ್ತ ಶ್ರವ್ಯ ಕಾರ್ಯಕ್ರಮಗಳನ್ನು ನಿರ್ಮಿಸುವುದು ಎರಡನೆಯ ಪ್ರಮುಖ ಅಂಶ. ಈ ಕಾರ್ಯಕ್ರಮಗಳ ಯೋಜನೆ, ನಿರ್ಮಾಣ/ಮತ್ತು ಮೌಲ್ಯಮಾಪನದ ಹಂತಗಳಲ್ಲಿ ಕೇಳುಗ ಸಮುದಾಯದವರ ಉತ್ತಮ ಭಾಗವಹಿಸುವಿಕೆ ಇರುವಂತೆ ಖಾತ್ರಿಪಡಿಸಿಕೊಳ್ಳಬೇಕು.
* ಪ್ರಸಾರ : ರೇಡಿಯೋ ಮೂಲಕ ಪ್ರಸಾರವಾದಾಗ ಮಾತ್ರ ಒಂದು ಶ್ರವ್ಯ ಕಾರ್ಯಕ್ರಮ ರೇಡಿಯೋ ಕಾರ್ಯಕ್ರಮವಾಗುತ್ತದೆ. ಇದಕ್ಕೆ ಪ್ರಸಾರಕ ಯಂತ್ರವನ್ನು ಬಳಸಿ ರೇಡಿಯೋ ಕಾರ್ಯಕ್ರಮವನ್ನು ಪ್ರಸಾರ ಮಾಡುವ ರೇಡಿಯೋ ಕೇಂದ್ರವಿರಬೇಕು; ವಿದ್ಯುತ್ ಕಾಂತೀಯ ತರಂಗಗಳ ರೂಪದಲ್ಲಿ ದೂರಕ್ಕೆ ತಲುಪುವ ಸಂಕೇತಗಳಿರಬೇಕು; ರೇಡಿಯೋ ಉಪಕರಣವನ್ನು ಈ ತರಂಗಾಂತರಕ್ಕೆ ಸರಿಯಾಗಿ ಹೊಂದಿಸಿಕೊಂಡು, ಸ್ವೀಕರಿಸುವ ಕೇಳುಗರಿರಬೇಕು. ತಮ್ಮ ಕಾರ್ಯಕ್ರಮಗಳನ್ನು ಪ್ರಸಾರಮಾಡಲು ಇಚ್ಛಿಸುವ ಸಂಸ್ಥೆಗಳು ತಮ್ಮದೇ ಆದ ರೇಡಿಯೋ ಕೇಂದ್ರವನ್ನು ಹೊಂದಿರಬೇಕು ಅಥವಾ ಇರುವ ರೇಡಿಯೋ ಕೇಂದ್ರಗಳೊಡನೆ ತಮ್ಮ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಸಂಧಾನ ನಡೆಸಬೇಕು.

ಮೇಲೆ ವಿವರಿಸಿದ ಪ್ರತಿಯೊಂದು ಅಂಶವನ್ನೂ ಈ ಕೆಳಗೆ ಸವಿವರವಾಗಿ ಪರೀಕ್ಷಿಸಲಾಗಿದೆ.

### ಶ್ರೋತೃಗಳು/ಕೇಳುಗರು/ಪ್ರೇಕ್ಷಕರು

ವಾಣಿಜ್ಯ ಪ್ರಸಾರ ಕೇಂದ್ರಗಳು ಬೃಹತ್ ಸಂಖ್ಯೆಯಲ್ಲಿ ವೈವಿಧ್ಯಮಯ ಪ್ರೇಕ್ಷಕರನ್ನು ಹೊಂದಿರುತ್ತವೆ. ಏಕೆಂದರೆ, ಅವರ ಉದ್ದೇಶ ಹೆಚ್ಚು ಸಂಖ್ಯೆಯ ಜನರನ್ನು ತಲುಪುವುದು ಹಾಗೂ ಅವರ ಕಾರ್ಯಕ್ರಮಗಳ ರಚನೆಯೂ ಈ ದಿಕ್ಕಿನಲ್ಲೇ ಇರುತ್ತದೆ. ಇವು ನಡೆಯುವುದು ಜಾಹೀರಾತುಗಳು ಹಾಗೂ ಪ್ರಾಯೋಜಕರಿಂದ ಬರುವ ಆದಾಯದಿಂದ. ಈ ಜಾಹೀರಾತು, ಪ್ರಾಯೋಜಕತ್ವದ ಶುಲ್ಕ, ಯಾವ ರೀತಿಯ

ಪ್ರೇಕ್ಷಕರಿದ್ದಾರೆ ಹಾಗೂ ಅವರ ಸಂಖ್ಯೆ ಎಷ್ಟಿದೆ ಎಂಬುದನ್ನು ಆಧರಿಸಿರುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಅಭಿವೃದ್ಧಿ ಸಂಸ್ಥೆಗಳಿಗೆ ಯಾವುದೇ ಆದಾಯವಿರುವುದಿಲ್ಲ ಹಾಗೂ ಶ್ರೋತೃಗಳು ಈ ಕಾರ್ಯಕ್ರಮಗಳಿಗೆ /ಪ್ರಸಾರಕ್ಕೆ ಮುಖ್ಯ ವಿಷಯವೇ ಹೊರತು, ವಸ್ತುವಲ್ಲ. ಶ್ರೋತೃಗಳು ಸಮುದಾಯದ ಸದಸ್ಯರೇ ಆದ್ದರಿಂದ ಅವರ ಸ್ವರೂಪ ಹಾಗೂ ಸಂಖ್ಯೆ ಗೊತ್ತಿರುತ್ತದೆ. ಒಂದು ಅರ್ಥಪೂರ್ಣ ರೇಡಿಯೋ ಕಾರ್ಯಕ್ರಮವನ್ನು ಸ್ಥಾಪಿಸುವಲ್ಲಿ ಪ್ರಮುಖ ಅಂಶ – ಯೋಜನೆಯ ಭಾಗೀದಾರರನ್ನು ರೇಡಿಯೋ ಕಾರ್ಯಕ್ರಮದ ಶ್ರೋತೃಗಳನ್ನಾಗಿ ಪರಿವರ್ತಿಸುವುದು.

* *ಅಗತ್ಯತೆಯ ಮೌಲ್ಯಮಾಪನ :* ಪ್ರಾರಂಭದಲ್ಲಿ, ಉದ್ದೇಶಿತ ಶ್ರೋತೃಗಳ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಲು ಸಮೀಕ್ಷೆಯನ್ನು ನಡೆಸಬೇಕು. ಇದರ ಉದ್ದೇಶ ಈಗಿರುವ ಮಾಹಿತಿ ಮತ್ತು ಜ್ಞಾನದ ಅಂತರ ತಿಳಿದುಕೊಳ್ಳುವುದು, ಸ್ವಭಾವ ಮತ್ತು ನಡವಳಿಕೆಯಲ್ಲಿ ತರಬೇಕಿರುವ ಬದಲಾವಣೆಗಳನ್ನು ತಿಳಿದುಕೊಳ್ಳುವುದು ಹಾಗೂ ಉದ್ದೇಶಿತ ಪ್ರೇಕ್ಷಕರು ವ್ಯಕ್ತಪಡಿಸಿರುವ ಅಗತ್ಯಗಳನ್ನು ತಿಳಿದುಕೊಳ್ಳುವುದು. ಈ ಸಮೀಕ್ಷೆಯು ಪ್ರೇಕ್ಷಕರ ಸಾಮಾಜಿಕ, ಆರ್ಥಿಕ, ಸಂಖ್ಯಾತಕ ಮತ್ತು ಭಾಷೆಯ ಪರಿಚಯವನ್ನು ಮಾಡಿಕೊಡುತ್ತದೆ. ಕಾರ್ಯಕ್ರಮ ನೀತಿ ಮತ್ತು ನಿರ್ಮಾಣದ ಕಾರ್ಯವಿಧಾನ ಹಾಗೂ ವಿಷಯ ನಿರ್ಧರಿಸುವಲ್ಲಿ ಇದು ಆಧಾರವಾಗುತ್ತದೆ.

* *ಸಮುದಾಯ ರೇಡಿಯೋ ಸಮಿತಿಗಳು :* ಇವುಗಳು ಸಮುದಾಯದ ಸದಸ್ಯರ ಗುಂಪುಗಳು. ರೇಡಿಯೋ ಕಾರ್ಯಕ್ರಮವನ್ನು ಸಮುದಾಯಕ್ಕೆ ಸೂಕ್ತ ಮತ್ತು ಉಪಯೋಗವಾಗುವ ಹಾಗೆ ಮಾಡುವಲ್ಲಿ ಇರುವ ಹಲವಾರು ಕಾರ್ಯಗಳಿಗೆ ಇವರೇ ಜವಾಬ್ದಾರರು. ಸಮುದಾಯವನ್ನು ಸಂಘಟಿಸಲು ಈಗಾಗಲೇ ಇರುವ ಸಾಂಸ್ಥಿಕ ಮಾದರಿಯಿಂದ ಈ ಸಮಿತಿ ರಚಿತವಾಗಿರಬಹುದು ಅಥವಾ ಕೆಲಸಗಳನ್ನು ನಿರ್ವಹಿಸಲು ಜನರ ಪ್ರತಿನಿಧಿಗಳನ್ನು ಸಂಘಟಿಸಿರಬಹುದು. ಯೋಜನೆಯ ಭೌಗೋಳಿಕ ಪ್ರದೇಶವನ್ನು ಆಧರಿಸಿ ಅಥವಾ ಕೆಲಸದ ಸ್ವರೂಪವನ್ನು ಆಧರಿಸಿ ಜವಾಬ್ದಾರಿಗಳನ್ನು ವಿಭಾಗಿಸಬಹುದು. ಈ ಪ್ರಕ್ರಿಯೆಯಲ್ಲಿರುವ ಕೆಲಸಗಳು :
  - ಸ್ಥಳ ಮತ್ತು ರೇಡಿಯೋ ಗ್ರಾಹಕವನ್ನು ಗುರುತಿಸುವುದು, ಸಮುದಾಯದವರು ಕಾರ್ಯಕ್ರಮಗಳನ್ನು ಕೇಳುವಂತೆ ಮಾಡುವುದು.
  - ಕಾರ್ಯಕ್ರಮವನ್ನು ದಿನವೂ ಕೇಳಲು ರೇಡಿಯೋ ಸೆಟ್ ಬಳಿ ಸಮುದಾಯದ ಗುಂಪುಗಳನ್ನು ಸಂಘಟಿಸುವುದು.
  - ಕಾರ್ಯಕ್ರಮಗಳ ಬಗ್ಗೆ ಪ್ರತಿಕ್ರಿಯೆಗಳನ್ನು ಸಂಗ್ರಹಿಸಿ, ಇದು ಕಾರ್ಯಕ್ರಮ ರೂಪಿಸುವವರಿಗೆ ತಲುಪುವ ವ್ಯವಸ್ಥೆಯನ್ನು ಮಾಡುವುದು.
  - ರೇಡಿಯೋ ಕಾರ್ಯಕ್ರಮಗಳಿಂದ ಪಡೆದ ಮಾಹಿತಿ ಮತ್ತು ಕಲಿಕೆಯನ್ನು ಆಧರಿಸಿ, ಭಾಗವಹಿಸಿದವರು ಅನುಸರಣೆ ಮಾಡುವಂತೆ ಒಂದು ವ್ಯವಸ್ಥೆಯನ್ನು ಸ್ಥಾಪಿಸಿ, ಕಾರ್ಯಗತಗೊಳಿಸುವುದು.
  - ಸಮುದಾಯದ ಜನರು ಮತ್ತು ಗುಂಪುಗಳು ರೇಡಿಯೋ ಕಾರ್ಯಕ್ರಮದ ನಿರ್ಮಾಣದಲ್ಲಿ ಭಾಗವಹಿಸುವಂತೆ ಅವರನ್ನು ಪ್ರೇರೇಪಿಸುವುದು.

ಈ ರೀತಿಯಲ್ಲಿ ಸಂಘಟಕ ಸಮಿತಿಗಳು ರಚನೆಯಾಗುತ್ತಿದ್ದಾಗ, ಸಮುದಾಯವು ರೇಡಿಯೋ ಕಾರ್ಯಕ್ರಮ ಕೇಳುವಂತೆ ಮಾಡಬೇಕು. ಸಮುದಾಯದ ಅಗತ್ಯಗಳು ಹಾಗೂ ಕಾರ್ಯಕ್ರಮದತ್ತ ಅವರ ಹೊಣೆಗಾರಿಕೆಯ ಹಿನ್ನೆಲೆಯಲ್ಲಿ, ಕಾರ್ಯಕ್ರಮವನ್ನು ಕೇಳುವುದರಿಂದ ಅವರಿಗಾಗುವ ಲಾಭಗಳ ಬಗ್ಗೆ ಸಮುದಾಯಕ್ಕೆ ಪರಿಚಯಿಸಿಕೊಡಬೇಕು. ಸಮುದಾಯದ ಮೇಲೆ ಕಾರ್ಯಕ್ರಮವನ್ನು ಬಲವಂತವಾಗಿ ಹೇರುವುದಕ್ಕಿಂತ, ಇದೊಂದು ಸಮುದಾಯದ ಆವಶ್ಯಕತೆಯಾಗುವುದರಲ್ಲೇ ರೇಡಿಯೋ ಕಾರ್ಯಕ್ರಮದ ಯಶಸ್ಸು ಅಡಗಿದೆ.

## ಕಾರ್ಯಕ್ರಮಗಳು

ಇದರಲ್ಲಿ ಮಾನವ ಸಂಪನ್ಮೂಲ ಮತ್ತು ತಾಂತ್ರಿಕ ಅಂಶಗಳಿವೆ.

- *ಮಾನವ ಸಂಪನ್ಮೂಲದ ಆವಶ್ಯಕತೆ* ಎಂದರೆ ನಿರ್ಮಾಣ ತಂಡ. ತಂಡದ ಗಾತ್ರದ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು. ನಿರ್ಮಾಣ ತಂಡದಲ್ಲಿ ಪ್ರಮುಖವಾಗಿ ಒಬ್ಬರು ನಿರ್ಮಾಪಕರು/ನಿರ್ದೇಶಕರು, ಒಬ್ಬ ಸಂಪಾದಕರು ಮತ್ತು ಒಬ್ಬ ಕ್ಷೇತ್ರ ಸಹಾಯಕರಿರಬೇಕು. ಚಿಕ್ಕ ಸ್ವಯಂಸೇವಾ ಸಂಸ್ಥೆಯಾಗಿದ್ದು, ಕಾರ್ಯಕ್ರಮ ಮಾಡಲು ತನ್ನದೇ ಆದ ಮಿತಿಗಳಿದ್ದಲ್ಲಿ, ಬಹುಮುಖ ಪ್ರತಿಭೆ ಮತ್ತು ಸಾಮರ್ಥ್ಯಗಳಿರುವ, ಅಗತ್ಯ ಬಿದ್ದಲ್ಲಿ ಇತರರ ಜವಾಬ್ದಾರಿಯನ್ನು ತೆಗೆದುಕೊಳ್ಳಬಲ್ಲ ವ್ಯಕ್ತಿಗಳಿಗಾಗಿ ಹುಡುಕಬೇಕಾಗಬಹುದು. ಕಾರ್ಯಕ್ರಮ ನಿರ್ಮಾಣದ ಪ್ರಯತ್ನ ಬೃಹತ್ ಆಗಿದ್ದರೆ, ಪ್ರತಿ ವಿಭಾಗದಲ್ಲೂ ಹೆಚ್ಚು ಜನರ ಆವಶ್ಯಕತೆಯಿದ್ದು, ಕಂಪ್ಯೂಟರ್ ಮತ್ತು ಶ್ರವ್ಯ ಉಪಕರಣಗಳ ಜ್ಞಾನ ಹೊಂದಿದ ತಂತ್ರಜ್ಞರೊಬ್ಬರು ಹೆಚ್ಚುವರಿಯಾಗಿರಬೇಕು.
- ಸಂಸ್ಥೆಗಳಿಂದ ಔಪಚಾರಿಕ ತರಬೇತಿ ಪಡೆದವರನ್ನು ನೇಮಿಸಿಕೊಳ್ಳುವುದು ಪ್ರಯೋಜನಕಾರಿಯಾದರೂ, ಅವರು ವೆಚ್ಚದಲ್ಲಿ ದುಬಾರಿ. ಜೊತೆಗೆ, ನೇರವಾಗಿ ಕೆಲಸ ಕೈಗೊಳ್ಳುವ ಸಾಮರ್ಥ್ಯ ಹೊಂದಿರುವಂತೆ ಅವರನ್ನು ಸಂಸ್ಥೆಗಳು ತಯ್ಯಾರು ಮಾಡಿರುವುದಿಲ್ಲ. ಇನ್ನೊಂದು ವಿಧಾನದಲ್ಲಿ, ಅಭಿವೃದ್ಧಿ ಕಾರ್ಯಗಳಲ್ಲಿ ಅನುಭವ ಹೊಂದಿರುವ ಜನರನ್ನು ನೇಮಕ ಮಾಡಿಕೊಂಡು, ಕಾರ್ಯಕ್ರಮ ನಿರ್ಮಾಣ ಒಳಗೊಂಡಿರುವ ಕೆಲಸಗಳಲ್ಲಿ ಅವರಿಗೆ ತರಬೇತಿ ಕೊಡಿಸಬಹುದು. ಯಾವುದೇ ವಿಧಾನವಿರಲಿ, ಕಾರ್ಯಕ್ರಮ ನಿರ್ಮಾಣ ಮತ್ತು ಪ್ರಸರಣದಲ್ಲಿ ಪರಿಣಿತರಾದ ತರಬೇತುದಾರರು ಅಥವಾ ಸಂಸ್ಥೆಗಳ ನೆರವು ಪಡೆಯಬಹುದು. ಏಕೆಂದರೆ, ಇವರು ಕಾರ್ಯಕ್ರಮ ಸಿಬ್ಬಂದಿಗೆ ಆವಶ್ಯಕವಾದ ಕೌಶಲ್ಯ ಮತ್ತು ದೃಷ್ಟಿಕೋನವನ್ನು ನೀಡಬಹುದು.
- ತಂಡದ ಸದಸ್ಯರಿಗೆ ಸಂಸ್ಥೆಯ ದೂರದೃಷ್ಟಿ, ಗುರಿ ಹಾಗೂ ಉದ್ದೇಶಗಳು, ಸಂಸ್ಥೆಯ ನೀತಿನಿಯಮಗಳು ಹಾಗೂ ಮಧ್ಯಪ್ರವೇಶಿಸುವಿಕೆಯ ಕಾರ್ಯತಂತ್ರದ ಬಗ್ಗೆ ಸ್ಪಷ್ಟತೆ ಮೂಡಿಸುವುದು ಅತ್ಯಗತ್ಯ. ನಿರ್ಮಾಣ ತಂಡವು ಸಂಸ್ಥೆಯೊಂದಿಗೆ ಹೊಂದಿಕೊಳ್ಳಬೇಕೇ ವಿನಃ, ಸಂಸ್ಥೆಯ ವಾತಾವರಣದಲ್ಲಿ ಒಬ್ಬಂಟಿಯಾಗಿ ಉಳಿಯಬಾರದು.

### *ಅಗತ್ಯ ಉಪಕರಣಗಳು*

- ಸೂಕ್ತ ಹಾರ್ಡ್‌ಡ್ರೈವ್ ಸಾಮರ್ಥ್ಯ ಹೊಂದಿರುವ ಕಂಪ್ಯೂಟರ್, ಸಿ.ಡಿ. ರೈಟರ್, ಕಾರ್ಯಕ್ರಮವನ್ನು ಧ್ವನಿ ಮುದ್ರಿಸಿ, ನಿರ್ಮಿಸಲು ಅತ್ಯಾವಶ್ಯಕತೆ ಇರುವ ಉಪಕರಣಗಳು
- ಉತ್ತಮ ಶ್ರವ್ಯ ಸಂಪಾದನೆಯ ಸಾಫ್ಟ್‌ವೇರ್, ಉದಾಹರಣೆಗೆ ಅಡೋಬ್ ಆಡಿಶನ್
- ಮಾತು ಮತ್ತು ಸಂಗೀತವನ್ನು ಧ್ವನಿ ಮುದ್ರಿಸಲು ಅತ್ಯುತ್ತಮ ಗುಣಮಟ್ಟದ ಧ್ವನಿಗ್ರಾಹಕ (ಮೈಕ್ರೋಫೋನ್)
- ಕ್ಷೇತ್ರ ಧ್ವನಿ ಮುದ್ರಣೆಗೆ ಸೂಕ್ತವಾದ ಧ್ವನಿಗ್ರಾಹಕವನ್ನು ಹೊಂದಿರುವ ಕೊಂಡೊಯ್ಯಬಲ್ಲ ಧ್ವನಿ ಮುದ್ರಕ
- ಟೇಪುಗಳು, ಸಿ.ಡಿ.ಗಳು, ಕೇಬಲ್ ಮತ್ತು ಮಿಕ್ಸರ್‌ಗಳು

ನೇಮಕಗೊಂಡಿರುವ ಸಿಬ್ಬಂದಿ ಅನುಭವಿಗಳಾಗಿದ್ದರೆ, ಅವರೇ ಉಪಕರಣಗಳನ್ನು ಖರೀದಿಸಬಹುದು. ಇಲ್ಲವಾದರೆ, ಉಪಕರಣಗಳನ್ನು ಕೊಳ್ಳುವಲ್ಲಿ ಶಿಫಾರಸ್ಸು ಮಾಡಿ ಮತ್ತು ತೊಂದರೆ ನಿವಾರಿಸುವಲ್ಲಿ ನೆರವಾಗುವ ಪರಿಣಿತರ ಸೇವೆ ಪಡೆದುಕೊಳ್ಳುವುದು ಸೂಕ್ತ.

* *ಸ್ಟುಡಿಯೋ :* ಈ ವಿಧದ ಯೋಜಿತ ಕಾರ್ಯಕ್ರಮಗಳ ನಿರ್ಮಾಣಕ್ಕೆ ಆಕಾಶವಾಣಿ ಕೇಂದ್ರಗಳು ಅಥವಾ ವಾಣಿಜ್ಯ ರೇಡಿಯೋ ಕೇಂದ್ರಗಳಿಗೆ ಇರುವಂತಹ ಅತ್ಯಾಧುನಿಕ ಸ್ಟುಡಿಯೋದ ಅವಶ್ಯಕತೆಯಿಲ್ಲ. 15 x 10 ಅಡಿ ಕನಿಷ್ಟ ಅಳತೆಯ ಕೊಠಡಿಯೇ ಸಾಕು. ಆದರೆ, ಒಳಗೆ ನಡೆಯುವ ಧ್ವನಿ ಮುದ್ರಣ ಕ್ರಿಯೆಗೆ ಹೊರಗಿನ ಸದ್ದು, ಗದ್ದಲದಿಂದ ಭಂಗ ಬಾರದಂತೆ ಮೊದಲು ಕೊಠಡಿಯನ್ನು 'ಶಬ್ದ ರಹಿತ' ವನ್ನಾಗಿಸಬೇಕು. ಚಿಕ್ಕ ಸ್ಟುಡಿಯೋದಲ್ಲಿ ಶಬ್ದ ಸಂಬಂಧಿ ತಂತ್ರಜ್ಞಾನದ ಆವಶ್ಯಕತೆಯಿಲ್ಲ. ಗೋಡೆ ಹಾಗೂ ಕಿಟಕಿಗಳಿಗೆ ದಪ್ಪನೆಯ ಪರದೆ, ನೆಲಕ್ಕೆ ದಪ್ಪನೆಯ ಜಮಖಾನೆ ಹಾಸಿ, ಕಬ್ಬಿಣದ ಪೀಠೋಪರಕರಣಗಳು ಕೊಠಡಿಯೊಳಗೆ ಇರದಂತೆ ನೋಡಿಕೊಂಡರೆ ಧ್ವನಿಮುದ್ರಣದ ಗುಣಮಟ್ಟವನ್ನು ಸುಧಾರಿಸಬಹುದು. ನಿಮ್ಮಲ್ಲಿ ಸಾಕಷ್ಟು ಹಣವಿದ್ದರೆ ಸ್ಥಳವನ್ನು ಶಬ್ದರಹಿತವನ್ನಾಗಿ ಮಾಡಬಹುದು ಹಾಗೂ ಶಬ್ದ ಸಂಬಂಧಿ ತಂತ್ರಜ್ಞಾನವನ್ನೂ ಬಳಸಬಹುದು.

* *ಖರ್ಚುವೆಚ್ಚಗಳು :* ಮೂಲಭೂತ ಉಪಕರಣಗಳಿಗೆ ರೂ. 60,000 ರೂಪಾಯಿಗಳಿಂದ ಒಂದು ಲಕ್ಷದವರೆಗೆ ಖರ್ಚಾಗುತ್ತದೆ. ಈಗಾಗಲೇ ಇರುವ ವ್ಯವಸ್ಥೆಗಳಿಗೆ ಭೇಟಿ ನೀಡಿ, ವಿವಿಧ ಉಪಕರಣಗಳ ಆಯ್ಕೆಯಿಂದ ಆಗುವ ಪ್ರಯೋಜನ ಹಾಗೂ ನಷ್ಟದ ಬಗ್ಗೆ ತಿಳಿದುಕೊಳ್ಳುವುದು ಹಾಗೂ ಸಮೀಪದ ನಗರದಲ್ಲಿ ಮಾರುಕಟ್ಟೆಯ ಸಮೀಕ್ಷೆ ನಡೆಸುವುದರಿಂದ ತಾಂತ್ರಿಕ ಸೌಲಭ್ಯ ಹಾಗೂ ವೆಚ್ಚದ ಬಗ್ಗೆ ನಿರ್ಧರಿಸುವಲ್ಲಿ ಸಹಾಯವಾಗುತ್ತದೆ.

* *ಯೋಜನೆ :* ಕಾರ್ಯಕ್ರಮ ನಿರ್ಮಾಣದ ಪ್ರಕ್ರಿಯೆಯ ಕಲ್ಪನೆ, ಯೋಜನೆ, ಉಸ್ತುವಾರಿ ಹಾಗೂ ಮಾರ್ಗದರ್ಶನಕ್ಕೆ ಸಮುದಾಯದ ಪ್ರತಿನಿಧಿಗಳನ್ನು ಒಳಗೊಂಡ ಕಾರ್ಯಕ್ರಮ ಸಮಿತಿಯನ್ನು ರಚಿಸಬಹುದು. ಈ ಪ್ರಕ್ರಿಯೆಯಲ್ಲಿ ಮುಂದಿನ ಕೆಲಸಗಳು ಒಳಗೊಂಡಿವೆ:

  - ಕಾರ್ಯಕ್ರಮ ನಿರ್ಮಾಣದ ಎಲ್ಲ ಹಂತಗಳಲ್ಲೂ ಅನುಸರಿಸಬೇಕಾದ ನೀತಿಯನ್ನು ರೂಪಿಸುವುದು.
  - ಉದ್ದೇಶಿತ ಪ್ರೇಕ್ಷಕರು/ಶ್ರೋತೃಗಳಿಗೆ ಪ್ರಸಾರ ಮಾಡಬೇಕೆಂದಿರುವ ಜ್ಞಾನ ಹಾಗೂ ಮಾಹಿತಿ ಕ್ಷೇತ್ರಗಳನ್ನು ಗುರುತಿಸುವುದು.
  - ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಮುದಾಯದ ಸದಸ್ಯರನ್ನು ಗುರುತಿಸುವುದು ಹಾಗೂ ಅವರಿಗೆ ವಿಷಯದ ಪರಿಚಯ ನೀಡುವುದು.
  - ವಿವಿಧ ವಿಷಯಗಳಡಿಯಲ್ಲಿ ನಿರ್ದಿಷ್ಟ ವಿಚಾರಗಳು ಮತ್ತು ವಸ್ತುವಿಷಯಗಳನ್ನು ಗುರುತಿಸುವುದು.
  - ಕಾರ್ಯಕ್ರಮಗಳ ವಿಷಯದಲ್ಲಿ ನೆರವಾಗುವ ಆಕರ ಗ್ರಂಥಗಳು, ಮಾಹಿತಿ ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸುವುದು.
  - ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಮುದಾಯದ ಸದಸ್ಯರನ್ನು ಗುರುತಿಸುವುದು ಹಾಗೂ ಅವರಿಗೆ ವಿಷಯದ ಪರಿಚಯ ನೀಡುವುದು.

## ನಿರ್ಮಾಣ

ಇದರಲ್ಲಿ ಮೂರು ಮುಖ್ಯ ಹಂತಗಳಿವೆ: ಧ್ವನಿಮುದ್ರಣದ ಪೂರ್ವ ಮತ್ತು ಯೋಜನೆ, ಧ್ವನಿಮುದ್ರಣ, ಇದರ ನಂತರ ನಿರ್ಮಾಣ ಹಾಗೂ ನಿರೂಪಣೆ.

## ಧ್ವನಿಮುದ್ರಣದ ಪೂರ್ವ ಮತ್ತು ಯೋಜನೆ

* ವಸ್ತುವಿಷಯ, ವಿಚಾರ ಹಾಗೂ ಸಂದೇಶವನ್ನು ನಿರ್ಧರಿಸಲು ಕಾರ್ಯಕ್ರಮದ ವಿಷಯ ಮತ್ತು ಭಾಗವಹಿಸುವವರ ಬಗ್ಗೆ ಸಂಶೋಧನೆ ನಡೆಸಬೇಕು. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಬೇಕು:

  ಕಾರ್ಯಕ್ರಮದಲ್ಲಿ ಒಬ್ಬ ಸಂಪನ್ಮೂಲ ವ್ಯಕ್ತಿ ಅಥವಾ ಪರಿಣಿತರು ಇರಬೇಕೆ? ಕಾರ್ಯಕ್ರಮವನ್ನು ಸಮುದಾಯದ ಸದಸ್ಯರ ಅಭಿಪ್ರಾಯದ ಮೇಲೆ ಆಧರಿಸಬೇಕೆ ಅಥವಾ ನಾಟಕೀಯ ಅಥವಾ ಕಾಲ್ಪನಿಕ ಚಿತ್ರಕಥೆಯನ್ನು ಆಧರಿಸಿ ಪ್ರದರ್ಶನ ನೀಡಬೇಕೆ?

* ಚಿತ್ರಕಥೆ ಬರೆಯುವುದು : ಎಲ್ಲ ವಿಧದ ರೇಡಿಯೋ ಕಾರ್ಯಕ್ರಮಗಳಿಗೆ ಮೊದಲೇ ಬರೆದ ಚಿತ್ರಕಥೆಯ ಆವಶ್ಯಕತೆಯಿಲ್ಲ. ಬಳಕೆಯಲ್ಲಿರುವ ಕೆಲವು ಕಾರ್ಯಕ್ರಮ ವಿಧಗಳು:

  ಮಾತುಕತೆ, ಸಂಭಾಷಣೆ, ಸಂದರ್ಶನ, ಚರ್ಚೆ, ನಾಟಕ ಮತ್ತು ನುಡಿಚಿತ್ರ, ವಾರ್ತೆ, ಪ್ರಕಟಣೆಗಳು ಮತ್ತು ನಿರೂಪಕಗಳು. ಸಾಮಾನ್ಯವಾಗಿ ಮಾತುಕತೆ, ಪ್ರಕಟಣೆಗಳು ಹಾಗೂ ನಿರೂಪಣೆಗಳಿಗೆ ಮೊದಲೇ ರಚಿಸಿದ ಚಿತ್ರಕಥೆ ಇರಬೇಕು. ನಾಟಕ ಮತ್ತು ನುಡಿಚಿತ್ರಗಳಲ್ಲಿ ಅವುಗಳ ಸ್ವರೂಪದಿಂದಾಗಿಯೇ ಒಳ್ಳೆಯ ಚಿತ್ರಕಥೆಯ ರೂಪವಿರುತ್ತದೆ. ಇತರ ಕಾರ್ಯಕ್ರಮಗಳಿಗೆ ಯೋಜನೆ ಮತ್ತು ತಯಾರಿ ಆವಶ್ಯಕ. ಆದರೆ, ಮೊದಲೇ ಚಿತ್ರಕಥೆಯ ಅಗತ್ಯವಿಲ್ಲ.

* ಕಾರ್ಯಕ್ರಮ ಸಿಬ್ಬಂದಿಗೆ ಚಿತ್ರಕಥೆ ಬರೆಯುವಲ್ಲಿ ತರಬೇತಿ ನೀಡಬಹುದು ಅಥವಾ ರೇಡಿಯೋ ಕಾರ್ಯಕ್ರಮಗಳಿಗೆ ಚಿತ್ರಕಥೆ ಬರೆಯಲು ಬರಹಗಾರರನ್ನು ನಿಯೋಜಿಸಬಹುದು. ಬರೆದ ಚಿತ್ರಕಥೆಯನ್ನು ರೇಡಿಯೋದಲ್ಲಿ ಸಂಭಾಷಣೆಯ ರೂಪದಲ್ಲಿ ನಿರೂಪಿಸಲಾಗುವುದರಿಂದ ರೇಡಿಯೋ ಚಿತ್ರಕಥೆ ಸ್ಪಷ್ಟವಾಗಿರಬೇಕು. ನಿರಕ್ಷರಸ್ಥರಿಗೂ ಅರ್ಥವಾಗುವಂತಿರಬೇಕು. ಹೀಗಾಗಿ ಬಳಸುವ ಭಾಷೆ ಆಡುಭಾಷೆಯಾಗಿರಬೇಕು ಹಾಗೂ ಕಾರ್ಯಕ್ರಮ ಚಿಕ್ಕ ಭೌಗೋಳಿಕ ಪ್ರದೇಶಕ್ಕೆ ಪ್ರಸಾರವಾಗುತ್ತಿದ್ದರೆ, ಅದು ಸ್ಥಳೀಯ ಪ್ರಾಂತ್ಯ ಭಾಷೆಯಲ್ಲಿರಬೇಕು.

* ನಾಟಕ ಮತ್ತು ನುಡಿಚಿತ್ರಗಳಿಗೆ ಮಾತ್ರವಲ್ಲದೆ ವ್ಯಕ್ತಿಗತ ಮಾತುಕತೆಗೂ ಧ್ವನಿಮುದ್ರಣದ ಮೊದಲು ಅಭ್ಯಾಸ ನಡೆಸಿದ್ದರೆ ಉತ್ತಮ. ಆದರೆ ಸಂದರ್ಶನ, ಸಂಭಾಷಣೆ ಹಾಗೂ ಚರ್ಚೆಗಳಿಗೆ ಮೊದಲು ಅಭ್ಯಾಸ ಸೂಕ್ತವಲ್ಲ. ಇಂಥಹ ಕಾರ್ಯಕ್ರಮಗಳನ್ನು ಸ್ವಲ್ಪ ಸಿದ್ಧತೆಯೊಡನೆ ಸಹಜವಾಗಿ ಧ್ವನಿಮುದ್ರಿಸಿದರೆ, ಅವುಗಳ ಗುಣಮಟ್ಟ ಚೆನ್ನಾಗಿರುತ್ತದೆ.

*ಧ್ವನಿಮುದ್ರಣ :* ಇದೊಂದು ಪ್ರಮುಖ ಹಂತ. ಏಕೆಂದರೆ, ಇದು ಅಂತಿಮ ಕಾರ್ಯಕ್ರಮದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಉಪಕರಣಗಳನ್ನು ಬಳಸುವ ವಿಧಾನವನ್ನು ಆಧರಿಸಿ ಎರಡು ವಿಧದ ಧ್ವನಿಮುದ್ರಣಗಳಿವೆ: ಕ್ಷೇತ್ರಾಧಾರಿತ ಮತ್ತು ಸ್ಟುಡಿಯೋ ಆಧಾರಿತ.

* ಬ್ಯಾಟರಿಯ ಸಹಾಯದಿಂದ ಕೆಲಸ ಮಾಡುವ, ಕೊಂಡೊಯ್ಯುವ ಧ್ವನಿಮುದ್ರಕ, ಜೊತೆಗೆ ಕೈಯಲ್ಲಿ ಹಿಡಿಯುವ ಧ್ವನಿಗ್ರಾಹಕ (hand-held mike) ದಿಂದ ಕ್ಷೇತ್ರದಲ್ಲಿ ಸಮುದಾಯದ ಸದಸ್ಯರು ಹಾಗೂ ಪರಿಣಿತರ ಧ್ವನಿ ಮುದ್ರಿಸಬಹುದು. ಕಾರ್ಯಕ್ರಮದ ಪ್ರಧಾನ ವಿಷಯ/ಪಾತ್ರಧಾರಿಗಳಾದ ಇವರು ತಮ್ಮದೇ ಸ್ವಂತ, ಸಹಜ ಪರಿಸರದಲ್ಲಿ ಹೆಚ್ಚು ಸಮಾಧಾನಕರವಾಗಿಯೂ, ಶಕ್ತರಾಗಿಯೂ

ಇರುವುದರಿಂದ, ಈ ವಿಧಾನದ ಧ್ವನಿಮುದ್ರಣ ಸ್ಟುಡಿಯೋ ಆಧಾರಿತ ಮುದ್ರಣಕ್ಕಿಂತ ಹೆಚ್ಚು ಸೂಕ್ತ. ಆದರೆ, ಆದಷ್ಟೂ ಜಾಗ್ರತೆವಹಿಸಿ ಗದ್ದಲರಹಿತ, ಉತ್ತಮ ಗುಣಮಟ್ಟದ ಉಪಕರಣಗಳನ್ನು ಖರೀದಿಸಬೇಕು.

* ಸ್ಟುಡಿಯೋದಲ್ಲಿ ಔಪಚಾರಿಕ ಧ್ವನಿಮುದ್ರಣ ಮಾಡಬಹುದು. ಸ್ಥಳ ಹಾಗೂ ಗದ್ದಲರಹಿತ ಪರಿಸರದಿಂದಾಗಿ ಹೆಚ್ಚು ಆಯ್ಕೆಗಳು ಸಾಧ್ಯ – ಹೆಚ್ಚು ಜನರು, ಹೆಚ್ಚು ಧ್ವನಿಗ್ರಾಹಕಗಳನ್ನು ಬಳಸಬಹುದು, ಧ್ವನಿಗ್ರಾಹಕಗಳಿಂದ ಧ್ವನಿಮುದ್ರಣದ ಗುಣಮಟ್ಟವನ್ನು ನಿಯಂತ್ರಿಸಬಹುದು, ಎಲ್ಲ ಧ್ವನಿಗ್ರಾಹಕಗಳಿಂದ ಪಡೆದ ಧ್ವನಿಮುದ್ರಣವನ್ನು ಒಂದು ಚಾನೆಲ್‌ಗೆ ಹಾಕಬಹುದು.

***ಧ್ವನಿಮುದ್ರಣ ನಂತರದ ನಿರ್ಮಾಣ ಮತ್ತು ಕಾರ್ಯಕ್ರಮ ನಿರೂಪಣೆ :*** ಈ ಹಂತದಲ್ಲಿ ಧ್ವನಿಮುದ್ರಣವನ್ನು ಉದ್ದೇಶಿತ ಕಾರ್ಯಕ್ರಮವಾಗಿ ರೂಪಿಸಲಾಗುವುದು. ಕಾರ್ಯಕ್ರಮವನ್ನು ಚೇತೋಹಾರಿಯಾಗಿ, ಪರಿಣಾಮಕಾರಿಯಾಗಿ ಮಾಡಲು ಇತರ ಶಬ್ದಗಳು, ಶಬ್ದ ವಿಶೇಷಗಳು ಮತ್ತು ಸಂಗೀತವನ್ನು ಸೇರಿಸಬಹುದು. ಅಂತಿಮವಾಗಿ, ಕಾರ್ಯಕ್ರಮ ಬಳಕೆಗೆ ಸಿದ್ಧವಾಗಿದೆ. ಇದು ಈ ಕೆಳಗಿನ ಹಂತಗಳನ್ನು ಹೊಂದಿದೆ: ಸಂಪಾದನೆ (editing), ಧ್ವನಿ ಸೇರಿಸುವುದು (mixing), ನಿರ್ಮಾಣ ಮತ್ತು ನಿರೂಪಣೆ.

* ಸಂಪಾದನೆ (editing) : ಧ್ವನಿ ಮುದ್ರಿತವಾಗಿರುವ ಸಾಮಗ್ರಿಗಳನ್ನು ಪರಿಷ್ಕರಿಸುವ ಪ್ರಕ್ರಿಯೆ. ಇಲ್ಲಿ ಅನವಶ್ಯಕವಾದ ಭಾಗಗಳನ್ನು ಕತ್ತರಿಸಿ, ಉಳಿಸಿಕೊಂಡ ಭಾಗಗಳನ್ನು ಮತ್ತೂ ಒಪ್ಪ ಮಾಡಲಾಗುವುದು. ಕಾರ್ಯಕ್ರಮವನ್ನು ಸಂಪಾದನೆ ಮಾಡುವಾಗ ಬಹುಮುಖಿ ಚಾನೆಲ್‌ಗಳು ತೆಗೆದಿರುತ್ತವೆ. ಒಂದು ಚಾನೆಲ್‌ನಲ್ಲಿ ಪ್ರಧಾನ ಮಾತಿನ ತುಣುಕುಗಳನ್ನು ಹಾಕಬಹುದು. ಇದಕ್ಕೆ ಸೂಕ್ತವಾದ ಧ್ವನಿ ವಿಶೇಷಗಳು ಹಾಗೂ ಸಂಗೀತವನ್ನು ಇತರ ಚಾನೆಲ್‌ಗಳಲ್ಲಿ ಹಾಕಬಹುದು. ಧ್ವನಿಮುದ್ರಿತ ಭಾಗಗಳನ್ನು ಪುನರ್ ಜೋಡಿಸಿ, ಕಾರ್ಯಕ್ರಮಕ್ಕೆ ಮತ್ತೂ ಉತ್ತಮ ಆಕಾರವನ್ನು ನೀಡಬಹುದು. ಧ್ವನಿಮುದ್ರಣದ ಈ ಹಂತದಲ್ಲಿ ಗುಣಮಟ್ಟ ಹಾಗೂ ಶಾರೀರವನ್ನು ಉತ್ತಮಪಡಿಸಬಹುದು. ಮಾರ್ದನಿ, ಪ್ರತಿಧ್ವನಿ ಅಥವಾ ಸಂಗೀತವನ್ನು ವಿವಿಧ ಚಾನೆಲ್‌ಗಳಲ್ಲಿ ಹಾಕಬಹುದು.
* (ಮಿಕ್ಸಿಂಗ್ – ಧ್ವನಿ ಸೇರಿಸುವುದು) Mixing : ಕಾರ್ಯಕ್ರಮದೊಳಗೆ ಹಾಕಬೇಕಾದ ಎಲ್ಲ ಧ್ವನಿ ಮುದ್ರಿತ ಭಾಗಗಳನ್ನು ಬೇರೆ ಬೇರೆ ಚಾನೆಲ್‌ಗಳಲ್ಲಿ ಹಾಕಿ, ಎಲ್ಲ ವಿಧದಲ್ಲೂ ಸಿದ್ಧವಾದಾಗ, ಎಲ್ಲ ಚಾನೆಲ್‌ಗಳನ್ನು ಒಂದು ಪ್ರಧಾನ (master) ಚಾನೆಲ್‌ನಲ್ಲಿ ಸೇರಿಸಲಾಗುತ್ತದೆ. ಇದು ಧ್ವನಿಮುದ್ರಿತ ಕಾರ್ಯಕ್ರಮದ ಅಂತಿಮ ರೂಪ.
* ನಿರೂಪಣೆ : ಸಂಪಾದನೆ ಹಾಗೂ ಮಿಕ್ಸಿಂಗ್ ಹಂತಗಳ ಕೊನೆಯ ವೇಳೆಗೆ ಕಾರ್ಯಕ್ರಮವನ್ನು ಕಂಪ್ಯೂಟರ್‌ನಲ್ಲಿ ಕೇಳಬಹುದು. ಇಲ್ಲಿಂದ ಅದನ್ನು ಸಿ.ಡಿ.ಗೆ ಬರೆಯಲಾಗುತ್ತದೆ. ನಿರೂಪಣೆಯ ಭಾಗದಲ್ಲಿ ಸಿ.ಡಿ.ಗೆ ರಕ್ಷಾ ಕವಚವನ್ನು ವಿನ್ಯಾಸ ಮಾಡಿ, ಕಾರ್ಯಕ್ರಮದ ಹೆಸರು ಮತ್ತು ಅವಧಿ, ಕಾರ್ಯಕ್ರಮ ನಿರ್ಮಾಣ ಮಾಡಿರುವ ಸಂಸ್ಥೆಯ ಹೆಸರು ಮತ್ತು ಇತರ ವಿವರಗಳು ಹಾಗೂ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ನೀಡಬೇಕು. ಕಾರ್ಯಕ್ರಮ ಪ್ರಸಾರಕ್ಕಾಗಿ ಒಪ್ಪಂದವಾಗಿದ್ದರೆ, ಸಿ.ಡಿ.ಯನ್ನು ರೇಡಿಯೋ ಕೇಂದ್ರಕ್ಕೆ ಕಳುಹಿಸಬಹುದು.

## ಪ್ರಸಾರ

ರೇಡಿಯೋ ಕೇಂದ್ರದಿಂದ ರೇಡಿಯೋ ಸೆಟ್‌ಗಳಿಗೆ ಧ್ವನಿ ಮುದ್ರಿತ ಕಾರ್ಯಕ್ರಮವನ್ನು ಪ್ರಸರಣ ಮಾಡುವ ಪ್ರಕ್ರಿಯೆಯೇ ಪ್ರಸಾರ. ಧ್ವನಿಮುದ್ರಿತ ಕಾರ್ಯಕ್ರಮವನ್ನು ಪ್ರಸಾರ ಮಾಡುವಲ್ಲಿ ವಿವಿಧ ಅಂಶಗಳು ಅಡಕವಾಗಿವೆ.

## ಸಮುದಾಯ ರೇಡಿಯೋ ಆರಂಭಿಸುವುದು

* ದೀರ್ಘ ಕಾಯುವಿಕೆಯ ನಂತರ ಇತ್ತೀಚೆಗೆ ಭಾರತ ಸರ್ಕಾರ ಮಾನ್ಯತೆ ಪಡೆದಿರುವ ಸ್ವಯಂಸೇವಾ ಸಂಸ್ಥೆಗಳಿಗೆ ಅವರದೇ ಸ್ವಂತ ಸಮುದಾಯ ರೇಡಿಯೋ ಕೇಂದ್ರಗಳನ್ನು[12] ನಡೆಸಲು ಪರವಾನಗಿ ನೀಡಲು ಒಪ್ಪಿದೆ. ಒಂದು ಚಿಕ್ಕ ಸಮುದಾಯ ರೇಡಿಯೋ ಕೇಂದ್ರವನ್ನು ಹೊಂದಿರುವುದು ಮತ್ತು ನಡೆಸುವುದೂ ದೊಡ್ಡ ಜವಾಬ್ದಾರಿಯೇ. ಸಾಕಷ್ಟು ಸಂಪನ್ಮೂಲಗಳಿರುವ ಸ್ವಯಂಸೇವಾ ಸಂಸ್ಥೆಗಳು ಮಾತ್ರ ತಮ್ಮೆಲ್ಲಾ ಸಾಮರ್ಥ್ಯ ಮತ್ತು ಸಂಪನ್ಮೂಲಗಳನ್ನು ಸಂಘಟಿಸಿ, ರೇಡಿಯೋ ಕೇಂದ್ರವನ್ನು ಆರಂಭಿಸಬಹುದು. ಇತರ ಸ್ವಯಂಸೇವಾ ಸಂಸ್ಥೆಗಳು ಕೂಡಾ ತಮ್ಮ ಧ್ವನಿ ಮುದ್ರಿತ ಕಾರ್ಯಕ್ರಮಗಳನ್ನು ಬಾನುಲಿ ಪ್ರಸಾರ ಮಾಡಲು ಕೆಳಗೆ ವಿವರಿಸಿರುವ ಪರ್ಯಾಯಗಳ ಬಗ್ಗೆ ಆಲೋಚಿಸಬಹುದು. ಒಂದು ಸಂಸ್ಥೆ ತನ್ನದೇ ಆದ ರೇಡಿಯೋ ಕೇಂದ್ರವನ್ನು ಹೊಂದಲು ಇಚ್ಛಿಸಿದರೆ, ಮೇಲೆ ವಿವರಿಸಿದ ನಿರ್ಮಾಣ ಪ್ರಕ್ರಿಯೆ ಮೂಲಕ ರೇಡಿಯೋ ಕೇಂದ್ರಕ್ಕೆ ಕಾರ್ಯಕ್ರಮಗಳನ್ನು ಒದಗಿಸಬಹುದು.

## ಆಕಾಶವಾಣಿಯಲ್ಲಿ ಪ್ರಸಾರದ ಸಮಯವನ್ನು ಕೊಳ್ಳುವುದು

* ಪ್ರಸಾರ ಭಾರತಿಯೆಂಬ ನಿಗಮವಾಗಿ ಪರಿವರ್ತನೆಗೊಂಡ ನಂತರ ಆಕಾಶವಾಣಿ ಹೊರಗಿನ ಸಂಸ್ಥೆಗಳೊಂದಿಗೆ ವ್ಯವಹರಿಸುವಲ್ಲಿ ವಾಣಿಜ್ಯ ಕಾರ್ಯವಿಧಾನವನ್ನು ಅಳವಡಿಸಿಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಹಲವಾರು ಅಭಿವೃದ್ಧಿ ಸಂಸ್ಥೆಗಳು, ನಿಗಮಗಳು, ರಾಜ್ಯ ಸರ್ಕಾರದ ಮಂಡಳಿಗಳು, ಸ್ವಯಂಸೇವಾ ಸಂಸ್ಥೆಗಳು ಆಕಾಶವಾಣಿಯಲ್ಲಿ ಸರಣಿ ರೇಡಿಯೋ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿವೆ.
* ಈ ಪ್ರಕ್ರಿಯೆ ಬಹಳ ಸರಳ. ಆಕಾಶವಾಣಿ ವಿವಿಧ ದರಗಳಿರುವ ಹಲವಾರು ಪ್ರಸಾರ 'ಸಮಯ'ಗಳನ್ನು ಹೊಂದಿದ್ದು, ಇವನ್ನು ಹೊರಗಿನವರಿಗೆ ಮಾರುತ್ತದೆ. ಈ ಬೆಲೆ ರೇಡಿಯೋ ಕೇಂದ್ರದ ವ್ಯಾಪ್ತಿ ಮತ್ತು ಶ್ರೋತೃಗಳ ಸಮಯದ (ಶ್ರೋತೃಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕೇಳುವ ಸಮಯ (prime time) ಮತ್ತು ಶ್ರೋತೃಗಳು ಕಡಿಮೆ ಸಂಖ್ಯೆಯಲ್ಲಿ ಕೇಳುವ ಸಮಯ (non-prime time)ದ ಜನಪ್ರಿಯತೆಯನ್ನು ಆಧರಿಸಿದೆ. ಆಕಾಶವಾಣಿಯನ್ನು ಬಳಸಲು ಇನ್ನೊಂದು ಪ್ರಮುಖ ಆಕರ್ಷಣೆ, ಪ್ರತಿ ಅವಧಿಯ ತುಣುಕನ್ನು ಕೊಂಡಾಗ, ಕೆಲ ಸಮಯ ಉಚಿತ ವಾಣಿಜ್ಯ ಸಮಯ (free commercial time) ವಾಗಿ ದೊರೆಯುತ್ತದೆ. ಈ ಉಚಿತ ವಾಣಿಜ್ಯ ಸಮಯವನ್ನು ಯಾರು ತಮ್ಮ ಉತ್ಪನ್ನಗಳು ಅಥವಾ ಸೇವೆಗಳನ್ನು ಮಾರಲು ಇಚ್ಛಿಸುತ್ತಾರೋ ಅವರಿಗೆ ಕೊಡುವುದರಿಂದ ಸಂಸ್ಥೆಗಳಿಗೆ ಆದಾಯ ದೊರೆಯುತ್ತದೆ. ಹೆಚ್ಚಿನ ವಿವರ, ಮಾಹಿತಿ ಹಾಗೂ ತೆರಿಗೆಯ ವಿಚಾರಗಳನ್ನು ಕುರಿತು ತಿಳಿಯಲು ಸಂಸ್ಥೆಗಳು ತಮ್ಮ ಸಮೀಪದ ಆಕಾಶವಾಣಿ ಕೇಂದ್ರಕ್ಕೆ ಭೇಟಿ ನೀಡಬಹುದು. ಉದಾಹರಣೆಗೆ, ಮೈಸೂರು ಆಕಾಶವಾಣಿಯನ್ನು ಒಂದು ಸ್ವಯಂಸೇವಾ ಸಂಸ್ಥೆ ಸಂಪರ್ಕಿಸಿದಾಗ, ಜನಪ್ರಿಯ ಗ್ರಾಮೀಣ ಶ್ರೋತೃಗಳ ಕಾರ್ಯಕ್ರಮವಾದ 'ಕೃಷಿರಂಗ'ದ ಭಾಗವಾಗಿ 30 ನಿಮಿಷಗಳ ಸಮಯವನ್ನು ವಾರಕ್ಕೆ 3,500 ರೂಪಾಯಿಗಳಿಗೆ ನೀಡಲಾಯಿತು.

---

12 ಈ ಕುರಿತು ಭಾರತ ಸರ್ಕಾರ ಬಿಡುಗಡೆ ಮಾಡಿರುವ ಮಾರ್ಗ ಸೂಚಿಗಳು (Guidelines).

### ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (IGNOU) ದ ಜ್ಞಾನವಾಣಿ

* ದೇಶದೆಲ್ಲೆಡೆ IGNOU ತನ್ನದೇ ಆದ ಸ್ವಂತ ಪ್ರಸಾರ ಕೇಂದ್ರಗಳನ್ನು ಮತ್ತು 'ಜ್ಞಾನವಾಣಿ' ಎಂಬ ರೇಡಿಯೋ ಚಾನೆಲನ್ನು ಹೊಂದಿದೆ ಮತ್ತು ಈ ಮೂಲಕ ದೇಶದೆಲ್ಲೆಡೆ ಇರುವ ತನ್ನ ಸಾವಿರಾರು ದೂರದ ಶಿಕ್ಷಣಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ. ಈ ಕೇಂದ್ರಗಳ ಬಳಿ ತಮ್ಮ ಶೈಕ್ಷಣಿಕ ಪ್ರಸಾರಗಳಾದ ಮೇಲೂ, ಸಾಕಷ್ಟು ಪ್ರಸಾರ ಸಮಯ ಉಳಿದಿರುತ್ತದೆ. ಈ ಉಳಿದ ಪ್ರಸಾರ ಸಮಯದಲ್ಲಿ IGNOU ಸ್ವಯಂಸೇವಾ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಯಾವುದೇ ವೆಚ್ಚವಿಲ್ಲದೆ ಅವರ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಅನುಮತಿ ನೀಡಿರುವ ನಿದರ್ಶನಗಳಿವೆ.

* ಆದರೆ ಇದರ ಮಿತಿಯೆಂದರೆ, IGNOU ಕೇಂದ್ರಗಳು ಬಹು ಮಟ್ಟಿಗೆ ದೊಡ್ಡ ನಗರಗಳಲ್ಲೇ ಕೇಂದ್ರೀಕೃತವಾಗಿರುವುದರಿಂದ, ಇದರ ಕೇಂದ್ರಗಳು ಮತ್ತು ಶ್ರೋತೃವರ್ಗವೆರಡೂ ಸೀಮಿತವಾಗಿದೆ. ಕರ್ನಾಟಕದಲ್ಲಿ ಈ ರೀತಿಯ ಕೇಂದ್ರಗಳು ಎರಡೇ ಇದ್ದು, ಒಂದು ಬೆಂಗಳೂರಿನಲ್ಲಿದ್ದು IGNOUದಿಂದಲೇ ನೇರವಾಗಿ ನಡೆಸಲ್ಪಡುತ್ತಿದ್ದು, ಇನ್ನೊಂದು ಕೇಂದ್ರ ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಡಿಯಲ್ಲಿದೆ. ಪ್ರಸಾರ ಯಂತ್ರಗಳನ್ನು ನಗರ ಅಥವಾ ಪಟ್ಟಣಗಳಲ್ಲೇ ನಿರ್ಮಿಸಿದ್ದರೂ, ಈ ಕೇಂದ್ರಗಳ ಪ್ರಸಾರ ಗ್ರಾಮೀಣ ಪ್ರದೇಶಗಳಿಗೆ ತಲುಪುತ್ತದೆ. IGNOU ಕೇಂದ್ರಗಳ ಈ ಪ್ರಸಾರ ವಲಯದೊಳಗೆ ತಾವು ಬರುತ್ತೇವೆಯೇ ಎಂದು ಸಂಸ್ಥೆಗಳು ಕಂಡುಕೊಳ್ಳಬೇಕು.

### ಕೇಬಲ್ ಪ್ರಸಾರ

* ಕೆಲವು ಸಂಸ್ಥೆಗಳು ಸೀಮಿತ ಪ್ರದೇಶದೊಳಗೆ ಮತ್ತೊಂದು ವಿಧಾನದ ಪ್ರಸಾರವನ್ನು ಕಂಡುಕೊಂಡಿವೆ. ಇವರು ಉದ್ದೇಶಿತ ಶ್ರೋತೃಗಳಿಗೆ ಸಂದೇಶ ತಲುಪಿಸಲು ಸ್ಥಳೀಯ ಕೇಬಲ್ ಆಪರೇಟರ್‌ಗಳ ನೆರವನ್ನು ಪಡೆಯುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕೇಬಲ್ ಟಿ.ವಿ.ಯ ವ್ಯಾಪಕ ಹಬ್ಬುವಿಕೆಯಿಂದ ಇದು ಸಾಧ್ಯವಾಗಿದೆ.[13]

### ಸ್ಥಳೀಯ ಪ್ರಸಾರ

* ಪ್ರಸಾರಕ್ಕೆ ತದ್ವಿರುದ್ಧ ಪ್ರಕ್ರಿಯೆ 'ಸ್ಥಳೀಯ ಪ್ರಸಾರ'. ಇವೆರಡರ ನಡುವಿನ ಪ್ರಮುಖ ವ್ಯತ್ಯಾಸ ಬಾನುಲಿ ಪ್ರಸಾರ ಇಲ್ಲದಿರುವುದು. ಸ್ಥಳೀಯ ಪ್ರಸಾರದಲ್ಲಿ ಧ್ವನಿಮುದ್ರಿತ ಕಾರ್ಯಕ್ರಮವನ್ನು ಸೀಮಿತ, ಇದಕ್ಕೆಂದೇ ಉದ್ದೇಶಿಸಿದ ಶ್ರೋತೃಗಳಿಗೆ ಆಲಿಸುವುದು. ಇದರಲ್ಲಿ ಧ್ವನಿವರ್ಧಕಗಳು ಇರಬಹುದು ಅಥವಾ ಇಲ್ಲದಿರಬಹುದು. ಈ ವಿಧಾನದ ಪ್ರಸಾರ ಅಪರೂಪವಲ್ಲದಿದ್ದರೂ, ಉದ್ದೇಶಿತ ಬೃಹತ್ ಸಂಖ್ಯೆಯ ಶ್ರೋತೃಗಳಿಗೆ ತಲುಪಲು ಬಳಸುವ ಪ್ರಸಾರ ಪರವಾನಗಿ ಪಡೆದ ಮತ್ತು ಸಮೂಹ ಪ್ರಸಾರವಾದ ಸಮುದಾಯ ರೇಡಿಯೋದ ಅನುಪಸ್ಥಿತಿಯಲ್ಲಿ, ಸ್ಥಳೀಯ ಪ್ರಸಾರ ಗಣನೀಯವಾಗುತ್ತದೆ.

---

13 ಮೈರಾಡಾ ಮತ್ತು ವಾಯ್ಸಸ್ ಸಂಸ್ಥೆಗಳು ನಡೆಸುತ್ತಿರುವ ''ನಮ್ಮ ಧ್ವನಿ''ಯ ವಿವರಗಳನ್ನು ಕೇಬಲ್ ಪ್ರಸಾರದ ಉದಾಹರಣೆಯಾಗಿ ಈ ಅಧ್ಯಾಯದ ಮುಂಬರುವ ವಿಭಾಗದಲ್ಲಿ ನೀಡಲಾಗಿದೆ.

* ಯೋಜನೆಯ ಭಾಗೀದಾರರ ನಿಶ್ಚಿತ ಗುಂಪುಗಳನ್ನು ಹೊಂದಿರುವ ಸಂಸ್ಥೆಗಳು ಈ ವಿಧಾನವನ್ನು ಪ್ರಯತ್ನಿಸಬಹುದು. ಒಂದು ಕೇಂದ್ರ ಸ್ಥಳದಲ್ಲಿ ಕಾರ್ಯಕ್ರಮವನ್ನು ನಿರ್ಮಿಸಿ, ಅವನ್ನು ಸಿ.ಡಿ.ಗಳಿಗೆ ವರ್ಗಾಯಿಸಿ ಹಲವಾರು ಗುಂಪುಗಳಿಗೆ ಕಳುಹಿಸಲಾಗುತ್ತದೆ. ಕ್ಷೇತ್ರ ಮಟ್ಟದಲ್ಲಿ, ಶ್ರೋತೃಗಳ ಗುಂಪುಗಳು ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮವನ್ನು ಹಾಕುತ್ತವೆ.

### *ಧ್ವನಿಮುದ್ರಿತ ಕಾರ್ಯಕ್ರಮಗಳ ಗ್ರಂಥಾಲಯ*

* ಈ ಸೌಲಭ್ಯವನ್ನು ಸ್ವತಂತ್ರವಾಗಿ ಅಥವಾ ಯೋಜನೆಯ ಫಲಾನುಭವಿಗಳಿಗೆಂದೇ ನಿರ್ಮಿಸಿದ ಬಹುಪಯೋಗಿ ಸಂವಹನ ಕೇಂದ್ರದ ಭಾಗವಾಗಿ ಸ್ಥಾಪಿಸಬಹುದು. ಈ ಕೇಂದ್ರದಲ್ಲಿ ವಿವಿಧ ಆಸಕ್ತಿದಾಯಕ ವಸ್ತುವಿಷಯಗಳ ಬಗ್ಗೆ ನಿರ್ಮಿಸಿದ ಧ್ವನಿಮುದ್ರಿತ ಕಾರ್ಯಕ್ರಮಗಳೊಂದಿಗೆ ಧ್ವನಿವರ್ಧಕಗಳು ಮತ್ತು ಒಂದು ಸಿ.ಡಿ. ಪ್ಲೇಯರನ್ನು ಒದಗಿಸಲಾಗಿರುತ್ತದೆ. ಕಾರ್ಯಕ್ರಮಗಳನ್ನು ಆಗಾಗ್ಗೆ ಶ್ರೋತೃಗಳ ಗುಂಪುಗಳಿಗೆ ಹಾಕಿ ಆಲಿಸುವಂತೆ ಮಾಡಬಹುದು ಅಥವಾ ವೈಯಕ್ತಿಕ ಬೇಡಿಕೆ ಬಂದ ಪಕ್ಷದಲ್ಲಿ ಬೇಕಾದವರಿಗೆ ಕೊಡಬಹುದು. ಪುಸ್ತಕಗಳಂತೆ, ಈ ಧ್ವನಿಮುದ್ರಿತ ಕಾರ್ಯಕ್ರಮಗಳನ್ನು ಕೂಡ ಸಾಕ್ಷರತೆಯ ಕೌಶಲ್ಯವಿಲ್ಲದೆ, ಮಾಹಿತಿಯಿಂದ ವಂಚಿತರಾಗಿ ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಅನಕ್ಷರಸ್ಥರಿಗೆಂದೇ ವಿಶೇಷವಾಗಿ ರೂಪಿಸಲಾಗಿರುತ್ತದೆ.

## ವಿಡಿಯೋ ಚಿತ್ರಗಳಿಗಾಗಿ ವಿಚಾರಗಳ ಸೃಷ್ಟಿ

ಶ್ರವ್ಯ (ರೇಡಿಯೋ) ಕಾರ್ಯಕ್ರಮಗಳಿಗಿಂತಲೂ ದೃಶ್ಯ (ವಿಡಿಯೋ) ಕಾರ್ಯಕ್ರಮಗಳಿಗಿರುವ ಸಾಧ್ಯತೆಗಳ ಬಗ್ಗೆ ಎಲ್ಲರಿಗೂ ತಿಳಿದೇ ಇದೆ. ಆದರೂ, ಬಹುತೇಕ ಸಂಸ್ಥೆಗಳು ವಿಡಿಯೋ ಚಿತ್ರಗಳನ್ನು ತಯಾರಿಸಲು ಮುಂದಾಗುವುದಿಲ್ಲ, ಕಾರಣ, ಇದರ ನಿರ್ಮಾಣ ಬಹಳ ಸಂಕೀರ್ಣ ಹಾಗೂ ಖರ್ಚಿನ ಬಾಬ್ತು ಎಂಬ ಭಾವನೆ. ವಿಡಿಯೋ ಚಿತ್ರ ಮಾಡುವುದು ಸಂಕೀರ್ಣವೇನೋ ಹೌದು, ಆದರದು ಎಂತಹ ಚಿತ್ರ, ಏಕೆ ಮತ್ತು ಹೇಗೆ ಮಾಡಬೇಕಿದೆ ಎಂಬುದನ್ನು ಅವಲಂಬಿಸುತ್ತದೆ. ಇತ್ತೀಚೆಗೆ ಆವಿಷ್ಕಾರವಾಗಿರುವ ಡಿಜಿಟಲ್ ತಂತ್ರಜ್ಞಾನದಿಂದ ವಿಡಿಯೋ ಚಿತ್ರ ಮಾಡುವುದು ಬಹಳ ಸುಲಭ ಮತ್ತು ಖರ್ಚೂ ಕಡಿಮೆ.

ಅಭಿವೃದ್ಧಿ ವಿಚಾರಗಳ ಬಗ್ಗೆ ಈಗಾಗಲೇ ಬೇರೆ ಸಂಸ್ಥೆಗಳು ತಯಾರಿಸಿರುವ ಚಲನಚಿತ್ರಗಳನ್ನು ಪಡೆದು ಅವುಗಳನ್ನು ಸಂಬಂಧಿಸಿದ ವೀಕ್ಷಕರಿಗೆ ಪ್ರದರ್ಶಿಸಬಹುದು. ಆದರಿಲ್ಲೊಂದು ಸಮಸ್ಯೆ ಇದೆ. ಬಹುತೇಕ ಇಂತಹ ಚಿತ್ರಗಳನ್ನು 'ಸಾಮಾನ್ಯ' ವೀಕ್ಷಕರಿಗೆಂದು ತಯಾರಿಸಿದ್ದು, ನಾವು ಅಂದುಕೊಂಡಿರುವ ನಿರ್ದಿಷ್ಟ ವೀಕ್ಷಕರಿಗೆ ತೋರಿಸಿದಾಗ ಅದು ಅವರ ಪರಿಸ್ಥಿತಿಗೆ ಸಂಬಂಧಿಸದಿದ್ದರೆ ಏನೂ ಪ್ರಯೋಜನವಾಗಲಾರದು. ಹೀಗಾಗಿ, ನಿರ್ದಿಷ್ಟವಾದ ವೀಕ್ಷಕರಿಗೆಂದು ವಿಡಿಯೋ ಚಿತ್ರವನ್ನು ತಯಾರಿಸುವ ಪ್ರಾಮುಖ್ಯತೆಯನ್ನು ಅಲ್ಲಗಳೆಯದೆ, ಸಂಸ್ಥೆಗಳು ತಮ್ಮದೇ ಆದ ವಿಡಿಯೋ ಕಾರ್ಯಕ್ರಮಗಳನ್ನು ತಯಾರಿಸಿ, ಅಭಿವೃದ್ಧಿ ಸಂವಹನದಲ್ಲಿ ಬಳಸಿ ತಮ್ಮ ಛಾಪು ಬೆಳೆಸಿಕೊಳ್ಳಬಹುದು.

ಅಭಿವೃದ್ಧಿಗಾಗಿ ರೇಡಿಯೋ ಸಂವಹನ ಕುರಿತು ಈ ಹಿಂದಿನ ವಿಭಾಗದಲ್ಲಿ ವಿವರಿಸಿದಂತೆ, ಚಲನಚಿತ್ರವನ್ನು ತಯಾರಿಸುವಾಗಲೂ ಸಹ ಮೊದಲು ಸಮುದಾಯದ ವೀಕ್ಷಕರನ್ನು ಗಮನದಲ್ಲಿಟ್ಟುಕೊಂಡು ಅವರ ಆವಶ್ಯಕತೆಯೇನು ಎಂಬುದನ್ನು ತಿಳಿದು, ಸಮುದಾಯ ವಿಡಿಯೋ ಸಮಿತಿಯನ್ನು ನಿರ್ಮಿಸಬೇಕು. ವಿಡಿಯೋ ಚಿತ್ರಗಳನ್ನು ಮಾಡಲು ಏನೇನು ಬೇಕು, ಅದರ ಪ್ರಕ್ರಿಯೆಗಳೇನು ಮತ್ತು ನಿರ್ದಿಷ್ಟ ವೀಕ್ಷಕರಿಗೆ ತಲುಪಿಸುವುದು ಹೇಗೆ ಎಂಬಿವೇ ವಿಚಾರಗಳನ್ನು ಮುಂದೆ ವಿವರಿಸಲಾಗಿದೆ.

## ಸಿಬ್ಬಂದಿ

ಒಂದು ಸರಳವಾದ ವಿಡಿಯೋ ಚಿತ್ರ ತಯ್ಯಾರಿ ಮಾಡುವ ತಂಡದಲ್ಲಿ ಒಬ್ಬರು ನಿರ್ಮಾಪಕರು (ಅಥವಾ ನಿರ್ದೇಶಕರು), ಒಬ್ಬ ಕ್ಯಾಮೆರಾ ನಿರ್ವಾಹಕರು ಮತ್ತು ಒಬ್ಬರು ಸಂಕಲನಕಾರರು/ಸಂಪಾದಕರು ಇರುತ್ತಾರೆ. ಈ ಎಲ್ಲ ಕ್ಷೇತ್ರಗಳ ಕೆಲಸಗಳನ್ನು ಹಂಚಿಕೊಳ್ಳಲು ಒಂದಿಬ್ಬರು ಸಹಾಯಕರು ಇದ್ದಲ್ಲಿ ಒಳಿತು. ವಿಡಿಯೋ ಚಲನಚಿತ್ರದ ತಯ್ಯಾರಿಯಲ್ಲಿ ಸಮಗ್ರವಾದ ಜವಾಬ್ದಾರಿಯನ್ನು ನಿರ್ದೇಶಕರು ವಹಿಸುತ್ತಾರೆ ಮತ್ತು ಕ್ಯಾಮೆರಾ ನಿರ್ವಾಹಕರು ಚಿತ್ರವನ್ನು ಗ್ರಹಿಸುವಲ್ಲಿ ನೆರವಾಗುತ್ತಾರೆ. ಸಂಕಲನಕಾರರು ಚಿತ್ರದ ವಿವಿಧ ತುಣುಕುಗಳನ್ನು ಅರ್ಥಪೂರ್ಣವಾಗಿ ಜೋಡಿಸಿ ವೀಕ್ಷಕರೆದುರು ತೋರಿಸಲು ಸಿದ್ಧಮಾಡುತ್ತಾರೆ.

## ಕೌಶಲ್ಯ ಅಭಿವೃದ್ಧಿ

ವಿಡಿಯೋ ಚಿತ್ರ ಮಾಡಲು ವಿವಿಧ ರೀತಿಯ ಕೌಶಲ್ಯಗಳು ಲಭ್ಯವಿದೆ :

* ವಿಡಿಯೋ ಚಿತ್ರವನ್ನು ತಯಾರಿಸಲು ಬೇಕಾದ ಎಲ್ಲ ರೀತಿಯ ತಂತ್ರಜ್ಞಾನಗಳು ಮತ್ತು ನವಿರುತನವನ್ನು ಯುವಜನರಿಗೆ ತರಬೇತಿ ನೀಡುವ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಮೂಹ ಮಾಧ್ಯಮಗಳು ಮತ್ತು ಸಂವಹನ ಸಂಸ್ಥೆಗಳು ಇವೆ. ಕೆಲವು ಕಡೆ, ಅಭಿವೃದ್ಧಿ ಸಂವಹನ ಕುರಿತಂತೆ ವಿಡಿಯೋ ಚಿತ್ರ ಮಾಡುವುದನ್ನೇ ವಿದ್ಯಾರ್ಥಿಗಳಿಗೆ ಹೇಳಿಕೊಡಲಾಗುತ್ತದೆ. ಹೀಗೆ ತರಬೇತಿ ಹೊಂದಿದ ವ್ಯಕ್ತಿಯೊಬ್ಬರನ್ನು ತೆಗೆದುಕೊಂಡಲ್ಲಿ ಅವರು ಎಲ್ಲವನ್ನೂ ನಿರ್ವಹಿಸುವುದರಿಂದ ಸಂಸ್ಥೆಯ ಮೇಲೆ ಒತ್ತಡ ಕಡಿಮೆಯಾಗುತ್ತದೆ.
* ಇನ್ನೊಂದು ಸಾಧ್ಯತೆ, ವಿಡಿಯೋ ಚಿತ್ರವನ್ನು ತಯಾರಿಸಲು ತರಬೇತಿ ನೀಡುವ ವ್ಯಾಪಾರಿ ಸಂಸ್ಥೆಗಳು. ಇವು ಚಿತ್ರ ನಿರ್ದೇಶನ, ವಿಡಿಯೋ ಗ್ರಹಣೆ, ವಿಡಿಯೋ ಸಂಗ್ರಹ/ಸಂಪಾದನೆ ಇತ್ಯಾದಿಗಳನ್ನು ಕುರಿತು ಕಿರು ಅವಧಿಯ ಕಾರ್ಯಕ್ರಮಗಳನ್ನು ನಡೆಸುತ್ತವೆ. ಆದರೆ ಮೂರರಿಂದ ಆರು ತಿಂಗಳೊಳಗೆ ವಿಡಿಯೋ ಚಿತ್ರೀಕರಣದಂತಹ ಸಂಕೀರ್ಣವಾದ ಕೌಶಲ್ಯದ ತರಬೇತಿ ನೀಡಲು ಇಂತಹ ಸಂಸ್ಥೆಗಳಲ್ಲಿ ಸಿಬ್ಬಂದಿಯೂ ಇರುವುದಿಲ್ಲ, ಇದ್ದರೂ ಅವರಲ್ಲಿ ಕೌಶಲ್ಯವಿರುವುದಿಲ್ಲ. ಆದರೆ, ಇಲ್ಲಿ ಕಲಿಯಬಹುದಾದ ಮೂಲ ಕೌಶಲ್ಯಗಳ ನೆರವಿನಿಂದ ಇನ್ನಿತರ ಕೌಶಲ್ಯಗಳನ್ನು ಕಲಿಯಬಹುದು.
* ವಿಡಿಯೋ ಚಿತ್ರ ಮಾಡುವ ಕೌಶಲ್ಯ ಬೆಳೆಸಿಕೊಳ್ಳಲು ಇರುವ ಇನ್ನೊಂದು ಸಾಧ್ಯತೆ ವಿಡಿಯೋ ಚಿತ್ರಗಳನ್ನು ತೆಗೆಯುವುದೇ ಆಗಿದೆ. ಚಲನಚಿತ್ರಗಳನ್ನು ತೆಗೆಯುತ್ತಲೇ ಅದರ ಚಿತ್ರೀಕರಣ, ಸಂಪಾದನೆ, ಕತೆ, ಸಂಭಾಷಣೆ ಮತ್ತು ವಿವರಣೆ ನೀಡುವುದು ಅಥವಾ ನಿರ್ದೇಶನವೇ ಮೊದಲಾದವುಗಳನ್ನು ಕಲಿಯಬಹುದು. ಸಾಮಾನ್ಯವಾಗಿ, ವ್ಯಾಪಾರಿ ಚಲನಚಿತ್ರಗಳ ಕ್ಷೇತ್ರದಲ್ಲಿ ಇಂತಹ ಎಲ್ಲ ಕೌಶಲ್ಯಗಳನ್ನು ಕಲಿಯುವುದು ನಡೆಯುತ್ತದೆ. ಆದರೆ, ಅವರಿಗೆ ಸ್ವಯಂಸೇವಾ ಸಂಘಟನೆಗಳೊಡನೆ ಕೆಲಸ ಮಾಡಲು ಅತ್ಯಾವಶ್ಯವಾಗಿರುವ ಅಭಿವೃದ್ಧಿ ದೃಷ್ಟಿಕೋನವಿರುವುದಿಲ್ಲ.

ವಿವಿಧ ರೀತಿಯ ಕಲಾವಿದರು ಮತ್ತು ತಾಂತ್ರಿಕ ವರ್ಗವನ್ನು ಸಂಸ್ಥೆಗಳು ಸೂಕ್ತ ರೀತಿಯಲ್ಲಿ ಆಯ್ದುಕೊಳ್ಳಬೇಕು: ಒಂದು ಸಾಧ್ಯತೆ ಅಭಿವೃದ್ಧಿ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಸಿದ್ಧರಿರುವ, ಸೂಕ್ತ ತಂತ್ರಜ್ಞಾನದ ತರಬೇತಿ ಇರುವ ವ್ಯಕ್ತಿಗಳನ್ನು ಆಯ್ದುಕೊಳ್ಳುವುದು. ಇನ್ನೊಂದು, ಈಗಾಗಲೇ ಅಭಿವೃದ್ಧಿ ಕ್ಷೇತ್ರದಲ್ಲಿ ಅನುಭವವಿರುವ ವ್ಯಕ್ತಿಗಳಿಗೆ ವಿಡಿಯೋ ತಂತ್ರಜ್ಞಾನದ ತರಬೇತಿ ನೀಡಿ ಚಿತ್ರ ಮಾಡಲು ನಿಯೋಜಿಸುವುದು. ಸ್ವಯಂಸೇವಾ ಸಂಸ್ಥೆಗಳು ಹಾಗೂ ಬೆಂಬಲ ನೀಡುವ ಸಂಸ್ಥೆಗಳ ಆವಶ್ಯಕತೆ ಸರಳವಾದ ವಿಡಿಯೋ ಚಿತ್ರಗಳನ್ನು ತಯಾರಿಸುವುದಾದರಿಂದ, ಎರಡನೆಯ ವಿಧಾನವನ್ನು ಆರಿಸಿಕೊಳ್ಳುವುದು ಉತ್ತಮ.

## ಯಂತ್ರೋಪಕರಣಗಳು

ಸರಳವಾದ ಒಂದು ಘಟಕಕ್ಕೆ ಈ ಮುಂದಿನವು ಬೇಕು

- ಒಂದು ವಿಡಿಯೋ ಕ್ಯಾಮೆರಾ ಮತ್ತು ಅದಕ್ಕೆ ಬೇಕಾದ ಮೂರ್ಗಾಲು (tripod), ಹೆಚ್ಚಿನ ಬ್ಯಾಟರಿಗಳು, ದೀಪ ವ್ಯವಸ್ಥೆ ಮತ್ತು ಧ್ವನಿ ಗ್ರಾಹಕಗಳು.
- ಸೂಕ್ತವಾದ ಸಾಮರ್ಥ್ಯವಿರುವ ಕಂಪ್ಯೂಟರ್, ಡಿ.ವಿ.ಡಿ. ರೈಟರ್, ಧ್ವನಿವರ್ಧಕಗಳು ಮತ್ತು ಚಿತ್ರವನ್ನು ಸಂಕಲನ ಮಾಡಲು ಬೇಕಾದ ಅಡೋಬ್ ಪ್ರೀಮಿಯರ್ ಪ್ರೋ ಸಾಫ್ಟ್‌ವೇರ್ ತರಹದ ತಂತ್ರಜ್ಞಾನ.

## ವಿಡಿಯೋ ವಿಧಗಳು

ಅಭಿವೃದ್ಧಿಗಾಗಿ ವಿಡಿಯೋ ಬಳಸಲು ಉದ್ದೇಶಿಸುವ ಸ್ವಯಂಸೇವಾ ಸಂಘಟನೆಗಳು ವಿವಿಧ ರೀತಿಯ ವಿಡಿಯೋ ಕಾರ್ಯಕ್ರಮಗಳನ್ನು ತಯಾರಿಸಬಹುದು. ಬಹಳ ಜಾಗರೂಕತೆಯಿಂದ ಸಂಶೋಧನೆ ನಡೆಸಿ, ಸೊಗಸಾಗಿ ಮಾಡಿದ ಸಾಕ್ಷ್ಯ ಚಿತ್ರದಿಂದ ಹಿಡಿದು, ಸಾಮಾನ್ಯ ವಿಡಿಯೋ ವರದಿ, ಜಾಗೃತಿ ಮೂಡಿಸುವ ವಿಡಿಯೋ ಚಿತ್ರ, ತರಬೇತಿ ನೀಡಲು, ಚರ್ಚೆಗಳನ್ನು ಆರಂಭಿಸಲು ವಿಡಿಯೋ ದೃಶ್ಯಗಳು ಅಥವಾ ಯೋಜನೆಯಲ್ಲಿ ಭಾಗವಹಿಸುವವರನ್ನು ಗುರುತಿಸಲು ಸಹ ವಿಡಿಯೋವನ್ನು ಬಳಸಿಕೊಳ್ಳಬಹುದು. ವಿಡಿಯೋ ಚಿತ್ರವನ್ನು ತಯಾರಿಸಲು ಈ ಮುಂದಿನ ಕೆಲವು ಹಂತಗಳನ್ನು ಅನುಸರಿಸಬೇಕು.

## ನಿರ್ಮಾಣ

ರೇಡಿಯೋ ಕಾರ್ಯಕ್ರಮಗಳ ನಿರ್ಮಾಣದಂತೆಯೇ, ವಿಡಿಯೋ ಚಿತ್ರ ಮಾಡುವುದಕ್ಕೂ ಸಹ ಮೂರು ಮುಖ್ಯ ಹಂತಗಳಿವೆ : ಚಿತ್ರೀಕರಣಕ್ಕೆ ಮೊದಲಿನ ಯೋಜನೆ, ಚಿತ್ರೀಕರಣ ಮತ್ತು ಚಿತ್ರೀಕರಣದ ನಂತರದ ಕೆಲಸಗಳು.

### *ಚಿತ್ರೀಕರಣಕ್ಕೆ ಮೊದಲಿನ ಯೋಜನೆಗಳು*

* ಅವಶ್ಯವಿರುವ ದೃಶ್ಯಗಳನ್ನು ಚಿತ್ರೀಕರಿಸಲು ನಡೆಸುವ ತಯಾರಿಯನ್ನು ಇದು ಸೂಚಿಸುತ್ತದೆ. ಎಂತಹ ಚಿತ್ರವನ್ನು ತಯಾರಿಸಲಾಗುತ್ತದೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮುಂದಿನ ಹಂತಗಳು ತಯಾರಿಯಲ್ಲಿರುತ್ತದೆ :

- ಚಿತ್ರದ ಉದ್ದೇಶ, ವಿಷಯ ಮತ್ತು ಸಾಧ್ಯತೆಗಳನ್ನು ನಿರ್ಧರಿಸುವುದು.
- ಚಿತ್ರದ ಮೂಲಕ ನೀಡಲುದ್ದೇಶಿಸಿದ ಮಾಹಿತಿ ಅಥವಾ ಸಂದೇಶವನ್ನು ಅವಲಂಬಿಸಿ, ಮಾಹಿತಿ ಸಂಗ್ರಹ, ಸಂದರ್ಶಿಸಲುದ್ದೇಶಿಸಿರುವ ವ್ಯಕ್ತಿ ಮತ್ತು ವಿಷಯವನ್ನು ಕುರಿತು ಸಂಶೋಧನೆ.
- ಚಲನಚಿತ್ರಕ್ಕಾಗಿ ಬೇಕಾದ ಕಥಾ ಹಂದರವನ್ನು ತಾತ್ಕಾಲಿಕವಾಗಿ ತಯಾರಿಸುವಾಗ, ಅದು ಚಲನಚಿತ್ರದಲ್ಲಿ ಯಾವ ಮಾಹಿತಿ, ಸಂದೇಶ ನೀಡಬೇಕೆಂಬ ಉದ್ದೇಶದಿಂದ ವಿವರಣೆ ಇರಬಹುದು ಅಥವಾ ಚಲನಚಿತ್ರದ ವಿವಿಧ ಭಾಗಗಳ ಬಗ್ಗೆ ವಿವರಿಸುವ ಹಂದರವಿರಬೇಕು.

ಚಲನಚಿತ್ರ ಮಾಡಲು ಬೇಕಾದ ವಿವಿಧ ಹಂತಗಳನ್ನು ಅರ್ಥಮಾಡಿಕೊಳ್ಳಲು ಮತ್ತು ನಿರ್ವಹಿಸಲು ಇದು ಅತ್ಯಾವಶ್ಯಕ. ಈ ಚಲನಚಿತ್ರದಲ್ಲಿ ಸಂದರ್ಶನಗಳಿದ್ದಲ್ಲಿ, ಸಂದರ್ಶಿತರನ್ನು ಕೇಳುವ ಪ್ರಶ್ನೆಗಳು ಸಿದ್ಧವಾಗಿರಬೇಕು. ಚಲನಚಿತ್ರದಲ್ಲಿ ಬಳಸಬೇಕಾಗಿರುವ ಛಾಯಾಚಿತ್ರಗಳು, ಭೂಪಟಗಳು, ಚಿತ್ರಪಟಗಳು, ನಕ್ಷೆಗಳೇ ಮೊದಲಾದ ದೃಶ್ಯಗಳು ಸಿದ್ಧವಾಗಿರಬೇಕು.

– ಚಲನಚಿತ್ರದ ಚಿತ್ರಕಥೆಯು ಸ್ಪಷ್ಟವಾಗುತ್ತಾ ಹೋದಂತೆ, ಸಂಪನ್ಮೂಲ ವ್ಯಕ್ತಿಗಳು ಮತ್ತು ಯೋಜನೆಗೆ ಸಂಬಂಧಿಸಿದ ವ್ಯಕ್ತಿಗಳ ಲಭ್ಯತೆ ಹಾಗೂ ಎಲ್ಲಿ ಹೋಗಿ ಚಿತ್ರೀಕರಿಸಬೇಕೋ ಅಲ್ಲಿನ ಸ್ಥಳ ಇತ್ಯಾದಿಗಳನ್ನು ಅವಲಂಬಿಸಿ ಚಿತ್ರೀಕರಣದ ವೇಳಾಪಟ್ಟಿಯನ್ನು ತಯಾರಿಸಬೇಕು. ಇಂತಹ ವೇಳಾಪಟ್ಟಿ ಸಿದ್ಧವಿದ್ದಲ್ಲಿ ಸಂಬಂಧಿತ ತಾಂತ್ರಿಕ ವರ್ಗ ಹಾಗೂ ಭಾಗವಹಿಸುವವರಿಗೆ ಚಿತ್ರೀಕರಣಕ್ಕಾಗಿ ತಮ್ಮ ತಯ್ಯಾರಿ ಮಾಡಿಕೊಳ್ಳಲು ಸಹಾಯವಾಗುತ್ತದೆ.

### *ಚಿತ್ರೀಕರಣ*

* ಇದೊಂದು ಪ್ರಮುಖ ಘಟ್ಟ. ಚಿತ್ರೀಕರಣವನ್ನು ಎಷ್ಟು ಸೂಕ್ತವಾಗಿ, ಕೌಶಲ್ಯಪೂರ್ಣವಾಗಿ, ದಕ್ಷವಾಗಿ ಹಾಗೂ ಸೂಕ್ತವಾಗಿ ಮಾಡಲಾಗುತ್ತದೋ ಚಿತ್ರದ ಗುಣಮಟ್ಟವೂ ಅಷ್ಟೇ ಉತ್ತಮವಾಗಿರುತ್ತದೆ. ಇದಕ್ಕಾಗಿ ವೇಳಾಪಟ್ಟಿಯನ್ನು ಮೊದಲೇ ಯೋಜಿಸಿರಬೇಕು: ವ್ಯಕ್ತಿಗಳನ್ನು ಅಥವಾ ಸ್ಥಳಗಳನ್ನು ಭೇಟಿ ಮಾಡುವ ಮೊದಲೇ ಬೇಕಾದ ಸಂಪೂರ್ಣವಾದ ತಯ್ಯಾರಿ ಆಗಿರಬೇಕು. ಯಾವ ವ್ಯಕ್ತಿಗಳನ್ನು ಭೇಟಿ ಮಾಡಬೇಕು, ಯಾವ ಸ್ಥಳದಲ್ಲಿ ಚಿತ್ರೀಕರಿಸಬೇಕು, ಯಾವ ಪರಿಸ್ಥಿತಿ ಮತ್ತು ಘಟನೆಗಳನ್ನು ಚಿತ್ರೀಕರಿಸಬೇಕು ಎನ್ನುವುದನ್ನು ನಿರ್ದೇಶಕರು ನಿರ್ಧರಿಸುತ್ತಾರೆ, ಚಿತ್ರೀಕರಿಸುವ ವಿವಿಧ ವಿಚಾರಗಳತ್ತ ಕ್ಯಾಮೆರಾ ನಿರ್ವಾಹಕರು ನಿರ್ಧರಿಸುತ್ತಾರೆ ಮತ್ತು ಅವರ ಸಹಾಯಕರು ಉತ್ತಮವಾದ ಧ್ವನಿ ಗ್ರಹಿಸಲು ಧ್ವನಿಗ್ರಾಹಕಗಳನ್ನು ಎಲ್ಲಿಡಬೇಕು (ಸಾಧ್ಯವಾದಲ್ಲಿ ಬೂಮ್ ಮೈಕ್) ಎಂಬುದರತ್ತ ಗಮನ ಹರಿಸುತ್ತಾರೆ.

* ಒಬ್ಬ ವ್ಯಕ್ತಿ ಮಾತ್ರ ಮಾತನಾಡುತ್ತಿದ್ದು, ವಿವರಿಸುತ್ತಿದ್ದರೆ ಅಥವಾ ಭಾಷಣ ಮಾಡುತ್ತಿದ್ದರೆ ಒಬ್ಬ ವ್ಯಕ್ತಿ ಮಾತ್ರ ಕ್ಯಾಮೆರಾದೆದುರು ಇರುತ್ತಾರೆ, ಅಥವಾ ಸಂದರ್ಶನವಾದಲ್ಲಿ ಅಲ್ಲಿ ಸಂದರ್ಶಕ ಮತ್ತು ಸಂದರ್ಶಿತರೂ ಸಹ ಇರಬಹುದು ಅಥವಾ ಸಂದರ್ಶಿತರು ಮಾತ್ರ ಇದ್ದರೂ ಆಗುತ್ತದೆ. ಅಲ್ಲಿ ನಡೆಯುತ್ತಿರುವ ಕಾರ್ಯಕ್ರಮ (ಅದನ್ನು ವಿಶೇಷವಾಗಿ ನಡೆಸುತ್ತಿರಬಹುದು ಅಥವಾ ಸ್ವಾಭಾವಿಕವಾಗಿ ಆಗುತ್ತಿರಬಹುದು)ವನ್ನು ಯಾವುದೇ ಅಡಚಣೆಯಿಲ್ಲದೆ ಚಿತ್ರೀಕರಿಸಬೇಕು. ಕೆಲವು ನಾಟಕೀಯ ಘಟನೆಗಳು, ಅಥವಾ ಪ್ರದರ್ಶನಗಳನ್ನು ದೃಶ್ಯವಾಗಿ ಚಿತ್ರೀಕರಿಸಬೇಕು. ಒಂದು ಸ್ಥಳದಿಂದ ಬಿಟ್ಟು ಹೊರಡುವ ಮುನ್ನ ಅಲ್ಲಿ ನಮಗೇನು ಬೇಕೋ ಅದೆಲ್ಲವನ್ನೂ ತೆಗೆದುಕೊಳ್ಳಲಾಗಿದೆ, ಚಿತ್ರೀಕರಿಸಲಾಗಿದೆ ಎಂದು ಖಾತರಿ ಮಾಡಿಕೊಳ್ಳಬೇಕು. ಏಕೆಂದರೆ, ಏನೇ ಸ್ವಲ್ಪ ಮರೆತರೂ ಅದನ್ನು ಮತ್ತೆ ಚಿತ್ರೀಕರಿಸುವುದು ಬಹಳ ದುಬಾರಿಯಾಗುತ್ತದೆ.

### *ಚಿತ್ರೀಕರಣದ ನಂತರದ ಕೆಲಸಗಳು*

ಚಲನಚಿತ್ರವನ್ನು ಸಂಪೂರ್ಣವಾಗಿ ಕಟ್ಟಿಕೊಡುವ ಕೆಲಸ ಈಗ ಆರಂಭ

* ದೃಶ್ಯಗಳ ವಿವರ ಬರೆಯುವುದು (ಲಾಗಿಂಗ್) : ಕಚ್ಚಾ ಆಗಿ ಚಿತ್ರೀಕರಿಸಿಕೊಂಡ ಎಲ್ಲ ದೃಶ್ಯಗಳನ್ನು ಸಂಪಾದಿಸಿ ಜೋಡಿಸುವ ಮೊದಲು, ಚಿತ್ರೀಕರಿಸಿಕೊಂಡ ಎಲ್ಲ ದೃಶ್ಯಗಳನ್ನು ಪುಸ್ತಕದಲ್ಲಿ ಬರೆಯುವುದು ಒಳ್ಳೆಯದು. ಎಲ್ಲಿ, ಯಾವಾಗ, ಎಷ್ಟು ಹೊತ್ತು ಪ್ರತಿ

ದೃಶ್ಯವನ್ನು (ದೃಶ್ಯದ ಹೆಸರು) ತೆಗೆದುಕೊಳ್ಳಲಾಯಿತೆಂದು ದಾಖಲಿಸಿದ್ದಲ್ಲಿ, ಸಂಪಾದಿಸುವಾಗ ನಮಗೆ ಬೇಕಾದ ದೃಶ್ಯದ ಟೇಪುಗಳನ್ನು ಎಲ್ಲಿಂದ ತೆಗೆದುಕೊಳ್ಳಬೇಕು ಎಂದು ಹುಡುಕುವುದು ಸುಲಭವಾಗುತ್ತದೆ. ಈ ವಿಧಾನದಿಂದ ಇಡೀ ಚಲನಚಿತ್ರದ ಬಗ್ಗೆ ಸಮಗ್ರ ಕಲ್ಪನೆ ಬಂದು ಬೇಕಾದ ದೃಶ್ಯಗಳ ಬಗ್ಗೆ ಸ್ಪಷ್ಟತೆ ಇರುತ್ತದೆ.

* ಕಚ್ಚಾ ಪ್ರತಿ (ರಫ್ ಕಟ್) : ನಾವು ಯೋಜಿಸಿರುವ ಚಲನಚಿತ್ರದ ದೃಶ್ಯಾವಳಿಗಳನ್ನು ಅಂದಾಜಿನ ಮೇಲೆ ಸರಣಿಯಲ್ಲಿ ಜೋಡಿಸಿಕೊಳ್ಳುವ ಹಂತ ಇದು. ಸಂದರ್ಶನಗಳೇ ಮೊದಲಾದ ಪ್ರದರ್ಶನಗಳನ್ನು ಅದರ ಶ್ರವ್ಯ (ಧ್ವನಿ)ದ ಜೊತೆಗೂಡಿಸುವುದು. ಚಲನಚಿತ್ರದ ಕಥಾ ಹಂದರ, ವಿವರಣೆ ಅಥವಾ ಚಿತ್ರದ ಚೌಕಟ್ಟು ಇದಕ್ಕೆ ಸಹಾಯ ಮಾಡುತ್ತದೆ. ಕೆಲವರು ತಮ್ಮ ಚಿತ್ರಕ್ಕೆ ಬೇಕಾದ ವಿವರಣೆಯನ್ನು ಮೊದಲು ಧ್ವನಿ ಮುದ್ರಣ ಮಾಡಿ, ಅದನ್ನು ಸಂಪಾದಿಸಿ, ಆ ನಂತರ ಅದಕ್ಕೆ ಸೂಕ್ತವಾದ ದೃಶ್ಯಗಳನ್ನು ಜೋಡಿಸುತ್ತಾ ಹೋಗುತ್ತಾರೆ. ಈ ಹಂತದಲ್ಲೇ ಅಡಿ ಬರಹಗಳನ್ನು ಕೂಡಾ ಸೇರಿಸಲಾಗುತ್ತದೆ. ಇದು ಒಂದು ಕಚ್ಚಾ ಪ್ರತಿ.
* ಅವಲೋಕನ : ಈಗ ಚಿತ್ರದ ತಯ್ಯಾರಿ ತಂಡ ತಮ್ಮ ಕಚ್ಚಾ ಪ್ರತಿಯನ್ನು 'ವಸ್ತುನಿಷ್ಟ'ವಾಗಿ ವೀಕ್ಷಿಸಿ ತಮ್ಮ ಅಭಿಪ್ರಾಯಗಳನ್ನು ನೀಡುವುದು. ಚಲನಚಿತ್ರವನ್ನು ಕುರಿತಂತೆ ತಮ್ಮ ಅಭಿಪ್ರಾಯ, ಅಥವಾ ಚಿತ್ರದ ಒಟ್ಟು ಹಂದರದಲ್ಲಿ ಬೇಕಾದ ಬದಲಾವಣೆಗಳಿಗೆ ಸಲಹೆಗಳನ್ನು ನೀಡುವುದು.
* ಸಂಗೀತ : ಚಲನಚಿತ್ರದ ಆರಂಭ, ಅಂತ್ಯ ಅಥವಾ ಇತರ ಭಾಗಗಳಲ್ಲಿ ಸೂಕ್ತವಾದ ಸಂಗೀತವನ್ನು ಸೇರಿಸುವುದರ ಮೂಲಕ ಚಿತ್ರದ ಗುಣಮಟ್ಟವನ್ನು ಹೆಚ್ಚಿಸಬಹುದು. ಇದು ಚಿತ್ರದ ವಿವಿಧ ಘಟ್ಟಗಳನ್ನು ಜೋಡಿಸಲು ಅಥವಾ ವಿವಿಧ ಭಾವನೆಗಳು, ನಾಟಕೀಯ ಘಟನೆಗಳು ಅಥವಾ ಮನಃಸ್ಥಿತಿಗಳನ್ನು ತೋರ್ಪಡಿಸಲು ನೆರವಾಗುತ್ತದೆ.
* ಅಂತಿಮವಾಗಿ ಉತ್ತಮ ಪ್ರತಿ ತಯ್ಯಾರಿ : ಈಗ ಚಿತ್ರದ ಮೂಲ ಪ್ರತಿ ಸಿದ್ಧಮಾಡಲು ತಯ್ಯಾರಾಗುತ್ತದೆ. ಈ ಹಂತದಲ್ಲಿ ದೃಶ್ಯ, ಶ್ರವ್ಯ ಒಂದರೊಡನೆ ಇನ್ನೊಂದು ಸೂಕ್ತವಾಗಿ ಸೇರಿರುತ್ತವೆ ಮತ್ತು ಇದನ್ನು ಇತರೆಡೆ ಪ್ರದರ್ಶಿಸಲು, ಸಿ.ಡಿ. ಅಥವಾ ಡಿ.ವಿ.ಡಿ. ಮಾಡಲು ಹಾಗೂ ಇತರ ಕಂಪ್ಯೂಟರ್‌ಗಳಲ್ಲಿ ಅಥವಾ ಸಿ.ಡಿ./ಡಿ.ವಿ.ಡಿ. ಉಪಕರಣಗಳಲ್ಲಿ ಬಳಸಲು ಸಿದ್ಧವಾಗುತ್ತದೆ.

## ಸಮುದಾಯಗಳೆಡೆಗೆ ವಿಡಿಯೋ ಚಿತ್ರಗಳನ್ನು ಒಯ್ಯುವುದು

ಒಟ್ಟಿನಲ್ಲಿ, ನಮ್ಮೆದುರು ಇರುವ ಪ್ರಶ್ನೆ ವಿಡಿಯೋ ಯಾರನ್ನುದ್ದೇಶಿಸಿ ಮಾಡಲಾಗುತ್ತದೋ ಅವರಿಗೆ ಹೇಗೆ ಒಯ್ಯುವುದು ಎಂಬುದು. ಅದಕ್ಕಾಗಿ ಇರುವ ಕೆಲವು ಸಾಧ್ಯತೆಗಳು ಹೀಗಿವೆ :

* ಬಾನುಲಿ ಪ್ರಸಾರ : ಕಾರ್ಯಕ್ರಮಗಳನ್ನು ಟಿ.ವಿ. ವಾಹಿನಿಗಳ ಮೂಲಕ ಪ್ರಸಾರ ಮಾಡಿ ಜನ ಟಿ.ವಿ.ಗಳಲ್ಲಿ ಅದನ್ನು ನೋಡಬಹುದು. ದೂರದರ್ಶನದವರು ದೇಶದಾದ್ಯಂತ ಪ್ರಸಾರ ಕೇಂದ್ರಗಳನ್ನು ಹೊಂದಿದ್ದಾರೆ. ಅವರ ಉಪಗ್ರಹ ಪ್ರಸಾರ ವಾಹಿನಿಗಳ ಮೂಲಕ ಅವರು ತಮ್ಮ ಕಾರ್ಯಕ್ರಮಗಳೊಡನೆ ಬೇರೆಯವರು ಮಾಡಿರುವ ಕಾರ್ಯಕ್ರಮಗಳನ್ನು ಕೂಡಾ ಪ್ರಸಾರ ಮಾಡುತ್ತಾರೆ. ಇದಕ್ಕಾಗಿ, ಬಾನುಲಿ ಪ್ರಸಾರದ ಸೇವೆಯಲ್ಲಿರುವಂತೆ, ದೂರದರ್ಶನದಲ್ಲಿ ಪ್ರಸಾರ ಮಾಡಲು ಸಮಯವನ್ನು ಕೊಳ್ಳಬೇಕು. ವ್ಯಾಪಾರಿ ದೂರದರ್ಶನ ವಾಹಿನಿಗಳು ನಾವು ಚರ್ಚಿಸುತ್ತಿರುವಂತಹ ಅಭಿವೃದ್ಧಿ ವಿಚಾರದ ಚಲನಚಿತ್ರಗಳನ್ನು ಪ್ರದರ್ಶಿಸುವುದು ಬಹಳ ವಿರಳ. ಇಷ್ಟೇ ಅಲ್ಲದೆ, ವ್ಯಾಪಾರಿ ಟಿ.ವಿ. ವಾಹಿನಿಗಳಲ್ಲಿ ಪ್ರಸಾರ ಸಮಯವನ್ನು ಕೊಳ್ಳುವುದು ಮತ್ತು ಅರ್ಥವಿಲ್ಲದ ಮತ್ತು ರೋಚಕವಾದ ಕಾರ್ಯಕ್ರಮಗಳಿಂದ

ವೀಕ್ಷಕರ ಗಮನವನ್ನು ಅಭಿವೃದ್ಧಿ ವಿಚಾರಗಳತ್ತ ಸೆಳೆಯುವುದಾದರೂ ಹೇಗೆ? ದೂರದರ್ಶನದಲ್ಲಿ ತಮ್ಮ ಅಭಿವೃದ್ಧಿ ಚಲನಚಿತ್ರಗಳನ್ನು ಪ್ರಸಾರ ಮಾಡುವುದು ವ್ಯರ್ಥ ಎಂದು ಸಾಮಾನ್ಯವಾಗಿ ಸಂಸ್ಥೆಗಳು ಭಾವಿಸುತ್ತವೆ.

- ನ್ಯಾರೋಕಾಸ್ಟಿಂಗ್ (ಸ್ಥಳೀಯ ಪ್ರಸಾರ) : ರೇಡಿಯೋ ಪ್ರಸಾರದಂತೆಯೇ, ವಿಡಿಯೋ ಕಾರ್ಯಕ್ರಮಗಳನ್ನೂ ಸಹ ಸೀಮಿತವಾದ ಸಣ್ಣ ಗುಂಪುಗಳಿಗೆ, ಪ್ರಾಯಶಃ ಆಹ್ವಾನಿತ ಪ್ರೇಕ್ಷಕರಿಗಾಗಿ ಪ್ರದರ್ಶಿಸಬಹುದು. ಸ್ವಸಹಾಯ ಸಂಘಗಳ ಜಾಲವಿರುವ ಸ್ವಯಂಸೇವಾ ಸಂಘಟನೆಗಳು ಇಂತಹ ಕಾರ್ಯಕ್ರಮಗಳನ್ನು ನಿಯಮಿತವಾಗಿ ಕೇಂದ್ರಗಳಲ್ಲಿ ಪ್ರದರ್ಶಿಸಬಹುದು.
- ಇಂತಹ ಚಲನಚಿತ್ರಗಳನ್ನು ವಿವಿಧ ತರಬೇತಿಗಳು, ಕಾರ್ಯಾಗಾರಗಳಲ್ಲಿ ಅಥವಾ ಉತ್ಸಾಹ ತುಂಬುವ ಸಾಮಗ್ರಿಗಳಾಗಿ ಸಮರ್ಥವಾಗಿ ಬಳಸಬಹುದು. ಜನರಿಗೆ ಈ ಕಾರ್ಯಕ್ರಮಗಳೊಂದಿಗೆ ಬಹಳ ಸುಲಭವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ, ಏಕೆಂದರೆ ಅದು ಅವರಿಗೆ ತೀರ ಹತ್ತಿರವಾದದ್ದು ಮತ್ತು ಚರ್ಚಿಸಲು ವಿಫುಲ ಅವಕಾಶಗಳನ್ನೂ ಸೃಷ್ಟಿಸುತ್ತದೆ.

ವಿಡಿಯೋ ಪ್ರದರ್ಶನವಲ್ಲದೆ ಜೊತೆಜೊತೆಯಾಗಿ ರೇಡಿಯೋ ಕಾರ್ಯಕ್ರಮಗಳನ್ನೂ ಸಮೀಕರಿಸುವುದು ಬಹಳ ಉತ್ತಮ. ಈ ಕೇಂದ್ರಗಳಲ್ಲಿ ಧ್ವನಿಮುದ್ರಿತ ಮತ್ತು ಚಲನಚಿತ್ರ ಕಾರ್ಯಕ್ರಮಗಳನ್ನು ಬೇಕಾದಾಗ ಲಭ್ಯವಾಗಲು ಗ್ರಂಥಾಲಯದಲ್ಲಿರುವಂತೆ ಇಡಬಹುದು. ವಿವಿಧ ಹಳ್ಳಿಗಳಲ್ಲಿ ಇಂತಹ ಟೆಲಿಕೇಂದ್ರಗಳು ಅಥವಾ ಕಿಯೋಸ್ಕ್(ಬೂತು)ಗಳನ್ನು ಇಂತಹದೊಂದು ವ್ಯವಸ್ಥೆಯಲ್ಲಿ ಸಂಪರ್ಕಿಸಿದ್ದಲ್ಲಿ, ಸ್ಥಳೀಯ ಸಮುದಾಯದ ವಿವಿಧ ಆವಶ್ಯಕತೆಗಳನ್ನು ಪೂರೈಸಲು ಅವು ಅತ್ಯಂತ ಪರಿಣಾಮಕಾರಿಯಾಗುತ್ತವೆ.

## ಪ್ರಸ್ತುತ ಇರುವ ಐ.ಸಿ.ಟಿ. ಉದ್ಯಮಗಳ ಬಗ್ಗೆ ನನಗೆ ಎಲ್ಲಿ ಮಾಹಿತಿ ದೊರೆಯುತ್ತದೆ?

### ಕರ್ನಾಟಕದಲ್ಲಿರುವ ಉದ್ಯಮಗಳು

| | |
|---|---|
| **'ನಮ್ಮ ಧ್ವನಿ' ಸ್ಥಳೀಯ ಐ.ಸಿ.ಟಿ. ಅಂತರ್ಜಾಲ**<br>'ನಮ್ಮ ಧ್ವನಿ' ಸಮುದಾಯ ಸಂವಹನ ಕೇಂದ್ರ,<br>ಬೂದಿಕೋಟೆ ಗ್ರಾಮ, ಬಂಗಾರಪೇಟೆ ತಾಲ್ಲೂಕು<br><br>**ಬೆಂಬಲ ಸಂಸ್ಥೆ : ವಾಯ್ಸಸ್**<br>165, ಮೊದಲನೇ ಅಂತಸ್ತು, 9ನೇ ಅಡ್ಡ ರಸ್ತೆ<br>ಇಂದಿರಾನಗರ ಒಂದನೇ ಹಂತ<br>ಬೆಂಗಳೂರು - 560038<br>ದೂರವಾಣಿ : +91-80-25213902/25213903<br>ಫ್ಯಾಕ್ಸ್ : +91-80-25213901<br>ಇ-ಮೇಲ್: Voices@vsnl.com | **ಮೈರಾಡಾ**<br>ನಂ. 2, ಸರ್ವಿಸ್ ರಸ್ತೆ<br>ದೊಮಲೂರು ಲೇಔಟ್<br>ಬೆಂಗಳೂರು - 560 071<br>ದೂರವಾಣಿ: +91-80-25353166, 25352028, 25354457<br>ಫ್ಯಾಕ್ಸ : +91-80-25350982<br>ಇ-ಮೇಲ್ : myrada@vsnl.com<br>URL: http://www.myrada.org/ |

| | |
|---|---|
| **ಮಾಹಿತಿ ಮಂಥನ**<br>**ಬೆಂಬಲ ಸಂಸ್ಥೆ :**<br>ಐ.ಟಿ. ಫಾರ್ ಚೇಂಜ್ (IT for Change)<br>393, 17ನೇ ಮುಖ್ಯ ರಸ್ತೆ, ಜಯನಗರ 4ನೇ 'ಟಿ' ಬ್ಲಾಕ್<br>ಬೆಂಗಳೂರು - 560011<br>ದೂರವಾಣಿ : +91-80-26654134, 26536890<br>ಫ್ಯಾಕ್ಸ್ : +91-80-41461055<br>URL: http://itforchange.net/mambo/index.php?option=com_content&task=view&id=153&Itemid=0 | **ಎನ್-ಲಾಗ್ ಕಮ್ಯುನಿಕೇಷನ್ಸ್**<br>**(n-Logue Communications)**<br>ಮುಖ್ಯ ಕಛೇರಿ :<br>ಹಳೆಯ ನಂ. 54, ಹೊಸ ನಂ. 2/2, ಬಾಲರಾಮನ್ ರಸ್ತೆ<br>ಅಡ್ಯಾರ್, ಚೆನ್ನೈ - 600 020<br>ತಮಿಳುನಾಡು<br>ದೂರವಾಣಿ : +91-44-24455212<br>ಫ್ಯಾಕ್ಸ್: +91-44-24455335<br>URL: http://www.n-logue.com |
| **ಟೆಲ್‌ನೆಕ್**<br>**(Telnek)**<br>**ಟೆಲ್‌ನೆಕ್ ಸೆಂಟರ್**<br>SBI ಕೆಳಗೆ, ಬಿ.ಎಮ್. ರಸ್ತೆ<br>ಬಿಡದಿ (ಎಚ್), ರಾಮನಗರ ತಾಲ್ಲೂಕು<br>ಬೆಂಗಳೂರು ಗ್ರಾಮಾಂತರ ಜಿಲ್ಲೆ - 562 109<br>ದೂರವಾಣಿ : +91-8113-7282287<br>ಬೆಂಬಲ ಸಂಸ್ಥೆ : Anchorage<br>ನಂ. 14, ಕೆಳ ಅಂತಸ್ತು, ಗುರುಕೃಪ ಮ್ಯಾನ್‌ಷನ್<br>ಕೃಷ್ಣರೆಡ್ಡಿ ಲೇಔಟ್, ದೊಮಲೂರು<br>ಬೆಂಗಳೂರು - 560 071<br>ದೂರವಾಣಿ : +91-80-51526640<br>ಟೆಲಿಫ್ಯಾಕ್ಸ್ : +91-80-51526641<br>ಇ-ಮೇಲ್ : surbhi@idigitalbridge.org<br>URL: http://www.idigitalbridge.org/projects/current/telnek/About%20Tel-Nek.htm | **ರೂರಲ್ ಡಿಜಿಟಲ್ ಸರ್ವಿಸಸ್**<br>**(Rural Digital Services)**<br>**ನ್ಯಾಷನಲ್ ಇನ್‌ಫರ್ಮ್ಯಾಟಿಕ್ಸ್ ಸೆಂಟರ್,**<br>ಕರ್ನಾಟಕ ರಾಜ್ಯ ಘಟಕ<br>6 ಮತ್ತು 7ನೇ ಅಂತಸ್ತು, ಮಿನಿ ಟವರ್<br>ಡಾ. ಅಂಬೇಡ್ಕರ್ ವೀದಿ<br>ಬೆಂಗಳೂರು - 560 001<br>ದೂರವಾಣಿ : +91-80-22863218, +91-80-22863819<br>ಫ್ಯಾಕ್ಸ್ : +91-80-22863382<br>ಇ-ಮೇಲ್: webmaster.nickar@mail.kar.nic.in<br>URL: http://www.kar.nic.in/projects.asp?department=Revenue%20Department&project=Rural%20Digital%20Services%20(RDS) |
| **ಸಮೂಹ**<br>12/3, ''ರಾಘವ ಕೃಪ''<br>ಬುಲ್ ಟೆಂಪಲ್ 'ಎ' ಅಡ್ಡ ರಸ್ತೆ, 6ನೇ ಮುಖ್ಯ ರಸ್ತೆ<br>ಬೆಂಗಳೂರು - 560018<br>ದೂರವಾಣಿ : +91-80-26606532/3<br>ಫ್ಯಾಕ್ಸ್ : +91-80-26492362<br>ಇ-ಮೇಲ್ : editor@samuha.org<br>URL: http://www.samuha.org/ | |

## ಕರ್ನಾಟಕೇತರ ಐ.ಸಿ.ಟಿ. ಉದ್ಯಮಗಳು

**ಕೇರಳ**

**ಅಕ್ಷಯ ಯೋಜನೆ**

ಕೇರಳ ರಾಜ್ಯ ಮಾಹಿತಿ ತಂತ್ರಜ್ಞಾನ ಆಂದೋಲನ, ಐ.ಟಿ. ಇಲಾಖೆ, ಕೇರಳ ಸರ್ಕಾರ
ಐ.ಸಿ.ಟಿ. ಕ್ಯಾಂಪಸ್, ವೆಲ್ಲಾಯಂಬಾಲಮ್ ಜಂಕ್ಷನ್
ತಿರುವನಂತಪುರ – 695 033
URL: www.akshaya.net

**ಕುಡುಂಬಶ್ರೀ ಯೋಜನೆ**

ರಾಜ್ಯ ಬಡತನ ನಿರ್ಮೂಲನಾ ಆಂದೋಲನ ಟಿ.ಸಿ. 14/582 (1)
ವಲ್ಲಾ ನರ್ಸಿಂಗ್ ಹೋಮ್ ಎದುರು, ನಂದವನಮ್
ತಿರುವನಂತಪುರ – 33, ಕೇರಳ
ದೂರವಾಣಿ : +91-471-2324205
ಇ-ಮೇಲ್ : spem@asianetindia.com, kudumbashree@eth.net
URL http://www.kudumbashree.org/

**ಆಂಧ್ರಪ್ರದೇಶ**

**ಡೆಕ್ಕನ್ ಡೆವೆಲಪ್‌ಮೆಂಟ್ ಸೊಸೈಟಿ**

ಗ್ರಾಮ : ಪಸ್ತಾಪುರ್, ಮಂಡಲ: ಜಾಹಿರಾಬಾದ್
ಜಿಲ್ಲೆ : ಮೇಡಕ್, 502 318, ಆಂಧ್ರ ಪ್ರದೇಶ
ದೂರವಾಣಿ : +91-8451-282271, 282785
ಇ-ಮೇಲ್ : hyd1_ddshyd@sancharnet.in
URL: www.ddsindia.com

**ಇ-ಸೇವಾ, ಪಶ್ಚಿಮ ಗೋದಾವರಿ ಯೋಜನೆ**

URL: http://www.westgodavari.org/, http://esevaonline.com/

**ಕುಪ್ಪಮ್ ಎಚ್.ಪಿ.ಐ. – ಕಮ್ಯುನಿಟಿ**

ಆಪರೇಷನ್ಸ್ ಮ್ಯಾನೇಜರ್, ಹ್ಯುಲೆಟ್ ಪಕರ್ಡ್
ಎಮರ್ಜಿಂಗ್ ಮಾರ್ಕೆಟ್ ಸಲ್ಯುಷನ್ಸ್
ನಂ. 3, ಸ್ಟರ್‌ಲಿಂಗ್ ಸ್ಕ್ವೇರ್, ಮದ್ರಾಸ್ ಬ್ಯಾಂಕ್ ರಸ್ತೆ
ಬೆಂಗಳೂರು – 560 001
ಇ-ಮೇಲ್ : balaji.venkatest@india.hp.com
URL: http://www.kupnet.org/, http://www.hp.com/e-inclusion/en/project/project_kuppam.html

**ತಮಿಳು ನಾಡು**

**ಧಾನ್ ಫೌಂಡೇಶನ್**
18, ಪಿಳ್ಳೈಯಾರ್ ಕೋಯಲ್ ರಸ್ತೆ
ಎಸ್.ಎಸ್. ಕಾಲೋನಿ, ಮಧುರೈ - 625 016
ತಮಿಳು ನಾಡು
ದೂರವಾಣಿ : +91-452-2610794, 2610805
ಫ್ಯಾಕ್ಸ್ : +91-452-2602247
ಇ-ಮೇಲ್ : dhan@md3.vsnl.net.in
URL: http://www.dhan.org/

**ಎಮ್.ಎಸ್. ಸ್ವಾಮಿನಾಥನ್ ರಿಸರ್ಚ್ ಫೌಂಡೇಶನ್**
3ನೇ ಅಡ್ಡ ರಸ್ತೆ, ಇನ್ಸ್‌ಟಿಟ್ಯುಷನಲ್ ಏರಿಯಾ, ತಾರಾಮಣಿ
ಚೆನ್ನೈ 600 113
ದೂರವಾಣಿ : +91-44-22541229, 22542791, 22542698
URL: www.mssrf.org

**ಫೌಂಡೇಶನ್ ಆಫ್ ಆಕ್ಯುಪೇಶನ್ ಡೆವೆಲಪ್‌ಮೆಂಟ್**
ಸಿ - ಬ್ಲಾಕ್, 1ನೇ ಅಂತಸ್ತು, ಭಾರತಿಯಾರ್ ಕಾಂಪ್ಲೆಕ್ಸ್
100 ಅಡಿ ರಸ್ತೆ, ವಡಾಪಳನಿ
ಚೆನ್ನೈ - 600 026
ದೂರವಾಣಿ : +91-44-24848201
ಇ-ಮೇಲ್ : food@foodindia.org.in
URL: http://foodindia.org.in/

## ಬ್ಯಾಂಕುಗಳು ಮತ್ತು ಇತರ ಹಣಕಾಸು ಸಹಾಯ ನೀಡುವ ಸಂಸ್ಥೆಗಳು

ಐ.ಸಿ.ಟಿ.ಉದ್ದಿಮೆಗಳನ್ನು ಆರಂಭಿಸಲು ಬೇಕಾದ ಸಾಲ ಸೌಲಭ್ಯಗಳನ್ನು ಪಡೆಯಲು ರಾಷ್ಟ್ರೀಕೃತ ಬ್ಯಾಂಕುಗಳೊಡನೆ ಕೈಜೋಡಿಸಲು ಸಂಸ್ಥೆಗಳು ಪ್ರಯತ್ನಿಸಬಹುದು. ಕೇಂದ್ರ ಸರ್ಕಾರದ ಯೋಜನೆಗಳಾದ, ಪ್ರಧಾನ ಮಂತ್ರಿಗಳ ಉದ್ಯೋಗ ಯೋಜನೆ (ಪಿ.ಎಂ.ಆರ್.ವೈ) ಅಥವಾ ಸ್ವರ್ಣಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆ (ಎಸ್.ಜಿ.ಎಸ್.ವೈ) ಮತ್ತು ಅವುಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಯುವಕರಿಗೆ ತರಬೇತಿ ಮತ್ತು ಸ್ವಯಂಉದ್ಯೋಗ ಯೋಜನೆ ಇತ್ಯಾದಿಗಳು ಕೆಲವು ನಿರ್ದಿಷ್ಟ ಸಮುದಾಯಗಳಿಗೆ ಬೇಕಾದ ಉಪಕರಣಗಳನ್ನು ಕೊಳ್ಳಲು ಮತ್ತು ಉದ್ದಿಮೆಗಳನ್ನು ಆರಂಭಿಸಲು ನೆರವು ನೀಡುತ್ತವೆ.

## ಉಪಸಂಹಾರ

ಮಹಿಳಾ ಸಶಕ್ತತೆಯತ್ತ ಗುರಿ ಹಾಗೂ ಆಶೋತ್ತರಗಳ ಉದ್ದೇಶಗಳನ್ನಿಟ್ಟುಕೊಂಡು ಕೆಲಸ ಮಾಡುತ್ತಿರುವ ಸ್ವಯಂಸೇವಾ ಸಂಘಟನೆಗಳು ಮತ್ತು ಬೆಂಬಲ ಸಂಸ್ಥೆಗಳು ಈ ದಿಶೆಯಲ್ಲಿ ಐ.ಸಿ.ಟಿ.ಯನ್ನು ತಮ್ಮ ಕೆಲಸಗಳಲ್ಲಿ ಹೇಗೆ ಅಂತರ್ಗತಗೊಳಿಸಿಕೊಳ್ಳಬಹುದು ಎಂಬುದನ್ನು ಈ ಕೈಪಿಡಿ ನೀಡಿದೆಯೆಂದು ಭಾವಿಸುತ್ತೇವೆ. ಇಲ್ಲಿ ಹಲವಾರು ವಿಚಾರಗಳನ್ನು ವಿವರವಾಗಿ ಚರ್ಚಿಸಲಾಗಿದೆ; ಆದರೂ, ಐ.ಸಿಟಿ.ಗೆ ಸಂಬಂಧಿಸಿದ ವಿಚಾರಗಳ ಮೇಲ್ಮೈಯನ್ನಷ್ಟೇ ಇಲ್ಲಿ ಮುಟ್ಟಲಾಗಿದೆ – ಇಂತಹದೊಂದು ಹೊಸ ಉದ್ದಿಮೆಯಲ್ಲಿ ಮಹಿಳೆಯರಿಗೆ ಇರುವ ಅವಕಾಶಗಳು, ಎದುರಿಸಬೇಕಾದ ಎಡರುತೊಡರುಗಳು, ಹೊಸ ಹಾದಿಗಳು ಮತ್ತು ಅಲ್ಲಿ ಇರಬಹುದಾದ ಕಷ್ಟಗಳು ಇಲ್ಲಿನ ಮೂಲ ವಿಚಾರ. ಇಡೀ ಜಗತ್ತು ಐ.ಸಿ.ಟಿ.ಗಳತ್ತ ಮುಖ ಮಾಡುತ್ತಿವೆ ಮತ್ತು ಇದು ಭಾರತದಲ್ಲೂ ಸಹ ನಿಜವಾಗುತ್ತಿದೆ. ತೀರ ಹಿಂದುಳಿದ ಹಾಗೂ ಮೂಲೆಗುಂಪಾದ ವರ್ಗಗಳ ಜನರಿಗೂ ಐ.ಸಿ.ಟಿ. ಸೇವೆಗಳು ತಲಪುವಂತಹ ದಿಶೆಯಲ್ಲಿ ಸರ್ಕಾರ ಹಲವಾರು ಕಾರ್ಯನೀತಿಗಳನ್ನು ರೂಪಿಸಿ, ಯೋಜನಾ ಮಟ್ಟದಲ್ಲಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದನ್ನೇ ನೇರವಾಗಿ ಹೇಳಬೇಕೆಂದರೆ, 'ಮಾಹಿತಿ ಸಮಾಜ'ದಲ್ಲಿ ಸೃಷ್ಟಿಯಾಗುತ್ತಿರುವ ಹೊಸ ಅವಕಾಶಗಳು ಮತ್ತು ಎಲ್ಲರ ದಿನ ನಿತ್ಯದ ಬದುಕಿನ ಮೇಲೆ ಇದರಿಂದಾಗುತ್ತಿರುವ ಪರಿಣಾಮಗಳ ಬಗ್ಗೆ ಯಾರೂ ಸಹ ಬೆನ್ನು ಹಾಕುವಂತೆಯೇ ಇಲ್ಲ. ಈಗಿನ ಸಮುದಾಯದಲ್ಲಿನ ಅಧಿಕಾರಗಳ ವ್ಯವಸ್ಥೆ ಮತ್ತು ಲಿಂಗ ತಾರತಮ್ಯವನ್ನು ಹೊಡೆದೋಡಿಸಲು ತೀರಾ ತಳಮಟ್ಟದಲ್ಲಿ ಜನರ ನಡುವೆ ಕೆಲಸ ಮಾಡುತ್ತಿರುವ ಸಂಸ್ಥೆಗಳ ಪ್ರಯತ್ನಗಳನ್ನು ಸೂಕ್ತವಾಗಿ ಬೆಂಬಲಿಸುವ ಈ ಯೋಜನೆ, ನವೀನ ಮಾದರಿಗಳ ಮೂಲಕ ಮಹಿಳೆಯರಿಗೆ ಸುಸ್ಥಿರ ಹಾಗೂ ಗೌರವಯುತವಾದ ಆದಾಯ ತರುವಂತಹ ಕೆಲಸಗಳು, ಯೋಜನೆಗಳನ್ನು ವ್ಯಕ್ತಿಗತವಾಗಿ ಮತ್ತು ಸಾಂಘಿಕವಾಗಿ ನೀಡುತ್ತದೆ. ಇಂತಹ ವ್ಯವಸ್ಥಿತವಾದ ಬದಲಾವಣೆ ತರಬಹುದಾದ ಮಾದರಿಯಲ್ಲಿ ತೊಡಗಬಹುದಾದ ಸಂಸ್ಥೆಗಳಿಗೆ ಈ ಕೈಪಿಡಿ, ಗ್ರಾಮೀಣ ಮಾಹಿತಿ ಮತ್ತು ಸಂವಹನದ ಕ್ಷೇತ್ರದಲ್ಲಿ ಏನೆಲ್ಲಾ ಮಾಡಬಹುದು ಮತ್ತು ಯಾವುದೆಲ್ಲಾ ವಿಚಾರಗಳ ಬಗ್ಗೆ ಯೋಚಿಸಬೇಕಾಗುತ್ತದೆ ಎಂಬುದನ್ನು ವಿವರಿಸುವ ಪ್ರಯತ್ನ ಮಾಡಿದೆ.

ಈ ಕೈಪಿಡಿಯನ್ನು ಓದುತ್ತಿರುವಾಗ ಮಹಿಳಾ ಸಶಕ್ತತೆಯ ಪ್ರಯತ್ನಗಳಲ್ಲಿ ನಿರತರಾಗಿರುವ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳಾದ ನಿಮಗೆ ಇದು ಐ.ಸಿ.ಟಿ.ಯನ್ನು ಪ್ರಯೋಗಿಸಿ ಹೊಸ ಪ್ರಯತ್ನಗಳನ್ನು ಮಾಡಲು ಪ್ರಚೋದಿಸಿದೆ, ಸಂತಸ ತಂದಿದೆ ಎಂದು ನಾವು ಭಾವಿಸುತ್ತೇವೆ. ಮಹಿಳೆಯರ ಬದುಕಿನಲ್ಲಿ ಐ.ಸಿ.ಟಿ.ಗಳು ಹೇಗೆ ಬದಲಾವಣೆಯ ಅಲೆಯನ್ನು ತಂದಿವೆ ಎಂದು ವಿವರಿಸುವ ಚಲನಚಿತ್ರವನ್ನು ನೋಡಲು ಮತ್ತು ಅದರ ಬಗ್ಗೆ ಇತರರೊಡನೆ ಹಂಚಿಕೊಳ್ಳಲು ಮರೆಯಬೇಡಿ. ಈ ವಿಚಾರಗಳ ಬಗ್ಗೆ ನಿಮಗೆ ಹೆಚ್ಚಿನ ವಿವರಗಳು ಬೇಕಿದ್ದಲ್ಲಿ ಅಥವಾ ಪ್ರಶ್ನೆಗಳಿದ್ದಲ್ಲಿ ನಮನ್ನು ಸಂಪರ್ಕಿಸಿ ಹಂಚಿಕೊಳ್ಳಿ.

ಗ್ರಾಮೀಣ, ಬಡ ಕುಟುಂಬಗಳ ಮತ್ತು ಸಂಕಷ್ಟದ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಅವಕಾಶಗಳನ್ನು ಹೆಚ್ಚಿಸುವಲ್ಲಿ ಹಾಗೂ ಅವರು ತಮ್ಮ ಕುಟುಂಬದ ಮಟ್ಟದಲ್ಲಿ ಮತ್ತು ಸಮಾಜದಲ್ಲಿ ತಮಗೆ ನ್ಯಾಯಬದ್ಧವಾಗಿ ದೊರೆಯಬೇಕಾದ ಹಕ್ಕುಗಳಿಗಾಗಿ ಒತ್ತಾಯಿಸುವಂತೆ ಅವರನ್ನು ಸಶಕ್ತಗೊಳಿಸುವಲ್ಲಿ ತಳಮಟ್ಟದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳು ಗಣನೀಯ ಪ್ರಗತಿ ಸಾಧಿಸಿವೆ. ಹೀಗಿದ್ದಾಗ್ಯೂ, ಜಾಗತಿಕವಾಗಿ ಆಗುತ್ತಿರುವ "ಹೊಸ" ಬೆಳವಣಿಗೆಗಳು ಮತ್ತು ತಾಂತ್ರಿಕ ಪ್ರಗತಿಗಳಿಂದ ಈ ಮಹಿಳೆಯರು ಹಿಂದುಳಿದಿದ್ದಾರೆ. ಹೊಸ ತಂತ್ರಜ್ಞಾನಗಳಾದ ಕಂಪ್ಯೂಟರ್, ಇಂಟರ್‌ನೆಟ್, ಮೊಬೈಲ್ ಫೋನ್ ಹಾಗೂ ಡಿ.ವಿ.ಡಿ.ಗಳು ಮತ್ತು "ಹಳೆಯ" ತಂತ್ರಜ್ಞಾನಗಳಾದ ಟಿ.ವಿ., ರೇಡಿಯೋ ಮತ್ತು ದೂರವಾಣಿಯ ನವೀನ ಹಾಗೂ ಕ್ರಿಯಾತ್ಮಕ ಬಳಕೆಯನ್ನು ಅಧಿಕವಾಗಿ ಅವಲಂಬಿಸಿರುವ ಇಂದಿನ ಪ್ರಪಂಚದಲ್ಲಿ, ಮಹಿಳೆಯರು ಹಾಗೂ ಮೂಲೆಗುಂಪಾದ ವರ್ಗಗಳ ಬದುಕನ್ನು ಪರಿವರ್ತಿಸುವಲ್ಲಿ ಈ ತಂತ್ರಜ್ಞಾನಗಳ ಸಾಮರ್ಥ್ಯವನ್ನು ಸಂಪೂರ್ಣವಾಗಿ ಪರಿಶೀಲಿಸಲಾಗಿಲ್ಲ. ಸಂಕಷ್ಟದ ಪರಿಸ್ಥಿತಿಯಲ್ಲಿರುವ ಮಹಿಳೆಯರು ತಮ್ಮ ಮಾಹಿತಿ ಮತ್ತು ಸಂವಹನದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹಾಗೂ ಉತ್ತಮ ಜೀವನೋಪಾಯದ ಅವಕಾಶಗಳ ಮೂಲಕ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಈ ತಂತ್ರಜ್ಞಾನಗಳನ್ನು ಹೇಗೆ ನಿಯಂತ್ರಿಸಿ, ರೂಪಿಸಬಲ್ಲರು ಎಂಬುದನ್ನು ಪರೀಕ್ಷಿಸಲು ಈ ಕೈಪಿಡಿಯು ಪ್ರಯತ್ನಿಸುತ್ತದೆ. ಮಹಿಳೆಯರ ಸ್ವಂತ ಅನುಭವಗಳು ಹಾಗೂ ದಕ್ಷಿಣ ಭಾರತದಲ್ಲಿ ಈ ಕ್ಷೇತ್ರದಲ್ಲಿ ತೊಡಗಿರುವ ಪರಿಣತರ ಸಲಹೆಗಳು ಮತ್ತು ಹೊಳಹುಗಳನ್ನು ಆಧರಿಸಿ, ಮಹಿಳೆಯರೊಂದಿಗೆ ಕೆಲಸ ಮಾಡುತ್ತಿರುವ ಸಂಸ್ಥೆಗಳು ತಮ್ಮ ಪ್ರಸ್ತುತ ಗುರಿಗಳು ಹಾಗೂ ಕಾರ್ಯಚಟುವಟಿಕೆಗಳನ್ನು ಸಾಧಿಸಲು ಐ.ಸಿ.ಟಿ.ಗಳನ್ನು ಹೊಸ ವಿಧಾನದಲ್ಲಿ ಬಳಸುವಂತೆ ಚಿಂತನೆ ಮಾಡಲು ಈ ಕೈಪಿಡಿಯು ಪ್ರೇರೇಪಿಸುತ್ತದೆ.

ಈ ಪುಸ್ತಕದ ಜೊತೆಯಾಗಿ "ಹೊಸ ದಿಗಂತದೆಡೆಗೆ: ಮಹಿಳಾ ಸಶಕ್ತತೆಗಾಗಿ ಕಂಪ್ಯೂಟರ್" ಎಂಬ ಶೀರ್ಷಿಕೆಯ ಚಿತ್ರವಿದ್ದು, ಈ ಚಿತ್ರವು ದಕ್ಷಿಣ ಭಾರತದ ಮೂರು ಯೋಜನೆಗಳಲ್ಲಿ ಮಹಿಳೆಯರ ಅನುಭವಗಳನ್ನು ಪ್ರಮುಖವಾಗಿ ಎತ್ತಿ ಹಿಡಿಯುತ್ತದೆ. ಈ ಮಹಿಳೆಯರು ಐ.ಸಿ.ಟಿ.ಗಳನ್ನು ಬಳಸಿಕೊಂಡು ತಮಗೆ ತಾವೇ ಹೊಸ ಪಾತ್ರಗಳು, ಅವಕಾಶಗಳು ಹಾಗೂ ಸ್ಥಾನವನ್ನು ಸೃಷ್ಟಿಸಿಕೊಂಡಿರುವುದಲ್ಲದೇ, ತಮ್ಮ ಸಮುದಾಯಗಳಿಗೆ ನ್ಯಾಯಬದ್ಧವಾಗಿ ದೊರಕಬೇಕಾದ ಸೇವೆ ಸೌಲಭ್ಯಗಳು ಹಾಗೂ ಹಕ್ಕುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ತಲುಪಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.


**ಐ.ಟಿ. ಫಾರ್ ಚೇಂಜ್**

ಬೆಂಬಲ:
ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯ, ಯು.ಕೆ. ಡಿಪಾರ್ಟ್‌ಮೆಂಟ್ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಮತ್ತು ಹಿವೋಸ್



ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
ಐ.ಟಿ. ಫಾರ್ ಚೇಂಜ್
393, 17ನೇ ಮುಖ್ಯ ರಸ್ತೆ, ಜಯನಗರ 4ನೇ 'ಟಿ' ಬ್ಲಾಕ್, ಬೆಂಗಳೂರು 560041
ದೂರವಾಣಿ : (+91 –80) 26654134, 2653 6890
ಇಮೇಲ್ : ITfC@ITforChange.net
ವೆಬ್‌ಸೈಟ್ : www.ITforChange.net